ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

Visvesvaraya Jala Nigam Limited

4ನೇ th ವಾರ್ಷಿಕ ವರದಿ
Annual Report
2019-2020

ಜಲದಿಂದ ಜೀವ ಪರಿಸರ

ಕಂಪನಿಯ ಮಾಹಿತಿ

www.vjnl.in

CIN: U41000KA2016SGC097260

ನೊಂದಾಯಿತ ಕಛೇರಿ
ನಂ. 148, ನೆಲ ಮಹಡಿ
ಎಂಬೆಸ್ಸಿ ಸ್ಕ್ವೇರ್
ಇನ್‌ಫೆಂಟ್ರಿ ರಸ್ತೆ
ಬೆಂಗಳೂರು– 560001

ಮುಖ್ಯ ಆಡಳಿತಾಧಿಕಾರಿಗಳ ಕಛೇರಿ
ನಂ. 148, ನೆಲ ಮಹಡಿ
ಎಂಬೆಸ್ಸಿ ಸ್ಕ್ವೇರ್
ಇನ್‌ಫೆಂಟ್ರಿ ರಸ್ತೆ
ಬೆಂಗಳೂರು– 560001

ಮುಖ್ಯ ಲೆಕ್ಕಾಧಿಕಾರಿ
ಶ್ರೀಮತಿ ಶ್ರೀಲಕ್ಷ್ಮೀ ಟಿ.ಕೆ., ಕೆ.ಎಸ್.ಎ.ಎ.ಎಸ್.
ಕೇಂದ್ರ ಕಛೇರಿ, ಚಿತ್ರದುರ್ಗ.

ಮುಖ್ಯ ಇಂಜಿನಿಯರ್
ಭದ್ರಾಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ.
ಶ್ರೀ ಟಿ.ರಾಘವನ್

ಎತ್ತಿನಹೊಳೆ ಯೋಜನಾ ವಲಯ, ತುಮಕೂರು
ಶ್ರೀ ಮಾಧವ

ಬ್ಯಾಂಕರ್‌ಗಳು:
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ಆಕ್ಸಿಸ್ ಬ್ಯಾಂಕ್ ಲಿ.
ಐಸಿಐಸಿಐ ಬ್ಯಾಂಕ್ ಲಿ.
ಕರ್ನಾಟಕ ಗ್ರಾಮೀಣ ಬ್ಯಾಂಕ್
ಬ್ಯಾಂಕ್ ಆಫ್ ಇಂಡಿಯಾ
ಇಂಡಿಯನ್ ಬ್ಯಾಂಕ್

ಶಾಸನಬದ್ಧ ಲೆಕ್ಕ ಪರಿಶೋಧಕರು
ಮೆ॥ ರಾವ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್ಸ್
#32/1, ವಷಿಷ್ಠ ಫ್ಯಾರಡೈಸ್
2ನೇ ಮಹಡಿ,
1ನೇ ದೇವಸ್ಥಾನದ ರಸ್ತೆ,
11ನೇ ಕ್ರಾಸ್ ಮಲ್ಲೇಶ್ವರಂ,
ಬೆಂಗಳೂರು 560 003

ಕಾನೂನು ಸಲಹೆಗಾರರು
ಶ್ರೀ ಎಂ. ಆರ್. ಸಿ. ರವಿ, ವಕೀಲರು
ಮೆ॥ ಐಎಲ್‌ಪಿಎಂ ಕನ್ಸಲ್ಟೆಂಟ್ಸ್
'ಸ್ವಾತಿ' ನಂ.123, 6ನೇ ಮುಖ್ಯರಸ್ತೆ
ಮಲ್ಲೇಶ್ವರಂ, ಬೆಂಗಳೂರು 560 003

ನಿರ್ದೇಶಕರ ಮಂಡಳಿ

ಅಧ್ಯಕ್ಷರು
ಶ್ರೀ ಬಿ.ಎಸ್.ಯಡಿಯೂರಪ್ಪ

ವ್ಯವಸ್ಥಾಪಕ ನಿರ್ದೇಶಕರು,
ಶ್ರೀ ಎನ್. ಲಕ್ಷ್ಮಣರಾವ್ ಪೇಶ್ವೆ, ಕೆ.ಇ.ಎಸ್.

ಮಹಿಳಾ ನಿರ್ದೇಶಕರು
ಶ್ರೀಮತಿ ಶಾಲಿನಿ ರಜನೀಶ್, ಭಾ.ಆ.ಸೇ.

ನಿರ್ದೇಶಕರು
ಶ್ರೀ ಟಿ.ಎಂ. ವಿಜಯ್‌ಭಾಸ್ಕರ್, ಭಾ.ಆ.ಸೇ., (31–12–2020 ರವರೆಗೆ)
ಶ್ರೀ ಪಿ. ರವಿಕುಮಾರ್, ಭಾ.ಆ.ಸೇ. (08–09–2020ರವರೆಗೆ)
ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ,
ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.,
ಶ್ರೀ ಇ.ವಿ. ರಮಣ ರೆಡ್ಡಿ, ಭಾ.ಆ.ಸೇ., (08–09–2020 ರಿಂದ)
ಶ್ರೀ ಅನೀಲ್ ಕುಮಾರ್ (08–09–2020ರಿಂದ)

ಸ್ವತಂತ್ರ ನಿರ್ದೇಶಕರು
ಶ್ರೀ ಡಿ.ಎನ್ ದೇಸಾಯಿ (08–12–2019 ರವರೆಗೆ)
ಪ್ರೊ. ಶ್ರೀ ಟಿ. ಗಂಗಾಧರಯ್ಯ,
ಶ್ರೀ ಆರ್. ಚೆಲುವರಾಜು,

ಕಂಪನಿ ಕಾರ್ಯದರ್ಶಿ
ಶ್ರೀ ಜಿ.ಎಸ್. ಪ್ರಕಾಶ್

ಮುಖ್ಯ ಹಣಕಾಸು ಅಧಿಕಾರಿ
ಶ್ರೀಮತಿ ಜ್ಯೋತಿ ಡಿ. ಕುಂದರ್, ಕೆ.ಎಸ್.ಎ.ಎ.ಎಸ್.

ಪರಿವಿಡಿ

ಸೂಚನಾ ಪತ್ರ	2
ನಿರ್ದೇಶಕರ ವರದಿ	6
ಪರಿಶೋಧಕರ ವರದಿ	34
ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ವರದಿ	52
ಸಂತುಲನ ಪಟ್ಟಿ	53
ಲಾಭ ಮತ್ತು ನಷ್ಟದ ತಃಖ್ತೆ	54
ಹಣಕಾಸು ಹರಿವಿನ ತ:ಖ್ತೆ	55
ಈಕ್ವಿಟಿಯಲ್ಲಿನ ಬದಲಾವಣೆ ತಃಖ್ತೆ	57
ಟಿಪ್ಪಣಿಗಳು	59
ಯೋಜನೆಗಳ ಸ್ಥಿತಿಗತಿ	124

ಗಮನಿಕೆ: ಇದು ಮೂಲ ಇಂಗ್ಲೀಷ್‌ನಲ್ಲಿರುವ ವಾರ್ಷಿಕ ವರದಿಯ ಕನ್ನಡ ಭಾಷಾನುವಾದ, ಇದರಲ್ಲಿ ಯಾವುದೇ ತಪ್ಪುಗಳು ಅಥವಾ ಅರ್ಥ ವ್ಯತ್ಯಾಸಗಳೇನಾದರು ಕಂಡುಬಂದಲ್ಲಿ ಇಂಗ್ಲೀಷ್ ಭಾಷೆಯ ಮೂಲ ವರದಿ ಅಧಿಕೃತವೆಂದು ತಿಳಿಯಬಹುದಾಗಿದೆ.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ನೊಂದಾಯಿತ ಕಛೇರಿ: # 148, ನೆಲ ಮಹಡಿ, ಎಂಬೆಸ್ಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು – 560 001

ಸೂಚನಾ ಪತ್ರ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಸಂಸ್ಥೆಯು ಮುಂದೂಡಲ್ಪಟ್ಟ ಸರ್ವಸದಸ್ಯರುಗಳ 4ನೇ ವಾರ್ಷಿಕ ಸಭೆಯನ್ನು ಬುಧವಾರ, ದಿನಾಂಕ 31ನೇ ಮಾರ್ಚ್ 2021 ರಂದು ಸಂಜೆ 4.00 ಗಂಟೆಗೆ "ಕೃಷ್ಣಾ" ಮಾನ್ಯ ಮುಖ್ಯ ಮಂತ್ರಿಯವರ ಗೃಹ ಕಛೇರಿ, ಕುಮಾರ ಕೃಪ ರಸ್ತೆ, ಬೆಂಗಳೂರು ಇಲ್ಲಿ ಈ ಕೆಳಗಿನ ವ್ಯವಹಾರಗಳನ್ನು ಚರ್ಚಿಸುವ ಮತ್ತು ಪರಿಗಣಿಸುವ ಸಲುವಾಗಿ ನಡೆಸಲಾಗುತ್ತಿದೆ ಎಂಬುದಾಗಿ ಈ ಮೂಲಕ ನೋಟೀಸನ್ನು ನೀಡಲಾಗುತ್ತಿದೆ.

ಸಾಮಾನ್ಯ ವ್ಯವಹಾರಗಳು:

1. ನಿದೇಶಕರ ಮತ್ತು ಲೆಕ್ಕಪರಿಶೋಧಕರ ಮಂಡಳಿಯ ವರದಿಗಳೊಂದಿಗೆ ಮಾರ್ಚ್ 31, 2020ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಕಂಪನಿಯ ಹಣಕಾಸು ಸ್ಥಿತಿಗತಿಗಳನ್ನು ಸ್ವೀಕರಿಸಲು, ಪರಿಗಣಿಸಲು ಮತ್ತು ಅಳವಡಿಸಿಕೊಳ್ಳಲು (ದಯವಿಟ್ಟು ಕೆಳಗಿನ ಟಿಪ್ಪಣಿ–1ನ್ನು ನೋಡಿ)

ನಿರ್ದೇಶಕರುಗಳ ಮಂಡಳಿಯ ಆದೇಶದ ಮೇರೆಗೆ,
ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಪರವಾಗಿ
ಸಹಿ/–
(ಜಿ.ಎಸ್. ಪ್ರಕಾಶ್)
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 30–03–2021

ಟಿಪ್ಪಣಿ:

1. ಕಂಪನಿ ಕಾಯ್ದೆ, 2013ರ ಪರಿಚ್ಛೇದ 142ರ ಉಪಬಂಧಗಳ ಅನುಸಾರ ಲೆಕ್ಕಪರಿಶೋಧಕರಿಗೆ ಸಂದಾಯವಾಗಬೇಕಿರುವ ಸಂಭಾವನೆಯನ್ನು ಕಂಪನಿಯು ಸರ್ವಸದಸ್ಯರ ಸಭೆಯಲ್ಲಿ ನಿಗದಿಪಡಿಸಬೇಕು ಅಥವಾ ಸರ್ವಸದಸ್ಯರ ಸಭೆಯಲ್ಲಿ ನಿರ್ಧಾರವಾಗುವರೀತಿಯಲ್ಲಿ ನಿಗದಿಪಡಿಸಬೇಕು. ದಿನಾಂಕ 29.12.2017ರಂದು ನಡೆದ ಸರ್ವಸದಸ್ಯರ 1ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಂಪನಿ ಕಾಯ್ದೆಅಡಿಯಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನೇಮಕ ಮಾಡಿದೊಡನೆಯೇ ಪ್ರತ್ಯೇಕವಾಗಿ ಪ್ರತಿವರ್ಷ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಸಂದಾಯವಾಗಬೇಕಾದ ಸಂಭಾವನೆಯನ್ನು ನಿಗದಿಪಡಿಸಲು ಸಭೆಯು ಲೆಕ್ಕ ಪರಿಶೋಧನಾ ಸಮಿತಿಗೆ ಅಧಿಕಾರವನ್ನು ನೀಡಿದೆ. ಇದಕ್ಕನುಗುಣವಾಗಿ ನಿರ್ದೇಶಕ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿಯು 2018–19ರ ಹಣಕಾಸು ವರ್ಷಕ್ಕೆ ರೂ. 9.00ಲಕ್ಷ/– ತೆರಿಗೆ ಲೆಕ್ಕಪರಿಶೋಧನೆಯನೊಳಗೂಂಡ ಸಂಭಾವನೆಯನ್ನು ನೀಡಲು ಸಹಮತಿಸಿ ಅನುಮೋದಿಸಿರುತ್ತದೆ.
2. ಸಭೆಗೆ ಹಾಜರಾಗುವ ಮತ್ತು ಮತ ಚಲಾಯಿಸುವ ಅರ್ಹತೆಯನ್ನು ಹೊಂದಿರುವ ಓರ್ವ ಸದಸ್ಯರು, ತಾವೇ ಸ್ವತ: ಹಾಜರಾಗುವ ಹಾಗೂ ಮತ ಚಲಾಯಿಸುವ ಬದಲು ತಮ್ಮ ಪರವಾಗಿ ಸಭೆಗೆ ಹಾಜರಾಗುವ ಹಾಗೂ ಮತ ಚಲಾಯಿಸುವ ಸಲುವಾಗಿ ಮತ್ತೋರ್ವ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳಬಹುದು, ಅಂತಹ ವ್ಯಕ್ತಿಯು ಕಂಪನಿಯ ಓರ್ವ ಸದಸ್ಯರಾಗಿರಬೇಕಾಗಿಲ್ಲ.
3. ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 101(1)ರ ಅಡಿಯಲ್ಲಿ ಅಗತ್ಯವಿರುವ ಸದಸ್ಯರುಗಳ ಒಪ್ಪಿಗೆಯನ್ನು ಪಡೆದ ನಂತರ ಈ ಸಭೆಯನ್ನು ಕರೆಯಲಾಯಿತು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ನೊಂದಾಯಿತ ಕಛೇರಿ: # 148, ನೆಲ ಮಹಡಿ, ಎಂಬೆಸ್ಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು – 560 001

ಸೂಚನಾ ಪತ್ರ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಸಂಸ್ಥೆಯ ಸದಸ್ಯರುಗಳ ನಾಲ್ಕನೇ ವಾರ್ಷಿಕ ಸಭೆಯನ್ನು ಬುಧವಾರ, 30ನೇ ಡಿಸೆಂಬರ್ 2020 ರಂದು ಬೆಳ್ಳಗ್ಗೆ 11:45 ಗಂಟೆಗೆ "ಕೃಷ್ಣಾ" ಮಾನ್ಯ ಮುಖ್ಯ ಮಂತ್ರಿಯವರ ಗೃಹ ಕಚೇರಿ, ಕುಮಾರ ಕೃಪ ರಸ್ತೆ, ಬೆಂಗಳೂರು –560 001 ಇಲ್ಲಿ ಈ ಕೆಳಗಿನ ವ್ಯವಹಾರಗಳನ್ನು ಚರ್ಚಿಸುವ ಮತ್ತು ಪರಿಗಣಿಸುವ ಸಲುವಾಗಿ ನಡೆಸಲಾಗುತ್ತಿದೆ ಎಂಬುದಾಗಿ ಈ ಮೂಲಕ ನೋಟೀಸ್‌ನ್ನು ನೀಡಲಾಗುತ್ತಿದೆ.

I. ಸಾಮಾನ್ಯ ವ್ಯವಹಾರಗಳು:

1. ಲಗತ್ತಿಸಲಾದ ಅನುಸೂಚಿಗಳು ಮತ್ತು ನಿರ್ದೇಶಕರ ಹಾಗೂ ಲೆಕ್ಕಪರಿಶೋಧಕರ ವರದಿಗಳ ಜೊತೆಗೆ 31ನೇ ಮಾರ್ಚ್ 2020 ರಂದು ಕೊನೆಗೊಂಡ ಲೆಕ್ಕಪರಿಶೋಧನೆಗೊಳಗಾದ ಕಂಪನಿಯ ಹಣಕಾಸು ತಃಖ್ತೆಗಳನ್ನು ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.

2. ಕಂಪನಿ ಕಾಯ್ದೆ, 2013ರ ಪರಿಚ್ಛೇದ 139ರಂತೆ ನೇಮಕ ಮಾಡಿಕೊಂಡಿರುವ ಲೆಕ್ಕಪರಿಶೋಧಕರ ಸಂಭಾವನೆ ನಿಗದಿಗೊಳಿಸುವುದು (ದಯವಿಟ್ಟು ಕೆಳಗಿನ ಟಿಪ್ಪಣಿ–2ನ್ನು ನೋಡಿ).

II. ವಿಶೇಷ ವ್ಯವಹಾರಗಳು:

ಅಧಿಕೃತ ಷೇರು ಬಂಡವಾಳದಲ್ಲಿ ಹೆಚ್ಚಳ

ಕೆಳಗಿನ ಗೊತ್ತುವಳಿಯನ್ನು ಪರಿಗಣಿಸಿ ಅದು ಯೋಗ್ಯವೆಂದಾದರೆ ಮಾರ್ಪಾಡುಗಳೊಂದಿಗೆ ಅಥವಾ ಮಾರ್ಪಾಡುಗಳಲ್ಲಿಲ್ಲದೆಯೇ ವಿಶೇಷ ಗೊತ್ತುವಳಿಯಾಗಿ ಅಂಗೀಕರಿಸುವುದು:

"ಕಂಪನಿಯ ಅಧಿಕೃತ ಬಂಡವಾಳವನ್ನು ರೂ. 10,000 ಕೋಟಿ (ರೂಪಾಯಿ ಹತ್ತು ಸಾವಿರ ಕೋಟಿಗಳು) ಗಳಿಂದ ರೂ. 46,000 ಕೋಟಿ (ರೂಪಾಯಿ ನಲವತ್ತಾರು ಸಾವಿರ ಕೋಟಿಗಳು) ಗಳಿಗೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ಪ್ರತಿ ಈಕ್ವಿಟಿಗೆ ರೂ. 1,000/– ದಂತೆ 36,00,00,000 (ಮೂವತ್ತಾರು ಕೋಟಿ ಮಾತ್ರ) ಈಕ್ವಿಟಿ ಷೇರುಗಳನ್ನು ಸೃಷ್ಟಿಸುವುದು ಮತ್ತು ಪರಿಣಾಮವಾಗಿ ಕಂಪನಿಯ ಜ್ಞಾಪನಾ ಪತ್ರದ ಅಧಿನಿಯಮ ಸಿ 5 ಮತ್ತು ಕಂಪನಿಯ ವಿಧಿ 7 ನ್ನು ಮತ್ತು ಅವುಗಳ ತಿದ್ದುಪಡಿ ಮಾಡಿ ಕೆಳಗಿನಂತೆ ಓದುವುದು.

ಕಂಪನಿಯ ಅಧಿಕೃತ ಷೇರು ಬಂಡವಾಳ ರೂ. 46,000 ಕೋಟಿ (ರೂಪಾಯಿ ನಲವತ್ತಾರು ಸಾವಿರ ಕೋಟಿಗಳು) ವನ್ನು ತಲಾ ಈಕ್ವಿಟಿ ಷೇರಿನ ಮುಖಬೆಲೆಯು ರೂ. 1,000/– (ರೂಪಾಯಿ ಒಂದು ಸಾವಿರ) ಗಳಂತೆ 46,00,00,000 (ನಲವತ್ತಾರು ಕೋಟಿ) ಗಳಿಗೆ ವಿಂಗಡಿಸುವುದು".

"ಮೇಲ್ಕಂಡ ನಿರ್ಣಯಕ್ಕೆ ಪರಿಣಾಮಗಳನ್ನು ನೀಡಲು ಕಾನೂನಿನ ನಿಬಂಧನೆಗಳ ಅಡಿಯಲ್ಲಿ ಸರಿಯಾದ, ಅಗತ್ಯ ಅಥವಾ ಸೂಕ್ತವೆನಿಸುವಂತಹ ಎಲ್ಲಾ ಕ್ರಮಗಳು, ಕಾರ್ಯಗಳು ಮತ್ತು ವಿಷಯಗಳನ್ನು ಮಾಡಲು ನಿರ್ದೇಶಕರ ಮಂಡಳಿಯು ಈ ಮೂಲಕ ಅಧಿಕಾರ ಹೊಂದಿದೆಯೆಂದು ಮತ್ತಷ್ಟು ಪರಿಹರಿಸಲಾಗಿದ".

ಮಂಡಳಿಯ ಆದೇಶದ ಮೇರೆಗೆ,

ಸಹಿ/–

(ಜಿ.ಎಸ್. ಪ್ರಕಾಶ್)

ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು

ದಿನಾಂಕ : 29/12/2020

ಟಿಪ್ಪಣಿ:

1. ಶಾಸನಬದ್ಧ ಲೆಕ್ಕಪರಿಶೋಧಕರಿಂದ ದೃಢೀಕರಿಸಿದ ಲೆಕ್ಕಪರಿಶೋಧನೆಯಾದ ಕಂಪನಿಯ 2019–20 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಾಪಾಲರಿಗೆ ಕಂಪನಿ ಕಾಯ್ದೆ 2013ರ ಪರಿಚ್ಛೇದ 143(6) ಅಡಿಯಲ್ಲಿ ತಮ್ಮ ಪೂರಕ ಲೆಕ್ಕಪರಿಶೋಧನೆಗಾಗಿ ಸಲ್ಲಿಸಲಾಗುವುದು. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಾಪಾಲರವರಿಂದ ಪೂರಕ ಲೆಕ್ಕಪರಿಶೋಧನೆ ಪೂರ್ಣಗೊಂಡು ಹಾಗೂ ಅವರಿಂದ ಟೀಕೆ ಟಿಪ್ಪಣಿ ಸ್ವೀಕರಿಸಿದ ನಂತರವಷ್ಟೆ ಹಣಕಾಸು ವರ್ಷ 2019–20 ರ ಹಣಕಾಸು ತ:ಖ್ತೆಗಳನ್ನು ಅಳವಡಿಸಿಕೊಳ್ಳಲು ವಾರ್ಷಿಕ ಸಭೆಯಲ್ಲಿ ಮಂಡಿಸಬಹುದು. ಆದುದರಿಂದ 4ನೇ ವಾರ್ಷಿಕ ಸಾಮನ್ಯ ಸಭೆಯನ್ನು ಅಜೆಂಡಾ ಟಿಪ್ಪಣಿಯ ವ್ಯವಹಾರದ ವಹಿವಾಟಿನ ನಂತರ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಾಪಾಲರ ಟೀಕೆ ಟಿಪ್ಪಣಿಗಳನ್ನು ಸ್ವೀಕರಿಸಿದ ನಂತರ ಸರಿಯಾದ ಸೂಚನೆಯೊಂದಿಗೆ ಕರೆಯುವುದಕ್ಕಾಗಿ ಮುಂದೂಡಲಾಗುತ್ತದೆ.

2. ಕಂಪನಿ ಕಾಯ್ದೆ, 2013ರ ಪರಿಚ್ಛೇದ 142ರ ಉಪಬಂಧಗಳ ಅನುಸಾರ ಲೆಕ್ಕಪರಿಶೋಧಕರಿಗೆ ಸಂದಾಯವಾಗಬೇಕಿರುವ ಸಂಭಾವನೆಯನ್ನು ಕಂಪನಿಯು ಸರ್ವಸದಸ್ಯರ ಸಭೆಯಲ್ಲಿ ನಿಗದಿಪಡಿಸಬೇಕು ಅಥವಾ ಸರ್ವ ಸದಸ್ಯರ ಸಭೆಯಲ್ಲಿ ನಿಧಾರವಾಗುವರೀತಿಯಲ್ಲಿ ನಿಗದಿಪಡಿಸಬೇಕು. ದಿನಾಂಕ 29.12.2017 ರಂದು ನಡೆದ ಸರ್ವಸದಸ್ಯರ 1ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಂಪನಿ ಕಾಯ್ದೆ ಅಡಿಯಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನೇಮಕ ಮಾಡಿದೊಡನೆಯೇ ಪ್ರತ್ಯೇಕವಾಗಿ ಪ್ರತಿವರ್ಷ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಸಂದಾಯವಾಗಬೇಕಾದ ಸಂಭಾವನೆಯನ್ನು ನಿಗದಿಪಡಿಸಲು ಸಭೆಯು ಲೆಕ್ಕ ಪರಿಶೋಧನಾ ಸಮಿತಿಗೆ ಅಧಿಕಾರವನ್ನು ನೀಡಿದೆ. ಇದಕ್ಕನುಗುಣವಾಗಿ ನಿರ್ದೇಶಕ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿಯು 2019–20ರ ಹಣಕಾಸು ವರ್ಷಕ್ಕೆ ರೂ. 10.50 ಲಕ್ಷಗಳು + ಅನ್ವಯವಾಗುವ ತೆರಿಗೆ ಗಳನ್ನು ಲೆಕ್ಕಪರಿಶೋಧನೆಯನೊಳಗೊಂಡ ಸಂಭಾವನೆಯನ್ನು ನೀಡಲು ಸಹಮತಿಸಿ ಅನುಮೋದಿಸಿರುತ್ತದೆ.

3. ಸಭೆಗೆ ಹಾಜರಾಗುವ ಮತ್ತು ಮತ ಚಲಾಯಿಸುವ ಅರ್ಹತೆಯನ್ನು ಹೊಂದಿರುವ ಓರ್ವ ಸದಸ್ಯರು, ತಾವೇ ಸ್ವತಃ ಹಾಜರಾಗುವ ಹಾಗೂ ಮತ ಚಲಾಯಿಸುವ ಬದಲು ತಮ್ಮ ಪರವಾಗಿ ಸಭೆಗೆ ಹಾಜರಾಗುವ ಹಾಗೂ ಮತ ಚಲಾಯಿಸುವ ಸಲುವಾಗಿ ಮತ್ತೋರ್ವ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳಬಹುದು, ಅಂತಹ ವ್ಯಕ್ತಿಯು ಕಂಪನಿಯ ಓರ್ವ ಸದಸ್ಯರಾಗಿರಬೇಕಾಗಿಲ್ಲ.

4. ಕಂಪನಿ ಕಾಯ್ದೆ 2013 ಪರಿಚ್ಛೇದ 102 ಅನುಸಾರ ವಿವರಣಾತ್ಮಕ ಹೇಳಿಕೆಯನ್ನು ಸೂಚನಾ ಪತ್ರಕ್ಕೆ ಅಡಕವಾಗಿರಿಸಿದೆ.

5. ಕಂಪನಿ ಕಾಯ್ದೆ 2013 ಪರಿಚ್ಛೇದ 101(1) ರನ್ವಯ ಸದಸ್ಯರ ಒಪ್ಪಿಗೆಯನ್ನು ಪಡೆದು ಕಡಿಮೆ ಸಮಯದಲ್ಲಿ (short notice) ಸಭೆಯನ್ನು ಕರೆಯಲಾಗಿರುತ್ತದೆ.

ವಿವರಣಾತ್ಮಕ ಹೇಳಿಕೆ

(ಕಂಪನಿ ಕಾಯ್ದೆ 2013 ಪರಿಚ್ಛೇದ 102 ಅನುಸಾರ)

ವಿಶೇಷ ವ್ಯವಹಾರಗಳು: ಅಧಿಕೃತ ಷೇರು ಬಂಡವಾಳದಲ್ಲಿ ಹೆಚ್ಚಳ:

1. ಕಂಪನಿಯ ಅಧಿಕೃತ ಷೇರು ಬಂಡವಾಳ ಪ್ರಸ್ತುತ ರೂ. 10,000 ಕೋಟಿಗಳಾಗಿದ್ದು ಇದನ್ನು ತಲಾ ಷೇರಿನ ಮುಖಬೆಲೆ ರೂ. 1,000/– ಗಳಂತೆ 10,00,00,000 ಈಕ್ವಿಟಿ ಷೇರುಗಳಿಗೆ ವಿಭಜಿಸಲಾಗಿದೆ. ಮಾರುಕಟ್ಟೆಯ ಸಾಲಗಳು ಅಲ್ಲದೇ ಕಂಪನಿಯ ಯೋಜನೆಗಳಿಗೆ ನಿಧಿಗಳನ್ನು ಕರ್ನಾಟಕ ಸರ್ಕಾರ ಬಂಡವಾಳ ಅನುದಾನಗಳ ಮೂಲಕ ನೀಡುತ್ತದೆ. ಹೀಗೆ ಕಾಲಕಾಲಕ್ಕೆ ಬಿಡುಗಡೆ ಮಾಡಲಾದ ಅನುದಾನವನ್ನು ಸರ್ಕಾರದ ಆದೇಶಗಳ ಆಧಾರದ ಮೇಲೆ ಈಕ್ವಿಟಿ ಷೇರುಗಳನ್ನಾಗಿ ಪರಿವರ್ತಿಸಲಾಗಿದೆ. ಈ ದಿನಾಂಕದಲ್ಲಿದ್ದಂತೆ ಕಂಪನಿಯ ಪಾವತಿಸಲಾಗಿರುವ ಬಂಡವಾಳ ರೂ. 9,227.03 ಕೋಟಿಗಳು (ಷೇರುಗಳನ್ನು ಹಂಚಿಕೆ ಮಾಡಲು ಬಾಕಿ ಇರುವ ರೂ. 617.43 ಕೋಟಿಗಳ ಷೇರು ಅರ್ಜಿ ಶುಲ್ಕವನ್ನು ಹೊರತುಪಡಿಸಿ). ಕಂಪನಿಯು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಪರಿಷ್ಕೃತ ಅಂದಾಜಿನಂತೆ ಬಾಕಿ ಭರಿಸಬೇಕಾಗಿರುವ ವೆಚ್ಚ ರೂ. 35,500 ಕೋಟಿಗಳಾಗುತ್ತದೆ. ಆದ್ದರಿಂದ ಕರ್ನಾಟಕ ಸರ್ಕಾರಕ್ಕೆ ಈಕ್ವಿಟಿ ಷೇರುಗಳನ್ನು ಹಂಚಿಕೆ ಮಾಡಲು ಅನುಕೂಲವಾಗುವಂತೆ ಭವಿಷ್ಯದಲ್ಲಿ ಸರ್ಕಾರದಿಂದ ಕಾಲಕಾಲಕ್ಕೆ ಪಡೆಯುವ ಅನುದಾನವನ್ನು ಪರಿವರ್ತಿಸಲು ಅಧಿಕೃತ ಬಂಡವಾಳ ರೂ. 46,000 ಕೋಟಿಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದು, ತಲಾ ಈಕ್ವಿಟಿ ಷೇರು ಮುಖಬೆಲೆ ರೂ. 1,000/– ಗಳ 36,00,00,000 ಈಕ್ವಿಟಿ ಷೇರುಗಳನ್ನು ಹೆಚ್ಚುವರಿಯಾಗಿ ಸೃಷ್ಟಿಸಬೇಕಿದೆ.

2. ಕಂಪನಿಯ ಯಾವುದೇ ನಿರ್ದೇಶಕರು ವಿಶೇಷ ವ್ಯವಹಾರದಲ್ಲಿ ತಿಳಿಸಿದಂತೆ ಠರಾವಿನ ಬಗ್ಗೆ ಕಾಳಜಿ ಅಥವಾ ಆಸಕ್ತಿ ಹೊಂದಿರುವುದಿಲ್ಲ. ಮಂಡಳಿಯು ಈ ನಿರ್ಣಯವನ್ನು ವಿಶೇಷ ನಿರ್ಣಯವೆಂದು ಹೊರಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸ್ಥಳ : ಬೆಂಗಳೂರು

ದಿನಾಂಕ : 29/12/2020

ಮಂಡಳಿಯ ಆದೇಶದ ಮೇರೆಗೆ
ವಿಶ್ವೇಶ್ವರಯ್ಯ ಜಲ ನಿಗಮದ ಪರವಾಗಿ
ಸಹಿ/–
(ಜಿ.ಎಸ್. ಪ್ರಕಾಶ್)
ಕಂಪನಿ ಕಾರ್ಯದರ್ಶಿ

2019–20 ಹಣಕಾಸು ಸಾಲಿಗೆ ನಿರ್ದೇಶಕರುಗಳ ವರದಿ

ಆತ್ಮೀಯ ಸದಸ್ಯರುಗಳಿಗೆ,

1. ಲೆಕ್ಕಪರಿಶೋಧನೆಗೆ ಒಳಪಟ್ಟಿರುವಂತಹ 31 ಮಾರ್ಚ್ 2020ಕ್ಕೆ ಅಂತ್ಯಗೊಂಡ ವರ್ಷದ ಹಣಕಾಸು ತ:ಖ್ತೆಗಳ ಜೊತೆಯಲ್ಲಿ ತಮ್ಮ ನಾಲ್ಕನೆಯ ಹಣಕಾಸು ಸಾಲಿನ ವಾರ್ಷಿಕ ವರದಿಯನ್ನು ಈ ಮೂಲಕ ಮಂಡಿಸುತ್ತಿರುವುದಕ್ಕೆ ನಿಮ್ಮ ನಿರ್ದೇಶಕರುಗಳ ಮಂಡಳಿಯು ಅತೀವವಾದಂತಹ ಸಂತಸವನ್ನು ವ್ಯಕ್ತಪಡಿಸುತ್ತಿರುವುದು.

2. ಕಂಪನಿಯು ಕಾರ್ಯಗತಗೊಳಿಸುತ್ತಿರುವಂತಹ ಯೋಜನೆಗಳ ಹಣಕಾಸಿನ ಸ್ಥಿತಿಗತಿಗಳು ಹಾಗೂ ನೀರಾವರಿ ಸಾಮರ್ಥ್ಯಗಳ ವಿವರಗಳು ಈ ಕೆಳಗಿನಂತಿರುತ್ತವೆ :

ಕ್ರಮ ಸಂಖ್ಯೆ	ಯೋಜನೆಗಳು	ಹಣಕಾಸಿನ ಪ್ರಗತಿ ರೂ. ಲಕ್ಷಗಳಲ್ಲಿ			ನೀರಾವರಿ ಸಾಮರ್ಥ್ಯ (ಹೆಕ್ಟೇರುಗಳಲ್ಲಿ)		
		ಅಂದಾಜು ಯೋಜನಾ ವೆಚ್ಚ	31.3.2020 ರಲ್ಲಿದ್ದಂತೆ ಕ್ರೋಢೀಕೃತ ವೆಚ್ಚ	01–04–2020 ರಲ್ಲಿದ್ದಂತೆ ಉಳಿಕೆ ವೆಚ್ಚ	ಗರಿಷ್ಠ	ಪ್ರಸಕ್ತ ಸಾಲಿನಲ್ಲಿ ಸೃಷ್ಟಿಸಲಾಗಿರುವುದು	ಸೃಷ್ಟಿಸಲಾಗಿರುವ ಕ್ರೋಢೀಕೃತ ಸಾಮರ್ಥ್ಯ
1	ಭದ್ರ ಮೇಲ್ದಂಡೆ ಯೋಜನೆ	21,47,367*	3,85,094	17,62,273	2,25,515	–	–
2	ವಾಣಿವಿಲಾಸ ಸಾಗರ	–	184	–	12,135	–	12,135
3	ಗಾಯತ್ರಿ ಜಲಾಶಯ	–	482	–	2,367	–	2,367
	ಉಪ–ಮೊತ್ತ	**21,47,367**	**3,85,760**	**17,62,273**	**2,40,017**	–	**14,502**
4	ಎತ್ತಿನ ಹೊಳೆ	12,91,236	6,66,512	6,24,724	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ
	ಯೋಜನೆಗಳ ಒಟ್ಟಾರೆ ಮೊತ್ತ	**34,38,603**	**10,52,272**	**23,86,997**	**2,40,017**	–	**14,502**

* ಸರ್ಕಾರವು ತನ್ನ ಆದೇಶ ಸಂಖ್ಯೆ ಜಸಂಇ 166 ವಿಬಿವೈಇ 2020 (ಭಾಗ 1), ಬೆಂಗಳೂರು, ದಿನಾಂಕ 16.12.2020ರ ಮೂಲಕ ಅನುಮೋದಿಸಿರುವಂತೆ ಪರಿಷ್ಕೃತ ವೆಚ್ಚ.

ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿನ ಪ್ರಗತಿ :

ಎತ್ತಿನಹೊಳೆ ಯೋಜನೆ:

3) ಮಾರ್ಚ್ 2014 ರಲ್ಲಿ ಒಟ್ಟು ರೂ.3,71,649 ಲಕ್ಷ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾದಂತಹ ಯೋಜನೆಯ ಮೊದಲನೇ ಹಂತದ ಲಿಫ್ಟ್ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ. ಜುಲೈ 2017ರಲ್ಲಿ ರೂ.26,595 ಲಕ್ಷ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾದಂತಹ ವಿದ್ಯುತ್ ಉಪ–ಸ್ಟೇಷನ್ ಕಾಮಗಾರಿಗಳು ಹಾಗೂ ಮಾರ್ಚ್ 2018ರಲ್ಲಿ ರೂ.13,262 ಲಕ್ಷ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾದಂತಹ ವಿದ್ಯುತ್ ಪ್ರಸರಣ ಮಾರ್ಗದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ. ಯೋಜನೆಯ ಲಿಫ್ಟ್ ಕಾಮಗಾರಿಗಳನ್ನು 2021ರ ಮಳೆಗಾಲದಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲು ಯೋಜಿಸಲಾಗಿದೆ.

4 ಗುರುತ್ವ ಕಾಲುವೆ ಕಾಮಗಾರಿಗಳನ್ನು ಒಳಗೊಂಡಿರುವಂತಹ ಯೋಜನೆಯ ಎರಡನೆಯ ಹಂತದಲ್ಲಿ ಈ ಕೆಳಗೆ ವಿವರಿಸಿರುವಂತೆ ತೃಪ್ತಿಕರವಾದಂತಹ ಪ್ರಗತಿಯನ್ನು ಸಾಧಿಸಿರುತ್ತದೆ:

i. ಹಾಸನ ಜಿಲ್ಲೆಯ ಹೆಬ್ಬನಹಳ್ಳಿಯಿಂದ ತುಮಕೂರು ಜಿಲ್ಲೆಯ ಕೊರಟಗೆರೆ ಸಮೀಪ ಬೈರಗೊಂಡ್ಲು ಜಲಾಶಯದ ವರೆಗೆ ಹರಿಯುವಂತಹ ಗುರುತ್ವ ಕಾಲುವೆಯ ಉದ್ದವು 260 ಕಿಮೀ

ಇದ್ದು, ಕಾಲುವೆಯ ಪೂರ್ಣ ಉದ್ದಕ್ಕೆ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. ಈಗಾಗಲೇ ಪ್ರಗತಿಯಲ್ಲಿರುವ ಕಾಮಗಾರಿಗಳ ಅಡಿಯಲ್ಲಿ 35 ಮೀಟರುಗಳ ಗರಿಷ್ಠ–ಎತ್ತರದ ಸುಮಾರು 10.47 ಕಿಮೀಗಳಷ್ಟು ಉದ್ದದ ಬೃಹತ್ ಮೇಲ್ಗಾಲುವೆ (ಅಕ್ವಡೆಕ್ಟ್) ಕಾಮಗಾರಿಯು ಒಳಗೊಂಡಿರುತ್ತದೆ.

ii. ತುಮಕೂರು ಜಿಲ್ಲೆಯ ಬೈರಗೊಂಡ್ಲು ಹತ್ತಿರ ನಿರ್ಮಿಸಲು ಉದ್ದೇಶಿಸಿರುವ 5.70 ಟಿಎಂಸಿ ಸಂಗ್ರಹಣಾ ಸಾಮರ್ಥ್ಯದ ಜಲಾಶಯದ ಕಾಮಗಾರಿಯನ್ನು ಫೆಬ್ರವರಿ 2018ರಲ್ಲಿ ಗುತ್ತಿಗೆ ವಹಿಸಲಾಗಿದ್ದರೂ, ಕೊರಟಗೆರೆ ತಾಲ್ಲೂಕಿನ ಭೂ ಮಾಲೀಕರುಗಳು, ಕೊರಟಗೆರೆ ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ನೀರು ವ್ಯಾಪಿಸುವಿಕೆಯ ಪ್ರದೇಶವು ಒಂದು ಏಕೈಕ ಘಟಕವಾಗಿರುವುದರಿಂದ, ತಮ್ಮ ಜಮೀನುಗಳಿಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಭೂ ಸ್ವಾಧೀನಕ್ಕಾಗಿ ಪಾವತಿಸಲಾಗುವಂತಹ ಭೂ ಪರಿಹಾರದ ದರಕ್ಕೆ ಸಮನಾಗಿ ದರಗಳನ್ನು ಪಾವತಿಸುವಂತೆ ಒತ್ತಾಯಿಸಿದ್ದರಿಂದ ಭೂಸ್ವಾಧೀನ ಸಮಸ್ಯೆಯು ಉದ್ಭವಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗಲಿಲ್ಲ. ಎರಡೂ ತಾಲ್ಲೂಕುಗಳ ಜಮೀನುಗಳಿಗೆ ಏಕರೂಪ ಪರಿಹಾರ ದರ ನೀಡುವ ಕುರಿತ ಪ್ರಸ್ತಾವನೆಯ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ಕೈಗೊಳ್ಳುವುದು ಬಾಕಿಯಿರುತ್ತದೆ.

iii. ಗುರುತ್ವ ಕಾಲುವೆಯ ಸರಪಳಿ 244.90 ಕಿ.ಮೀ ನಲ್ಲಿ ಪ್ರಾರಂಭಗೊಳ್ಳುವ ತಿಪ್ಪಗೊಂಡನಹಳ್ಳಿ ಜಲಾಶಯ ಹಾಗೂ ರಾಮನಗರ ಜಿಲ್ಲೆಗೆ ಕುಡಿಯುವ ನೀರನ್ನು ಒದಗಿಸುವ ರಾಮನಗರ ಫೀಡರ್ ಕಾಲುವೆ ಕಾಮಗಾರಿ, ತುಮಕೂರು, ಕೊರಟಗೆರೆ, ಪಾವಗಡ ಮತ್ತು ಮಧುಗಿರಿ ತಾಲ್ಲೂಕುಗಳ ಕೆರೆಗಳಿಗೆ ನೀರನ್ನು ತುಂಬುವ ಹಾಗೂ ಕುಡಿಯುವ ನೀರನ್ನು ಒದಗಿಸುವಂತಹ ಮಧುಗಿರಿ ಫೀಡರ್ ಕಾಲುವೆ ಕಾಮಗಾರಿ ಮತ್ತು ಗೌರಿಬಿದನೂರು, ಕೊರಟಗೆರೆ, ಮಧುಗಿರಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಕೆರೆಗಳಿಗೆ ನೀರನ್ನು ತುಂಬುವ ಹಾಗೂ ಕುಡಿಯುವ ನೀರನ್ನು ಒದಗಿಸುವಂತಹ ಗೌರಿಬಿದನೂರು ಫೀಡರು ಕಾಲುವೆ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. ಚಿಕ್ಕಬಳ್ಳಾಪುರ ಒಳಗೊಂಡಂತೆ ಕೋಲಾರ ಮತ್ತು ಶ್ರೀನಿವಾಸಪುರದ ಫೀಡರ್ ಕಾಲುವೆಗಳ ಸಮೀಕ್ಷೆ, ವಿನ್ಯಾಸ/ ರೂಪುರೇಖೆ, ಅಂದಾಜುಗಳ ತಯಾರಿಕೆ, ವಿವರವಾದ ಯೋಜನಾ ವರದಿಗಳ ತಯಾರಿಕೆ ಹಾಗೂ ಭೂಸ್ವಾಧೀನ ಪ್ರಸ್ತಾವನೆಗಳನ್ನು ತಯಾರಿಸುವ ಸಲುವಾಗಿ ಕ್ರಮ ಕೈಗೊಳ್ಳಲಾಗಿರುತ್ತದೆ.

iv. ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ನೀರು ಸರಬರಾಜು ಮಾಡುವ ಸಲುವಾಗಿ ಬೈರಗೊಂಡ್ಲುವಿನಿಂದ ಎರಡನೆಯ ಹಂತದಲ್ಲಿ ಒಂದು ನೀರೆತ್ತುವ ವ್ಯವಸ್ಥೆಯನ್ನು ಯೋಜಿಸಿದ್ದು, ಇದಕ್ಕಾಗಿ ಅಂದಾಜುಗಳನ್ನು ತಯಾರಿಸಲಾಗುತ್ತಿದೆ.

5. ನಮ್ಮ 3ನೇ ವಾರ್ಷಿಕ ವರದಿಯಲ್ಲಿ ವರದಿ ಮಾಡಿರುವಂತೆ, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಮುಂದೆ ಸಲ್ಲಿಸಲಾಗಿದ್ದಂತಹ ಎಲ್ಲಾ ಅರ್ಜಿಗಳನ್ನು ತಳ್ಳಿಹಾಕುವುದರೊಂದಿಗೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ತೀರ್ಪಿನ ಪ್ರತಿಯಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದಂತಹ ವಿಶೇಷ ರಜೆ ಅರ್ಜಿಯನ್ನೂ ಸಹ ತಳ್ಳಿಹಾಕುವುದರೊಂದಿಗೆ ಯೋಜನೆಯ ಮೊದಲನೇ ಹಂತದಲ್ಲಿನ ಲಿಫ್ಟ್ ಕಾಮಗಾರಿಗಳ ಅಡಿಯಲ್ಲಿ ಉಂಟಾದ ಪರಿಸರ ಮತ್ತು ಅರಣ್ಯ ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲಾಗಿರುತ್ತದೆ.

6. ಎತ್ತಿನಹೊಳೆ ಯೋಜನೆಯಲ್ಲಿ ಲಭ್ಯವಾಗಬಹುದಾದ ನೀರಿನ ಲಭ್ಯತೆಯನ್ನು ಸಾಬೀತುಪಡಿಸುವ ಸಲುವಾಗಿ ದೂರಸ್ಥಮಾಪಕ ವ್ಯವಸ್ಥೆಯೊಂದಿಗೆ (ಟೆಲಿಮೆಟ್ರಿ ಸಿಸ್ಟಂ) ನೀರು ಹರಿವಿನ ನಿರ್ಧರಣೆಯನ್ನು ನಡೆಸಲಾಯಿತು. ಹಿಂದಿನ ಸಾಲಿನಲ್ಲಿ, ನೀರಿನ ಲಭ್ಯತೆಯು ಅಗತ್ಯತೆಗಿಂತ ಅಧಿಕವಾಗಿಯೇ ಇರುವುದಾಗಿ ತಿಳಿಸಲಾಗಿದ್ದಿತು. ಆದಾಗ್ಯೂ, 2019–20 ಸಾಲಿನಲ್ಲಿ ನಿರ್ಧಾರಣೆ ಮಾಡಲಾದ ನೀರಿನ ಲಭ್ಯತೆಯು 19.97 ಟಿಎಂಸಿ ಆಗಿರುತ್ತದೆ. ಯೋಜನೆಯನ್ನು ಶೇಕಡಾ 50ರಷ್ಟು ಅವಲಂಭನೆಯೊಂದಿಗೆ ಯೋಜಿಸಲಾಗಿದ್ದು, ಯೋಜನೆಗೆ ದೊರಕಬಹುದಾದ ನೀರಿನ ಲಭ್ಯತೆಯನ್ನು ಕಳೆದ 2 ವರ್ಷಗಳಲ್ಲಿಯೇ ಸಾಧಿಸಿರುವುದರಿಂದ, ಯೋಜನೆಯ ನೀರಿನ ಲಭ್ಯತೆಯು ಒಂದು ಸಮಸ್ಯೆಯಾಗಿರುವುದಿಲ್ಲ.

7. ಪ್ರಸಕ್ತ ಸಾಲಿನಲ್ಲಿ ಯೋಜನೆಯ ಲಿಫ್ಟ್ ಕಾಮಗಾರಿಗಳನ್ನು ಮತ್ತು ಪ್ರಾರಂಭಿಕ 33 ಕಿಲೋಮೀಟರುಗಳಷ್ಟು ಉದ್ದದ ಗುರುತ್ವ ಕಾಲುವೆ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಮುಂದಿನ ಮಳೆಗಾಲದಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಳಿಸಿ ತಾತ್ಕಾಲಿಕವಾಗಿ ವೇದಾ ಕಣಿವೆಗೆ ನೀರು ಹರಿಸಲು ಯೋಜಿಸಲಾಗಿರುತ್ತದೆ.

8. ಈ ವರದಿಯ ಅಡಿಯಲ್ಲಿನ ಸಾಲಿನಲ್ಲಿ ರೂ.1,99,823 ಲಕ್ಷ ಮೊತ್ತದಷ್ಟು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದ್ದು, ಒಟ್ಟಾರೆ, ರೂ.6,66,512 ಲಕ್ಷ ಮೊತ್ತದಷ್ಟು ಸಂಚಿತ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

9. ಯೋಜನೆಯನ್ನು 2023–24ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದ್ದು, ಇದು ಪುನರ್ವಸತಿ ಮತ್ತು

ಪುನರ್‌ನಿರ್ಮಾಣ ಅದರಲ್ಲೂ ಪ್ರಮುಖವಾಗಿ ಬೈರಗೊಂಡ್ಲು ನೀರು ಸಂಗ್ರಹಣಾ ಜಲಾಶಯಕ್ಕೆ ಸಂಬಂಧಿಸಿದ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಮಗಾರಿಗಳ ಹಾಗೂ ಭೂಸ್ವಾಧೀನ ಸಮಸ್ಯೆಗಳನ್ನು ಬಗೆಹರಿಸುವುದರ ಮೇಲೆ ಮತ್ತು ಸಮರ್ಪಕ ವಾರ್ಷಿಕ ಅನುದಾನದ ಲಭ್ಯತೆಯ ಮೇಲೆ ಅವಲಂಬಿತವಾಗಿರುತ್ತದೆ.

ಭದ್ರಾ ಮೇಲ್ದಂಡೆ ಯೋಜನೆ:

10. ಈಗಾಗಲೇ ನಾವು ನಮ್ಮ ಹಿಂದಿನ ಸಾಲುಗಳ ವರದಿಯಲ್ಲಿ ತಿಳಿಸಿರುವಂತೆ, ಈ ಯೋಜನೆಯ ಪ್ರಗತಿಯು ಹೆಚ್ಚು ಕಡಿಮೆ ಒಂದು ದಶಕದವರೆಗೂ ಅನೇಕ ಅಡಚಣೆಗಳ ಕಾರಣ, ಅವುಗಳಲ್ಲಿ ಪ್ರಮುಖವಾಗಿ ಸುರಂಗ ನಾಲೆಯ ನಿರ್ಮಾಣಕ್ಕೆ ರೈತರುಗಳಿಂದ ಪ್ರತಿಭಟನೆ, ವನ್ಯ ಜೀವಿಗಳ ಸಮಸ್ಯೆಗಳೂ ಸೇರಿದಂತೆ ಅರಣ್ಯ ಭೂಮಿಯ ಬಳಕೆಗೆ ಶಾಸನಬದ್ಧ ಅನುಮತಿ ಹಾಗೂ ಭೂಸ್ವಾಧೀನ ಸಮಸ್ಯೆಗಳ ಕಾರಣ ವಿಳಂಬವಾಗಿದ್ದು, ಅಂತಹ ಸಮಸ್ಯೆಗಳನ್ನು ಇದೀಗ ಬಗೆಹರಿಸಲಾಗಿದ್ದು, ಕಳೆದ ಎರಡು ವರ್ಷಗಳಲ್ಲಿ ಗಮನಾರ್ಹವಾದಂತಹ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿರುತ್ತದೆ. ತುಂಗಾ ನದಿಯಿಂದ 17.40 ಟಿ.ಎಂ.ಸಿ ನೀರನ್ನು ಎತ್ತಿ ಭದ್ರಾ ಜಲಾಶಯಕ್ಕೆ ಹರಿಸುವ ಲಿಫ್ಟ್ ಕಾಮಗಾರಿಯು ಪ್ರಗತಿಯಲ್ಲಿದೆ. ಭದ್ರಾ ಜಲಾಶಯದಿಂದ 29.90 ಟಿಎಂಸಿ ನೀರನ್ನು ಎತ್ತಿ ಅಜ್ಜಂಪುರ ಸುರಂಗದ ವರೆಗೆ ಹರಿಸುವ ಹಾಗೂ 7 ಕಿಮೀ ಉದ್ದದ ಅಜ್ಜಂಪುರ ಸುರಂಗ ನಿರ್ಮಾಣ ಕಾಮಗಾರಿಯು ಅಕ್ಟೋಬರ್ 2019ರಲ್ಲಿ ಪೂರ್ಣಗೊಂಡಿದ್ದು, ಪ್ರಾಯೋಗಿಕವಾಗಿ ಚಾಲನೆಗೊಳಿಸಿ ವಾಣಿ ವಿಲಾಸ ಸಾಗರ ಜಲಾಶಯಕ್ಕೆ ನೀರನ್ನು ಹರಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿಯೂ ಇದನ್ನು ಮುಂದುವರೆಸಲಾಗಿರುತ್ತದೆ. ಇದು ಅಂತರ್ಜಲವನ್ನು ಪುನಶ್ಚೇತನಗೊಳಿಸುವಲ್ಲಿ ಹಾಗೂ ದನಕರುಗಳನ್ನೂ ಒಳಗೊಂಡಂತೆ ಸುತ್ತಮುತ್ತಲ ಪ್ರದೇಶದಲ್ಲಿನ ಜನತೆಯ ಕುಡಿಯುವ ನೀರಿನ ಅಗತ್ಯತೆಯನ್ನು ಪೂರೈಸುವಲ್ಲಿ ಸಹಕಾರಿಯಾಗಿರುತ್ತದೆ.

11. 2ನೇ ಹಂತದಲ್ಲಿ ಕೈಗೊಳ್ಳಲಾಗಿರುವ ಈ ಕೆಳಕಂಡ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

1. ಹನಿ ನೀರಾವರಿ ಸೌಲಭ್ಯವನ್ನು ಒದಗಿಸುವ ಸಲುವಾಗಿ ಅಜ್ಜಂಪುರ ಸುರಂಗ ನಾಲೆಯ ಆಗಮನ ಮತ್ತು ನಿರ್ಗಮನ ಭಾಗದಲ್ಲಿ ತರೀಕೆರೆ ಏತ ನೀರಾವರಿ ಯೋಜನೆ.
2. ಚಿತ್ರದುರ್ಗ ಶಾಖಾ ಕಾಲುವೆಯ ಸರಪಳಿ 0.00 ಕಿಮೀ ನಿಂದ 134.597 ಕಿಮೀ ವರೆಗಿನ ಕಾಮಗಾರಿ.
3. ತುಮಕೂರು ಶಾಖಾ ಸರಪಳಿ 0.00 ಕಿಮೀ ನಿಂದ 159.684 ಕಿಮೀ ವರೆಗಿನ ಕಾಮಗಾರಿ.
4. ಹೊಳಲ್ಕೆರೆ ಫೀಡರ್ ಕಾಲುವೆ ನಿರ್ಮಾಣ

12. ಪ್ರಸಕ್ತ ಸಾಲಿನಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುತ್ತದೆ.

1. ಪಾವಗಡ ಫೀಡರ್ ಕಾಲುವೆ ನಿರ್ಮಾಣ
2. ಚಳ್ಳಕೆರೆ ಮತ್ತು ಮೊಳಕಾಲ್ಮೂರು ಫೀಡರ್ ಕಾಲುವೆ ನಿರ್ಮಾಣ
3. ಶಿರಾ ಮತ್ತು ಹಿರಿಯೂರು ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ
4. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ

13. ಚಿತ್ರದುರ್ಗ ಶಾಖಾ ಕಾಲುವೆಯ ಅಡಿಯಲ್ಲಿ ಬರುವ ಜಗಳೂರು ಶಾಖಾ ಕಾಲುವೆ ಕಾಮಗಾರಿಯ ಅಂದಾಜುಗಳನ್ನು ತಯಾರಿಸಲಾಗುತ್ತಿದ್ದು, ಈ ಯೋಜನೆಯ ಅಡಿಯಲ್ಲಿನ ಒಟ್ಟು 2.25 ಲಕ್ಷ ಹೆಕ್ಟೇರುಗಳಷ್ಟು ಅಚ್ಚುಕಟ್ಟು ಪ್ರದೇಶಕ್ಕೆ ಹನಿ ನೀರಾವರಿ ಒದಗಿಸಲು ಯೋಜಿಸಲಾಗಿದೆ. ಈ ನಿಟ್ಟಿನಲ್ಲಿ, ಚಿತ್ರದುರ್ಗ ಶಾಖಾ ಕಾಲುವೆಯ ಸರಪಳಿ 0.00 ಕಿಮೀ ನಿಂದ 61.23 ಕಿಮೀ ಅಡಿಯಲ್ಲಿ ಬರುವಂತಹ 36,000 ಹೆಕ್ಟೇರುಗಳಿಗೆ ಹನಿ ನೀರಾವರಿ ಒದಗಿಸುವ ಸಲುವಾಗಿ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಪರಿಶೀಲನೆಯಲ್ಲಿರುತ್ತದೆ. ತುಮಕೂರು ಶಾಖಾ ಕಾಲುವೆಯ 0–76 ಕಿಮೀ ಅಡಿಯಲ್ಲಿ ಬರುವ 28,699 ಹೆಕ್ಟೇರುಗಳಿಗೆ ಹನಿ ನೀರಾವರಿ ಒದಗಿಸುವ ಸಲುವಾಗಿ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.

14. ಯೋಜನೆಯ ಹಂತ 1 ಮತ್ತು 2 ರಲ್ಲಿನ ಅರಣ್ಯ ಮತ್ತು ಭೂಸ್ವಾಧೀನ ಸಮಸ್ಯೆಗಳ ಕಾರಣ ಯೋಜನಾ ಕಾಮಗಾರಿಗಳಿಗೆ ಅಡಚಣೆಗಳು ಉಂಟಾಗಿರುತ್ತವೆ. ಪ್ರಸ್ತುತ ಹಂತ 1 ರಡಿಯಲ್ಲಿನ ಲಿಫ್ಟ್ ಕಾಮಗಾರಿಗಳ ಅಡಿಯಲ್ಲಿ ಬರುವ ಅರಣ್ಯ ಇಲಾಖೆಯ ಅನುಮತಿಯ ಸಮಸ್ಯೆಗಳನ್ನು ಬಗೆಹರಿಸಲಾಗಿದ್ದು, ಪ್ಯಾಕೇಜ್–1ರ ಅಡಿಯಲ್ಲಿ ವನ್ಯ ಜೀವಿಗಳ ರಾಷ್ಟ್ರೀಯ ಮಂಡಳಿಯು (ಎನ್ ಬಿ ಡಬ್ಲ್ಯು ಎಲ್) ನೀಡಿರುವ ಸಲಹೆಯನ್ವಯ ಪರಿಹಾರಕ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ತುಮಕೂರು ಶಾಖಾ ಕಾಲುವೆಯ ಪ್ರಾರಂಭಿಕ ಭಾಗವು ಕೃಷ್ಣ ಮೃಗ, ಭಾರತೀಯ ತೋಳ, ಭಾರತೀಯ ನರಿ ಮತ್ತು ಭಾರತೀಯ ಅಮೋಘ ಬಸ್ಟರ್ಡ್ ಸೇರಿದಂತೆ ಅನೇಕ ಪಕ್ಷಿ ಕುಲಗಳ ಬಹಳಷ್ಟು ಸಂಖ್ಯೆಯ ಪ್ರಾಣಿ ಪಕ್ಷಿಗಳಿಗೆ ಮೇವನ್ನು ಒದಗಿಸುತ್ತಿರುವ/ಆಸರೆಯಾಗಿರುವ ಹುಲ್ಲುಗಾವಲುಗಳ ಮೂಲಕ ಹಾದು ಹೋಗುತ್ತಿರುವುದರಿಂದ ಕಾಲುವೆಯ ಮಾರ್ಗವನ್ನು ಪುನರ್‌ರೂಪಿಸುವಂತೆ ಪರಿಸರವಾದಿಗಳು ಧರಣಿ ನಡೆಸಿದ ಕಾರಣ ಕಾಮಗಾರಿಗಳ

ಪ್ರಗತಿಯು ಕುಂಠಿತಗೊಂಡಿರುತ್ತದೆ. ಅಕ್ಕಪಕ್ಕದ ಸರಪಳಿಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುವುದರಿಂದ ಕಾಲುವೆಯ ಮಾರ್ಗವನ್ನು ಬದಲಾಯಿಸುವುದು ತಾಂತ್ರಿಕವಾಗಿ ಕಾರ್ಯಸಾಧ್ಯವಿರಲಿಲ್ಲವಾದ್ದರಿಂದ, ಕಂಪನಿಯು ವನ್ಯ ಜೀವಿ ಸಂರಕ್ಷಣಾ ಅಧಿನಿಯಮದ ಅಡಿಯಲ್ಲಿ ವನ್ಯ ಜೀವಿಗಳಿಗೆ ಸಂಬಂಧಿಸಿದಂತೆ ಅನುಮತಿಗಾಗಿ ಅರ್ಜಿ ಸಲ್ಲಿಸಿತು ಹಾಗೂ ಆ ಪ್ರಾಧಿಕಾರವು/ ಇಲಾಖೆಯು ಈ ನಿಟ್ಟಿನಲ್ಲಿ ನೀಡುವಂತಹ ಪರಿಹಾರಕ ಕ್ರಮಗಳನ್ನು ಕಾರ್ಯಗತಗೊಳಿಸಲಾಗುವುದು. ಈ ವಿಷಯವು ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಬಾಕಿಯಿರುವುದು.

15. ಈ ವರದಿಯ ಅಡಿಯಲ್ಲಿನ ಸಾಲಿನಲ್ಲಿ ರೂ.84,274 ಲಕ್ಷ ಮೊತ್ತದಷ್ಟು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದ್ದು, ಒಟ್ಟಾರೆ, ರೂ.3,85,094 ಲಕ್ಷ ಮೊತ್ತದಷ್ಟು ಸಂಚಿತ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

16. ನಮ್ಮ ಮೊದಲನೇ ವಾರ್ಷಿಕ ವರದಿಯಲ್ಲಿ ಈಗಾಗಲೇ ವರದಿ ಮಾಡಿರುವಂತೆ, ಭದ್ರಾ ಮೇಲ್ದಂಡೆ ಯೋಜನೆಯು ಕೇಂದ್ರ ನೆರವು ಪಡೆಯಲು ನಿಗದಿಪಡಿಸಿದ ಮಾನದಂಡಗಳನ್ನು ಪೂರೈಸುತ್ತಿರುವುದರಿಂದ ಸದರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿದಂತೆ, ಅಗತ್ಯವಾದ ಶಾಸನಬದ್ಧ ಅನುಮತಿಗಳನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆ. ಪ್ರಸ್ತುತ, ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಿಂದ ಅನುಮತಿ ಪಡೆಯಲಾಗಿದ್ದು, ಪ್ರಸ್ತಾವನೆಯು ಭಾರತ ಸರ್ಕಾರದ ಹೂಡಿಕೆ ತೀರುವಳಿಗಾಗಿ ಪರಿಗಣನೆಯಲ್ಲಿರುತ್ತದೆ.

17. ಯೋಜನೆಯನ್ನು 2023–24ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದ್ದು, ಇದು ಭೂಸ್ವಾಧೀನ, ಅರಣ್ಯ ಮತ್ತು ವನ್ಯಜೀವಿ ಮಂಡಳಿಯ ತೀರುವಳಿ ಸಮಸ್ಯೆಗಳನ್ನು ಬಗೆಹರಿಸುವುದರ ಮೇಲೆ ಮತ್ತು ಸಮರ್ಪಕ ವಾರ್ಷಿಕ ಅನುದಾನದ ಲಭ್ಯತೆಯ ಮೇಲೆ ಅವಲಂಬಿತವಾಗಿರುತ್ತದೆ.

ಅಣೆಕಟ್ಟು ಪುನರ್ವಸತಿ ಮತ್ತು ಅಭಿವೃದ್ಧಿ ಕಾರ್ಯಕ್ರಮ (ಡ್ರಿಪ್):

18. ವಿಶ್ವ ಬ್ಯಾಂಕ್ ನೆರವಿನೊಂದಿಗೆ ಕೈಗೊಳ್ಳಲಾಗುತ್ತಿರುವ ಅಣೆಕಟ್ಟು ಪುನರ್ವಸತಿ ಮತ್ತು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ (ಡ್ರಿಪ್–2) ವಾಣಿ ವಿಲಾಸ ಸಾಗರ ಮತ್ತು ಗಾಯತ್ರಿ ಜಲಾಶಯ ಯೋಜನೆಗಳನ್ನು ಸೇರ್ಪಡೆಗೊಳಿಸಲಾಗಿದೆ. ಗಾಯತ್ರಿ ಅಣೆಕಟ್ಟೆಯ ಕರಡು ಟೆಂಡರ್ ದಸ್ತಾವೇಜಿಗೆ ಕೇಂದ್ರ ಯೋಜನಾ ಮೇಲ್ವಿಚಾರಣಾ ಘಟಕ–ಸಿಡಬ್ಲ್ಯೂಸಿ (ಸಿಪಿಎಂಯುಸಿಡಬ್ಲ್ಯೂಸಿ), ನವದೆಹಲಿ ಇವರು ಯಾವುದೇ ಆಕ್ಷೇಪಣೆಗಳನ್ನು ನೀಡಿರುವುದಿಲ್ಲ. ವಾಣಿ ವಿಲಾಸ ಸಾಗರ ಅಣೆಕಟ್ಟೆಯ ಕಾಮಗಾರಿಗಾಗಿ ತಯಾರಿಸಿದ ಪ್ರಾಜೆಕ್ಟ್ ಸ್ಕ್ರೀನಿಂಗ್ ಟೆಂಪ್ಲೇಟ್‌ಗಳನ್ನು (ಪಿಎಸ್‌ಟಿ) ಸಿಪಿಎಂಯು–ಸಿಡಬ್ಲ್ಯೂಸಿ ರವರ ತೀರುವಳಿಗಾಗಿ ರಾಜ್ಯ ಪ್ರಾಜೆಕ್ಟ್ ಮಾನಿಟರಿಂಗ್ ಯುನಿಟ್–ಡ್ರಿಪ್ ಇವರಿಗೆ ಸಲ್ಲಿಸಲಾಗಿದೆ.

ಪರಿಶಿಷ್ಟ ಜಾತಿ ಯೋಜನೆ ಮತ್ತು ಬುಡಕಟ್ಟು ಜನಾಂಗದ ಉಪ–ಯೋಜನಾ ಕಾಮಗಾರಿಗಳು (ಎಸ್‌ಸಿಪಿ/ಟಿಎಸ್‌ಪಿ) :

19. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಪ್ರಮಾಣಕ್ಕೆ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ರಾಜ್ಯದ ಯೋಜನಾ ವೆಚ್ಚಗಳಲ್ಲಿ ಭಾಗವನ್ನು ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಜನಾಂಗದ ಉಪ–ಯೋಜನಾ ಕಾಮಗಾರಿಗಳಿಗಾಗಿ ಮೀಸಲಿರಿಸುವಂತೆ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಜನಾಂಗದ ಉಪ–ಯೋಜನಾ ನಿಯಮನಿಬಂಧನೆಗಳು ಕಡ್ಡಾಯಗೊಳಿಸಿರುತ್ತವೆ. ಸರ್ಕಾರವು ಈ ಯೋಜನೆಗಳ ಅಡಿಯಲ್ಲಿ ನಿಮ್ಮ ಕಂಪನಿಗಾಗಿ ರೂ.40,900 ಲಕ್ಷಗಳ ಮೊತ್ತವನ್ನು ಹಂಚಿಕೆ ಮಾಡಿದ್ದಿತು. ಈ ವರದಿಯ ಅಡಿಯಲ್ಲಿನ ಸಾಲಿನಲ್ಲಿ, ನಿಮ್ಮ ಕಂಪನಿಯು, ಹಿಂದಿನ ಸಾಲುಗಳಲ್ಲಿ ಅಂತಹ ಕಾಮಗಾರಿಗಳನ್ನೂ ಒಳಗೊಂಡಂತೆ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಜನಾಂಗದ ಉಪ–ಯೋಜನೆ ಅಡಿಯಲ್ಲಿ ನೇರ ಫಲಾನುಭವಿ ಕಾಮಗಾರಿಗಳ ಕಡೆಗೆ ರೂ.12,782.74 ಲಕ್ಷಗಳ ಮೊತ್ತದಷ್ಟು ವೆಚ್ಚಗಳನ್ನು ಭರಿಸಿರುವುದು. ರೂ.6,864 ಲಕ್ಷಗಳ ಮೊತ್ತವನ್ನು ಈ ಕಾಮಗಾರಿಗಳಿಗಾಗಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ ಮುಂಗಡ ಹಣವನ್ನಾಗಿ ನೀಡಲಾಗಿದೆ. ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಜನಾಂಗದ ಉಪ–ಯೋಜನಾ ಕಾಮಗಾರಿಗಳ ಪ್ರತಿಯಾಗಿ ನಿಗಮದ ಯೋಜನೆಗಳ ಬಂಡವಾಳ ಕಾಮಗಾರಿಗಳು ಕಡೆಗೆ ಹಿಂದಿನ ಸಾಲುಗಳ ಹಂಚಿಕೆಯ ಬಾಕಿಯಿದ್ದಂತಹ ಶಿಲ್ಕನ್ನೂ ಒಳಗೊಂಡಂತೆ ಭರಿಸಲಾಗಿರುವ ವೆಚ್ಚವು ರೂ.20,450 ಲಕ್ಷಗಳು ಆಗಿರುವುದು.

ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಪ್ರತ್ಯೇಕಗೊಳಿಸುವಿಕೆ/ ವರ್ಗಾವಣೆ :

20. ಕರ್ನಾಟಕ ನೀರಾವರಿ ನಿಗಮ ನಿಯಮಿತವು ಕಂಪನಿಗೆ ವರ್ಗಾಯಿಸಲಾದಂತಹ ಯೋಜನೆಗಳ ಆಸ್ತಿಗಳು ಮತ್ತು ಜವಾಬ್ದಾರಿಗಳ ವರ್ಗಾವಣೆಗಾಗಿ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 230ರಿಂದ 232ರ ಅಡಿಯಲ್ಲಿ ಅಗತ್ಯವಿರುವಂತೆ ವ್ಯವಸ್ಥೆಯ ಸಂಯೋಜನಾ ಯೋಜನೆಗೆ ನಿರ್ದೇಶಕರುಗಳ ಮಂಡಳಿಯು 1 ಫೆಬ್ರವರಿ 2019ರಂದು ನಡೆದಂತಹ ತನ್ನ 9ನೇ ಸಭೆಯಲ್ಲಿ ಅನುಮೋದನೆ ನೀಡಿದ್ದಿತು ಹಾಗೂ 1 ಫೆಬ್ರವರಿ 2019ರಂದು ನಡೆದಂತಹ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಷೇರುದಾರರುಗಳು ಅನುಮೋದಿಸಿದ್ದರು. ತದನಂತರ, ಯೋಜನೆಯ ಮಂಜೂರಾತಿಗಾಗಿ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ, ನವ ದೆಹಲಿ, ಇವರಿಗೆ ಫೆಬ್ರವರಿ 2019ರಲ್ಲಿ ಒಂದು ಜಂಟಿ ಅರ್ಜಿಯನ್ನು ಸಲ್ಲಿಸಲಾಯಿತು. ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದ ಆದೇಶ ಸಂಖ್ಯೆ 24–1–2019–ಸಿಎಲ್–III ದಿನಾಂಕ 15ಏಪ್ರಿಲ್ 2019ರ ಅನುಸಾರ ಯೋಜನೆಯ ಅನುಮೋದನೆಗಾಗಿ, ಭದ್ರತೆಯಿಂದ ಕೂಡಿದ/ಭದ್ರತೆಯಿಂದ ಕೂಡಿರದ ಸಾಲದಾತರುಗಳ ಸಭೆಯನ್ನು 17 ಜುಲೈ 2019ರಂದು ನಡೆಸಲಾಯಿತು. ಸಾಲದಾತರ ಮೇಲೆ ತಿಳಿಸಲಾದಂತಹ ಸಭೆಯಲ್ಲಿ ಯೋಜನೆಗೆ ಅನುಮೋದನೆಯು ದೊರೆಯಿತು ಹಾಗೂ ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ನೇಮಕ ಮಾಡಿದ್ದಂತಹ ಸಾಲದಾತರುಗಳ ಅಧ್ಯಕ್ಷರು ಒಂದು ವರದಿಯನ್ನು ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯ, ನವ ದೆಹಲಿ, ಇವರಿಗೆ 18 ಜುಲೈ 2019ರಂದು ಸಲ್ಲಿಸಿದರು. ತದನಂತರ, ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ದಿನಾಂಕಗಳನ್ನು ನಿಗದಿಗೊಳಿಸುತ್ತಾ ಹಾಗೂ ಈ ವಿಷಯದ ಬಗ್ಗೆ ಅನೇಕ ಬಾರಿ ಆಲಿಸಿತು. 30.01.2020ರಂದು ನಡೆದಂತಹ ಅಂತಿಮ ವಿಚಾರಣೆಯ ನಂತರ ಪ್ರತ್ಯೇಕಗೊಳಿಸುವಿಕೆ/ ವರ್ಗಾವಣೆ ವ್ಯವಸ್ಥೆಗಳ ಸಂಯೋಜಿತ ವ್ಯವಸ್ಥೆಗೆ ಭಾರತ ಸರ್ಕಾರದ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ಅನುಮೋದನೆ ನೀಡಿತು ಹಾಗೂ ಅಂತಿಮ ಆದೇಶ ಸಂಖ್ಯೆ 24/01/2019–ಸಿಎಲ್–III ದಿನಾಂಕ 8 ಮೇ 2020ರ ಪ್ರಮಾಣೀಕೃತ ಪ್ರತಿಯನ್ನು 08 ಜೂನ್ 2020ರಂದು ಸರ್ಕಾರದ ಪತ್ರ ಸಂಖ್ಯೆ ದಿನಾಂಕ 03 ಜೂನ್ 2020ರ ಮೂಲಕ ಸ್ವೀಕರಿಸಲಾಯಿತು. ಇನ್ನಿತರವುಗಳ ಜೊತೆಗೆ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ನಮೂದುಗಳನ್ನು ಮಾಡುವುದು, ಕಂಪನಿಯ ಈಕ್ವಿಟಿ ಷೇರು ಬಂಡವಾಳವನ್ನು ನೀಡುವುದು ಹಾಗೂ ಇತರೆ ಶಾಸನಬದ್ಧ ಸಲ್ಲಿಕೆಗಳನ್ನು ಒಳಗೊಂಡಂತೆ ಯೋಜನೆಯ ಕಾರ್ಯಗತಗೊಳಿಸುವಿಕೆಗಾಗಿ ಅಗತ್ಯ ಕ್ರಮಗಳು ಪೂರ್ಣಗೊಂಡಿರುವವು.

ಯೋಜನೆಗಳ ವೆಚ್ಚಗಳಿಗಾಗಿ ಹಣಕಾಸಿನ ಹೂಡಿಕೆ :

21 ಸರ್ಕಾರವು ತನ್ನ ಆಯವ್ಯಯ ಸಂಪನ್ಮೂಲಗಳಿಂದ 2019–20 ಹಣಕಾಸು ಸಾಲಿಗೆ ರೂ.2,49,908 ಲಕ್ಷ ಮೊತ್ತವನ್ನು ಬಂಡವಾಳ ಕಾಮಗಾರಿಗಳ ಯೋಜನೆಗಳ ಅಡಿಯಲ್ಲಿ ಅನುಷ್ಠಾನಗೊಳಿಸಲು ಬಿಡುಗಡೆಗೊಳಿಸಿತು ಹಾಗೂ ಕರ್ನಾಟಕ ಸರ್ಕಾರವು ಖಾತರಿಗಳನ್ನು ನೀಡುವುದರೊಂದಿಗೆ ಕಂಪನಿಯು ರೂ.73,500 ಲಕ್ಷ ಮೊತ್ತವನ್ನು ಅವಧಿ ಸಾಲಗಳ ಮೂಲಕ ಸಂಗ್ರಹಿಸಿತು. ನಿಮ್ಮ ಕಂಪನಿಯು ಪ್ರಸಕ್ತ ಸಾಲಿನಲ್ಲಿ ಯೋಜನೆಗಳ ಮೇಲೆ ಬಂಡವಾಳ ವೆಚ್ಚಗಳ ಕಡೆಗೆ ರೂ. 2,65,728ಲಕ್ಷಗಳ ಮೊತ್ತದಷ್ಟು ವೆಚ್ಚಗಳನ್ನು ಭರಿಸಿರುವುದು. ಕರ್ನಾಟಕ ಸರ್ಕಾರವು ಪ್ರಸಕ್ತ ಹಣಕಾಸು ಸಾಲಿನಲ್ಲಿ ರೂ.2,27,752 ಲಕ್ಷ ಮೊತ್ತದಷ್ಟು ಹಣಕಾಸನ್ನು ತನ್ನ ಆಯವ್ಯಯ ಬೆಂಬಲದ ಮೂಲಕ ನಿಮ್ಮ ಕಂಪನಿಗೆ ಹಂಚಿಕೆ ಮಾಡಿರುವುದು, ಇದರಲ್ಲಿ ಕರ್ನಾಟಕ ಸರ್ಕಾರದ ಖಾತರಿಯೊಂದಿಗೆ ಪಡೆಯಲಾದಂತಹ ರೂ.25,000 ಲಕ್ಷ ಮೊತ್ತದಷ್ಟು ಮಾರುಕಟ್ಟೆ ಸಾಲಗಳೂ ಒಳಗೊಂಡಿರುತ್ತವೆ. ನಿಮ್ಮ ಕಂಪನಿಯು ಪ್ರಸಕ್ತ ಹಣಕಾಸು ಸಾಲಿಗೆ ರೂ.2,27,752 ಲಕ್ಷ ಮೊತ್ತಕ್ಕೆ ವಾರ್ಷಿಕ ಕಾಮಗಾರಿಗಳ ಕಾರ್ಯಕ್ರಮವನ್ನು ರೂಪಿಸಿರುವುದು.

ಲೆಕ್ಕಪತ್ರಗಳು:

22. ಕರ್ನಾಟಕ ನೀರಾವರಿ ನಿಗಮದಿಂದ ವರ್ಗಾವಣೆಗೊಂಡು ಕಂಪನಿಗೆ ವಹಿಸಿಲಾಗಿರುವ ಯೋಜನೆಗಳು, ಅವೆಂದರೆ ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಯೋಜನೆಗಳು, ಗಾಯಿತ್ರಿ ಜಲಾಶಯ ಮತ್ತು ವಾಣಿವಿಲಾಸ ಸಾಗರ, ಈ ಯೋಜನೆಗಳ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಭಾರತಿಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡದ ಅನುವುಗಳ ಅನುಸಾರ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಲೆಕ್ಕಪತ್ರ ಪುಸ್ತಕಗಳಿಗೆ ತರಲಾಗಿರುವುದು.

ಮಾರ್ಚ 2020ರಲ್ಲಿದ್ದಂತೆ ಕಾರ್ಯಚರಣೆಯ ಫಲಿತಾಂಶಗಳು

ಕ್ರಮ ಸಂಖ್ಯೆ	ವಿವರಗಳು	ಮೊತ್ತ (ರೂಪಾಯಿಗಳು ಲಕ್ಷಗಳಲ್ಲಿ)
1	ಸವಕಳಿ ಮತ್ತು ತೆರಿಗೆಗೆ ಮುಂಚಿನ ಲಾಭ/ನಷ್ಟ (–)	(15,782.80)
2	ಸವಕಳಿ	3,694.15
3	ಸವಕಳಿಯ ನಂತರದ ನಷ್ಟ	(19,476.95)
4	ತೆರಿಗೆ ವೆಚ್ಚಗಳು (ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿಗಳು)	–
5	ಸವಕಳಿ ಮತ್ತು ತೆರಿಗೆಗಳ ನಂತರ ನಷ್ಟ	(19,476.95)

ಮಾರ್ಚ್ 31, 2020ರಲ್ಲಿದ್ದಂತೆ ಹಣಕಾಸಿಗೆ ಸಂಬಂಧಿತ ಪ್ರಮುಖಾಂಶಗಳು

ಕ್ರಮ ಸಂಖ್ಯೆ	ವಿವರಗಳು	ಮೊತ್ತ (ರೂಪಾಯಿಗಳು ಲಕ್ಷಗಳಲ್ಲಿ)
1	ನೀಡಲಾಗಿರುವ ಮತ್ತು ಸಂಪೂರ್ಣವಾಗಿ ಪಾವತಿಸಲಾಗಿರುವ– ಈಕ್ವಿಟಿ ಷೇರು ಬಂಡವಾಳ	4,03,499.09
2	ಇತರೆ ಈಕ್ವಿಟಿಯು ಹಂಚಿಕೆಯು ಬಾಕಿಯಿರುವಂತೆ ಷೇರು ಅರ್ಜಿಗಳ ಹಣವನ್ನು ಒಳಗೊಂಡಿರುತ್ತದೆ.	4,45,572.52
3	ಸಾಲವಾಗಿ ಪಡೆಯಲಾಗಿರುವ ಹಣಕಾಸು (ದೀರ್ಘಾವಧಿ)	2,04,929.84
4	ಇತರೆ ಚಾಲ್ತಿ ಮತ್ತು ಚಾಲ್ತಿಯೇತರ ಜವಾಬ್ದಾರಿಗಳು	14,368.49
5	ಇತರೆ ಚಾಲ್ತಿ ಮತ್ತು ಚಾಲ್ತಿಯೇತರ ಹಣಕಾಸು ಜವಾಬ್ದಾರಿಗಳು	1,89,200.96
6	ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾಗಿರುವವುಗಳು	1,565.55
7	ಚಾಲ್ತಿ ಮತ್ತು ಚಾಲ್ತಿಯೇತರ ಅನುವುಗಳು	50.69
	ಒಟ್ಟಾರೆ ಈಕ್ವಿಟಿ ಮತ್ತು ಜವಾಬ್ದಾರಿಗಳು	12,59,187.14
8	ಆಸ್ತಿಗಳು, ಸ್ಥಾವರ ಮತ್ತು ಉಪಕರಣಗಳು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳೂ ಸೇರಿದಂತೆ	11,54,169.74
9	ಆಸ್ತಿಗಳ ಬಳಸಿಕೊಳ್ಳುವಿಕೆಯ ಹಕ್ಕು	11.17
10	ಚಾಲ್ತಿಯೇತರ ಹಣಕಾಸು ಆಸ್ತಿಗಳು	601.43
11	ಚಾಲ್ತಿ ತೆರಿಗೆ ಆಸ್ತಿಗಳು (ನಿವ್ವಳ) – ಆದಾಯ ತೆರಿಗೆ ಮರುಪಾವತಿ	284.06
12	**ಚಾಲ್ತಿ ಹಣಕಾಸು ಆಸ್ತಿಗಳು**	
	ನಗದು ಮತ್ತು ನಗದಿಗೆ ಸಮಾನವಾದವುಗಳು	54,790.43
	ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು	13.26
	ಸಾಲಗಳು ಮತ್ತು ಮುಂಗಡಗಳು	11.56
	ಇತರೆ ಹಣಕಾಸು ಆಸ್ತಿಗಳು	5,126.14
13	ಇತರೆ ಚಾಲ್ತಿ ಆಸ್ತಿಗಳು	44,179.35
	ಒಟ್ಟಾರೆ ಅಸ್ತಿಗಳು	**12,59,187.14**
14	ಕಾರ್ಯಾಚರಣೆಗಳಿಂದ ವರಮಾನ	9.01
15	ಇತರೆ – ವರಮಾನ	16,599.36
	ಒಟ್ಟು ವರಮಾನ (ಎ)	**16,608.37**
16	ಸಿಬ್ಬಂದಿಗಳಿಗೆ ಸಂಭಾವನೆ ಮತ್ತು ಇತರೆ ಪ್ರಯೋಜನಗಳು (ಸಿಡಬ್ಲ್ಯೂಐಪಿಗೆ ರೂ.3,333,67 ಲಕ್ಷ ಹೊಂದಾಣಿಕೆ ಮಾಡಿದನಂತರ)	1,120.18
17	ಕರ್ನಾಟಕ ಸರ್ಕಾರದ ಯೋಜನೆಗಳ ಮೇಲಿನ ವೆಚ್ಚಗಳು	12,782.74
18	ಇತರೆ ವೆಚ್ಚಗಳು (ಸಿಡಬ್ಲ್ಯೂಐಪಿಗೆ ರೂ.799.41 ಲಕ್ಷ ಮೊತ್ತವನ್ನು ಹೊಂದಾಣಿಕೆ ಮಾಡಿದನಂತರ)	18,488.28
19	ಸವಕಳಿ	3,694.15
	ಒಟ್ಟು ವೆಚ್ಚಗಳು (ಬಿ)	**36,085.32**
20	ಇತರೆ ಸಮಗ್ರ ವರಮಾನ	(0.60)
21	**ತೆರಿಗೆ ಪಾವತಿಯ ನಂತರ ನಿವ್ವಳ ಲಾಭ/(ನಷ್ಟ)**	**(19,477.55)**

ಟಿಪ್ಪಣಿ: ಮೇಲಿನ ಅಂಕಿಸಂಖ್ಯೆಗಳನ್ನು ಕಂಪನಿಯ ಹಣಕಾಸು ತ:ಖ್ತೆಗಳಿಂದ ಪಡೆದುಕೊಳ್ಳಲಾಗಿದೆ.

ನಿರ್ದೇಶಕರುಗಳ ಮಂಡಳಿ (ಮಂಡಳಿ):

23. ಈ ವರದಿಯ ದಿನಾಂಕದಂದು ಮಂಡಳಿಯ ರಚನೆಯಲ್ಲಿ ಈ ಕೆಳಗಿನ ಬದಲಾವಣೆಗಳು ಆಗಿರುತ್ತವೆ.

ಹಿಂದಿನ ವಾರ್ಷಿಕ ಸರ್ವಸದಸ್ಯರುಗಳ ಸಭೆಯ ದಿನಾಂಕದಿಂದ ಈ ವರದಿಯ ದಿನಾಂಕದ ನಡುವೆ ನಿರ್ದೇಶಕರುಗಳ ಮಂಡಳಿಯ ರಚನೆಯಲ್ಲಿ ಈ ಕೆಳಗಿನ ಬದಲಾವಣೆಗಳು ಆಗಿರುತ್ತವೆ.

(i) ಶ್ರೀಯುತ ಪಿ. ರವಿಕುಮಾರ್, ಭಾಆಸೇ ಇವರ ಬದಲಾಗಿ ಗೌರವಾನ್ವಿತ ಮುಖ್ಯ ಮಂತ್ರಿಯವರಿಗೆ ' ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ಶ್ರೀಯುತ ಡಾ.ಇ.ವಿ. ರಮಣ ರೆಡ್ಡಿ, ಭಾಆಸೇ ಇವರನ್ನು 08.09.2020ರಿಂದ ಜಾರಿಗೆ ಬರುವಂತೆ ಕಂಪನಿಯ ನಿರ್ದೇಶಕರನ್ನಾಗಿ ನೇಮಕ ಮಾಡಿರುವುದು.

(ii) ಶ್ರೀಯುತ ಅನಿಲ್‌ಕುಮಾರ್, ಕೆಇಎಸ್, ಸರ್ಕಾರದ ಕಾರ್ಯದರ್ಶಿಯವರು, ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ, ಇವರನ್ನು 08.09.2020ರಿಂದ ಜಾರಿಗೆ ಬರುವಂತೆ ಕಂಪನಿಯ ನಿರ್ದೇಶಕರನ್ನಾಗಿ ನೇಮಕ ಮಾಡಿರುವುದು.

(iii) ಶ್ರೀ ಡಿ.ಎನ್. ದೇಸಾಯಿ, ಸ್ವತಂತ್ರ ನಿರ್ದೇಶಕರು, ಇವರು ದೈವಾಧೀನರಾದ ಕಾರಣ ಇವರು ಹೊಂದಿದ್ದಂತಹ ಕಂಪನಿಯ ನಿರ್ದೇಶಕರ ಹುದ್ದೆಯು 08.12.2019ರಿಂದ ಮುಕ್ತಾಯಗೊಂಡಿರುತ್ತದೆ.

ಶ್ರೀ ಪಿ. ರವಿಕುಮಾರ್, ಭಾಆಸೇ ಮತ್ತು ಶ್ರೀ ಡಿ.ಎನ್. ದೇಸಾಯಿ, ಇವರುಗಳು ಕಂಪನಿಯ ನಿರ್ದೇಶಕರುಗಳಾಗಿ ಸಲ್ಲಿಸಿರುವ ಅತ್ಯಮೂಲ್ಯ ಸೇವೆಯನ್ನು ನಿಮ್ಮ ನಿರ್ದೇಶಕರುಗಳು ಈ ಮೂಲಕ ಸ್ಮರಿಸಿಕೊಳ್ಳುತ್ತಿರುವರು.

ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿ :

24. ಶ್ರೀ ಎನ್. ಲಕ್ಷಣ ರಾವ್ ಪೇಶ್ವೆ – ವ್ಯವಸ್ಥಾಪಕ ನಿರ್ದೇಶಕರು, ಮಿಸ್ಟರ್ ಜಿ.ಎಸ್. ಪ್ರಕಾಶ್ – ಕಂಪನಿ ಕಾರ್ಯದರ್ಶಿಯವರು ಹಾಗೂ ಶ್ರೀಮತಿ ಜ್ಯೋತಿ ಡಿ. ಕುಂದರ್ – ಮುಖ್ಯ ಹಣಕಾಸು ಅಧಿಕಾರಿಯವರು ಕಂಪನಿಗಳ ಅಧಿನಿಯಮ, 2013ರ ಅನುವುಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವಂತಹ ನಿಯಮಗಳ ಅನುಸಾರ ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳಾಗಿರುತ್ತಾರೆ.

ನಡೆಸಲಾಗಿರುವಂತಹ ನಿರ್ದೇಶಕರುಗಳ ಮಂಡಳಿಯ ಸಭೆಯ ಸಂಖ್ಯೆ:

25. ನಿರ್ದೇಶಕರುಗಳ ಮಂಡಳಿಯು 2019–20 ಹಣಕಾಸು ಸಾಲಿನಲ್ಲಿ ನಾಲ್ಕು ಸಲ ಅಂದರೆ 28.06.2019, 18.09.2019, 20.09.2019 ಹಾಗೂ 04.12.2019 ರಂದು, ಈ ರೀತಿಯಾಗಿ ಸಭೆ ಸೇರಿದ್ದಿತು.

ಲೆಕ್ಕಪರಿಶೋಧನಾ ಸಮಿತಿ;

26. ಲೆಕ್ಕಪರಿಶೋಧನಾ ಸಮಿತಿಯು ಈ ಕೆಳಗಿನ ನಿರ್ದೇಶಕರುಗಳನ್ನು ಹೊಂದಿರುತ್ತದೆ. ಸಮಿತಿಯ ರಚನೆಯು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 177ರ ಅಗತ್ಯತೆಗಳನ್ನು ಪೂರೈಸಿರುತ್ತದೆ. ಸಮಿತಿಯು 2019–20 ಹಣಕಾಸು ಸಾಲಿನಲ್ಲಿ 09.09.2019ರಂದು ಸಭೆ ಸೇರಿದ್ದಿತು.

ಕ್ರಮ ಸಂಖ್ಯೆ	ಹೆಸರು	ಹುದ್ದೆ
1	ಅಪರ ಮುಖ್ಯ ಕಾರ್ಯದರ್ಶಿಯವರು / ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಜಲ ಸಂಪನ್ಮೂಲಗಳ ಇಲಾಖೆ, ಕರ್ನಾಟಕ ಸರ್ಕಾರ	ಅಧ್ಯಕ್ಷರು
2	ಅಪರ ಮುಖ್ಯ ಕಾರ್ಯದರ್ಶಿಯವರು, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು
3	ಶ್ರೀ ಆರ್. ಚೆಲುವರಾಜು, ಸ್ವತಂತ್ರ ನಿರ್ದೇಶಕರು	ಸದಸ್ಯರು
4	ಪ್ರೊ. ಟಿ. ಗಂಗಾದರಯ್ಯ , ಸ್ವತಂತ್ರ ನಿರ್ದೇಶಕರು	ಸದಸ್ಯರು
5	ವ್ಯವಸ್ಥಾಪಕ ನಿರ್ದೇಶಕರು	ಆಹ್ವಾನಿತರು

ನಾಮ ನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿ:

27. ಮಂಡಳಿಯು, ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಶಿಫಾರಸ್ಸಿನಂತೆ, ಹಿರಿಯ ಆಡಳಿತ ಅಧಿಕಾರಿಗಳ ಆಯ್ಕೆ ಮತ್ತು ನೇಮಕಾತಿ ಮತ್ತು ಅವರುಗಳ ಸಂಬಳ / ಸಂಭಾವನೆಯ ಬಗ್ಗೆ ಕಾರ್ಯನೀತಿಯನ್ನು ರೂಪಿಸಿತು. ಅನುಮೋದಿತ ನಾಮ ನಿರ್ದೇಶನ ಮತ್ತು ಸಂಭಾವನೆಯ ಕಾರ್ಯನೀತಿಯನ್ನು ಅನುಬಂಧ–I ರಲ್ಲಿ ನೀಡಲಾಗಿದೆ. ನಾಮ ನಿರ್ದೇಶನ ಹಾಗೂ ಸಂಭವನೆ ಕಾರ್ಯನೀತಿಯ ಪ್ರತಿಯನ್ನು ನಿಗಮದ ವೆಬ್‌ಸೈಟ್ www.vjnl.inರಲ್ಲಿ ಪ್ರಕಟಿಸಲಾಗಿದೆ.

ನಿರ್ದೇಶಕರುಗಳ ಜವಾಬ್ದಾರಿ ತ:ಖ್ತೆ

28. ನಿರ್ದೇಶಕರುಗಳ ಜವಾಬ್ದಾರಿ ತ:ಖ್ತೆಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134ರ ಉಪ–ಪರಿಚ್ಛೇದ (3)ರ ಷರತ್ತು (ಸಿ)ಯಲ್ಲಿ ಅನುವುಗಳ ಅನುಸಾರ ನಿಮ್ಮ ನಿದೇಶಕರುಗಳು ಈ ಕೆಳಗಿನಂತೆ ತಿಳಿಸುತ್ತಿರುವರು;

ಎ) 31 ಮಾರ್ಚ್, 2020ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸುವಲ್ಲಿ, ವಿಷಯಕ ನಿರ್ಗಮನಗಳಿಗೆ ಸಂಬಂಧಿತ ಸಮರ್ಪಕ ವಿವರಣೆಗಳೊಂದಿಗೆ ಅನ್ವಯಗೊಳ್ಳುವ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡಗಳನ್ನು ಅನುಸರಿಸಲಾಗಿದೆ;

ಬಿ) ನಿಮ್ಮ ನಿರ್ದೇಶಕರುಗಳು, ಹಣಕಾಸು ವರ್ಷದ ಅಂತ್ಯದಲ್ಲಿ ಕಂಪನಿಯ ವ್ಯವಹಾರಗಳ ಹಾಗೂ ಆ ಅವಧಿಗೆ ಕಂಪನಿಯ ಲಾಭ ಮತ್ತು ನಷ್ಟದ ಯಥಾರ್ಥತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತವಾದಂತಹ ಅಭಿಪ್ರಾಯವನ್ನು ನೀಡುವ ರೀತಿಯಲ್ಲಿ ನ್ಯಾಯಸಮ್ಮತವಾದ ಹಾಗೂ ವಿವೇಚನೆಯಿಂದ ಕೂಡಿದಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಯನ್ನು ಆಯ್ಕೆ ಮಾಡಿಕೊಂಡಿರುವರು ಹಾಗೂ ಅದನ್ನು ಏಕಪ್ರಕಾರವಾಗಿ ಅನ್ವಯಿಸಿರುವರು ಹಾಗೂ ತೀರ್ಮಾನಗಳನ್ನು ಕೈಗೊಂಡಿರುವರು ಮತ್ತು ಅಂದಾಜುಗಳನ್ನು ಮಾಡಿರುವರು;

ಸಿ) ನಿಮ್ಮ ನಿರ್ದೇಶಕರುಗಳು, ಕಂಪನಿಯ ಆಸ್ತಿಗಳ ಸಂರಕ್ಷಣೆಗಾಗಿ ಹಾಗೂ ವಂಚನೆ ಮತ್ತಿತರ ನಿಯಮಬಾಹಿರತೆಗಳನ್ನು ತಡೆಯುವ ಮತ್ತು ಪತ್ತೆಹಚ್ಚುವ ಸಲುವಾಗಿ ಕಂಪನಿಗಳ ಅಧಿನಿಯಮದ ಅನುವುಗಳ ಅನುಸಾರ ಸಮರ್ಪಕ ಲೆಕ್ಕಪತ್ರಗಳು, ಲೆಕ್ಕಪತ್ರಗಳನ್ನು ನಿರ್ವಹಿಸುವ ಸಲುವಾಗಿ ಸೂಕ್ತ ಹಾಗೂ ಸಮರ್ಪಕ ಎಚ್ಚರಿಕೆಗಳನ್ನು ತೆಗೆದುಕೊಂಡಿರುವರು;

ಡಿ) ಕಂಪನಿಯು ನಡೆಸಿಕೊಂಡು ಹೋಗುತ್ತಿರುವ ವ್ಯವಹಾರಗಳ ಆಧಾರದ ಮೇರೆಗೆ ನಿಮ್ಮ ನಿರ್ದೇಶಕರುಗಳು ವಾರ್ಷಿಕ ಹಣಕಾಸು ತಃಖ್ತೆಗಳನ್ನು ತಯಾರಿಸಿರುವರು;

ಇ) ಕಂಪನಿಗೆ ಅನ್ವಯಗೊಳ್ಳುವ ಎಲ್ಲಾ ಕಾನೂನುಗಳ ಅನುವುಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ನಿರ್ದೇಶಕರುಗಳು ಸಮರ್ಪಕ ವ್ಯವಸ್ಥೆಗಳನ್ನು ರೂಪಿಸಿರುವರು ಹಾಗೂ ಅಂತಹ ವ್ಯವಸ್ಥೆಗಳು ಸಮರ್ಪಕವಾಗಿದ್ದವು ಹಾಗೂ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿದ್ದವು.

ಕಾರ್ಯದರ್ಶೀಯ ಮಾನದಂಡಗಳು:

29. ಅನ್ವಯಗೊಳ್ಳುವಂತಹ ಕಾರ್ಯದರ್ಶೀಯ ಮಾನದಂಡಗಳ ಅನುವುಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನಿರ್ದೇಶಕರುಗಳು ಸಮರ್ಪಕವಾದಂತಹ ವ್ಯವಸ್ಥೆಗಳನ್ನು ರೂಪಿಸಿರುವರು ಹಾಗೂ ಅಂತಹ ವ್ಯವಸ್ಥೆಗಳು ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವವು.

ಸ್ವತಂತ್ರ ನಿರ್ದೇಶಕರುಗಳಿಂದ ಘೋಷಣೆ:

30. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 149 (6)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಸ್ವಾತಂತ್ರ್ಯತೆಯ ಮಾನದಂಡಗಳನ್ನು ಪೂರೈಸಿರುವ ನಿಟ್ಟಿನಲ್ಲಿ ಸ್ವತಂತ್ರ ನಿರ್ದೇಶಕರುಗಳಿಂದ ಕಂಪನಿಯು ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 149 (7)ರ ಅಡಿಯಲ್ಲಿ ಅಗತ್ಯ ಘೋಷಣಾ ಪತ್ರಗಳನ್ನು ಪಡೆದುಕೊಂಡಿರುವುದು.

ವಾರ್ಷಿಕ ಸಲ್ಲಿಕೆ

31 ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134 (3) (ಎ) ಅನುಸಾರ ವಾರ್ಷಿಕ ಸಲ್ಲಿಕೆಯ ಪ್ರತಿಯನ್ನು ನಿಗಮದ ವೆಬ್‌ಸೈಟ್ www.vjnl.in ರಲ್ಲಿ ಪ್ರಕಟಿಸಲಾಗಿದೆ.

ಉದ್ಯೋಗಿಗಳ ವಿವರಗಳು

32. ಕಂಪನಿಗಳ (ವ್ಯವಸ್ಥಾಪನಾ ಅಧಿಕಾರಿಗಳ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮಗಳು 5(2) ಮತ್ತು (3)ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 197 ಮತ್ತು 134(3) ಅನುವುಗಳ ಅಗತ್ಯತೆಯಂತೆ ಬಹಿರಂಗಪಡಿಸಬೇಕಾಗಿರುವವುಗಳು– ಯಾವುದೂ ಇರುವುದಿಲ್ಲ

ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳು

33. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 186ರ ಅಡಿಯಲ್ಲಿ ವ್ಯಾಪಿಸಿರುವಂತಹ ಸಾಲಗಳು, ಖಾತರಿಗಳು ಮತ್ತು ಹೂಡಿಕೆಗಳು – ಯಾವುದೂ ಇರುವುದಿಲ್ಲ.

ಸಂಬಂಧಿತ ತಂಡಗಳ ಜೊತೆಯಲ್ಲಿ ಮಾಡಿಕೊಳ್ಳಲಾಗಿರುವಂತಹ ಗುತ್ತಿಗೆಗಳು ಅಥವಾ ವ್ಯವಸ್ಥೆಗಳ ವಿವರಗಳು :

34. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 188(1)ರಲ್ಲಿ ಉಲ್ಲೇಖಿಸಲಾಗಿರುವಂತೆ ನಿರ್ದಿಷ್ಟ ನಮೂನೆ ಎಒಸಿ–2ರಲ್ಲಿನ ಸಂಬಂಧಿತ ತಂಡಗಳ ಜೊತೆಯಲ್ಲಿನ ಗುತ್ತಿಗೆಗಳು ಅಥವಾ ವ್ಯವಸ್ಥೆಗಳ ವಿವರಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ

ಉಪ/ ಜಂಟಿ/ ಸಾಹೋದ್ಯಮ/ ಸಹಭಾಗಿ ಕಂಪನಿಗಳ ವಿವರಗಳು

35. ಕಂಪನಿಯು ಯಾವುದೇ ಉಪ/ಜಂಟಿ–ಸಾಹೋದ್ಯಮ ಅಥವಾ ಸಹ–ಕಂಪನಿಗಳನ್ನು ಹೊಂದಿರುವುದಿಲ್ಲ. ಆದ್ದರಿಂದ, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129 ಉಪ–ಪರಿಚ್ಛೇದ (3)ರ ಅನುಸರಣೆಯಂತೆ ಈ ನಿಟ್ಟಿನಲ್ಲಿ ಬಹಿರಂಗಪಡಿಸಬೇಕಾದವುಗಳು ಯಾವುದೂ ಇರುವುದಿಲ್ಲ.

ಶಾಸನಬದ್ಧ ಲೆಕ್ಕಪರಿಶೋಧಕರು;

36) ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಮೆ. ರಾವ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್‌ಗಳು, ಬೆಂಗಳೂರು, ಇವರನ್ನು 2019–20 ಹಣಕಾಸು ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವರು.

ಕಾರ್ಯದರ್ಶೀಯ ಲೆಕ್ಕಪರಿಶೋಧಕರು:

37. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 204ರ ಹಾಗೂ ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ಅನುವುಗಳ ಅನುಸರಣೆಯಂತೆ, ಕಂಪನಿಯು ಮಿಸ್ಟರ್ ಕೆ.ಎನ್. ನಾಗೇಶ ರಾವ್, ಕಾರ್ಯನಿರತ ಕಂಪನಿ ಕಾರ್ಯದರ್ಶಿ, ಬೆಂಗಳೂರು ಇವರನ್ನು ಕಂಪನಿಯ ಕಾರ್ಯದರ್ಶೀಯ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವುದು. ಕಾರ್ಯದರ್ಶೀಯ ಲೆಕ್ಕಪರಿಶೋಧನಾ ವರದಿಯನ್ನು ಅನುಬಂಧ IVರಲ್ಲಿ ಲಗತ್ತಿಸಲಾಗಿರುವುದು.

ಆಂತರಿಕ ಲೆಕ್ಕಪರಿಶೋಧಕರು

38. 2019–20 ಹಣಕಾಸು ಸಾಲಿಗೆ ಮೆ. ಮಣಿಯನ್ ಅಂಡ್ ರಾವ್, ಇವರನ್ನು ಆಂತರಿಕ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕಂಪನಿಯು ಕಾರ್ಯಾಚರಣೆಗಳ ಮೇಲಿನ ನಿಯಂತ್ರಣಗಳನ್ನು ಉತ್ತಮಗೊಳಿಸುವುದಕ್ಕಾಗಿ ಆಂತರಿಕ ಲೆಕ್ಕಪರಿಶೋಧಕರ ಸಲಹೆಗಳನ್ನು ಮತ್ತು ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವುದನ್ನು ಮುಂದುವರೆಸಿಕೊಂಡು ಹೋಗಿದೆ. ಆಂತರಿಕ ಲೆಕ್ಕಪರಿಶೋಧನಾ ವರದಿಗಳನ್ನು ವ್ಯವಸ್ಥಾಪನೆಯು ಚರ್ಚಿಸುವುದು ಹಾಗೂ ಆಂತರಿಕ ಲೆಕ್ಕಪರಿಶೋಧಕರು ಗಮನಿಸಿರುವ ಪ್ರಮುಖ ಅಂಶಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ನಿಯತಕಾಲಿಕವಾಗಿ ವರದಿ ಮಾಡುವುದು ಮತ್ತು ಲೆಕ್ಕಪರಿಶೋಧನಾ ಸಮಿತಿಯಲ್ಲಿಯೂ ಚರ್ಚಿಸಲಾಗುವುದು.

ಲೆಕ್ಕಪರಿಶೋಧನಾ ವರದಿಯಲ್ಲಿ ಗಮನಿಸಲಾಗಿರುವ ಅಂಶಗಳಿಗೆ ಉತ್ತರಗಳು

39. ಶಾಸನಬದ್ಧ ಲೆಕ್ಕಪರಿಶೋಧಕರು 2019–20 ಸಾಲಿನ ಲೆಕ್ಕಪತ್ರಗಳ ಮೇಲೆ ತಮ್ಮ ವರದಿಯಲ್ಲಿ ಹಾಕಿರುವ ಷರತ್ತುಗಳ/ ಟೀಕೆಟಿಪ್ಪಣಿಗಳಿಗೆ ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಹಣಕಾಸು ತ:ಖ್ತೆಗಳಿಗೆ ಅವಿಭಾಜ್ಯ ಭಾಗ ಎಂಬುದಾಗಿ ಉಲ್ಲೇಖಿಸಲ್ಪಟ್ಟಿರುವ ಸಂಬಂಧಿತ ಟಿಪ್ಪಣಿಗಳಲ್ಲಿ ಉತ್ತರಿಸಲಾಗಿದ್ದು ಅವು ಸ್ವಯಂ ವಿವರಣಾತ್ಮಕವಾಗಿರುತ್ತವೆ. ಆದಾಗ್ಯೂ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಗಮನಾರ್ಹ ಅಂಶಗಳಿಗೆ ಸವಿವರ ಉತ್ತರಗಳನ್ನು ನಿರ್ದೇಶಕರುಗಳ ವರದಿಗೆ ಅನುಬಂಧವನ್ನಾಗಿ (ಆಡೆಂಡಮ್)ಒದಗಿಸಲಾಗಿದೆ.

40 ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 ಉಪ–ಪರಿಚ್ಛೇದ (12)ರ ಪ್ರಕಾರ ಲೆಕ್ಕಪರಿಶೋಧಕರು ವಂಚನೆಗಳಿಗೆ ಸಂಬಂಧಿಸಿದಂತೆ ಯಾವುದೇ ವರದಿಯನ್ನೂ ನೀಡಿರುವುದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

41. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (6)(ಬಿ) ಅಡಿಯಲ್ಲಿ ಕಂಪನಿಯ 2019–20 ಸಾಲಿನ ಲೆಕ್ಕಪತ್ರಗಳ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ಈ ವರದಿಗೆ ಅನುಬಂಧವಾಗಿ ಲಗತ್ತಿಸಲಾಗಿರುವುದು.

ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿ

42. ಕಂಪನಿಯು ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿಯನ್ನು ರೂಪಿಸಿರುವುದು. ಅನುಮೋದಿತ ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿಯನ್ನು ಅನುಬಂಧ IIರಲ್ಲಿ ಸೇರಿಸಲಾಗಿರುವುದು.

ಕಣ್ಗಾವಲು ಕಾರ್ಯವಿಧಾನ

43. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 177 (9) ಮತ್ತು (10)ರ ಅನುವುಗಳ ಅನುಸರಣೆಯಂತೆ, ನೈಜವಾದ ಸಮಸ್ಯೆಗಳನ್ನು ವರದಿ ಮಾಡುವ ಸಲುವಾಗಿ ನಿರ್ದೇಶಕರು ಮತ್ತು ಉದ್ಯೋಗಿಗಳಿಗಾಗಿ ಒಂದು ಕಣ್ಗಾವಲು ಕಾರ್ಯವಿಧಾನವನ್ನು ಸ್ಥಾಪಿಸಲಾಗಿದೆ. ಕಣ್ಗಾವಲು ಕಾರ್ಯವಿಧಾನ ವ್ಯವಸ್ಥೆ ಕಾರ್ಯನೀತಿಯನ್ನು ಕಂಪನಿಯ ಜಾಲತಾಣ www.vjnl.in ನಲ್ಲಿ upload (ಊಡಿಕೆ) ಮಾಡಲಾಗಿದೆ ಹಾಗೂ ಈ ವರದಿಯ ಅನುಬಂಧ–III ರಲ್ಲಿ ಸೇರಿಸಲಾಗಿದೆ.

ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿ:

44. ಕಂಪನಿಯು ಲಾಭ ಗಳಿಸುವ ಸಲುವಾಗಿ ಸ್ಥಾಪಿಸಲಾಗಿರುವ ಸಾಹಸೋದ್ಯಮ ಕಂಪನಿಯಾಗಿರುವುದಿಲ್ಲ. ಕಂಪನಿಯ ಪ್ರಮುಖ ಉದ್ದೇಶವು ಕರ್ನಾಟಕ ಸರ್ಕಾರದಿಂದ ಅದಕ್ಕೆ ವಹಿಸಲ್ಪಡುವ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವುದಾಗಿರುತ್ತದೆ.

45. ಕಂಪನಿಯು, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 135(1)ರ ಅನುವುಗಳ ಅನುಸಾರ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ರಚಿಸಿರುವುದು. . ಕಂಪನಿಯು ಕಳೆದ ಮೂರು ವರ್ಷಗಳಲ್ಲಿ ಯಾವುದೇ ನಿವ್ವಳ ಲಾಭಗಳನ್ನು ಗಳಿಸಿರುವುದಿಲ್ಲವಾದ್ದರಿಂದ, ಕಂಪನಿಯುಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳ ಅಡಿಯಲ್ಲಿ ಯಾವುದೇ ವೆಚ್ಚಗಳನ್ನು ಭರಿಸಿರುವುದಿಲ್ಲ

ಹಣಕಾಸಿಗೆ ಸಂಬಂಧಿತ ಸ್ಥಿತಿಗತಿಗಳ ಮೇಲೆ ಪ್ರಭಾವ ಭೀರಬಹುದಾದ ವಿಷಯಕ ಬದಲಾವಣೆಗಳು ಮತ್ತು ಬದ್ಧತೆಗಳು, ಯಾವುದಾದರೂ ಇದ್ದಲ್ಲಿ:

46. ಕಂಪನಿಯ ಹಣಕಾಸು ತ:ಖ್ತೆಗಳು ಸಂಬಂಧಿಸಿರುವ ಸಾಲಿನ ಅಂತ್ಯದ ದಿನಾಂಕ ಹಾಗೂ ಈ ವರದಿಯನ್ನು ಸಲ್ಲಿಸುತ್ತಿರುವ ದಿನಾಂಕಗಳ ನಡುವೆ ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ಪ್ರಭಾವ ಭೀರುವಂತಹ ಯಾವುದೇ ವಿಷಯಕ ಬದಲಾವಣೆಗಳು ಮತ್ತು ಬದ್ಧತೆಗಳು ಇರುವುದಿಲ್ಲ.

ಕಂಪನಿಯು ನಡೆಸಿಕೊಂಡು ಹೋಗುತ್ತಿರುವ ವ್ಯವಹಾರಗಳ ಸ್ಥಿತಿಗತಿ ಹಾಗೂ ಕಂಪನಿಯ ಕಾರ್ಯಾಚರಣೆಗಳ ಮೇಲೆ ಭವಿಷ್ಯತ್ತಿನಲ್ಲಿ ಪ್ರಭಾವ ಭೀರುವಂತಹ ರೀತಿಯಲ್ಲಿ ನಿಯಂತ್ರಕರುಗಳು ಅಥವಾ ನ್ಯಾಯಾಲಯಗಳು ಜಾರಿಗೊಳಿಸಿರುವ ಗಮನಾರ್ಹವಾದಂತಹ ಹಾಗೂ ವಿಷಯಕ ಆದೇಶಗಳ ವಿವರಗಳು:

47. ಕಂಪನಿಯು ತನ್ನ ವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಿರುವ ಕಂಪನಿಯಾಗಿ ತನ್ನ ಸ್ಥಾನಮಾನದ ಮೇಲೆ ಹಾಗೂ ಕಂಪನಿಯ ಕಾರ್ಯಾಚರಣೆಗಳ ಮೇಲೆ ಭವಿಷ್ಯತ್ತಿನಲ್ಲಿ ಪ್ರಭಾವ ಭೀರುವ ರೀತಿಯಲ್ಲಿ ನ್ಯಾಯಾಲಯಗಳು/ನಿಯಂತ್ರಕರುಗಳು ಅಥವಾ ನ್ಯಾಯಿಕ ಪ್ರಾಧಿಕಾರಗಳು ಜಾರಿಗೊಳಿಸಿರುವಂತಹ ಗಮನಾರ್ಹ ವಿಷಯಕ ಆದೇಶಗಳು ಇರುವುದಿಲ್ಲ.

ಹಣಕಾಸು ತ:ಖ್ತೆಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆಗೆ ಸಂಬಂಧಿಸಿದಂತೆ ವಿವರಗಳು:

48. ಕಂಪನಿಯು ತನ್ನ ವ್ಯವಹಾರಗಳ ಸ್ವರೂಪಕ್ಕೆ ತಕ್ಕಂತೆ ಹಾಗೂ ಅದರ ಕಾರ್ಯಾಚರಣೆಗಳ ಸಂಕೀರ್ಣತೆ/ಜಟಿಲತೆಗೆ ತಕ್ಕಂತೆ ಸಮರ್ಪಕ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ನಿರ್ವಹಿಸಿರುವುದು. ಲೆಕ್ಕಪರಿಶೋಧನಾ ಸಮಿತಿಯು ಕಂಪನಿಯ ಆಂತರಿಕ ನಿಯಂತ್ರಣ ಮತ್ತು ಮೇಲ್ವಿಚಾರಣೆಗಳ ಸಮರ್ಪಕತೆ ಮತ್ತು ಪರಿಣಾಮಕಾರಿತ್ವವನ್ನು ಸಮೀಕ್ಷಿಸುವುದು ಮತ್ತು ಲೆಕ್ಕಪರಿಶೋಧನಾ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವುದನ್ನು ಮೇಲ್ವಿಚಾರಣೆ ಮಾಡುವುದು.

ಇಂಧನದ ಉಳಿತಾಯ, ಸಂಶೋಧನೆ ಮತ್ತು ಅಭಿವೃದ್ಧಿ, ತಂತ್ರಜ್ಞಾನದ ಸೇರ್ಪಡೆ, ವಿದೇಶಿವಿನಿಮಯ ಗಳಿಕೆಗಳು ಹಾಗೂ ವೆಚ್ಚಗಳು

49 ಕಂಪನಿಯು ತಯಾರಿಕಾ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ ಮತ್ತು ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ತೊಡಗಿಕೊಂಡಿರುವುದು. ಆದ್ದರಿಂದ, ಕಂಪನಿಯು ಈ ಶೀರ್ಷಿಕೆಗಳ ಅಡಿಯಲ್ಲಿ ಒದಗಿಸುವ ಸಲುವಾಗಿ ಯಾವುದೇ ಮಾಹಿತಿಯನ್ನೂ ಹೊಂದಿರುವುದಿಲ್ಲ. ಕಂಪನಿಯು ಯಾವುದೇ ವಿದೇಶಿ ವಿನಿಮಯ ಗಳಿಕೆಗಳನ್ನು ಪಡೆದಿರುವುದಿಲ್ಲ ಮತ್ತು ವಿದೇಶಿ ವಿನಿಮಯಗಳಲ್ಲಿ ಯಾವುದೇ ವೆಚ್ಚಗಳನ್ನು ಭರಿಸಿರುವುದಿಲ್ಲ.

ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ಅಧಿನಿಯಮ, 2013

50. ಕಂಪನಿಯು ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಯುವಿಕೆ (ತಡೆಯುವಿಕೆ, ಪ್ರತಿಬಂಧಕ ಹಾಗೂ ಅನ್ಯಾಯದ ಸರಿಪಡಿಸುವಿಕೆ/ನಿವಾರಣೆ) ಅಧಿನಿಯಮ, 2013ರ ಅಡಿಯಲ್ಲಿನ ಅಗತ್ಯತೆಯಂತೆ ಲೈಂಗಿಕ ಕಿರುಕುಳ ವಿರೋಧಿ ಕಾರ್ಯನೀತಿಯನ್ನು ಹೊಂದಿರುವುದು. ಲೈಂಗಿಕ ಕಿರುಕುಳಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬಹುದಾದ ದೂರುಗಳ ಮೇಲೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಆಂತರಿಕ ದೂರುಗಳ ಸಮಿತಿಯನ್ನು ಸ್ಥಾಪಿಸಲಾಗಿರುವುದು

ಸಾಮಾನ್ಯ

51. ನಿಮ್ಮ ನಿರ್ದೇಶಕರುಗಳು ಈ ಕೆಳಗಿನಂತೆ ತಿಳಿಸುತ್ತಿರುವರು:

ಎ. ಪ್ರಸಕ್ತ ಸಾಲಿನಲ್ಲಿ ಕಂಪನಿಯು ಪ್ರತಿಯೊಂದು ಷೇರಿಗೂ ರೂ.1,000ದಂತೆ 1,66,76,176 ಈಕ್ವಿಟಿ ಷೇರುಗಳನ್ನು ನೀಡಿರುವುದು. ಈ ಷೇರು ಬಂಡವಾಳವನ್ನು ಹೊರತುಪಡಿಸಿದಂತೆ, ಯಾವುದೇ ಷೇರುಗಳ ಸಾರ್ವಜನಿಕ, ಆದ್ಯತೆಯ ಹಂಚಿಕೆಗಳನ್ನು ಮಾಡಿರುವುದಿಲ್ಲ, ಡಿಬೆಂಚರುಗಳು ಅಥವಾ ಸ್ವೆಟ್ ಈಕ್ವಿಟಿಯನ್ನು ನೀಡಿರುವುದಿಲ್ಲ.

ಬಿ. ಮಾರಾಟ ಮಾಡಲಾಗಿದ್ದ ಭದ್ರತೆಗಳು/ಷೇರುಗಳನ್ನು ಹಿಂದಕ್ಕೆ ಖರೀದಿಸಿರುವಂತಹ ದೃಷ್ಟಾಂತಗಳು ಇರುವುದಿಲ್ಲ.

ಸಿ. ಮತ ಚಲಾಯಿಸುವುದು, ಷೇರು ಲಾಭಾಂಶ ಅಥವಾ ಅನ್ಯಥಾ ರೀತಿಯಲ್ಲಿ ಹಕ್ಕುಗಳು ವ್ಯತ್ಯಯಗೊಳ್ಳುವುದರೊಂದಿಗೆ ಯಾವುದೇ ಈಕ್ವಿಟಿ ಷೇರುಗಳನ್ನೂ ನೀಡಲಾಗಿರುವುದಿಲ್ಲ.

ಡಿ. ಕಂಪನಿಗಳ ಅಧಿನಿಯಮ, 2013ರ ಅಧ್ಯಾಯ Vರ ಅಡಿಯಲ್ಲಿ ವ್ಯಾಪಿಸುವಂತಹ ಯಾವುದೇ ಠೇವಣಿಗಳೂ ಇರಲಿಲ್ಲ.

ಇ. ತನ್ನದೇ ಸ್ವಂತ ಷೇರುಗಳನ್ನು ಉದ್ಯೋಗಿಗಳ ಲಾಭಕ್ಕಾಗಿ ಉದ್ಯೋಗಿಗಳು ಅಥವಾ ಟ್ರಸ್ಟೀಗಳು ಖರೀದಿಸುವ ಸಲುವಾಗಿ ಕಂಪನಿಯು ಯಾವುದೇ ಹಣಕಾಸನ್ನೂ ಒದಗಿಸಿರುವುದಿಲ್ಲ.

ಕೃತಜ್ಞತೆಗಳು

52. ಯೋಜನೆಗಳನ್ನು ತ್ವರಿತಗತಿಯಲ್ಲಿ ಕಾರ್ಯಗತಗೊಳಿಸುವಲ್ಲಿ ಎಲ್ಲಾ ಹಂತಗಳಲ್ಲಿಯೂ ಅಧಿಕಾರಿಗಳು ಮತ್ತು ಸಿಬ್ಬಂದಿಯು ತಮ್ಮ ಸೇವೆಗಳ ಮೂಲಕ ನೀಡಿದ ಕಾಣಿಕೆ ಮತ್ತು ಮಾಡಿದ ಪ್ರಾಮಾಣಿಕ ಪ್ರಯತ್ನಗಳಿಗಾಗಿ ನಿಮ್ಮ ನಿರ್ದೇಶಕರುಗಳು ಈ ಮೂಲಕ ತಮ್ಮ ಅತೀವ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿರುವರು. ಕಂಪನಿಗೆ ಅವಿರತ ಸಹಕಾರ ಮತ್ತು ಬೆಂಬಲಗಳನ್ನು ನೀಡುತ್ತಿರುವ ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಮತ್ತು ಭಾರತೀಯ ಸ್ಟೇಟ್ ಬ್ಯಾಂಕು ಹಾಗೂ ಅವಧಿ ಸಾಲಗಳನ್ನು ನೀಡಿರುವ ಬ್ಯಾಂಕುಗಳಿಗೆ, ಅವರುಗಳ ಅವಿರತ ಸಹಕಾರ ಮತ್ತು ಬೆಂಬಲಗಳಿಗಾಗಿ ನಿಮ್ಮ ನಿರ್ದೇಶಕರುಗಳು ಈ ಮೂಲಕ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತಿರುವರು.

ಸ್ಥಳ: ಬೆಂಗಳೂರು
ದಿನಾಂಕ: 22ನೇ ಡಿಸೆಂಬರ್ 2020

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ
ಸಹಿ/–
ಬಿ.ಎಸ್. ಯಡಿಯೂರಪ್ಪ
ಅಧ್ಯಕ್ಷರು

ಉದ್ದೇಶಪೂರ್ವಕವಾಗಿ ಖಾಲಿ ಬಿಡಲಾಗಿದೆ.

ನಿರ್ದೇಶಕರುಗಳ ವರದಿಗೆ ಜೋಡಿಕೆ ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿಯಲ್ಲಿ ಗಮನಿಸಲಾಗಿರುವ ಅಂಶಗಳಿಗೆ ಉತ್ತರಗಳು

ಕ್ರಮ ಸಂಖ್ಯೆ	ವಿಜನಿನಿ ಟಿಪ್ಪಣಿ ಉಲ್ಲೇಖ ಸಂಖ್ಯೆ	ಲೆಕ್ಕಪರಿಶೋಧಕರುಗಳ ವರದಿಯಲ್ಲಿನ ವ್ಯತಿರಿಕ್ತ ಅಭಿಪ್ರಾಯಗಳು	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಉತ್ತರ
1	ಟಿಪ್ಪಣಿ ಸಂಖ್ಯೆ 22	ಲಾಭ ಮತ್ತು ನಷ್ಟ ತ:ಖ್ತೆಯ ಟಿಪ್ಪಣಿ 22ರಲ್ಲಿ ಸೂಚಿಸಿರುವಂತೆ ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳ ಮೇಲಿನ ವೆಚ್ಚಗಳು ರೂ.12,782.74 ಲಕ್ಷ ಮೊತ್ತದಷ್ಟು ಒಟ್ಟಾರೆ ವೆಚ್ಚಗಳನ್ನು ಒಳಗೊಂಡಿರುತ್ತವೆ, ಇದು ಗುತ್ತಿಗೆದಾರರು ನೀಡಿರುವಂತಹ ಹಣಬಳಕೆ ಪ್ರಮಾಣಪತ್ರಗಳ ಆಧಾರದ ಮೇರೆಗೆ ಆಗಿರುತ್ತದೆ ಹಾಗೂ ಕಂಪನಿಯು ಈ ನಿಟ್ಟಿನಲ್ಲಿ ಸ್ವತಂತ್ರವಾಗಿ ಮೌಲ್ಯಮಾಪನ ಮಾಡಿರುವುದಿಲ್ಲ. ತತ್ಪರಿಣಾಮವಾಗಿ, ಅಂತಹ ವೆಚ್ಚಗಳ ಪರಿಪೂರ್ಣತೆಯ ಬಗ್ಗೆ ನಾವು ಟೀಕೆಟಿಪ್ಪಣಿ ಮಾಡಲು ಸಾಧ್ಯವಾಗಲಿಲ್ಲ.	ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತವು ಸಂಪೂರ್ಣವಾಗಿ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುತ್ತದೆ, ಅದು ಲೋಕೋಪಯೋಗಿ ಇಲಾಖೆಯ ಸಂಹಿತೆಯ ಅನುಸಾರ ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಿಕೆಗೆ ಸಂಬಂಧಿತ ತಕ್ಕುದಾದ ಕಾರ್ಯವಿಧಾನಗಳನ್ನು ಅನುಸರಿಸುವ ಮೂಲಕ ಕಾಮಗಾರಿಗಳನ್ನು ಕಾರ್ಯಗತಗೊಳಿಸುತ್ತದೆ. ಆದ್ದರಿಂದ, ಅದಕ್ಕೆ ವಹಿಸಲಾಗಿದ್ದಂತಹ ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳನ್ನು ಪೂರ್ಣಗೊಳಿಸಿದನಂತರ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತವು ನೀಡಿದ ಹಣಬಳಕೆ ಪ್ರಮಾಣಪತ್ರಗಳ ಆಧಾರದ ಮೇರೆಗೆ ನಾವು ವೆಚ್ಚಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿದ್ದೆವು. ಆದಾಗ್ಯೂ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು, ಮೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತವು ಕಾರ್ಯಗತಗೊಳಿಸಿದ ಕಾಮಗಾರಿಗಳನ್ನು ಪರಿಶೀಲಿಸಿದನಂತರ ಸಂಬಂಧಿತ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಹಣಬಳಕೆ ಪ್ರಮಾಣಪತ್ರವನ್ನೂ ಸಹ ಒದಗಿಸುವ ಮೂಲಕ ಹಣಬಳಕೆ ಪ್ರಮಾಣಪತ್ರವನ್ನು ಪರಿಷ್ಕರಿಸಿ ಮುಂದುವೆರೆದು, ಎಸ್‌ಸಿಪಿ ಮತ್ತು ಟಿಎಸ್‌ಪಿ ಅಡಿಯಲ್ಲಿನ ಕಾಮಗಾರಿಗಳನ್ನು ತುರ್ತು ಸಂದರ್ಭಗಳಲ್ಲಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ ನೀಡುವುದನ್ನು ಹೊರತುಪಡಿಸಿದಂತೆ, ಸ್ವತ: ನಿಗಮವೇ ಟೆಂಡರುಗಳನ್ನು ಆಹ್ವಾನಿಸುವ ಮೂಲಕ ಕಾರ್ಯಗತಗೊಳಿಸುವ ಸಲುವಾಗಿ ನಿರ್ದೇಶಕರುಗಳ ಮಂಡಳಿಯು ಅನುಮೋದನೆ ನೀಡಿರುವುದು.

2	ಟಿಪ್ಪಣಿ ಸಂಖ್ಯೆ 25 (ಸಿ)	ಟಿಪ್ಪಣಿ 25 (ಸಿ) – ಸರ್ಕಾರವು ದರಪಟ್ಟಿ ಅಂತಿಮರೂಪಕ್ಕೆ ತರುವುದು ಬಾಕಿಯಿರುವಂತೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸುವುದರ ಪ್ರಭಾವವನ್ನು ಗಣನೆಗೆ ತೆಗೆದುಕೊಳ್ಳದೆಯೇ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಜಾರಿಗೊಳಿಸುವ ಮುಂಚಿನ ಅವಧಿಯಲ್ಲಿನ ದರಗಳ ಆಧಾರದ ಮೇರೆಗೆ ಗುತ್ತಿಗೆಗಳನ್ನು ನೀಡಿರುವುದಕ್ಕೆ ಸಂಬಂಧಿಸಿದಂತೆ. ಅದರ ಪ್ರಭಾವ/ಪರಿಣಾಮವನ್ನು ಪ್ರಸ್ತುತ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ಕರ್ನಾಟಕ ಸರ್ಕಾರವು ನವಂಬರ್ 2018ರಲ್ಲಿ ಮೂಲ ದರಗಳಲ್ಲಿ 2018–19 ಹಣಕಾಸು ಸಾಲಿಗೆ ದರಪಟ್ಟಿ ನೀಡಿರುವುದು. ತದನಂತರದಲ್ಲಿ ಕರೆಯಲಾಗಿರುವ ಎಲ್ಲಾ ಟೆಂಡರುಗಳು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಸೇರಿಸಿದನಂತರ ಈ ದರಪಟ್ಟಿಯ ಅನುಸಾರವೇ ಆಗಿರುತ್ತವೆ. ಆದ್ದರಿಂದ 2018–19 ಸಾಲಿನ ಹೊಸ ದರಪಟ್ಟಿಯ ಆಧಾರದ ಮೇರೆಗೆ ನೀಡಲಾದ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪ್ರಭಾವದ ಯಾವುದೇ ಹೊಂದಾಣಿಕೆಯ ಅಗತ್ಯತೆಯೂ ಇರುವುದಿಲ್ಲ. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯು ಜಾರಿಗೆ ಬರುವ ಮುಂಚಿನ ಅವಧಿಯಲ್ಲಿ ನೀಡಲಾಗಿರುವ ಟೆಂಡರುಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯು ಜಾರಿಗೆ ಬರುವ ಮುಂಚಿನ ತೆರಿಗೆಯನ್ನು ತೆಗೆದುಹಾಕಿ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪರಿಗಣಿಸಿದಂತೆ ಹೊಸ ದರಪಟ್ಟಿ ಅಧಿಸೂಚನೆಯನ್ನು ಹೊರಡಿಸಿದನಂತರ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪ್ರಭಾವವನ್ನು ಲೆಕ್ಕ ಹಾಕಲಾಗುವುದು ಹಾಗೂ ತತ್ಪರಿಣಾಮವಾಗಿ ಉದ್ಭವಿಸುವ ವ್ಯತ್ಯಾಸದ ತೆರಿಗೆಯನ್ನು ಗುತ್ತಿಗೆದಾರರುಗಳ ಅಂತಿಮ ಬಿಲ್ಲುಗಳ ಪಾವತಿಗೆ ಮುಂಚೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ,
ಸಹಿ/–
ಬಿ.ಎಸ್. ಯಡಿಯೂರಪ್ಪ
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: 22ನೇ ಡಿಸೆಂಬರ್ 2020

2019–20 ಹಣಕಾಸು ಸಾಲಿಗೆ ಕಾರ್ಯದರ್ಶಿಯ ಲೆಕ್ಕಪರಿಶೋಧಕರುಗಳ ವರದಿಯಲ್ಲಿರುವ ಷರತ್ತುಬದ್ಧ ಅಂಶಗಳಿಗೆ ಸಂಬಂಧಿಸಿದಂತೆ ಉತ್ತರ;

ಕ್ರಮ ಸಂಖ್ಯೆ	ಕಂಡಿಕೆ ಸಂಖ್ಯೆ	ಲೆಕ್ಕಪರಿಶೋಧಕರುಗಳ ವರದಿಯಲ್ಲಿನ ಟೀಕೆಟಿಪ್ಪಣೆಗಳು	ಉತ್ತರಗಳು
1	8.1	ಕಂಪನಿ ಕಾಯ್ದೆ 2013ರ ಸೆಕ್ಷನ್ 173ರ ನಿಯಮಗಳನ್ನು ಅನುಸಾರ 2019–20ರ ಆರ್ಥಿಕ ವರ್ಷದಲ್ಲಿ ಕಂಪನಿಯು ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್ ಎಸ್.ಎಸ್ –1ರಂತೆ ಇದು ಎರಡು ತ್ರೈಮಾಸಿಕಗಳಲ್ಲಿ ಕನಿಷ್ಠ ಒಂದು ಬೋರ್ಡ್ ಮೀಟಿಂಗ್ ನೆಡೆಸಿರುವುದಿಲ್ಲ. ಈ ಸಂದರ್ಭಗಳಲ್ಲಿ 2019–20ರ ಆರ್ಥಿಕ ವರ್ಷದಲ್ಲಿ 120 ದಿನಗಳಿಗಿಂತ ಹೆಚ್ಚು ಸತತ ಮಂಡಳಿ ಸಭೆಗಳನ್ನು ಕಂಪನಿಯು ನಡೆಸಿರುತ್ತದೆ.	ಮಂಡಳಿಯ ಅನುಮೋದನೆಯ ಅಗತ್ಯವಿರುವ ಯಾವುದೇ ಪ್ರಮುಖ ವಿಷಯಗಳು ಇರಲಿಲ್ಲ ಆದ್ದರಿಂದ ಮಂಡಳಿಯ ಎರಡು ಸಭೆಗಳ ನಡುವೆ ನಿಗದಿತ ಅವಧಿಗಿಂತ ಹೆಚ್ಚಿನ ಸಮಯದ ವಿಳಂಬವಾಗಿರುತ್ತದೆ
2	8.2	ಕಂಪನಿಯು, ರಾಜ್ಯದ ಉದ್ದಗಲಕ್ಕೂ ವಿವಿಧ ಸ್ಥಳಗಳಲ್ಲಿ ಇರುವಂತಹ ನೀರಾವರಿ ಮತ್ತು ನಿರ್ಮಾಣ ಯೋಜನೆಗಳು, ನಿವೇಶನಗಳು ಮತ್ತು ಅಣೆಕಟ್ಟೆಗಳನ್ನು ಪೂರ್ಣಗೊಳಿಸುವ ಸಲುವಾಗಿ ಅನೇಕ ಸಂಖ್ಯೆಯ ಗುತ್ತಿಗೆದಾರರುಗಳನ್ನು ನೇಮಕ ಮಾಡಿದ್ದಿತು. ಗುತ್ತಿಗೆದಾರರುಗಳು, ನಿರ್ಮಾಣಗಳನ್ನು, ಕಾರ್ಯಗತಗೊಳಿಸುವ ಸಲುವಾಗಿ ಸಿವಿಲ್ ಮತ್ತು ಇತರೆ ಕೂಲಿ ಗುತ್ತಿಗೆಯ ಅಡಿಯಲ್ಲಿ ತಮ್ಮ ವೇತನ ಪಟ್ಟಿಯ ಅಡಿಯಲ್ಲಿ ಕೆಲಸಗಾರರನ್ನು ನೇಮಕ ಮಾಡಿಕೊಳ್ಳುವರು. ಕಂಪನಿಯು ಕೂಡ ತನ್ನ ನೋಂದಾಯಿತ ಕಚೇರಿಯಲ್ಲಿ ಕೂಲಿ ಗುತ್ತೆಗೆದಾರರುಗಳನ್ನು ನೇಮಕ ಮಾಡಿಕೊಂಡಿದ್ದಿತು. ಕಂಪನಿಯು, ಓರ್ವ ಪ್ರಧಾನ ಉದ್ಯೋಗದಾತರಾಗಿ ಗುತ್ತಿಗೆ ಕೂಲಿ (ನಿಯಂತ್ರಣ ಮತ್ತು ತೊಡೆದುಹಾಕುವಿಕೆ) ಅಧಿನಿಯಮ, 1970 ಮತ್ತು ಅದಕ್ಕೆ ಅನುಗುಣವಾಗಿ ಕರ್ನಾಟಕ ನಿಯಮಗಳು, 1974ರ ಅನುವುಗಳನ್ನು ವಿಶೇಷವಾಗಿ ನಿರ್ಮಾಣ ಯೋಜನೆಗಳು, ನಿವೇಶನಗಳು ಮತ್ತು ಅಣೆಕಟ್ಟೆಗಳಲ್ಲಿ ಅನುಸರಿಸಿರಲಿಲ್ಲ.	ಗುತ್ತಿಗೆ ಕೂಲಿ (ನಿಯಂತ್ರಣ ಮತ್ತು ತೊಡೆದುಹಾಕುವಿಕೆ) ನಿಯಮಗಳು, 1974ರ ಅನುವುಗಳನ್ನು ಮತ್ತು ಅವುಗಳಿಗೆ ಅನುಗುಣವಾಗಿರುವ ಕರ್ನಾಟಕ ನಿಯಮಗಳು, 1974ರ ಅನುವುಗಳನ್ನು ಅನುಸರಿಸುವ ಸಲುವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ವಿಭಾಗೀಯ ಮುಖ್ಯಸ್ಥರಿಗೆ ತಿಳಿಸುವ ಕ್ರಮವನ್ನು ಜರುಗಿಸಲಾಗಿದೆ

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ,
ಸಹಿ/–
ಬಿ.ಎಸ್. ಯಡಿಯೂರಪ್ಪ
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: 22ನೇ ಡಿಸೆಂಬರ್ 2020

2019–20ರ ಸಾಲಿನ ನಿರ್ದೇಶಕರ ವರದಿಗೆ ಅನುಬಂಧ – I ನಾಮನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿ

1. ಪೀಠಿಕೆ:

1.1 ವಿದ್ಯಾರ್ಹತೆಗಳು, ಸಕಾರಾತ್ಮಕ ಕಾಣಿಕೆಗಳನ್ನು ನಿರ್ಧಾರಣೆ ಮಾಡುವ ಸಲುವಾಗಿ ಮಾನದಂಡಗಳನ್ನು ನಿರ್ದಿಷ್ಟಪಡಿಸುವ ಸಲುವಾಗಿ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ರಚಿಸತಕ್ಕದ್ದು ಸರ್ಕಾರದಿಂದ ಮತ್ತು ಆಡಳಿತಾತ್ಮಕ ಇಲಾಖೆಯಿಂದ (ಜಲ ಸಂಪನ್ಮೂಲಗಳ ಇಲಾಖೆ) ನಿಯೋಜನೆಯ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವಂತಹ ಹಾಗೂ ಅವರುಗಳ ಸಂಬಳ–ಸಂಭಾವನೆಗಳನ್ನು ಸರ್ಕಾರದ ಮಾತೃ ಇಲಾಖೆಯಿಂದ ನಿಯಂತ್ರಿಸಲ್ಪಡುವಹ ಹಿರಿಯ ಅಧಿಕಾರಿಗಳನ್ನು ಹೊರತುಪಡಿಸಿದಂತೆ, ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳು ಮತ್ತು ಇತರೆ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಸಂಭಾವನೆಗಳಿಗೆ ಸಂಬಂಧಿತ ಒಂದು ಕಾರ್ಯನೀತಿಯನ್ನು ರೂಪಿಸತಕ್ಕದ್ದು ಎಂಬುದಾಗಿ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 178ರ ಉಪ–ಪರಿಚ್ಛೇದ (3) ತಿಳಿಸುತ್ತದೆ.

1.2 ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 178 (3) ರ ಅನುಸಾರ ನಾಮನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿಯನ್ನು ರೂಪಿಸಲಾಗಿದೆ.

1.3 ಕಾರ್ಯನೀತಿಯು ಕಂಪನಿಯ ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳು/ಸಿಬ್ಬಂದಿ ಹಾಗೂ ಹಿರಿಯ ವ್ಯವಸ್ಥಾಪನಾ ಅಧಿಕಾರಿಗಳ (ಒಟ್ಟಾರೆಯಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಎಂಬುದಾಗಿ ಉಲ್ಲೇಖಿಸಲ್ಪಡುವ) ಸಂಭಾವನೆಗಾಗಿ ಒಂದು ಚೌಕಟ್ಟನ್ನು ರೂಪಿಸಿರುತ್ತದೆ.

"ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿ/ಅಧಿಕಾರಿಗಳು" ಎಂದರೆ ಕಂಪನಿಯ ಕಾರ್ಯದರ್ಶಿಯವರು ಹಾಗೂ ಮುಖ್ಯ ಹಣಕಾಸು ಅಧಿಕಾರಿಯವರು. "ಹಿರಿಯ ವ್ಯವಸ್ಥಾಪನಾ ಅಧಿಕಾರಿಗಳು/ಸಿಬ್ಬಂದಿ" ಎಂದರೆ ಕಂಪನಿಯ ಪ್ರಮುಖ ವ್ಯವಸ್ಥಾಪನಾ ತಂಡದ ಸದಸ್ಯರುಗಳು, – ಕಾರ್ಯನಿರ್ವಾಹಕ ನಿರ್ದೇಶಕರಿಗೆ ಒಂದು ಹಂತದ ಕೆಳಗಿನ ನಿರ್ದೇಶಕರುಗಳನ್ನು ಒಳಗೊಂಡಂತಹ ವ್ಯವಸ್ಥಾಪನೆಯ ಎಲ್ಲಾ ಸದಸ್ಯರುಗಳನ್ನು ಹೊರತುಪಡಿಸಿದಂತೆ ಹಾಗೂ ಕಾರ್ಯನಿರ್ವಹಣೆಗಳ ನೇತೃತ್ವವನ್ನು ವಹಿಸಿರುವಂತಹ ಅಧಿಕಾರಿಗಳನ್ನು ಒಳಗೊಂಡಂತೆ.

1.4 ಕಾರ್ಯನೀತಿಯನ್ನು "ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ನಾಮನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿ" ಎಂಬುದಾಗಿ ಕರೆಯಲಾಗುವುದು.

1.5 ಕಾರ್ಯನೀತಿಯನ್ನು ನಾಮನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿಯ ಸಮಿತಿಯು ಸೂಕ್ತವೆಂಬುದಾಗಿ ಪರಿಗಣಿಸಲ್ಪಡುವಂತಹ ಮಧ್ಯಂತರ ಅವಧಿಗಳಲ್ಲಿ ಸಮೀಕ್ಷಿಸಲಾಗುವುದು.

2. ಉದ್ದೇಶಗಳು :

2.1 ಈ ಕೆಳಗಿನವುಗಳು ಕಾರ್ಯನೀತಿಯ ಉದ್ದೇಶಗಳಾಗಿರುತ್ತವೆ :

2.1.1. ಕಾರ್ಯನಿರ್ವಾಹಕ ಅಧಿಕಾರಿಗಳ ವಿದ್ಯಾರ್ಹತೆಗಳು, ಅವರುಗಳಿಂದ ಆಗಿರುವಂತಹ ಸಕಾರಾತ್ಮಕ ಕಾಣಿಕೆಗಳು ಹಾಗೂ ಅವರುಗಳಿಗೆ ಪಾವತಿಸಬೇಕಾದ ಸಂಭಾವನೆಗಳನ್ನು ನಿರ್ಧಾರಣೆ ಮಾಡುವ ಸಲುವಾಗಿ ಮನದಂಡವನ್ನು ನಿರ್ದಿಷ್ಟಪಡಿಸುವುದು.

2.1.2 ಕಂಪನಿಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವ ಸಲುವಾಗಿ ಅತ್ಯುನ್ನತವಾದಂತಹ ವಿದ್ಯಾರ್ಹತೆಗಳನ್ನು ಹೊಂದಿರುವಂತಹ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ಆಕರ್ಷಿಸುವುದು, ಅವರುಗಳನ್ನು ಉಳಿಸಿಕೊಳ್ಳುವುದು ಹಾಗೂ ಅವರುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಕಂಪನಿಗೆ ಅನುಕೂಲ ಕಲ್ಪಿಸಿ ಕೊಡುವುದು.

2.1.3 ಕೈಗಾರಿಕಾ ಪ್ರಮಾಣಕಗಳು ಹಾಗೂ ಸಂಬಂಧಿತ/ಸೂಕ್ತ ಭಾರತೀಯ ಸಾಂಸ್ಥಿಕ ನಿಯಂತ್ರಣಗಳನ್ನು ಗಣನೆಗೆ ತೆಗೆದುಕೊಂಡು ಒಂದು ಅತ್ಯುತ್ತಮ ಸಮತೋಲನದ ಹಾಗೂ ಕಾರ್ಯನಿರ್ವಹಣೆಗೆ ಸಂಬಂಧಿತ ಪರಿಹಾರಕ ಪ್ಯಾಕೇಜುಗಳನ್ನು ಒದಗಿಸುವತ್ತ ಕಂಪನಿಗೆ ಅನುಕೂಲ ಕಲ್ಪಿಸಿಕೊಡುವುದು.

2.1.4 ಹಿರಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಿತಾಸಕ್ತಿಗಳು ವ್ಯವಹಾರ ಕಾರ್ಯನೀತಿ ಮತ್ತು ಸಂಭಾವ್ಯ ಅಪಾಯಗಳ ಸಹನಶೀಲತೆ, ಉದ್ದೇಶಗಳು, ಮೌಲ್ಯಗಳು ಹಾಗೂ ಕಂಪನಿಯ ದೀರ್ಘಾವಧಿಯ ಹಿತಾಸಕ್ತಿಗಳ ಜೊತೆಯಲ್ಲಿ ಹೊಂದಾಣಿಕೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು.

3. ಸಂಭಾವನೆಯ ತತ್ವಗಳು

3.1 ಗುರಿಯಾಗಿಸಿಕೊಳ್ಳಲಾಗಿರುವಂತಹ ಉದ್ದೇಶಗಳಿಗೆ ಬೆಂಬಲ ಸಂಭಾವನೆ ಮತ್ತು ಬಹುಮಾನಗಳ ಚೌಕಟ್ಟುಗಳು ಮತ್ತು ತೀರ್ಮಾನಗಳನ್ನು ಕಂಪನಿಯ ದೂರದೃಷ್ಟಿ ಮತ್ತು ಕಾರ್ಯನೀತಿಯನ್ನು ಸಾಧಿಸುವಿಕೆಗೆ ಸರಿಹೊಂದುವಂತಹ ಹಾಗೂ ಬೆಂಬಲಿಸುವಂತಹ ಹಾಗೂ ಪುನರ್–ಬೆಸೆಯುವಂತಹ ರೀತಿಯಲ್ಲಿ ಅಭಿವೃದ್ಧಿಪಡಿಸತಕ್ಕದ್ದು.

3.2 ಪಾರದರ್ಶಕತೆ : ಸಂಭಾವನೆಯ ನಿರ್ವಹಣೆಯ ಪ್ರಕ್ರಿಯೆಯು ಪಾರದರ್ಶಕವಾಗಿರತಕ್ಕದ್ದು, ಒಂದು ಉತ್ತಮ ವಿಶ್ವಾಸನೀಯತೆಯಲ್ಲಿ ನಡೆಸಿರತಕ್ಕದ್ದು ಹಾಗೂ ಔಪ್ಯತೆಯ ಒಂದು ಸೂಕ್ತ ಮಟ್ಟಗಳ ಅನುಸಾರ ಆಗಿರತಕ್ಕದ್ದು.

3.3 ಆಂತರಿಕ ಸಮಾನತೆ : ಕಂಪನಿಯು ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ತನ್ನ ಸಂಸ್ಥೆಯ ಒಳಗೇ ಅವರುಗಳ ಪಾತ್ರಗಳ ಅನುಸಾರ ಸಂಭಾವನೆಯನ್ನು ನೀಡತಕ್ಕದ್ದು. ಕಂಪನಿಯ ಒಳಗೆ ಇತರೆ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ಸಮೀಪದ ಗಾತ್ರವನ್ನು ನಿರ್ಧಾರಣೆ ಮಾಡುವ ಸಲುವಾಗಿ ಅವರುಗಳ ಸ್ಥಾನಮಾನಗಳನ್ನು ಔಪಚಾರಿಕವಾಗಿ ಮೌಲ್ಯಮಾಪನ ಮಾಡತಕ್ಕದ್ದು.

3.4 ಸಾಮರ್ಥ್ಯತೆ ಹಾಗೂ ಊರ್ಜಿತಗೊಂಡಿರುವಿಕೆ : ಸಂಭಾವನೆಯು ಊರ್ಜಿತಗೊಂಡಿರುವಿಕೆಯ ಆಧಾರದ ಮೇರೆಗೆ ನೀಡಲು ಸಾಮರ್ಥ್ಯತೆಯಿಂದ ಕೂಡಿರುವುದನ್ನು ಕಂಪನಿಯು ಖಚಿತಪಡಿಸಿಕೊಳ್ಳತಕ್ಕದ್ದು.

4. ಸಮಿತಿಗೆ ಸೂಚಿಸಲಾಗಿರುವಂತಹ ವಿಷಯಗಳು ಹಾಗೂ ವಹಿಸಲಾಗಿರುವಂತಹ ಪಾತ್ರಗಳು

4.1 ನಿರ್ದೇಶಕರುಗಳ ಮಂಡಳಿಯು ನಿರ್ದಿಷ್ಟಪಡಿಸಿರುವಂತೆ ಸಮಿತಿಗೆ ಸೂಚಿಸಲಾಗಿರುವಂತಹ ವಿಷಯಗಳು ಹಾಗೂ ವಹಿಸಲಾಗಿರುವ ಪಾತ್ರಗಳು ಈ ಕೆಳಗಿನಂತಿರುತ್ತವೆ :

4.1.1ಕಾರ್ಯನಿರ್ವಾಹಕ ಅಧಿಕಾರಿಗಳ ವಿದ್ಯಾರ್ಹತೆಗಳು, ಅವರುಗಳಿಂದ ಆಗಿರುವಂತಹ ಸಕಾರಾತ್ಮಕ ಕಾಣಿಕೆಗಳು ಹಾಗೂ ಅವರುಗಳಿಗೆ ಪಾವತಿಸಬೇಕಾದಂತಹ ಸಂಭಾವನೆಗಳನ್ನು ನಿರ್ಧಾರಣೆ ಮಾಡುವ ಸಲುವಾಗಿ ಮನದಂಡವನ್ನು ನಿರ್ದಿಷ್ಟಪಡಿಸುವುದು ಹಾಗೂ ಕಂಪನಿಯ ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳು/ಸಿಬ್ಬಂದಿ ಮತ್ತು ಇತರೆ ಉದ್ಯೋಗಿಗಳ ಸಂಭಾವನೆಗೆ ಸಂಬಂಧಿಸಿದಂತೆ ಒಂದು ಕಾರ್ಯನೀತಿಯನ್ನು ನಿರ್ದೇಶಕರುಗಳ ಮಂಡಳಿಗೆ ಶಿಫಾರಸು ಮಾಡುವುದು.

4.1.2ನಿರ್ದೇಶಕರುಗಳ ಮಂಡಳಿಯು ಕಾಲಾನುಕಾಲಕ್ಕೆ ನಿರ್ದೇಶಿಸಬಹುದಾದಂತಹ ವಿಷಯಗಳೊಂದಿಗೆ ವ್ಯವಹರಿಸುವುದು.

4.1.3 ಅಧಿನಿಯಮದ ಪರಿಚ್ಛೇದ 178ರ ಅಡಿಯಲ್ಲಿ ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವಂತಹ ನಿಯಮಗಳ ಅಡಿಯಲ್ಲಿನ ಇತರೆ ಯಾವುದೇ ಅನುವುಗಳು.

4.2. ಸಮಿತಿಯು ಈ ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳತಕ್ಕದ್ದು

4.2.1 ಪಿಂಚಣಿಗಳು, ರಜೆ ನಗದೀಕರಣ, ಗ್ರಾಚುಯಿಟಿ, ಇತ್ಯಾದಿಗಳನ್ನು ಒಳಗೊಂಡಂತೆ ಸಂಭಾವನೆಗಳ ಬಹಿರಂಗಪಡಿಸುವಿಕೆಯ ಬಗ್ಗೆ ಎಲ್ಲಾ ಅನುವುಗಳನ್ನೂ ಅನುಸರಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

4.2.2ಯಾವುದೇ ಓರ್ವ ಕಾರ್ಯನಿರ್ವಾಹಕ ಅಧಿಕಾರಿಯವರು ತಮ್ಮದೇ ಆದಂತಹ ಸಂಭಾವನೆಯ ಬಗ್ಗೆ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

5. ಪ್ರಮುಖ ವ್ಯವಸ್ಥಾಪನಾ ಹುದ್ದೆಗಳು ಹಾಗೂ ಹಿರಿಯ ವ್ಯವಸ್ಥಾಪನಾ ಅಧಿಕಾರಿಗಳ ಆಯ್ಕೆ ಮತ್ತು ನಾಮನಿರ್ದೇಶನಕ್ಕಾಗಿ ಕಾರ್ಯವಿಧಾನಗಳು.

ಸಮಿತಿಯ ಅಧ್ಯಕ್ಷರು ಹಾಗೂ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರವರು ಪ್ರಮುಖ ವ್ಯವಸ್ಥಾಪನಾ ಹುದ್ದೆಗಳು ಹಾಗೂ ಹಿರಿಯ ವ್ಯವಸ್ಥಾಪನಾ ಅಧಿಕಾರಿಗಳ ಆಯ್ಕೆಗಾಗಿ ಅಭ್ಯರ್ಥಿಗಳ ಶೈಕ್ಷಣಿಕ, ಅಂತಹ ಹುದ್ದೆಗಳ ಸ್ಥಾನಮಾನಕ್ಕೆ ಸೂಕ್ತವಾಗಿರುವಂತಹ ವೃತ್ತೀಯ ಅರ್ಹತೆಗಳು, ಸಂಬಂಧಿತ ಕೆಲಸದಲ್ಲಿನ ಅನುಭವ, ನೈಪುಣ್ಯತೆ ಹಾಗೂ ಇತರೆ ಸಾಮರ್ಥ್ಯತೆಗಳ ಆಧಾರದ ಮೇರೆಗೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು ಹಾಗೂ ನೇಮಕ ಮಾಡತಕ್ಕದ್ದು.

ಮುಂದುವರೆದು, ಪ್ರಮುಖ ವ್ಯವಸ್ಥಾಪನಾ ಹುದ್ದೆಗಳಿಗೆ ಸಂಬಂಧಿಸಿದಂತೆ, ಆ ದಿನಾಂಕದಂದು ಜಾರಿಯಲ್ಲಿರುವಂತಹ ಸಂಬಂಧಿತ ಅಧಿನಿಯಮದ ಅನುವುಗಳು, ಶಾಸನಬದ್ಧ ನಿಯಮಗಳು, ನಿಯಂತ್ರಣಗಳು, ಇತ್ಯಾದಿಗಳ ಅನುಸಾರ ನಿರ್ದೇಶಕರುಗಳ ಮಂಡಳಿಯ/ಸಂಬಂಧಿತ ಸಮಿತಿಯ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು. ಪ್ರಮುಖ ವ್ಯವಸ್ಥಾಪನಾ ಹುದ್ದೆಗಳಿಗೆ ನೇಮಕ ಮತ್ತು/ಅಥವಾ ಅಂತಹ ಹುದ್ದೆಗಳಿಂದ ತೆಗೆದುಹಾಕುವಿಕೆಗಳನ್ನು ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಮತ್ತು/ಅಥವಾ ನಿರ್ದೇಶಕರುಗಳ ಮಂಡಳಿಯ ಮುಂದೆ ನಿಯತ ಅಂತರದ ಅವಧಿಗಳಲ್ಲಿ ಮಂಡಿಸತಕ್ಕದ್ದು.

ಮುಂದುವರೆದು, ಹಿರಿಯ ವ್ಯವಸ್ಥಾಪನಾ ಅಧಿಕಾರಿಗಳ (ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳನ್ನು ಹೊರತುಪಡಿಸಿದಂತೆ)

ನೇಮಕಾತಿಗೆ ಸಂಬಂಧಿಸಿದಂತೆ, ಕಂಪನಿಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದನೆಗೊಂಡಿರುವ ರೀತಿಯಲ್ಲಿ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಮುಂದೆ ನಿಯತ ಅಂತರದ ಅವಧಿಗಳಲ್ಲಿ ಮಂಡಿಸತಕ್ಕದ್ದು.

6. ಪರಿಹಾರದ ಸ್ವರೂಪ

6.1 ಕಾರ್ಯನಿರ್ವಾಹಕ ಹುದ್ದೆಯಲ್ಲಿಲ್ಲದ ನಿರ್ದೇಶಕರುಗಳಿಗೆ ಸಂಭಾವನೆ

ನಿರ್ದೇಶಕರುಗಳ ಮಂಡಳಿಯ ಸಭೆಗಳಿಗೆ/ಸಮಿತಿ ಸಭೆಗಳಿಗೆ ಹಾಜರಾದುದಕ್ಕಾಗಿ ನೀಡಲಾಗುವ ಹಾಜರಾತಿ ಶುಲ್ಕವನ್ನು ಹೊರತುಪಡಿಸಿದಂತೆ ಕಾರ್ಯನಿರ್ವಾಹಕ ಹುದ್ದೆಯಲ್ಲಿಲ್ಲದ ನಿರ್ದೇಶಕರುಗಳಿಗೆ ಯಾವುದೇ ಅನ್ಯ ರೀತಿಯ ಸಂಭಾವನೆಗಳನ್ನು ನೀಡಬೇಕಾಗಿರುವುದಿಲ್ಲ.

6.2 ಪ್ರಮುಖ ವ್ಯವಸ್ಥಾಪನಾ ಹುದ್ದೆಗಳು ಹಾಗೂ ಹಿರಿಯ ವ್ಯವಸ್ಥಾಪನಾ ಅಧಿಕಾರಿಗಳಿಗೆ ಸಂಭಾವನೆ

ಪ್ರಮುಖ ವ್ಯವಸ್ಥಾಪನಾ ಹುದ್ದೆಗಳು ಹಾಗೂ ಹಿರಿಯ ವ್ಯವಸ್ಥಾಪನಾ ಅಧಿಕಾರಿಗಳ ಸಂಭಾವನೆಗಳ ಪಾವತಿಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಹುದ್ದೆಗಳು ಮತ್ತು ನೇಮಕಾತಿಗಳ ನಿಯಮಗಳ ಅನುಸಾರ ನಿರ್ಧಾರಣೆ ಮಾಡುವಲ್ಲಿ ಮತ್ತು ಅವುಗಳನ್ನು ಲೆಕ್ಕವನ್ನಿಡುವಲ್ಲಿ ಕಂಪನಿಯು ಒಂದು ವಿಶ್ವಸನೀಯತೆಯಿಂದ ಮತ್ತು ಪಾರದರ್ಶಕತೆಯಿಂದ ಕೂಡಿದ ಒಂದು ಚೌಕಟ್ಟನ್ನು ಹೊಂದಿರುವುದು.

7. ಸಮಿತಿಯ ಅಧಿಕಾರಗಳು ಹಾಗೂ ಸಮಿತಿಯ ಸಭೆಗಳು

‘ ಸಮಿತಿಯು ಇನ್ನಿತರವುಗಳ ಜೊತೆಯಲ್ಲಿ ಈ ಕೆಳಗಿನ ಅಧಿಕಾರಗಳನ್ನು ಹೊಂದಿರತಕ್ಕದ್ದು :

7.1 ಕಂಪನಿಯ ಲೆಕ್ಕಪತ್ರ ಪುಸ್ತಕಗಳು, ದಾಖಲೆಗಳು, ಅನುಕೂಲತೆಗಳನ್ನು ಸಂಪೂರ್ಣವಾಗಿ ವೀಕ್ಷಿಸುವ ಅಧಿಕಾರದೊಂದಿಗೆ ಸಮಿತಿಯ ವ್ಯಾಪ್ತಿಯಲ್ಲಿನ ವಿಷಯಗಳ ಬಗ್ಗೆ ಅಧ್ಯಯನಗಳನ್ನು ನಡೆಸುವುದು ಅಥವಾ ಅಧ್ಯಯನಗಳನ್ನು ನಡೆಸಲು ಇತರರಿಗೆ ಅನುಮತಿಯನ್ನು ನೀಡುವುದು.

7.2 ಈ ಕಾರ್ಯನೀತಿಯ ಅಡಿಯಲ್ಲಿನ ಅವರುಗಳ ಪಾತ್ರದ ಕಾರ್ಯನಿರ್ವಹಣೆಯ ಬಗ್ಗೆ ಸಲಹೆಗಾರರು ಮತ್ತು ತಜ್ಞರ ಸಲಹೆಗಳನ್ನು ಉಳಿಸಿಕೊಳ್ಳುವುದು ಅಥವಾ ಕೋರುವುದು ಹಾಗೂ ಇದಕ್ಕೆ ಸಂಬಂಧಿತ ವೆಚ್ಚಗಳನ್ನು ಕಂಪನಿಯು ಬರಿಸತಕ್ಕದ್ದು.

7.3 ತನ್ನ ಅಧಿಕಾರಗಳನ್ನು ಸಮಿತಿಯ ಯಾವುದೇ ಓರ್ವ ಸದಸ್ಯರಿಗೆ ಅಥವಾ ಕಂಪನಿಯ ಯಾವುದೇ ಓರ್ವ ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗೆ/ಸಿಬ್ಬಂದಿಗೆ ನೀಡುವುದು ಅಥವಾ ತನ್ನ ಯಾವುದೇ ಕಾರ್ಯಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಅಥವಾ ಈ ಕಾರ್ಯನೀತಿಯ ಅಡಿಯಲ್ಲಿನ ಯಾವುದೇ ಪಾತ್ರವನ್ನು ವಹಿಸುವ ಸಲುವಾಗಿ ಉಪ–ಸಮಿತಿಗಳನ್ನು ರಚಿಸುವುದು. ಸಮಿತಿಯು ತನಗೆ ಅಗತ್ಯತೆಯು ಕಂಡು ಬಂದಂತೆಲ್ಲಾ ಸಭೆಯನ್ನು ಸೇರಬಹುದು.

8. ಅನುಮೋದನೆ ಮತ್ತು ಪ್ರಕಟಣೆ

8.1 ಸಮಿತಿಯು ರೂಪಿಸಿರುವಂತಹ ಈ ಕಾರ್ಯನೀತಿಯನ್ನು ಅನುಮೋದನೆಗಾಗಿ ನಿರ್ದೇಶಕರುಗಳ ಮಂಡಳಿಯ ಮುಂದೆ ಮಂಡಿಸತಕ್ಕದ್ದು.

8.2 ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 178 (4) ರ ಅಡಿಯಲ್ಲಿ ಅಗತ್ಯತೆಯಿರುವಂತೆ ಈ ಕಾರ್ಯನೀತಿಯು ನಿರ್ದೇಶಕರುಗಳ ಮಂಡಳಿಯ ವರದಿಯ ಒಂದು ಭಾಗವಾಗಿರತಕ್ಕದ್ದು.

9. ಪೂರಕ ಅನುವುಗಳು

9.1 ಈ ಕಾರ್ಯನೀತಿಯನ್ನು ನಿರ್ದೇಶಕರುಗಳ ಮಂಡಳಿಯ ಒಂದು ನಿರ್ಣಯದಂತೆ ಯಾವ ದಿನಾಂಕದಿಂದ ಅಳವಡಿಸಿಕೊಳ್ಳಲಾಯಿತೋ, ಆ ದಿನಾಂಕದಿಂದ ಔಪಚಾರಿಕವಾಗಿ ಜಾರಿಗೆ ತರತಕ್ಕದ್ದು.

9.2 ಈ ಕಾರ್ಯನೀತಿಯಲ್ಲಿ ಅನುವು ಮಾಡದಿರುವಂತಹ ಯಾವುದೇ ವಿಷಯಗಳನ್ನು ಸಂಬಂಧಿತ ನಿಯಮಗಳು ಮತ್ತು ನಿಯಂತ್ರಣಗಳು ಹಾಗೂ ಕಂಪನಿಯ ನಿಯಮನಿಬಂಧನೆಗಳ (ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್) ಅನುಸಾರ ನಿರ್ವಹಿಸತಕ್ಕದ್ದು.

9.3 ಈ ಕಾರ್ಯನೀತಿಯ ಅರ್ಥ/ತಾತ್ಪರ್ಯವನ್ನು ವ್ಯಾಖ್ಯಾನಿಸುವ ಹಕ್ಕು ಕಂಪನಿಯ ನಿರ್ದೇಶಕರುಗಳ ಮಂಡಳಿಗೆ ಇರುತ್ತದೆ.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ,

ಸಹಿ/–

ಬಿ.ಎಸ್. ಯಡಿಯೂರಪ್ಪ

ಅಧ್ಯಕ್ಷರು

ಸ್ಥಳ: ಬೆಂಗಳೂರು

ದಿನಾಂಕ: 22ನೇ ಡಿಸೆಂಬರ್ 2020

2019–20ರ ಸಾಲಿನ ನಿರ್ದೇಶಕರ ವರದಿಗೆ ಅನುಬಂಧ – II
ಆಪತ್ತು ನಿರ್ವಹಣಾ ಕಾರ್ಯತಂತ್ರ

ಪೀಠಿಕೆ:

ಒಂದು ಕಂಪನಿಯ ಸರ್ವಸದಸ್ಯರ ಸಭೆಯ ಮುಂದೆ ಮಂಡಿಸಲಾಗುವಂತಹ ಹಣಕಾಸು ತ:ಖ್ತೆಗಳಿಗೆ ಕಂಪನಿಯ ಅಸ್ತಿತ್ವಕ್ಕೆ ಅಪಾಯಗಳನ್ನು ತಂದೊಡ್ಡಬಹುದೆಂಬುದಾಗಿ ನಿರ್ದೇಶಕರುಗಳ ಮಂಡಳಿಯು ಅಭಿಪ್ರಾಯ ಪಡುವಂತಹ ಸಂಭಾವ್ಯ ಅಪಾಯಗಳ ಅಂಶಗಳು ಯಾವುದಾದರೂ ಇದ್ದಲ್ಲಿ, ಅಂತಹವುಗಳನ್ನು ಗುರುತಿಸಿರುವುದನ್ನೂ ಒಳಗೊಂಡಂತೆ, ಕಂಪನಿಗಾಗಿ ಒಂದು ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿಯನ್ನು ಅಭಿವೃದ್ಧಿಪಡಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವುದನ್ನು ಸೂಚಿಸಿದಂತೆ ಒಂದು ಹೇಳಿಕೆಯನ್ನು/ವರದಿಯನ್ನು ಲಗತ್ತಿಸಿರತಕ್ಕದ್ದು ಎಂಬುದಾಗಿ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 134 (3) ನಿರ್ದಿಷ್ಟಪಡಿಸಿರುತ್ತದೆ.

ಮೇಲಿನ ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡಂತೆ ಕಂಪನಿಗಾಗಿ ಒಂದು ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿಯನ್ನು ರೂಪಿಸುವುದು ಕಂಪನಿಗೆ ಸಮಯೋಚಿತ ಕಾರ್ಯವಾಯಿತು..

1.1 ನಿರ್ವಚನಗಳು:

1.1.1 ಅಪಾಯ:

ಸಂಭಾವ್ಯ ಅಪಾಯಗಳು ಎಂದರೆ ಸಂಭವಿಸಿದ ಸಂದರ್ಭದಲ್ಲಿ ಸಂಸ್ಥೆಯ ವ್ಯವಹಾರಗಳ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದರ ಮೇಲೆ ಪ್ರತಿಕೂಲ ಪ್ರಭಾವಗಳನ್ನು ಬೀರುವಂತಹ ಘಟನೆಗಳು ಅಥವಾ ಪರಿಸ್ಥಿತಿಗಳು. ಅಂತಹ ಸಂಭವಿಸುವಿಕೆಗಳ ಕಾರಣ ಉದ್ಭವಿಸಬಹುದಾದಂತಹ ಅನಿಶ್ಚಿತತೆಯ ಪರಿಣಾಮಗಳಿಗೆ ಕಂಪನಿಯು ಮುಕ್ತವಾಗಿರುವುದು ಅಥವಾ ಕಂಪನಿಯು ತನ್ನ ಬಾಗಿಲುಗಳನ್ನು ತೆರೆದುಕೊಂಡಿರುವುದು ಒಂದು ಸಂಭಾವ್ಯ ಅಪಾಯವಾಗಿರುತ್ತದೆ. ಕಂಪನಿಯ ಅಸ್ತಿತ್ವಕ್ಕೆ ಅಪಾಯಗಳನ್ನು ತಂದೊಡ್ಡಬಹುದೆಂಬುದಾಗಿ ನಿರ್ದೇಶಕರುಗಳ ಮಂಡಳಿಯು ಅಭಿಪ್ರಾಯ ಪಡಬಹುದಾದಂತಹ ಯಾವುದೇ ಘಟನೆಗಳು ಅಥವಾ ಪರಿಸ್ಥಿತಿಗಳು ಕೂಡ ಸಂಭಾವ್ಯ ಅಪಾಯಗಳಾಗಿರುತ್ತವೆ.

1.1.2 ಆಪತ್ತು ನಿರ್ವಹಣೆ:

ಸಂಭಾವ್ಯ ಅಪಾಯಗಳ ಅಂಶಗಳನ್ನು ವ್ಯವಸ್ಥಿತವಾಗಿ ಗುರುತಿಸುವುದು, ಕಂಪನಿಯ ಉದ್ದೇಶಗಳ ಮೇಲೆ ಅದರ ಪ್ರತಿಕೂಲ ಪ್ರಭಾವಗಳನ್ನು ನಿರ್ಧಾರಣೆ ಮಾಡುವ ಸಲುವಾಗಿಯೇ ರಚಿಸಲಾಗಿರುವಂತಹ ಕಂಪನಿಯ ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥೆಯು ಸಂಭಾವ್ಯ ಅಪಾಯಗಳ ಅಂಶಗಳನ್ನು ವ್ಯವಸ್ಥಿತವಾಗಿ ಗುರುತಿಸುವ ಹಾಗೂ ಕಂಪನಿಯ ಉದ್ದೇಶಗಳ ಮೇಲೆ ಅದರ ಪ್ರತಿಕೂಲ ಪ್ರಭಾವಗಳನ್ನು ನಿರ್ಧಾರಣೆ ಮಾಡುವ ಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ.

1.1.3 ಸಂಭಾವ್ಯ ಅಪಾಯಗಳ ನಿರ್ಧಾರಣೆ

ಸಂಭಾವ್ಯ ಅಪಾಯಗಳ ನಿರ್ಧಾರಣೆಯನ್ನು ಸಂಭಾವ್ಯ ಅಪಾಯಗಳ ಒಟ್ಟಾರೆ ಸಂಸ್ಕರಣೆ ಹಾಗೂ ಗ್ರಹಿಸಲಾಗುವ ಸಂಭಾವ್ಯ ಅಪಾಯಗಳ ಒಟ್ಟಾರೆ ಪ್ರಕ್ರಿಯೆಗಳು ಎಂಬುದಾಗಿ ವಿವರಿಸಲ್ಪಡುತ್ತದೆ.

1.2 ಕಾರ್ಯನೀತಿಯ ಉದ್ದೇಶಗಳು

ಕಾರ್ಯನೀತಿಯ ಪ್ರಮುಖ ಉದ್ದೇಶವು, ಕಂಪನಿಯನ್ನು ಯಾವ ಪ್ರಮುಖ ಉದ್ದೇಶಗಳಿಗಾಗಿ ಸ್ಥಾಪಿಸಲಾಗಿರುವುದೋ ಅಂತಹ ಪ್ರಮುಖ ಉದ್ದೇಶಗಳ ಜೊತೆಯಲ್ಲಿರುವಂತಹ ಸಂಭಾವ್ಯ ಅಪಾಯಗಳನ್ನು ಗುರುತಿಸುವ ಹಾಗೂ ಮೌಲ್ಯಮಾಪನ ಮಾಡುವ ಮೂಲಕ ಕಂಪನಿಯ ಕಾರ್ಯಾಚರಣೆಗಳ ಊರ್ಜಿತಗೊಳ್ಳಬಲ್ಲಂತಹ ಮುಂದುವರಿಯುವಿಕೆಯನ್ನು ಖಚಿತಪಡಿಸಿಕೊಳ್ಳುವುದಾಗಿರುತ್ತದೆ. ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವ್ಯವಸ್ಥೆಯನ್ನು ಸ್ಥಾಪಿಸುವುದನ್ನು ಕಾರ್ಯನೀತಿಯು ಗುರಿಯಾಗಿಸಿಕೊಂಡಿರುತ್ತದೆ :

1.2.1 ಕಂಪನಿಯು ಮುಕ್ತವಾಗಿರುವಂತಹ ಎಲ್ಲಾ ಪ್ರಸಕ್ತ ಹಾಗೂ ಗ್ರಹಿಸಲ್ಪಡುವ ಭವಿಷ್ಯದ ಸಂಭಾವ್ಯ ಅಪಾಯಗಳನ್ನು ಗುರುತಿಸುವುದು ಹಾಗೂ ಅವುಗಳನ್ನು ನಿರ್ಧಾರಣೆ ಮಾಡುವುದು.

1.2.2 ಅನ್ವಯಗೊಳ್ಳುವಂತಹ ನಿಯಂತ್ರಣಗಳಿಗೆ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳದಿರುವುದನ್ನು ಅವಿರತವಾಗಿ ಸಮೀಕ್ಷಿಸುವುದು ಹಾಗೂ ಗುರುತಿಸುವುದು ಹಾಗೂ ಅನುಸರಿಸದಿರುವುದರ ಸಂಭಾವ್ಯ ಅಪಾಯಗಳನ್ನು ತಗ್ಗಿಸುವುದು.

1.3 ಕಂಪನಿ ಎಂದರೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ವಿಜನಿನಿ)

2. ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿ

ಕಂಪನಿಯ ನಿಯಮನಿಬಂಧನೆಗಳಲ್ಲಿ (ಆರ್ಟಿಕಲ್ಸ್ ಆಫ್ ಅಸೋಸಿಯೇಷನ್) ನಿರ್ದಿಷ್ಟಪಡಿಸಲಾಗಿರುವ ಕಂಪನಿಯ

ಉದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ಕಂಪನಿಯ ಆಸಕ್ತಿಯ ಅನುಸಾರ ಕಾರ್ಯನೀತಿಯನ್ನು ರೂಪಿಸಲಾಗಿರುವುದು ಹಾಗೂ ಸಂಭಾವ್ಯ ಅಪಾಯ ನಿರ್ವಹಣೆಯ ಈ ಕೆಳಗಿನ ಮಾರ್ಗಸೂಚಿ ತತ್ವಗಳನ್ನು ವ್ಯಾಪಿಸಿರುವುದು.

2.1 ಆಪತ್ತು ನಿರ್ವಹಣೆಯ ತತ್ವಗಳು:

2.1.1 ಕಂಪನಿಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಎಲ್ಲಾ ನಿರ್ಣಯಗಳನ್ನು, ಅಂತಹ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಒಳಗೊಂಡಿರುವಂತಹ ಅರಿತಿರುವಂತಹ ಗ್ರಹಿಕೆಗಳೊಂದಿಗೆ ತೆಗೆದುಕೊಳ್ಳತಕ್ಕದ್ದು.

2.1.2 ಸಂಭಾವ್ಯ ಅಪಾಯಗಳನ್ನು ನಿಯತವಾಗಿ ಸಮೀಕ್ಷಿಸಲಾಗುವುದು ಹಾಗೂ ಪರಿಹಾರಕ ಪ್ರಕ್ರಿಯೆಗಳನ್ನು ಅಭಿವೃದ್ಧಿಪಡಿಸುವ ಮತ್ತು ಕಾರ್ಯಗತಗೊಳಿಸುವ ಸಲುವಾಗಿ ಮಾರ್ಗಸೂಚಿಗಳನ್ನು ಸಾಧ್ಯವಾದಷ್ಟು ಬೇಗನೆ ರೂಪಿಸಲಾಗುವುದು

2.1.3 ಗುರುತಿಸಲ್ಪಟ್ಟಿರುವ ಸಂಭಾವ್ಯ ಅಪಾಯಗಳ ಸ್ಥಿತಿಗತಿ, ಅಂತಹ ಸಂಭಾವ್ಯ ಅಪಾಯಗಳನ್ನು ತೊಡೆದುಹಾಕುವಿಕೆಯ ಸ್ಥಿತಿಗತಿಯ ಮೇಲಿನ ಒಂದು ವರದಿಯನ್ನು ತ್ವರಿತವಾಗಿ ಕಡೆಯ ಪಕ್ಷ ಒಂದು ವರ್ಷಕ್ಕೆ ಒಂದು ಸಲ ನಿರ್ದೇಶಕರುಗಳ ಮಂಡಳಿಗೆ ಸಲ್ಲಿಸತಕ್ಕದ್ದು.

3. ಆಪತ್ತು ಗುರುತಿಸುವಿಕೆ, ನಿರ್ಧರಿಸುವಿಕೆ ಮತ್ತು ಆಪತ್ತುಗಳ ವರ್ಗೀಕರಣ:

3.1 ಆಪತ್ತು ಅಂದಾಜು ಪ್ರಕ್ರಿಯೆಯ ವ್ಯಾಪ್ತಿ:

3.1.1 ಸಂಭಾವ್ಯ ಅಪಾಯವನ್ನು ಗುರುತಿಸುವಿಕೆ : ಇವುಗಳು ಇರುವಂತಹ ಅಥವಾ ಸಂಭವಿಸಬಹುದಾದಂತಹ ಘಟನೆಗಳು ಅಥವಾ ಸಂಭವಿಸುವಿಕೆಗಳಾಗಿರುತ್ತವೆ, ಇವುಗಳು ಸಂಭವಿಸಿದಂದು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಸಾಮರ್ಥ್ಯದ ಮೇಲೆ ಪ್ರತಿಕೂಲ ಪರಿಣಾಮವನ್ನು ಭೀರುತ್ತವೆ ಅಥವಾ ಅದರ ಅಸ್ತಿತ್ವವು ಮುಂದುವರಿದುಕೊಂಡು ಹೋಗುವುದರ ಮೇಲೆ ಅಪಾಯವನ್ನು ತಂದೊಡ್ಡುತ್ತದೆ.

3.1.2 ಸಂಭಾವ್ಯ ಅಪಾಯಗಳ ನಿರ್ಧಾರಣೆ : ಸಂಭಾವ್ಯ ಅಪಾಯಗಳ ನಿರ್ಧಾರಣಾ ಪ್ರಕ್ರಿಯೆಯು ಗುರುತಿಸಲ್ಪಟ್ಟಿರುವಂತಹ ಸಂಭಾವ್ಯ ಅಪಾಯಗಳು ಅದರ ಅಸ್ತಿತ್ವವನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಹಾಗೂ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಸಾಮರ್ಥ್ಯದ ಮೇಲೆ ಎಷ್ಟರಮಟ್ಟಿಗೆ ಪ್ರತಿಕೂಲ ಪರಿಣಾಮವನ್ನು ಭೀರುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದನ್ನು ಒಳಗೊಂಡಿರುತ್ತದೆ.

3.1.3 ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವು ಮುಕ್ತವಾಗಿರುವಂತಹ ಸಂಭಾವ್ಯ ಅಪಾಯಗಳನ್ನು ಈ ಕೆಳಗಿನ ಪ್ರವರ್ಗಗಳ ಅಡಿಯಲ್ಲಿ ವರ್ಗೀಕರಿಸಬಹುದು.

ಬಿ) ಪರಿಣಾಮಕಾರಿ ಆಯವ್ಯಯ ನಿಯಂತ್ರಣ: ಅನುಷ್ಠಾನ

3.1.4 ನಿರ್ದಿಷ್ಟ ಸಂಭಾವ್ಯ ಅಪಾಯಗಳು : ಸರ್ಕಾರದ ಕಾರ್ಯನೀತಿಗಳು, ನ್ಯಾಯಾಲಯದ ತೀರ್ಪುಗಳು, ಅಂತರ ರಾಜ್ಯ ಜಲ ವಿವಾದಕ್ಕೆ ಸಂಬಂಧಿತ ನ್ಯಾಯಮಂಡಳಿಯ ತೀರ್ಪುಗಳು, ಇತ್ಯಾದಿ.

3.1.5 ಹಣಕಾಸು ಸಂಪನ್ಮೂಲಗಳಿಗೆ ಸಂಬಂಧಿತ ಸಂಭಾವ್ಯ ಅಪಾಯಗಳು : ಯೋಜನೆಗಳ ಕಾರ್ಯಗತಗೊಳಿಸುವಿಕೆಗೆ ಅಗತ್ಯವಿರುವಂತಹ ಹಣಕಾಸು ಸಂಪನ್ಮೂಲಗಳನ್ನು ಕ್ರೋಡೀಕರಿಸಲು ಸಾಧ್ಯವಾಗದಿರುವುದು ಹಾಗೂ ಸಾಲಗಳನ್ನು ಪಡೆಯುವಲ್ಲಿನ ಸೇವೆಗಳು.

3.1.6 ಕಾರ್ಯಗತಗೊಳಿಸುವಿಕೆಗೆ ಸಂಬಂಧಿತ ಸಂಭಾವ್ಯ ಅಪಾಯಗಳು : ಸಂಭಾವ್ಯ ಅಪಾಯಗಳು ನಿರ್ದಿಷ್ಟವಾಗಿ ಕಂಪನಿಗೆ ಸಂಬಂಧಿಸಿರುತ್ತವೆ ಹಾಗೂ ಯೋಜನೆಯ ಕಾರ್ಯಗತಗೊಳಿಸುವಿಕೆಗೆ ಅಗತ್ಯವಿರುವಂತಹ ಅರಣ್ಯ ಇಲಾಖೆಯಿಂದ ಅನುಮತಿ, ಪರಿಸರೀಯ ಅನುಮತಿ ಹಾಗೂ ಕೇಂದ್ರ ಜಲ ಆಯೋಗದ ಅನುಮತಿ, ಇವೇ ಮುಂತಾದ ಶಾಸನಬದ್ಧ ಅನುಮತಿ, ಮುಂತಾದ ಸನ್ನಿವೇಶಗಳಲ್ಲಿ ಸರ್ಕಾರವು ಕಾಲಾನುಕಾಲಕ್ಕೆ ತನಗೆ ವಹಿಸುವ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಕಂಪನಿಯ ಸಾಮರ್ಥ್ಯದ ಮೇಲೆ ಒಂದು ಪ್ರತಿಕೂಲ ಪರಿಣಾಮವನ್ನು ಭೀರುತ್ತದೆ.

3.1.7 ಕಾರ್ಯಾಚರಣೆಗಳಿಗೆ ಸಂಬಂಧಿತ ಸಂಭಾವ್ಯ ಅಪಾಯಗಳು ಅಣೆಕಟ್ಟೆ ಒಡೆಯುವುದು, ನಾಲೆಗಳು ಬಿರುಕು ಬಿಡುವುದು, ಯಂತ್ರೋಪಕರಣಗಳು ಕೆಟ್ಟು ಹೋಗುವುದು/ಸ್ಥಗಿತಗೊಳ್ಳುವುದು, ಇತ್ಯಾದಿ ಕಾರ್ಯಾಚರಣೆಗಳ ಅನಿಶ್ಚಿತತೆಗಳ ಜೊತೆಯಲ್ಲಿರುತ್ತವೆ.

4. ಸಂಭಾವ್ಯ ಅಪಾಯಗಳ ಮಾತೃಕೆ (ಮ್ಯಾಟ್ರಿಕ್ಸ್)

4.1 ಈ ಕೆಳಗಿನ ವಿವರಗಳನ್ನು ಒಳಗೊಂಡಿರುವಂತಹ ಸಂಭಾವ್ಯ ಅಪಾಯಗಳ ಮಾತೃಕೆಯನ್ನು (ಮ್ಯಾಟ್ರಿಕ್ಸ್) ಅಭಿವೃದ್ಧಿಪಡಿಸಲಾಗುವುದು.

4.1.1 ಸಂಭಾವ್ಯ ಅಪಾಯದ ಹೆಸರು ಮತ್ತು ಸಂಭಾವ್ಯ ಅಪಾಯವನ್ನು ಯಾವ ರೀತಿ ಉಲ್ಲೇಖಿಸಬಹುದು

ಎಂಬುದರ ಬಗ್ಗೆ ಸಂಕ್ಷಿಪ್ತ ವಿವರಣೆ

4.1.2 ಸಂಭಾವ್ಯ ಅಪಾಯದ ಸ್ವರೂಪ : ನಿರ್ದಿಷ್ಟ/ಹಣಕಾಸಿಗೆ ಸಂಬಂಧಿತ/ಕಾರ್ಯಗತಗೊಳಿಸುವಿಕೆಗೆ ಸಂಬಂಧಿತ/ಕಾರ್ಯಾಚರಣೆಗಳಿಗೆ ಸಂಬಂಧಿತ.

4.1.3 ತೊಂದರೆಗೆ ಈಡಾಂತಹ ಸಹಭಾಗಿಗಳ ಪಟ್ಟಿ ಹಾಗೂ ಸಹಭಾಗಿಗಳ ನಿರೀಕ್ಷೆಗಳ ಮೇಲೆ ಸಂಭಾವ್ಯ ಅಪಾಯದ ಪರಿಣಾಮ.

4.1.4 ಒಂದು ವೇಳೆ ಸಂಭಾವ್ಯ ಅಪಾಯವು ಸಂಭವಿಸಿದಲ್ಲಿ, ಪ್ರಭಾವ/ಪರಿಣಾಮದ ಸಂಭಾವ್ಯ ಅಪಾಯದ ಮೌಲ್ಯ

5. ಸಂಭಾವ್ಯ ಅಪಾಯವನ್ನು ತೊಡೆದುಹಾಕಲು ಪ್ರಮುಖವಾಗಿ ಕಾರ್ಯಗತಗೊಳಿಸಲಾಗುವ ಕ್ಷೇತ್ರಗಳು :

5.1 ಈ ಕೆಳಗಿನವುಗಳು ಸಂಭಾವ್ಯ ಅಪಾಯವನ್ನು ತೊಡೆದುಹಾಕಲು ಪರಿಹಾರಕ ಕ್ರಮಗಳನ್ನು ಕಾರ್ಯಗತಗೊಳಿಸುವ ಅಗತ್ಯತೆಯಿರುವ ಪ್ರಮುಖ ಕ್ಷೇತ್ರಗಳಾಗಿರುತ್ತವೆ :

5.1.1 ನಿಯಂತ್ರಕ ಅಗತ್ಯತೆಯೊಂದಿಗೆ ಅನುಸರಣಾ ಕ್ರಮದ ಅಗತ್ಯತೆಯಿರುವಂತಹ ಯೋಜನೆಗಳನ್ನು ಗುರುತಿಸುವ ಸಲುವಾಗಿ ಸರ್ಕಾರದೊಂದಿಗೆ ಸಕ್ರಿಯ ಸಂಪರ್ಕವನ್ನು ಸಾಧಿಸುವುದು ಹಾಗೂ ನಿಯಂತ್ರಕ ಅಗತ್ಯತೆ/ಅನುಮತಿಗಳೊಂದಿಗೆ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಕ್ರಮವನ್ನು ತ್ವರಿತಗೊಳಿಸುವುದು.

5.1.2 ನಿಯಂತ್ರಕರುಗಳ ಅನುಮತಿಗಳ ಅಗತ್ಯತೆಯಿರುವಂತಹ ಯೋಜನೆಗಳನ್ನು ಗುರುತಿಸುವುದು ಹಾಗೂ ಅಂತಹ ಅನುಮತಿಗಳನ್ನು ಪಡೆಯದೆಯೇ ಅಂತಹ ಹೊಸ ಯೋಜನೆಗಳನ್ನು ಕಾರ್ಯಗತಗೊಳಿಸುವ ಕ್ರಮಗಳನ್ನು ಕೈಗೊಳ್ಳದಿರುವುದು.

5.1.3 ವಿವಾದಗಳನ್ನು ತಪ್ಪಿಸಿಕೊಳ್ಳುವ ಸಲುವಾಗಿ ಸರ್ಕಾರವು ನಿರ್ದಿಷ್ಟಪಡಿಸಿರುವಂತಹ ಪ್ರಮಾಣಕ ಸವಾಲುಗಳಿಗೆ ಸಂಬಂಧಿತ ದಾಖಲೆಗಳನ್ನು (ಸ್ಟಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್) ಅಳವಡಿಸಿಕೊಳ್ಳುವುದು ಹಾಗೂ ಸವಾಲುಗಳನ್ನು ಸಲ್ಲಿಸುವ ಪ್ರಕ್ರಿಯೆಯನ್ನು ಪ್ರಮಾಣಕಗೊಳಿಸುವುದು.

5.1.14 ನಿಕೃಷ್ಟಮಟ್ಟದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದನ್ನು ತಪ್ಪಿಸುವುದಕ್ಕಾಗಿ ಒಂದು ಪ್ರಮಾಣಕ ಗುಣಮಟ್ಟ ನಿಯಂತ್ರಣ ಪ್ರಕ್ರಿಯೆಯನ್ನು ಸ್ಥಾಪಿಸುವುದು ಹಾಗೂ ಸಮರ್ಪಕ ಸಿಬ್ಬಂದಿ ಸಂಖ್ಯೆಯೊಂದಿಗೆ ಹಾಗೂ ಸಾಧನಗಳು ಮತ್ತು ಉಪಕರಣಗಳೊಂದಿಗೆ ಗುಣಮಟ್ಟ ನಿಯಂತ್ರಣ ವಿಭಾಗವನ್ನು ಬಲಪಡಿಸುವುದು.

5.1.5 ಆಂತರಿಕ ಪ್ರಕ್ರಿಯೆಗಳನ್ನು/ಸಂಸ್ಕರಣೆಗಳನ್ನು ಬಲಪಡಿಸುವುದು.

ಎ) ಆಂತರಿಕ ನಿಯಂತ್ರಣಗಳು : ಅಕ್ರಮಗಳು/ನಿಯಮಬಾಹಿರತೆಗಳನ್ನು ಕನಿಷ್ಠ ಮಟ್ಟಕ್ಕೆ ತರುವ ರೀತಿಯಲ್ಲಿ ಆಂತರಿಕ ಪ್ರಕ್ರಿಯೆಗಳು/ಸಂಸ್ಕರಣೆಗಳನ್ನು ಬಲಪಡಿಸುವ ಸಲುವಾಗಿ ಆಂತರಿಕ ನಿಯಂತ್ರಣ ಕೈಪಿಡಿಯನ್ನು ರೂಪಿಸುವುದು.

ಬಿ) ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ವೇಳಾಪಟ್ಟಿಯ ಮೇಲೆ ಪ್ರತಿಕೂಲ ಪರಿಣಾಮವನ್ನು ಭೀರುವಂತಹ ಹಣಕಾಸು–ರಹಿತ ಸಂದರ್ಭಗಳನ್ನು ತಪ್ಪಿಸುವ ಸಲುವಾಗಿ ಯೋಜನೆಯ ಉಳಿಕೆ ವೆಚ್ಚಗಳಿಗಾಗಿ ಹಣಕಾಸು ತೊಡಗಿಸುವಿಕೆಯ ಪೂರ್ವಭಾವಿ ಯೋಜನೆಯ ಜೊತೆಗೂಡಿದಂತೆ ಪರಿಣಾಮಕಾರಿತ್ವದಿಂದ ಕೂಡಿದ ಆಯವ್ಯಯ ನಿಯಂತ್ರಣಗಳು.

ಸಿ) ಯೋಜನೆಗಳನ್ನು ಮೇಲ್ವಿಚಾರಣೆ ಮಾಡುವ ವ್ಯವಸ್ಥೆ : ತ್ವರಿತ ಪ್ರತಿಕ್ರಿಯೆ ಮತ್ತು ತ್ವರಿತ ನಿರ್ಣಯಗಳನ್ನು ಕೈಗೊಳ್ಳುವ ಸಲುವಾಗಿ ಹಾಗೂ ಅಲ್ಲದೆಯೇ ಕೊರತೆಯ ಕ್ಷೇತ್ರಗಳಿಗೆ ಗಮನ ಹರಿಸುವ ಸಲುವಾಗಿ ಮತ್ತು ವಿಳಂಬಗಳ ಜಾಡನ್ನು ಹಿಡಿಯುವ ಸಲುವಾಗಿ ಅಗತ್ಯವಿರುವಂತಹ ಒಂದು ಅಡಚಣೆರಹಿತ ಆನ್‌ಲೈನ್ ಯೋಜನಾ ಮೇಲ್ವಿಚಾರಣಾ ವ್ಯವಸ್ಥೆ.

6. ಸಂಭಾವ್ಯ ಅಪಾಯಗಳ ಸಂಘಟನಾ ವ್ಯವಸ್ಥೆ (ರಿಸ್ಕ್ ಆರ್ಗನಿಸೇಷನ್ ಸ್ಟ್ರಕ್ಚರ್):

ಸಂಭಾವ್ಯ ಅಪಾಯಗಳ ಸಂಘಟನಾ ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕ ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿಯನ್ನು ಕಾರ್ಯಗತಗೊಳಿಸಲಾಗುವುದು. ಮುಖ್ಯ ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಯವರ (ಚೀಫ್ ರಿಸ್ಕ್ ಆಫೀಸರ್) ನೇತೃತ್ವದಲ್ಲಿರುವಂತಹ ಒಂದು ಸಂಭಾವ್ಯ ಅಪಾಯಗಳ ನಿರ್ವಹಣಾ ಕೋಶವನ್ನು ಪ್ರತಿಯೊಂದು ವಲಯದಲ್ಲಿಯೂ ಸ್ಥಾಪಿಸಬೇಕಾಗಿರುತ್ತದೆ. ಮುಖ್ಯ ಇಂಜಿನಿಯರ್‌ರವರು ಆ ವಲಯದ ಮುಖ್ಯ ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಯಾಗಿರುತ್ತಾರೆ.

ಸಂಬಂಧಿತ ವಲಯಗಳ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು ಆ ವಲಯದ ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥಾಪಕರಾಗಿರುತ್ತಾರೆ. ವಲಯದ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರ ಅಧೀನದಲ್ಲಿ ಕಾರ್ಯನಿರ್ವಹಿಸುವಂತಹ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಗಳಾಗಿರುತ್ತಾರೆ.

ಮೇಲೆ ತಿಳಿಸಲಾಗಿರುವಂತಹ ಎಲ್ಲಾ ಅಧಿಕಾರಿಗಳು ತಮಗೆ ವಹಿಸಲಾಗಿರುವಂತಹ ದೈನಂದಿನ ಕರ್ತವ್ಯಗಳನ್ನು ನಡೆಸಿಕೊಂಡು ಹೋಗುವರು ಹಾಗೂ ಅಲ್ಲದೆಯೇ ಸಂಭಾವ್ಯ ಅಪಾಯಗಳ ನಿರ್ವಹಣಾ ಕೋಶದ ಕಾರ್ಯದಲ್ಲಿಯೂ ಸಹಾಯ ಮಾಡುವರು. ಆದ್ದರಿಂದ, ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥಾಪಕರು ಹಾಗೂ ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಗಳು, ತಮ್ಮ ದೈನಂದಿನ ಕರ್ತವ್ಯಗಳ ಜೊತೆಯಲ್ಲಿಯೇ ಸಂಭಾವ್ಯ ಅಪಾಯಗಳ ಬಗ್ಗೆ ವರದಿ ಮಾಡುವ ಹೆಚ್ಚುವರಿ ಜವಾಬ್ದಾರಿಗಳನ್ನೂ ಹೊಂದಿರುವರು. ಪ್ರತಿಯೊಂದು ವಲಯದಲ್ಲಿಯೂ ಸಂಭಾವ್ಯ ಅಪಾಯಗಳ ನಿರ್ವಹಣಾ ಕೋಶಗಳ ಒಟ್ಟಾರೆ ಕಾರ್ಯಚಟುವಟಿಕೆಗಳನ್ನು ಬೆಂಗಳೂರಿನಲ್ಲಿರುವ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ನೋಂದಾಯಿತ ಕಚೇರಿಯಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು (ತಾಂತ್ರಿಕ), ಇವರು ಮೇಲ್ವಿಚಾರಣೆ ಮಾಡುವರು ಹಾಗೂ 5.1.1 ಮತ್ತು 5.1.2ರಲ್ಲಿ ತಿಳಿಸಿರುವಂತೆ ಸಂಭಾವ್ಯ ಅಪಾಯಗಳನ್ನು ತಗ್ಗಿಸುವ ಸಲುವಾಗಿ ಪ್ರಮುಖ ಕಾರ್ಯಗತಗೊಳಿಸುವ ಕ್ಷೇತ್ರಗಳ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವರು.

7. ಪಾತ್ರಗಳು ಮತ್ತು ಜವಾಬ್ದಾರಿಗಳು:

7.1 ನಿರ್ದೇಶಕರುಗಳ ಮಂಡಳಿಯು ಸಂಭಾವ್ಯ ಅಪಾಯ ನಿರ್ವಹಣಾ ಕಾರ್ಯನೀತಿಗಳು ಮತ್ತು ವ್ಯವಸ್ಥೆಯನ್ನು ವಾರ್ಷಿಕವಾಗಿ ಸಮೀಕ್ಷಿಸುವುದು.

7.2 ಈ ಕಾರ್ಯನೀತಿಯ ಅನುಸಾರ ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸಲಾಗಿರುವುದನ್ನು, ಕಾರ್ಯಗತಗೊಳಿಸಿರುವುದನ್ನು ಹಾಗೂ ನಿರ್ವಹಿಸಿಕೊಂಡು ಹೋಗುತ್ತಿರುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ವ್ಯವಸ್ಥಾಪಕ ನಿರ್ದೇಶಕರವರು ಮುಖ್ಯ ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಗಳ ಮೂಲಕ ಜವಾಬ್ದಾರಿಯುತರಾಗಿರುತ್ತಾರೆ.

7.3 ಸಂಭಾವ್ಯ ಅಪಾಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಜವಾಬ್ದಾರಿಗಳನ್ನು ಹಂಚಿಕೆ ಮಾಡುವುದು ಮುಖ್ಯ ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಯವರ ವಿಶೇಷಾಧಿಕಾರವಾಗಿರುತ್ತದೆ.

7.4 ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥಾಪಕರುಗಳು ತಮ್ಮ ಸಂಬಂಧಿತ ಪ್ರದೇಶಗಳಲ್ಲಿ ಈ ಕಾರ್ಯನೀತಿಯನ್ನು ಕಾರ್ಯಗತಗೊಳಿಸುವ ಸಲುವಾಗಿ ಮುಖ್ಯ ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಯವರಿಗೆ ವರದಿಗಳನ್ನು ಸಲ್ಲಿಸುವರು/ಅವರ ಅಧೀನದಲ್ಲಿ ಕಾರ್ಯನಿರ್ವಹಿಸುವರು.

7.5 ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಗಳು ತಮ್ಮ ವೈಯಕ್ತಿಕ ಯೋಜನೆಗಲಿಗೆ ಸಂಬಂಧಿಸಿದಂತೆ ಸಂಭಾವ್ಯ ಅಪಾಯಗಳನ್ನು ಗುರುತಿಸಲು, ಪೂರ್ವಭಾವಿಯಾಗಿ ನಿರ್ಧಾರಣೆ ಮಾಡಲು, ಈ ಬಗ್ಗೆ ವರದಿಯನ್ನು ಸಲ್ಲಿಸಲು ಹಾಗೂ ಮೇಲ್ವಿಚಾರಣೆ ಮಾಡಲು ಜವಾಬ್ದಾರಿಯುತರಾಗಿರುತ್ತಾರೆ.

7.6 ಪ್ರತಿಯೋರ್ವ ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥಾಪಕರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವಂತಹ ಸಂಭಾವ್ಯ ಅಪಾಯಗಳ ಅಧಿಕಾರಿಗಳು ನಿರ್ವಹಿಸಿರುವಂತಹ ಸಂಭಾವ್ಯ ಅಪಾಯಗಳ ರಿಜಿಸ್ಟರುಗಳನ್ನು ಪರಿಶೀಲಿಸಬಹುದು ಹಾಗೂ ಅವರುಗಳನ್ನು ಮೇಲ್ವಿಚಾರಣೆ ಮಾಡಲು ಜವಾಬ್ದಾರಿಯುತರಾಗಿರುತ್ತಾರೆ. ಮುಖ್ಯ ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಯವರು ತದನಂತರ ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥಾಪಕರವರ ಮಟ್ಟದಲ್ಲಿನ ಎಲ್ಲಾ ಸಂಭಾವ್ಯ ಅಪಾಯಗಳನ್ನು ಮೇಲ್ವಿಚಾರಣೆ ಮಾಡುವರು.

7.6.1 ಆಪತ್ತಿನ ರಿಜಿಸ್ಟರ್‌ನಲ್ಲಿ ಈ ಕೆಳಗಿನ ಮಾಹಿತಿಯನ್ನು ಹೊಂದಿರಬೇಕಾಗುತ್ತದೆ:

i ಸಂಭಾವ್ಯ ಅಪಾಯಗಳ ವಿವರಣೆ

ii. ಘಟನೆಯು ವಾಸ್ತವಿಕವಾಗಿ ಸಂಭವಿಸಿದಲ್ಲಿ, ಅದರ ಪ್ರಭಾವ

iii. ಘಟನೆಯು ವಾಸ್ತವಿಕವಾಗಿ ಸಂಭವಿಸಿದಲ್ಲಿ ಯೋಜಿತ ಪ್ರತಿಕ್ರಿಯೆಯ ಒಂದು ಸಂಕ್ಷಿಪ್ತ ಸಾರಾಂಶ

iv. ಪರಿಹಾರಕ ಯೋಜನೆಯ ಒಂದು ಸಂಕ್ಷಿಪ್ತ ಸಾರಾಂಶ (ಅಂದರೆ ಸಂಭಾವ್ಯತೆಯನ್ನು ತಗ್ಗಿಸುವ ಸಲುವಾಗಿ ಮುಂಚಿತವಾಗಿ ತೆಗೆದುಕೊಳ್ಳಲಾದಂತಹ ಕ್ರಮಗಳು).

v. ಜವಾಬ್ದಾರಿಯುತ ಅಧಿಕಾರಿಯವರು/ಸಿಬ್ಬಂದಿ/ವ್ಯಕ್ತಿ

8. ಆಪತ್ತು ನಿರ್ವಹಣೆಯ ಕಾರ್ಯವಿಧಾನ:

8.1 ಕಂಪನಿಯು ತನ್ನ ಕಾರ್ಯಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಹೋಗುತ್ತಿರುವ ಒಂದು ಸಂಸ್ಥೆಯಾಗಿ

ಅಸ್ತಿತ್ವದಲ್ಲಿರುವುದರ ಪ್ರತಿಯಾಗಿ ಸಂಭಾವ್ಯ ಅಪಾಯಗಳನ್ನು ಒಡ್ಡುವುದು, ನಿಯಂತ್ರಕರುಗಳ ಅಗತ್ಯತೆಗಳಿಗೆ ಸಂಬಂಧಿತ ಸಂಭಾವ್ಯ ಅಪಾಯಗಳು, ಕಂಪನಿಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ಪರಿಣಾಮ ಬೀರುವಂತಹ ಸಂಭಾವ್ಯ ಅಪಾಯಗಳು, ಕಾರ್ಯಾಚರಣೆಗಳಿಂದ ವರಮಾನದ ನಷ್ಟದ ಸಂಭಾವ್ಯ ಅಪಾಯಗಳು, ಕಂಪನಿಯ ಆಸ್ತಿಗಳು ಮತ್ತು ಭೂಮಿ/ಕಟ್ಟಡಗಳಿಗೆ ಸಂಭಾವ್ಯ ಅಪಾಯಗಳು, ಮುಂತಾದವುಗಳನ್ನು ತಿದ್ದುಪಡಿ ಕ್ರಮಗಳಿಗಾಗಿ ಆಂತರಿಕ ಲೆಕ್ಕಪರಿಶೋಧನಾ ಕೈಪಿಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಸಂಭಾವ್ಯ ಅಪಾಯಗಳ ಸೂಚಕಗಳ ಆಧಾರದ ಮೇರೆಗೆ ಅಂಕಗಳನ್ನು ನೀಡುವ ಮೂಲಕ ವಿಶ್ಲೇಷಿಸಲಾಗುವುದು.

8.2 ಪ್ರತಿಯೊಂದು ವಲಯದಲ್ಲಿಯೂ ಸಂಭಾವ್ಯ ಅಪಾಯಗಳ ನಿರ್ವಹಣಾ ಕೋಶಗಳು ಕಂಪನಿಗೆ ಇರಬಹುದಾದ ಸಂಭಾವ್ಯ ಅಪಾಯಗಳನ್ನು ತೊಡೆದುಹಾಕುವ ಸಲುವಾಗಿ ಈ ಕಾರ್ಯನೀತಿಯಲ್ಲಿ ತಿಳಿಸಲಾಗಿರುವಂತಹ ಸಂಭಾವ್ಯ ಅಪಾಯಗಳ ಒಳಗೆ ಒಂದು ಮುಂದುವರೆದುಕೊಂಡು ಹೋಗುತ್ತಿರುವಂತಹ ಆಧಾರದ ಮೇರೆಗೆ ಕಾರ್ಯನಿರ್ವಹಿಸುವಂತಹ ಪ್ರಮುಖ ತಂಡಗಳಾಗಿರುತ್ತವೆ.

9. ಸಂಭಾವ್ಯ ಅಪಾಯಗಳನ್ನು ಗುರುತಿಸುವಿಕೆ ಹಾಗೂ ಮೌಲ್ಯಮಾಪನ :

ಮುಖ್ಯ ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಯವರ ಮಾರ್ಗದರ್ಶನದಲ್ಲಿನ ಸಂಭಾವ್ಯ ಅಪಾಯಗಳ ನಿರ್ವಹಣಾ ಕೋಶಗಳು ನಿರ್ದಿಷ್ಟವಾದಂತಹ ಸಂಭಾವ್ಯ ಅಪಾಯಗಳನ್ನು ಗುರುತಿಸುವ ಸಲುವಾಗಿ ಹಾಗೂ ಅಂತಹ ಸಂಭಾವ್ಯ ಅಪಾಯಗಳು ಸಾಕಾರಗೊಂಡಲ್ಲಿ ಅವುಗಳ ಪರಿಣಾಮಗಳನ್ನು ವಿಶ್ಲೇಷಿಸುವ ಸಲುವಾಗಿ ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥಾಪಕರುಗಳು ಮತ್ತು ಸಂಭಾವ್ಯ ಅಪಾಯಗಳ ನಿರ್ವಹಣಾ ಅಧಿಕಾರಿಗಳೊಂದಿಗೆ ನಿಯತಕಾಲಿಕವಾಗಿ ಸಭೆ ಸೇರುವವು.

10. ಆಧ್ಯತೆ ನೀಡಿಕೆ :

ಗುರುತಿಸಲ್ಪಟ್ಟಂತಹ ಎಲ್ಲಾ ಸಂಭಾವ್ಯ ಅಪಾಯಗಳ ನಡುವೆ, ಸಂಭಾವ್ಯ ಅಪಾಯಗಳ ನಿರ್ವಹಣಾ ಕೋಶವು ಪ್ರಮುಖ ಸಂಭಾವ್ಯ ಅಪಾಯಗಳಿಗೆ ಆಧ್ಯತೆಯನ್ನು ನೀಡುತ್ತದೆ ಹಾಗೂ ಅವುಗಳನ್ನು ತೊಡೆದುಹಾಕುವ ಸಲುವಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

11. ಮೌಲ್ಯಮಾಪನ ಮತ್ತು ನಿಯಂತ್ರಣ

11.1 ಗುರುತಿಸಲ್ಪಟ್ಟಿರುವ ಸಂಭಾವ್ಯ ಅಪಾಯಗಳನ್ನು ಗ್ರಹಿಸಲ್ಪಟ್ಟಿರುವ/ಊಹಿಸಲ್ಪಟ್ಟಿರುವ ಫಲಿತಾಂಶಗಳು ಹಾಗೂ ಅಂತಹ ಸಂಭಾವ್ಯ ಅಪಾಯಗಳು ಸಾಕಾರಗೊಂಡಲ್ಲಿ ಅಂತವುಗಳಿಂದ ಉಂಟಾಗಬಹುದಾದ ಹಣಕಾಸಿನ ಪ್ರಭಾವಗಳನ್ನು ನಿರ್ಧಾರಣೆ ಮಾಡಲಾಗುವುದು.

11.2 ಸಂಭಾವ್ಯ ಅಪಾಯಗಳಿಗೆ ಯೋಜನೆಗಳ ಮೇಲೆ ಅವುಗಳಿಂದ ಆಗಬಹುದಾದಂತಹ ಅವುಗಳ ಪ್ರಭಾವಗಳ ಅನುಸಾರ ಶ್ರೇಣಿಯನ್ನು ನೀಡಲಾಗುವುದು.

11.3 ಪ್ರತಿಯೊಂದು ವಿಷಯಕ ಸಂಭಾವ್ಯ ಅಪಾಯವನ್ನು ತೊಡೆದುಹಾಕುವ ಸಲುವಾಗಿ, ಇಳಿಮುಖಗೊಳಿಸುವ ಸಲುವಾಗಿ ಅಥವಾ ಅವುಗಳನ್ನು ನಿರ್ವಹಿಸುವ ಸಲುವಾಗಿ ಕ್ರಿಯಾ ಯೋಜನೆಗಳನ್ನು ಪರಿಗಣಿಸಲಾಗುವುದು ಹಾಗೂ ಅನುಮೋದಿಸಲಾಗುವುದು.

11.4 ಪ್ರತಿಯೊಂದು ಸಂಭಾವ್ಯ ಅಪಾಯದ ನಿರ್ವಹಣೆಗಾಗಿ ಜವಾಬ್ದಾರಿಗಳನ್ನು ಸೂಕ್ತ ಮಟ್ಟದ ವ್ಯವಸ್ಥಾಪಕರುಗಳಿಗೆ ಹಂಚಿಕೆ ಮಾಡಲಾಗುವುದು.

12. ಮೇಲ್ವಿಚಾರಣೆ :

12.1 ಸರ್ಕಾರದ ಹಾಗೂ ಇತರೆ ಕಾರ್ಯನೀತಿಗಳಲ್ಲಿನ ಬದಲಾವಣೆಗಳ ಕಾರಣ ಕಂಪನಿಯ ವ್ಯವಹಾರಗಳ ಪರಿಸರದಲ್ಲಿನ ಬದಲಾವಣೆಗಳ ಕಾರಣ ಉದ್ಭವಿಸುವಂತಹ ಸಂಭಾವ್ಯ ಅಪಾಯಗಳಿಗೆ ಕಂಪನಿಯು ಮುಕ್ತವಾಗಿರುವುದನ್ನು ಗಮನದಲ್ಲಿಟ್ಟುಕೊಂಡು ಸಂಭಾವ್ಯ ಅಪಾಯಗಳ ಮಾತೃಕೆಗಳನ್ನು (ಮ್ಯಾಟ್ರಿಕ್ಸ್) ಇಂದಿನದಿನದನ್ನಾಗಿ ಮಾಡುವ ಅಗತ್ಯತೆಯಿರುತ್ತದೆ. ಆದ್ದರಿಂದ, ಸಂಭಾವ್ಯ ಅಪಾಯಗಳ ಮಾತೃಕೆಗಳನ್ನು (ಮ್ಯಾಟ್ರಿಕ್ಸ್) ನಿಯತ ಆಧಾರದ ಮೇರೆಗೆ ಇಂದಿನದಿನದನ್ನಾಗಿ ಮಾಡಲಾಗುವುದು. ಸಮೀಕ್ಷೆಯ ನಿಯತಕಾಲಿಕತೆ ಹಾಗೂ ಇಂದಿನದಿನದನ್ನಾಗಿ ಮಾಡುವಿಕೆಯು ಈ ಕೆಳಗಿನಂತಿರುತ್ತವೆ

12.2.1 ಮಾಸಿಕ ಎಂಎಂಆರ್ ಸಭೆಗಳಲ್ಲಿ ಚರ್ಚಿಸುವ ಸಲುವಾಗಿನ ವಿಷಯಗಳ ಪಟ್ಟಿಯಲ್ಲಿ ಒಂದು ನಿಯತ ವಿಷಯವಾಗಿ ಸಂಭಾವ್ಯ ಅಪಾಯಗಳ ನಿರ್ವಹಣಾ ಕೋಶದ ಒಂದು ವರದಿಯನ್ನು ಚರ್ಚಿಸುವ ಸಲುವಾಗಿ ಮಂಡಿಸತಕ್ಕದ್ದು. ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥಾಪಕರುಗಳು ಸಂಭಾವ್ಯ ಅಪಾಯಗಳ ಸ್ಥಿತಿಗತಿಗಳನ್ನು ಸಮೀಕ್ಷಿಸುವರು ಹಾಗೂ ತಮ್ಮ ಸಂಬಂಧಿತ ಪ್ರದೇಶಗಳಲ್ಲಿನ ಇಲಾಖಾ ಮುಖ್ಯಸ್ಥರುಗಳೊಂದಿಗೆ ಕ್ರಮಗಳನ್ನು ಕೈಗೊಳ್ಳುವರು.

12.2.2 ಯಾವುದಾದರೂ ಹೊಸದಾದಂತಹ ಅಥವಾ ಬದಲಾವಣೆಗೊಂಡಿರುವಂತಹ ಸಂಭಾವ್ಯ ಅಪಾಯಗಳನ್ನು ಗುರುತಿಸಲಾಗುವುದು ಹಾಗೂ ಸಂಭಾವ್ಯ ಅಪಾಯಗಳ ಮುಖ್ಯ ನಿರ್ವಹಣಾ ಅಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗುವುದು ಹಾಗೂ ಸಂಭಾವ್ಯ ಅಪಾಯಗಳ ಮುಖ್ಯ ನಿರ್ವಹಣಾ ಅಧಿಕಾರಿಯವರು ವ್ಯವಸ್ಥಾಪಕ ನಿರ್ದೇಶಕರವರೊಂದಿಗೆ ಸಮಾಲೋಚಿಸಿದನಂತರ ಲೆಕ್ಕಪರಿಶೋಧನಾ ಸಮಿತಿಗೆ ಕಳುಹಿಸಿಕೊಡುವರು. ನೇಮಕಗೊಂಡಿರುವಂತಹ ಪ್ರತಿಯೊಂದು ಪ್ರದೇಶದ ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥಾಪಕರು ಸಂಭಾವ್ಯ ಅಪಾಯಗಳ ನಿರ್ವಹಣಾ ಕೋಶಕ್ಕೆ ವರದಿ ಸಲ್ಲಿಸುವರು.

1.2.2.3 ಅತ್ಯಧಿಕ ಮಟ್ಟದ ಸಂಭಾವ್ಯ ಅಪಾಯದ ಅಂಕಗಳೊಂದಿಗಿನ ಸಂಭಾವ್ಯ ಅಪಾಯಗಳು ಹಾಗೂ ಅವುಗಳಿಗೆ ಸಂಬಂಧಿತ ತಿದ್ದುಪಡಿ/ಪರಿಹಾರಕ ಕ್ರಮಗಳ ಬಗ್ಗೆ ಗ್ರಹಿಸಲ್ಪಟ್ಟ/ಊಹಿಸಲ್ಪಟ್ಟ ಕೂಡಲೆಯೇ ಲೆಕ್ಕಪರಿಶೋಧನಾ ಸಮಿತಿಗೆ ವರದಿ ಮಾಡತಕ್ಕದ್ದು.

12.2.4 ಸಂಭಾವ್ಯ ಅಪಾಯಗಳ ನಿರ್ವಹಣಾ ಪ್ರಕ್ರಿಯೆಯನ್ನು ದಕ್ಷತೆಯಿಂದ ಹಾಗೂ ಪರಿಣಾಮಕಾರಿತ್ವದಿಂದ ಕೂಡಿರುವ ಸಲುವಾಗಿ ನಿರ್ದೇಶಕರುಗಳ ಮಂಡಳಿಯು ನಿಯತಕಾಲಿಕವಾಗಿ ಸಮೀಕ್ಷಿಸತಕ್ಕದ್ದು.

13. ಸಂಘಟಿತ ಜವಾಬ್ದಾರಿ :

13.1 ಕಂಪನಿಯಲ್ಲಿನ ಪ್ರತಿಯೋರ್ವರೂ ಸಂಭಾವ್ಯ ಅಪಾಯಗಳ ಪರಿಣಾಮಕಾರಿತ್ವದಿಂದ ಕೂಡಿದ ನಿರ್ವಹಣೆಗೆ ಜಾವಾಬ್ದಾರಿಯುತರಾಗಿರುವರು.

13.2 ತಮ್ಮ ಕಾರ್ಯನಿರ್ವಹಿಸುತ್ತಿರುವ ಪ್ರದೇಶದಲ್ಲಿ/ ಕ್ಷೇತ್ರದಲ್ಲಿರಬಹುದಾದಂತಹ ಸಂಭಾವ್ಯ ಅಪಾಯಗಳನ್ನು ಗುರುತಿಸುವಲ್ಲಿ ಪ್ರತಿಯೋರ್ವ ಸಿಬ್ಬಂದಿಯೂ ಜವಾಬ್ದಾರಿಯುತರಾಗಿರುತ್ತಾರೆ. ವ್ಯವಸ್ಥಾಪನೆಯು ಸಂಭಾವ್ಯ ಅಪಾಯಗಳನ್ನು ಕಡಿಮೆಗೊಳಿಸುವ/ತೊಡೆದುಹಾಕುವ ಸಲುವಾಗಿ ಪೂರ್ವಭಾವಿ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಹಾಗೂ ಸಂಭಾವ್ಯ ಅಪಾಯಗಳನ್ನು ಕಡಿಮೆಗೊಳಿಸುವತ್ತ ಕಾರ್ಯನೀತಿಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರಿಯುತವಾಗಿರುತ್ತದೆ.

13.3 ಸಂಭಾವ್ಯ ಅಪಾಯಗಳ ನಿರ್ವಹಣಾ ಪ್ರಕ್ರಿಯೆಯನ್ನು ಇತರೆ ಪೂರ್ವಭಾವಿ ಯೋಜನೆಗಳನ್ನು ತಯಾರಿಸುವ ಪ್ರಕ್ರಿಯೆಗಳು ಹಾಗೂ ವ್ಯವಸ್ಥಾಪನಾ ಕಾರ್ಯಚಟುವಟಿಕೆಗಳ ಜೊತೆಯಲ್ಲಿ ಸಂಯೋಜಿಸಲಾಗುವುದು.

14. ಕಾರ್ಯನೀತಿಯ ಅನುಮೋದನೆ

ನಿರ್ದೇಶಕರುಗಳ ಮಂಡಳಿಯು ಕಂಪನಿಯ ಒಟ್ಟಾರೆ ಸಂಭಾವ್ಯ ಅಪಾಯಗಳ ನಿರ್ವಹಣಾ ವ್ಯವಸ್ಥೆಗೆ ಅನುಮೋದನೆಯನ್ನು ನೀಡುವ ಅಧಿಕಾರವನ್ನು ಹೊಂದಿರುತ್ತದೆ. ನಿರ್ದೇಶಕರುಗಳ ಮಂಡಳಿಯು ಈ ನಿಟ್ಟಿನಲ್ಲಿ ಅನುಸರಣಾ ಕ್ರಮಗಳನ್ನು ಮೇಲ್ವಿಚಾರಣೆ ಮಾಡುವುದು ಹಾಗೂ ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯನೀತಿ ಹಾಗೂ ಅವುಗಳಿಗೆ ಕಾಲಾನುಕಾಲಕ್ಕೆ ಮಾಡಬಹುದಾದ ಯಾವುದೇ ತಿದ್ದುಪಡಿಗಳಿಗೆ ಅನುಮೋದನೆಯನ್ನು ನೀಡುವುದು.

15. ಕಾರ್ಯನೀತಿಯ ಸಮೀಕ್ಷೆ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದಲ್ಲಿ ಸಂಭಾವ್ಯ ಅಪಾಯಗಳ ನಿರ್ವಹಣೆಗಾಗಿ ಮಾರ್ಗಸೂಚಿಗಳನ್ನು ನಿರ್ದಿಷ್ಟಪಡಿಸಿರುವಂತಹ ಕಾರ್ಯನೀತಿಯನ್ನು ಸಂಭಾವ್ಯ ಅಪಾಯಗಳ ನಿರ್ವಹಣಾ ನಿಯಂತ್ರಣಗಳು/ಪ್ರಮಾಣಕಗಳು/ ಇತರೆ ಸಂಸ್ಥೆಗಳಲ್ಲಿ ಆಚರಣೆಯಲ್ಲಿರುವಂತಹ ಅತ್ಯುತ್ತಮ ಪರಿಪಾಠಗಳ ಕಾರಣಗಳಿಂದಾಗಿ ಅಗತ್ಯತೆಗಳು ಕಂಡುಬಂದಂತೆಲ್ಲಾ ಸೂಕ್ತವಾದ ರೀತಿಯಲ್ಲಿ ಸಮೀಕ್ಷಿಸಲಾಗುವುದು.

2019–20ರ ನಿರ್ದೇಶಕರ ವರದಿಗೆ ಅನುಬಂಧ III

ಕಣ್ಗಾವಲು ಕಾರ್ಯನೀತಿ

ಪೀಠಿಕೆ	ನೈಜ/ಯಥಾರ್ಥತೆಯಿಂದ ಕೂಡಿದ ವಿಷಯಗಳನ್ನು/ಸಮಸ್ಯೆಗಳನ್ನು ನಿರ್ದಿಷ್ಟ ನಮೂನೆಯಲ್ಲಿ ವರದಿ ಮಾಡುವ ಸಲುವಾಗಿ ನಿರ್ದೇಶಕರುಗಳು ಮತ್ತು ಉದ್ಯೋಗಿಗಳಿಗಾಗಿ ಒಂದು ಕಣ್ಗಾವಲು ವ್ಯವಸ್ಥೆಯ ಸ್ಥಾಪನೆಗೆ ಕಂಪನಿಗಳ ಅಧಿನಿಯಮ, 2013 ಅನುವು ಮಾಡಿರುತ್ತದೆ. ಕಣ್ಗಾವಲು ವ್ಯವಸ್ಥೆಯು, ಈ ಶಿಳ್ಳೆ ಊದುವವರ (Whistle Blower) ಕಾರ್ಯನೀತಿಯ ಮೂಲಕ ವಿಷಯಗಳನ್ನು/ಸಮಸ್ಯೆಗಳನ್ನು ಕಡೆಕಣಿಸುವ ಅಥವಾ ಅವುಗಳನ್ನು ಬಾಹ್ಯವಾಗಿ ವ್ಯವಹರಿಸುವ ಬದಲು ಸಂಸ್ಥೆಯ ಒಳಗೇ ನೈಜ/ಯಥಾರ್ಥತೆಯಿಂದ ಕೂಡಿದ ವಿಷಯ/ಸಮಸ್ಯೆಗಳನ್ನು ಎತ್ತಿ ತೋರಿಸುವ ಸಲುವಾಗಿ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಪ್ರೋತ್ಸಾಹಿಸುವ ಮತ್ತು ಅನುಕೂಲ ಕಲ್ಪಿಸುವ ಉದ್ದೇಶವನ್ನು ಹೊಂದಿರುತ್ತದೆ.
ಅನ್ವಯಗೊಳ್ಳುವಿಕೆ	ಈ ಕಾರ್ಯನೀತಿಯು ಕಂಪನಿಯ ಎಲ್ಲಾ ಖಾಯಂ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಅನ್ವಯಗೊಳ್ಳುತ್ತದೆ (ಇಲ್ಲಿಂದ ಮುಂದಕ್ಕೆ "ಎಚ್ಚರಿಸುವವರು"/'ಶಿಳ್ಳೆ ಊದುವವರು' ಎಂಬುದಾಗಿ ಉಲ್ಲೇಖಿಸಲ್ಪಡುವ).
ಕಾರ್ಯನೀತಿಯ ವ್ಯಾಪ್ತಿ	ಈ ಕಾರ್ಯನೀತಿಯು, ಅನುಮಾನಾಸ್ಪದ ಅನೈತಿಕ ವರ್ತನೆ ಅಥವಾ ಅನುಚಿತ ಅಭ್ಯಾಸಗಳು ಅಥವಾ ತಪ್ಪುಗಳಿಂದ ಕೂಡಿದ ನಡೆ, ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿಯನ್ನು ಕಂಪನಿಯ ಗಮನಕ್ಕೆ ತರುವ ಸಲುವಾಗಿ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಮಾರ್ಗಗಳನ್ನು ಒದಗಿಸುವ ಗುರಿಯನ್ನು ಹೊಂದಿರುತ್ತದೆ. ಅಂತಹ ವಿಷಯಗಳು ಈ ಕೆಳಗಿನ ಸ್ವರೂಪದ್ದಾಗಿರಬಹುದು: ಈ ಕಾರ್ಯನೀತಿಯು, ಅನುಮಾನಾಸ್ಪದ ಅನೈತಿಕ ವರ್ತನೆ ಅಥವಾ ಅನುಚಿತ ಅಭ್ಯಾಸಗಳು ಅಥವಾ ತಪ್ಪುಗಳಿಂದ ಕೂಡಿದ ನಡೆ, ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿಯನ್ನು ಕಂಪನಿಯ ಗಮನಕ್ಕೆ ತರುವ ಸಲುವಾಗಿ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಮಾರ್ಗಗಳನ್ನು ಒದಗಿಸುವ ಗುರಿಯನ್ನು ಹೊಂದಿರುತ್ತದೆ. ಅಂತಹ ವಿಷಯಗಳು ಈ ಕೆಳಗಿನ ಸ್ವರೂಪದ್ದಾಗಿರಬಹುದು: ಎ) ಭೌತಿಕವಾಗಿ ಅಥವಾ ವಿದ್ಯುನ್ಮಾನೀಯವಾಗಿ ನಿರ್ವಹಿಸಲಾಗಿರುವ ಕಂಪನಿಯ ಮಾಹಿತಿ/ದಾಖಲೆಗಳನ್ನು ನಿಯಮಬಾಹಿರವಾಗಿ ತಿದ್ದುವುದು ಬಿ) ಸಾರ್ವಜನಿಕರ ಆರೋಗ್ಯ ಮತ್ತು ಭದ್ರತೆಗೆ ಒಂದು ಗಮನಾರ್ಹ ಮತ್ತು ನಿರ್ದಿಷ್ಟ ಅಪಾಯ ಕಂಡುಬಂದಿರುವುದು ಸಿ) ಅಧಿಕಾರಿಗಳನ್ನು ನಿಂದಿಸುವುದು ಡಿ) ಗೌಪ್ಯತೆಯ/ಸ್ವಂತಸ್ವಾಮ್ಯತೆಯ ಮಾಹಿತಿಯನ್ನು ಸೋರಿಕೆ ಮಾಡುವುದು ಇ) ನಿಯಮ ಅಥವಾ ನಿಯಂತ್ರಣಗಳ ಉಲ್ಲಂಘನೆ ಎಫ್)ಕಂಪನಿಯ ಸಂಪನ್ಮೂಲಗಳನ್ನು ಒಟ್ಟಾರೆಯಾಗಿ ವ್ಯರ್ಥ ಮಾಡುವುದು ಅಥವಾ ದುರುಪಯೋಗಪಡಿಸಿಕೊಳ್ಳುವುದು ಜಿ) ನೀತಿ ಸಂಹಿತೆಯೂ ಸೇರಿದಂತೆ ಕಾರ್ಯನೀತಿಯನ್ನು ಉಲ್ಲಂಘಿಸುವಂತಹ ಚಟುವಟಿಕೆಗಳು ಎಚ್) ನಕಲಿ ಸಹಿ ಅಥವಾ ಕಾನೂನುಬಾಹಿರವಾಗಿ ದಾಖಲೆಗಳನ್ನು ತಿದ್ದುವುದು ಐ) ಭ್ರಷ್ಟಾಚಾರ/ ಲಂಚ ಜೆ) ಹಣಕಾಸು/ಆಸ್ತಿಗಳ ದುರುಪಯೋಗ ಕೆ) ಹಣಕಾಸು ತ:ಖ್ತೆಗಳಲ್ಲಿ ವಂಚನೆ ಎಲ್. ವಾಸ್ತವಿಕ ಅಥವಾ ಅನುಮಾನಾಸ್ಪದ ವಂಚನೆ (ಮೇಲಿನ ಪಟ್ಟಿಯು ಕೇವಲ ದೃಷ್ಟಾಂತ ಘಟನೆಗಳಾಗಿರುತ್ತವೆಯೇ ಹೊರತು ಸಂಭವಿಸಬಹುದಾದ ಪರಿಪೂರ್ಣ ಘಟನೆಗಳನ್ನು ಒಳಗೊಂಡಿರುವ ಪಟ್ಟಿ ಎಂಬುದಾಗಿ ಭಾವಿಸಬಾರದು).

ವಿವರಣೆಗಳು	ಈ ಕಾರ್ಯನೀತಿಯಲ್ಲಿ, ಈ ಕೆಳಗಿನ ಪದಗಳು ಮತ್ತು ಅಭಿವ್ಯಕ್ತಪಡಿಸಿರುವಿಕೆಗಳು, ಅನ್ಯಥಾ ರೀತಿಯಲ್ಲಿ ಅಗತ್ಯತೆಯನ್ನು ಹೊಂದಿರದ ಹೊರತು, ಅವುಗಳಿಗೆ ಸಂಬಂಧಿಸಿದಂತೆ ತಿಳಿಸಿರುವ ರೀತಿಯಲ್ಲಿ ಅರ್ಥವನ್ನು ಹೊಂದಿರುತ್ತವೆ. *"ಲೆಕ್ಕಪರಿಶೋಧನಾ ಸಮಿತಿ"* ಎಂದರೆ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 177 ಹಾಗೂ ಅದರ ಅಡಿಯಲ್ಲಿ ರೂಪಿಸಿರುವಂತಹ ನಿಯಮಗಳ ಅನುಸಾರ ರಚಿಸಲಾಗಿರುವಂತಹ ಕಂಪನಿಯ ನಿರ್ದೇಶಕರುಗಳ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿ. *ಮಂಡಳಿ ಅಥವಾ ನಿರ್ದೇಶಕರುಗಳ ಮಂಡಳಿ* ಎಂದರೆ ಕಂಪನಿಯ ನಿರ್ದೇಶಕರುಗಳ ಮಂಡಳಿ. *ಕಂಪನಿ* ಎಂದರೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. *ದೂರು* ಎಂದರೆ ವಂಚನೆ, ಭ್ರಷ್ಟಾಚಾರ, ಕಳ್ಳತನ, ಹಣಕಾಸಿನ ದುರುಪಯೋಗ, ಅಥವಾ ನೀತಿ ಭ್ರಷ್ಟತೆ, ಇವುಗಳನ್ನು ಒಳಗೊಂಡಂತೆ ಆದರೆ ಇವುಗಳಿಗಷ್ಟೇ ಸೀಮಿತಗೊಳ್ಳದ ವಿಷಯಗಳ ಬಗ್ಗೆ ಒಂದು ಲಿಖಿತ ದೂರು. *ದೂರುದಾರರು* ಎಂದರೆ ಉದ್ಯೋಗದಾತ ಕಂಪನಿಯ/ಸಂಸ್ಥೆಯ ಲೆಕ್ಕಪರಿಶೋಧನಾ ಸಮಿತಿಗೆ ಕಂಪನಿಯ ಒಳಗೆ ನಡೆಯುತ್ತಿರುವ ಅನೈತಿಕ ಅಥವಾ ಅನುಚಿತ ಚಟುವಟಿಕೆಗಳ ಬಗ್ಗೆ ವರದಿ ಮಾಡುವ ಕಂಪನಿಯ ಓರ್ವ ಉದ್ಯೋಗಿ ಅಥವಾ ನಿರ್ದೇಶಕರು. *ಅನುಪಾಲನಾ ಅಧಿಕಾರಿ* ಎಂದರೆ ಕಂಪನಿಯ ಕಂಪನಿ ಕಾರ್ಯದರ್ಶಿ *ಶಿಸ್ತು ಕ್ರಮ* ಎಂದರೆ, ವೇತನವನ್ನು ಹಿಡಿದಿಟ್ಟುಕೊಳ್ಳುವುದು, ಸೇವೆಯಿಂದ ಅಮಾನತ್ತಿನಲ್ಲಿಡುವುದು ಕಂಪನಿಯ ಸೇವೆಯಿಂದ ತೆಗೆದುಹಾಕುವುದನ್ನು ಒಳಗೊಂಡಂತೆ, ಆದರೆ ಇವುಗಳಿಗಷ್ಟೇ ಸೀಮಿತಗೊಳ್ಳದಂತೆ ಕಂಪನಿಯ ಕಂಪನಿ ಕಾರ್ಯದರ್ಶಿಯವರು ತೆಗೆದುಕೊಳ್ಳಬಹುದಾದಂತಹ ಯಾವುದೇ ದಂಡನಾ ಕ್ರಮಗಳು. *ಉದ್ಯೋಗಿ* ಎಂದರೆ ಅರೆಕಾಲಿಕ ಅಥವಾ ಪೂರ್ಣಕಾಲಿಕ ಆಧಾರದ ಮೇರೆಗೆ ಕಂಪನಿಯ ಉದ್ಯೋಗದಲ್ಲಿರುವ ಯಾವುದೇ ವ್ಯಕ್ತಿ, *ತನಿಖೆ* ಎಂದರೆ ಒಂದು ದೂರಿಗೆ ಸಂಬಂಧಿಸಿದಂತೆ ತನಿಖಾ ಅಧಿಕಾರಿಯವರು ಒಂದು ಸಮಗ್ರ ಮತ್ತು ವ್ಯವಸ್ಥಿತ ರೀತಿಯಲ್ಲಿ ನಡೆಸುವಂತಹ ತನಿಖೆ. *ತನಿಖಾ ಅಧಿಕಾರಿ* ಎಂದರೆ ದೂರು ಪ್ರಕ್ರಿಯೆಯಲ್ಲಿ ವಿವರಿಸಿರುವಂತಹ ರೀತಿಯಲ್ಲಿ ದೂರಿನ ಬಗ್ಗೆ ತನಿಖೆ ನಡೆಸುವ ವ್ಯಕ್ತಿ.
ಅರ್ಥ ವ್ಯಾಖ್ಯಾನ	ಕಾರ್ಯನೀತಿಯನ್ನು ಈ ಕೆಳಗಿನಂತೆ ಅರ್ಥೈಸಿಕೊಳ್ಳುವುದು: ಕಾರ್ಯನೀತಿಯನ್ನು ಈ ಕೆಳಗಿನಂತೆ ಅರ್ಥೈಸಿಕೊಳ್ಳುವುದು: ಎ) ಈ ಮೂಲಕ ವಿವರಿಸಲ್ಪಟ್ಟಿರದ ಪದಗಳು ಕಂಪನಿಗಳ ಅಧಿನಿಯಮ, 2013 ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವಂತಹ ನಿಯಮಗಳ ಅಡಿಯಲ್ಲಿ ಕಾಲಾನುಕಾಲಕ್ಕೆ ತಿದ್ದುಪಡಿ ಮಾಡಲಾಗಿರುವಂತಹ ಅರ್ಥವನ್ನೇ ಹೊಂದಿರುತ್ತವೆ ಬಿ) ಕಾರ್ಯನೀತಿಯನ್ನು ಕಂಪನಿಯ ನಿರ್ದೇಶಕರುಗಳ ಮಂಡಳಿಯು ಮಾತ್ರ ಮಾರ್ಪಾಡು ಮಾಡಬಹುದು ಹಾಗೂ ಸಿ) ಸಂದರ್ಭವು ಅನ್ಯಥಾ ರೀತಿಯಲ್ಲಿ ಅಗತ್ಯತೆಯನ್ನು ಹೊಂದಿರದ ಹೊರತು, ಎಲ್ಲಾ ಪದಗಳೂ (ಲಿಂಗ–ನಿರ್ದಿಷ್ಟವಾಗಿರಲಿ ಅಥವಾ ಲಿಂಗ ತಟಸ್ಥವಾಗಿರಲಿ), ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗ ಮತ್ತು ಏಕವಚನವನ್ನು ಆಮದು ಮಾಡಿಕೊಳ್ಳುವ ಪದಗಳು ಬಹುವಚನವನ್ನು ಮತ್ತು ವಿಪರ್ಯಯಗಳನ್ನು ಒಳಗೊಂಡಿರುತ್ತವೆ ಎಂಬುದಾಗಿ ಭಾವಿಸತಕ್ಕದ್ದು.

ದೂರಿನ ಸಂಸ್ಕರಣೆ	ಎ. ಕಂಪನಿಯ ಓರ್ವ ನಿರ್ದೇಶಕರು ಅಥವಾ ಓರ್ವ ಉದ್ಯೋಗಿಯು ಯಾವುದೇ ವಿಷಯದ ಬಗ್ಗೆ ದೂರನ್ನು ಸಲ್ಲಿಸಬಹುದು. ಬಿ. ದೂರು ಲಿಖಿತ ನಮೂನೆಯಲ್ಲಿರತಕ್ಕದ್ದು ಮತ್ತು ಈ ಕೆಳಗಿನ ಅಂಶಗಳನ್ನು ಒಳಗೊಂಡಿರತಕ್ಕದ್ದು: i. ದೂರಿನಲ್ಲಿ ಎತ್ತಲಾಗಿರುವ ಕಳವಳಿ/ ಚಿಂತನೆಯ ಹಿನ್ನೆಲೆ ಮತ್ತು ವೃತ್ತಾಂತ; ii. ದಿನಾಂಕಗಳು, ಸ್ಥಳಗಳು ಮತ್ತು ಹೆಸರುಗಳನ್ನು ಒಳಗೊಂಡಂತೆ ನಿರ್ದಿಷ್ಟ ದೃಷ್ಟಾಂತಗಳು; iii. ಓರ್ವ ನಿರ್ದಿಷ್ಟ ಉದ್ಯೋಗಿ/ನಿರ್ದೇಶಕರ ಹೆಸರನ್ನು ತಿಳಿಸುವುದಕ್ಕೆ ಕಾರಣ; ಹಾಗೂ iv. ದೂರಿನ ವಿಷಯದಲ್ಲಿ ಸಮರ್ಪಕ ಕಾರಣಗಳು ಮತ್ತು ಸಾಕ್ಷಾಧಾರಗಳು. ಸಿ. ದೂರನ್ನು ಈ ಕೆಳಗಿನ ರೀತಿಯಲ್ಲಿ ನಿರ್ವಹಿಸಬಹುದು: i. ದೂರು ಪ್ರಧಾನ ವ್ಯವಸ್ಥಾಪಕರು ಅಥವಾ ನಿರ್ದೇಶಕರುಗಳವರೆಗೆ ಸಂಬಂಧಿಸಿದ್ದಲ್ಲಿ ಲೆಕ್ಕಪರಿಶೋಧನಾ ಸಮಿತಿಯ ಅಧ್ಯಕ್ಷರು ನಾಮನಿರ್ದೇಶನ ಮಾಡುವ ವ್ಯಕ್ತಿಯಿಂದ ತನಿಖೆ. ii. ದೂರು ಪ್ರಧಾನ ವ್ಯವಸ್ಥಾಪಕರವರೆಗಿನ ಶ್ರೇಣಿಯ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಆಗಿದ್ದಲ್ಲಿ, ಅನುಪಾಲನಾ ಅಧಿಕಾರಿಯವರಿಂದ ಅಥವಾ ಲೆಕ್ಕಪರಿಶೋಧನಾ ಸಮಿತಿಯು ನಾಮನಿರ್ದೇಶನ ಮಾಡುವ ಓರ್ವ ವ್ಯಕ್ತಿಯಿಂದ ತನಿಖೆ. ಆದಾಗ್ಯೂ, ಸಂದರ್ಭಗಳು ಅಂತಹ ಅಗತ್ಯತೆಯನ್ನು ಹೊಂದಿದ್ದಲ್ಲಿ, ಉದ್ಯೋಗಿಯು ನೇರವಾಗಿ ಲೆಕ್ಕಪರಿಶೋಧನಾ ಸಮಿತಿಯ ಅಧ್ಯಕ್ಷರಿಗೆ ದೂರನ್ನು ಸಲ್ಲಿಸಬಹುದು. ಡಿ. ಅಗತ್ಯ ಬಿದ್ದಲ್ಲಿ ತನಿಖಾ ಅಧಿಕಾರಿಯವರು ದೂರಿನ ಬಗ್ಗೆ ಸರ್ಕಾರಿ ಪ್ರಾಧಿಕಾರಕ್ಕೆ/ಅಧಿಕಾರಿಯವರಿಗೆ ಸೂಚಿಸಬಹುದು. ಇ. ದೂರನ್ನು ಯಾರ ಬಗ್ಗೆ ಕೊಡಲಾಗಿದೆ ಎಂಬುದನ್ನು ಅವಲಂಭಿಸಿದಂತೆ ದೂರುದಾರರು ದೂರನ್ನು ಮೇಲೆ ತಿಳಿಸಿದ ಯಾವುದೇ ವ್ಯಕ್ತಿಗಳಿಗೆ ಸಲ್ಲಿಸಬಹುದು, ಒಂದು ನಿರ್ದಿಷ್ಟ ದೂರಿನ ಬಗ್ಗೆ ಯಾವುದೇ ತನಿಖಾ ಅಧಿಕಾರಿಯವರು ಯಾವುದೇ ಹಿತಾಸಕ್ತಿಯ ಸಂಘರ್ಷವನ್ನು ಎದುರಿಸುತ್ತಿದ್ದಲ್ಲಿ, ಅವರು ಅಂತಹ ತನಿಖೆಯಲ್ಲಿ ಭಾಗವಹಿಸಕೂಡದು. ಎಫ್. ದೂರನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳ ಒಳಗೆ ತನಿಖಾ ಅಧಿಕಾರಿಯವರು ದೂರುದಾರರಿಗೆ ಪತ್ರ ಬರೆಯತಕ್ಕದ್ದು: i. ದೂರನ್ನು ಸ್ವೀಕರಿಸಲಾಗಿದೆ ಎಂಬುದಾಗಿ ಸ್ವೀಕೃತಿಯನ್ನು ನೀಡತಕ್ಕದ್ದು; ii. ದೂರಿನ ಬಗ್ಗೆ ಪರಿಶೀಲಿಸುವ ಸಲುವಾಗಿ ಅಗತ್ಯವಿರುವ ಅಂದಾಜು ಕಾಲವಧಿಯನ್ನು ಸೂಚಿಸಿದಂತೆ ಮತ್ತು iii.ಅಂತಿಮ ಪ್ರತಿಕ್ರಿಯೆಗೆ ಅಗತ್ಯವಿರುವ ಕಾಲಮಿತಿಯ ಅಂದಾಜನ್ನು ನೀಡತಕ್ಕದ್ದು

	ಜಿ. ತನಿಖಾ ಅಧಿಕಾರಿಯವರು, ಸಾಕ್ಷಾಧಾರಗಳು ಮತ್ತು ಮಾಹಿತಿಯ ಸಂಗ್ರಹಣೆಗಾಗಿ ದೂರುದಾರರೊಂದಿಗೆ ಒಂದು ಭೇಟಿಯನ್ನು ವ್ಯವಸ್ಥೆ ಮಾಡಬಹುದು. ಎಚ್. ತನಿಖಾ ಅಧಿಕಾರಿಯವರು ಈ ಕೆಳಗಿನ ಕರ್ತವ್ಯಗಳನ್ನು ಹೊಂದಿರುವರು: i. ಒಂದು ಸೂಕ್ತ ತನಿಖೆಯನ್ನು ನಡೆಸುವುದು; ii. ದೂರಿಗೆ ಸಂಬಂಧಿಸಿದಂತೆ ಸಾಕ್ಷಾಧಾರಗಳನ್ನು ಸಂಗ್ರಹಿಸುವುದು; iii. ಅಗತ್ಯ ತನಿಖೆಯನ್ನು ನಡೆಸಿದನಂತರ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವುದು; iv. ಕಾನೂನಾತ್ಮಕ ಅಡಚಣೆಗಳ ಷರತ್ತಿಗೆ ಒಳಪಟ್ಟಂತೆ, ನಡೆಸಲಾದ ತನಿಖೆಯ ಫಲಿತಾಂಶವನ್ನು ತಿಳಿಸುವುದು. v. ಅಗತ್ಯಬಿದ್ದಲ್ಲಿ, ದೂರನ್ನು ಯಾರಾದರೊಬ್ಬರು ತಮಗಿಂತ ಉನ್ನತ ಅಧಿಕಾರಿಯವರಿಗೆ ವಹಿಸುವುದು.
ರಕ್ಷಣೆ	ದೂರುದಾರರ ವಿರುದ್ಧವಾಗಿ ಯಾವುದೇ ತಾರತಮ್ಯ, ಕಿರುಕುಳ, ಬಲಿಪಶು ಮಾಡುವಂತಿಲ್ಲ/ತೊಂದರೆಗೆ ಸಿಲುಕಿಸುವಂತಿಲ್ಲ, ಉದ್ಯೋಗಿಗಳಿಗೆ ಸಂಬಂಧಿಸಿದಂತೆ, ಸೇಡು ತೀರಿಸಿಕೊಳ್ಳುವುದು, ಹೆದರಿಸುವುದು ಅಥವಾ ಬೆದರಿಸುವುದು ಅಥವಾ ಸೇವೆಯಿಂದ ತೆಗೆದುಹಾಕುವುದು/ಅಮಾನತ್ತಿನಲ್ಲಿಡುವುದು, ಶಿಸ್ತು ಕ್ರಮ, ವರ್ಗಾವಣೆ, ಹಿಂಬಡ್ತಿ ನೀಡುವುದು, ಮುಂಬಡ್ತಿಯಿಂದ ವಂಚಿಸುವುದು ಅಥವಾ ಆ ರೀತಿಯ ಯಾವುದೇ ಅನುಚಿತವಾದಂತಹ ಉದ್ಯೋಗ ಪರಿಪಾಠಗಳನ್ನು ಮಾಡುವಂತಿಲ್ಲ. ತನಿಖೆಯ ಅಥವಾ ನಿಯಮನಿಬಂಧನೆಗಳ ಅಗತ್ಯತೆಯ ಷರತ್ತಿಗೆ ಒಳಪಟ್ಟಂತೆ ದೂರುದಾರರ ಗುರುತುಗಳನ್ನು ಮತ್ತು ವಿಷಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಗೋಪ್ಯತೆಯಿಂದ ಇಡತಕ್ಕದ್ದು, ತನಿಖಾ ಅಧಿಕಾರಿಯವರು, ಎತ್ತಲಾಗಿರುವ ವಿಷಯದ ಬಗ್ಗೆ ತನಿಖೆಯನ್ನು ನಡೆಸತಕ್ಕದ್ದು ಹಾಗೂ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ಇನ್ನಿತರ ವಿಷಯಗಳ ಜೊತೆಗೆ ಈ ಕೆಳಗಿನ ಅಂಶಗಳನ್ನು ಒಳಗೊಂಡಂತೆ ಸೂಕ್ತ ಕ್ರಮವನ್ನು ವ್ಯವಸ್ಥಾಪನೆಗೆ ಶಿಫಾರಸು ಮಾಡತಕ್ಕದ್ದು: i. ಉದ್ಯೋಗಿಯು ಯಾವ ಹುದ್ದೆಯಲ್ಲಿದ್ದರೋ ಅದೇ ಹುದ್ದೆಗೆ ಅಥವಾ ಅದಕ್ಕೆ ಸಮನಾದ ಹುದ್ದೆಗೆ ಪುನರ್–ನೇಮಕ ಮಾಡುವುದು ಅಥವಾ ii. ಕಳೆದುಕೊಂಡಿರುವ ಸಂಬಳ, ಸಂಭಾವನೆ ಅಥವಾ ಯಾವುದೇ ಇನ್ನಿತರ ಪ್ರಯೋಜನಗಳು, ಇತ್ಯಾದಿಗಳ ಪರಿಹಾರಕ್ಕಾಗಿ ಆದೇಶ.
ಅಪಾದನೆ	ಒಂದು ಸಮರ್ಪಕ ತನಿಖೆಗೆ ಅನುಕೂಲ ಕಲ್ಪಿಸುವ ಸಲುವಾಗಿ ಅಪಾದನೆಗಳನ್ನು ಮಾಡುವ ಓರ್ವ ವ್ಯಕ್ತಿಯು ಆತನ/ಆಕೆಯ ಗುರುತನ್ನು ಬಹಿರಂಗಪಡಿಸುವ ಅಗತ್ಯತೆಯನ್ನು ಈ ಕಾರ್ಯನೀತಿಯು ಹೊಂದಿರುತ್ತದೆ.
ಗೋಪ್ಯತೆ	ಈ ಕಾರ್ಯನೀತಿಯ ಅಡಿಯಲ್ಲಿನ ಎಲ್ಲಾ ಬಹಿರಂಗಪಡಿಸಿರುವಿಕೆಗಳನ್ನೂ ಕಂಪನಿಯು ಒಂದು ಸೂಕ್ಷ್ಮ ರೀತಿಯಲ್ಲಿ ಪರಿಗಣಿಸುತ್ತದೆ ಮತ್ತು ದೂರುದಾರರ ಗುರುತನ್ನು ಗೋಪ್ಯವಾಗಿಡುವ ಪ್ರಯತ್ನಗಳನ್ನು ಮಾಡುತ್ತದೆ. ಆದಾಗ್ಯೂ, ತನಿಖಾ ಪ್ರಕ್ರಿಯೆಯು ಮಾಹಿತಿಯ ಮೂಲವನ್ನು ಅನಿವಾರ್ಯವಾಗಿ ಬಹಿರಂಗಪಡಿಸಬಹುದು ಹಾಗೂ ಕಾನೂನು ಪ್ರಕ್ರಿಯೆಯನ್ನು ನಡೆಸುವ ಅಗತ್ಯತೆಯು ಬಿದ್ದಲ್ಲಿ ಗೋಪ್ಯತೆಯನ್ನು ಕಾಪಾಡಲು ಸಾಧ್ಯವಾಗದಂತಹ ಸಂದರ್ಭದಲ್ಲಿ ದೂರುದಾರರು ಒಂದು ಹೇಳಿಕೆಯನ್ನು ನೀಡುವ ಅಗತ್ಯತೆಯು ಉಂಟಾಗಬಹುದು
ಸುಳ್ಳು / ದುರುದ್ದೇಶದಿಂದ ಕಿರುಕುಳ ಕೊಡುವ ಉದ್ದೇಶದ ಅಪಾದನೆಗಳು	ಈ ಕಾರ್ಯನೀತಿಯ ಅಡಿಯಲ್ಲಿ ರಕ್ಷಣೆ ಎಂದರೆ, ದೂರುದಾರರು ತಾವು ಮಾಡುತ್ತಿರುವ ಅಪಾದನೆಯು ಸುಳ್ಳು ಎಂಬುದನ್ನು ಅರಿತಿದ್ದೂ ಸಹ ದುರುದ್ದೇಶದಿಂದಲೇ ಕಿರುಕುಳ ಕೊಡುವ ಉದ್ದೇಶದಿಂದ ನೀಡುವ ಸುಳ್ಳು ಅಥವಾ ನಕಲಿ ಅಪಾದನೆಗಳಿಂದ ಉದ್ಭವಿಸುವ ಶಿಸ್ತು ಕ್ರಮಗಳಿಂದ ರಕ್ಷಣೆ ಎಂಬುದಾಗಿ ಅರ್ಥೈಸುವುದಿಲ್ಲ. ಓರ್ವ ನಿರ್ದೇಶಕರು ಅಥವಾ ಓರ್ವ ಉದ್ಯೋಗಿಯು ವಿವೇಚನಾರಹಿತ ನಿಷ್ಪ್ರಯೋಜಕ ದೂರುಗಳನ್ನು ಪುನ:ಪುನ: ನೀಡಿದಲ್ಲಿ, ಲೆಕ್ಕಪರಿಶೋಧನಾ ಸಮಿತಿಯು ಸಂಬಂಧಿತ ನಿರ್ದೇಶಕರು ಅಥವಾ ಉದ್ಯೋಗಿಯ ವಿರುದ್ಧವಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದು.

ಕಾರ್ಯನೀತಿಯ ಅಡಿಯಲ್ಲಿ ವ್ಯಾಪಿಸಿರದ ವಿಷಯಗಳು/ ಸಮಸ್ಯೆಗಳು	ಉದ್ಯೋಗ ಸಂಬಂಧಿತ ಅಥವಾ ಇತರೆ ವೈಯಕ್ತಿಕ ಕುಂದುಕೊರತೆಗಳನ್ನು ಈ ಕಾರ್ಯನೀತಿಯಿಂದ ಹೊರಗಿಡಲಾಗಿದೆ. ಈಗಾಗಲೇ ಚರ್ಚಿಸಲಾಗಿರುವಂತಹ ಅಥವಾ ಯಾವುದೇ ಶಿಸ್ತು ಕ್ರಮ ಅಥವಾ ಕಂಪನಿಯ ಇತರೆ ಕಾರ್ಯವಿಧಾನಗಳಿಗೆ ಸಂಬಂಧಿತ ಯಾವುದೇ ವಿಷಯಗಳು ಈ ಕಾರ್ಯನೀತಿಯ ಅಡಿಯಲ್ಲಿ ಬರುವುದಿಲ್ಲ.
ಕಾರ್ಯನೀರ್ತಿಯನ್ನು ತಿದ್ದುಪಡಿ ಮಾಡುವ ಅಧಿಕಾರ	ಕಂಪನಿಯ ನಿರ್ದೇಶಕರುಗಳ ಮಂಡಳಿಯು ಕಾರ್ಯನೀತಿಯನ್ನು ಕಾಲಾನುಕಾಲಕ್ಕೆ ತಿದ್ದುಪಡಿ ಮಾಡಬಹುದು.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ,

ಸಹಿ/–

ಬಿ.ಎಸ್. ಯಡಿಯೂರಪ್ಪ

ಅಧ್ಯಕ್ಷರು

ಸ್ಥಳ: ಬೆಂಗಳೂರು

ದಿನಾಂಕ: 22ನೇ ಡಿಸೆಂಬರ್ 2020

ಉದ್ದೇಶಪೂರ್ವಕವಾಗಿ ಖಾಲಿ ಬಿಡಲಾಗಿದೆ.

ಕಾರ್ಯದರ್ಶೀಯ ಲೆಕ್ಕಪರಿಶೋಧನಾ ವರದಿ
31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ

[ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 204 (1) ಹಾಗೂ ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಬಳ/ಸಂಭಾವನೆ ನಿಯಮಗಳು, 2014ರ ನಿಯಮ ಸಂಖ್ಯೆ 9ರ ಅನುಸರಣೆಯಂತೆ.]

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಸದಸ್ಯರಿಗೆ

1. **ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದಿಂದ** ಅನ್ವಯಗೊಳ್ಳುವ ಶಾಸನಬದ್ಧ ಅನುವುಗಳ ಅನುಪಾಲನೆ ಮತ್ತು ಸಾಂಸ್ಥಿಕ ಉತ್ತಮ ಪರಿಪಾಠಗಳಿಗೆ ಬದ್ಧವಾಗಿರುವುದಕ್ಕೆ ಸಂಬಂಧಿಸಿದಂತೆ ಕಾರ್ಯದರ್ಶೀಯ ಲೆಕ್ಕಪರಿಶೋಧನೆಯನ್ನು ನಾವು ನಡೆಸಿರುವೆವು. ಸಾಂಸ್ಥಿಕ ನಡವಳಿಕೆಗಳು/ ಶಾಸನಬದ್ಧ ಅನುಪಾಲನಾ ಕ್ರಮಗಳ ಮೌಲ್ಯಮಾಪನ ಮಾಡುವ ಸಲುವಾಗಿ ನನಗೆ ಒಂದು ನ್ಯಾಯಸಮ್ಮತ ಆಧಾರವನ್ನು ನೀಡುವ ರೀತಿಯಲ್ಲಿ ಹಾಗೂ ಅದರ ಮೇಲೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ರೀತಿಯಲ್ಲಿ ನಾವು ಕಾರ್ಯದರ್ಶೀಯ ಲೆಕ್ಕಪರಿಶೋಧನೆಯನ್ನು ನಡೆಸಿರುವೆನು.

2. ಕಂಪೆನಿಯ ಲೆಕ್ಕಪುಸ್ತಕಗಳು, ಕಾಗದಪತ್ರಗಳು ನಡೆವಳಿಗಳ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಲಾಗಿದ್ದ ಸಲ್ಲಿಕೆಗಳು ಹಾಗೂ ಕಂಪೆನಿಯು ನಿರ್ವಹಿಸಿದ್ದಂತಹ ಇನ್ನಿತರೆ ದಾಖಲೆಗಳನ್ನು ನಾವು ಪರಿಶೀಲನೆ ಮಾಡಲಾದ ಆಧಾರದ ಮೇರೆಗೆ ಹಾಗೂ ಅಲ್ಲದೆಯೇ, ಕಾರ್ಯದರ್ಶೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಕಂಪೆನಿ, ಅದರ ಅಧಿಕಾರಿಗಳು, ಪ್ರತಿನಿಧಿಗಳು, ಅಧಿಕೃತ ಪ್ರತಿನಿಧಿಗಳು ಒದಗಿಸಿದಂತಹ ಮಾಹಿತಿಯ ಆಧಾರದ ಮೇರೆಗೆ ಹಾಗೂ ಅನುಬಂಧವಾಗಿ ಈ ವರದಿಗೆ ಲಗತ್ತಿಸಲಾಗಿರುವ ನಮ್ಮ ಪ್ರತ್ಯೇಕ ಪತ್ರದ ಷರತ್ತಿಗೆ ಒಳಪಟ್ಟಂತೆ, ನಮ್ಮ ಅಭಿಪ್ರಾಯದಲ್ಲಿ, ಕಂಪೆನಿಯು 31 ಮಾರ್ಚ್ 2019ಕ್ಕೆ ಅಂತ್ಯಗೊಂಡಂತಹ ಹಣಕಾಸು ಸಾಲನ್ನು ವ್ಯಾಪಿಸಿದ್ದಂತಹ ಲೆಕ್ಕಪರಿಶೋಧನಾ ಅವಧಿಯಲ್ಲಿ ಈ ಕೆಳಗೆ ಪಟ್ಟಿ ಮಾಡಲಾಗಿರುವ ಶಾಸನಬದ್ಧ ಅನುವುಗಳ ಜೊತೆಯಲ್ಲಿ ಅನುಪಾಲನಾ ಕ್ರಮಗಳನ್ನು ತೆಗೆದುಕೊಂಡಿರುವುದು ಹಾಗೂ ಇಲ್ಲಿಂದ ಮುಂದಕ್ಕೆ ಮಾಡಲಾಗಿರುವ ವರದಿಯಲ್ಲಿ ತಿಳಿಸಲಾಗಿರುವ ರೀತಿಯಲ್ಲಿ ಹಾಗೂ ಅಷ್ಟರ ಮಟ್ಟಿಗೆ ಕಂಪೆನಿಯು ಒಂದು ಸಮರ್ಪಕ ಮಂಡಳಿ–ಪ್ರಕ್ರಿಯೆಗಳನ್ನು ಹಾಗೂ ಅನುಸರಣಾ/ ಅನುಪಾಲನಾ ವ್ಯವಸ್ಥೆಯನ್ನು ಹೊಂದಿರುವುದು ಎಂಬುದಾಗಿ ನಾವು ಈ ಮೂಲಕ ವರದಿಯನ್ನು ಮಾಡುತ್ತಿರುವೆವು.

3. 31 ಮಾರ್ಚ್ 2019ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ ಕಂಪೆನಿಯು ನಿರ್ವಹಿಸಿದ್ದ ಲೆಕ್ಕಪತ್ರ ಪುಸ್ತಕಗಳು, ಕಾಗದ

   ಪತ್ರಗಳು, ನಡೆವಳಿಗಳ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಲಾಗಿದ್ದ ಸಲ್ಲಿಕೆಗಳನ್ನು ಈ ಕೆಳಗಿನ ಅನುವುಗಳ ಅನುಸಾರ ನಾನು ಪರಿಶೀಲಿಸಿರುವೆನು:

   (ಎ) ಕಂಪೆನಿಗಳ ಅಧಿನಿಯಮ, 2013 (ಅಧಿನಿಯಮ) ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು;

   (ಬಿ) ಭದ್ರತೆಗಳ ಗುತ್ತಿಗೆಗಳು (ನಿಯಂತ್ರಣ) ಅಧಿನಿಯಮ, 1956 ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು;

   (ಸಿ) ಉಗ್ರಾಣ/ಭಂಡಾರಗಳ (ಡಿಪಾಸಿಟರೀಸ್) ಅಧಿನಿಯಮ, 1996 ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಂತ್ರಣಗಳು ಮತ್ತು ಉಪ–ನಿಯಮಗಳು;

   (ಡಿ) ವಿದೇಶಿ ನೇರ ಹೂಡಿಕೆ, ಕಡಲಾಚೆಯ ನೇರ ಹೂಡಿಕೆ ಮತ್ತು ವಿನಿಮಯ ವಾಣಿಜ್ಯೀಯ ಸಾಲಗಳು, ಇವುಗಳಷ್ಟರ ಮಟ್ಟಿಗೆ ವಿದೇಶಿ ವಿನಿಮಯ ನಿರ್ವಹಣಾ ಅಧಿನಿಯಮ, 1999 ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು ಮತ್ತು ನಿಯಂತ್ರಣಗಳು;

   (ಇ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ (ಖರೀದಿಗಳು ಮತ್ತು ಸೇವೆಗಳು) ಪಾರದರ್ಶಕತೆ ಅಧಿನಿಯಮ, 1999 ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು;

4. ನಿರ್ದೇಶಕರುಗಳ ಮಂಡಳಿಯ ಮತ್ತು ಸರ್ವಸದಸ್ಯರುಗಳ ಸಭೆಯನ್ನು ನಡೆಸಬೇಕಾಗಿರುವ ಅಗತ್ಯತೆಗಳ ಬಗ್ಗೆ ಕಂಪೆನಿ ಕಾರ್ಯದರ್ಶಿಗಳ ಸಂಸ್ಥೆಯು ನೀಡಿರುವ ಕಾರ್ಯದರ್ಶೀಯ ಮಾನದಂಡಗಳ ಷರತ್ತುಗಳ ಅನ್ವಯಗೊಳ್ಳುವ ಷರತ್ತುಗಳನ್ನು ಪಾಲಿಸಿರುವ ಬಗ್ಗೆಯೂ ಕೂಡ ನಾನು ಪರಿಶೀಲಿಸಿದ್ದೇನೆ.

5. ಪ್ರತ್ಯಕ್ಷ/ನೇರ ತೆರಿಗೆ ಪರೋಕ್ಷ/ಅಪ್ರತ್ಯಕ್ಷ ತೆರಿಗೆ ನಿಯಮಗಳು ಮುಂತಾದ ಅನ್ವಯಗೊಳ್ಳುವ ಹಣಕಾಸು ಸಂಬಂಧಿತ ನಿಯಮಗಳ ಅನುವುಗಳನ್ನು ಕಂಪೆನಿಯು ಅನುಸರಿಸಿರುವುದರ

ಬಗ್ಗೆ ಅವುಗಳು ಶಾಸನಬದ್ಧ ಹಣಕಾಸು ಲೆಕ್ಕಪರಿಶೋಧನೆಯ ಮತ್ತು ಅದಕ್ಕಾಗಿ ನೇಮಕಗೊಳಿಸಲ್ಪಡುವ ವೃತ್ತಿಪರರ ಸಮೀಕ್ಷೆಗೆ ಒಳಪಡುವುದರಿಂದ ನಾನು ಪರಿಶೀಲಿಸಿರುವುದಿಲ್ಲ.

6. ಸಮೀಕ್ಷೆಯ ಅಡಿಯಲ್ಲಿನ ಅವಧಿಯಲ್ಲಿ ಕಂಪೆನಿಯು ಮೇಲೆ ತಿಳಿಸಲಾದ ಅಧಿನಿಯಮಗಳು, ನಿಯಮಗಳು, ನಿಯಂತ್ರಣಗಳು, ಮಾರ್ಗಸೂಚಿಗಳು, ಇತ್ಯಾದಿಗಳ ಅನುವುಗಳನ್ನು ಕಂಪೆನಿಯು ಈ ಕೆಳಗಿನ ಕಂಡಿಕೆ 8ರಲ್ಲಿ ತಿಳಿಸಲಾಗಿರುವ ಷರತ್ತು/ಸೀಮಿತಗಳಿಗೆ ಒಳಪಟ್ಟಂತೆ ಅನುಸರಿಸಿರುವುದು.

7. ಟಿಪ್ಪಣಿ 8ರಲ್ಲಿ ತಿಳಿಸಲಾಗಿರುವ ಷರತ್ತು/ ಪರಿಮಿತಿಗಳಿಗೆ ಒಳಪಟ್ಟಂತೆ ನಾವು ಈ ಕೆಳಗಿನಂತೆ ವರದಿ ಮಾಡುತ್ತಿರುವೆವು.

7.1 (ಎ) ಪ್ರಸಕ್ತ ಸಾಲಿನಲ್ಲಿ ನಿರ್ದೇಶಕರುಗಳ ಮತ್ತು ಸಮಿತಿ ಸಭೆಗಳಿಗಾಗಿ ನೋಟೀಸುಗಳನ್ನು ಸಮರ್ಪಕ ಮುಂಚಿತವಾಗಿ ನೀಡಲಾಗಿರುವುದು; ಅಂತಹ ನೋಟೀಸುಗಳು ವಿಷಯಸೂಚಿ ಬಾಬುಗಳ ಮೇಲೆ ಸವಿವರ ಟಿಪ್ಪಣಿಗಳು ಮತ್ತು ಸಂಬಂಧಿತ ಸಭೆಗಳ ಕರಡು ನಡೆವಳಿಗಳನ್ನು ಲಗತಿಸಲ್ಪಟ್ಟಿದ್ದವು, ಕಂಪೆನಿಯು ಸಭೆಯ ಮುಂಚಿತವಾಗಿ ವಿಷಯಸೂಚಿಯಲ್ಲಿರುವ ಬಾಬುಗಳ ಮೇಲೆ ಅಗತ್ಯವಿರುವ ಮಾಹಿತಿ ಮತ್ತು ಸ್ಪಷ್ಟನೆಗಳನ್ನು ಕೋರಲು ಮತ್ತು ಅವುಗಳನ್ನು ಪಡೆದುಕೊಳ್ಳಲು ಹಾಗೂ ಸಭೆಯಲ್ಲಿ ಒಂದು ಅರ್ಥಪೂರ್ಣ ಭಾಗವಹಿಸುವಿಕೆಯು ಸಾಧ್ಯವಾಗುವಂತಹ ಒಂದು ವ್ಯವಸ್ಥೆಯನ್ನು ಕಂಪೆನಿಯು ಹೊಂದಿರುವುದು. ಅಸಮ್ಮತಿ ಸೂಚಿಸುವ ಸದಸ್ಯರುಗಳ ಅಭಿಪ್ರಾಯಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ನಡೆವಳಿಗಳ ಒಂದು ಭಾಗವಾಗಿ ದಾಖಲಿಸುವುದರ ಜೊತೆಗೆ ಬಹುಮತದ ಅಭಿಪ್ರಾಯಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಮುಂದಕ್ಕೆ ತೆಗೆದುಕೊಂಡು ಹೋಗಲಾಗಿದ್ದಿತು.

(ಬಿ) ಕಂಪೆನಿಯು, ಸದಸ್ಯರುಗಳ ಮತ್ತು ನಿರ್ದೇಶಕರುಗಳ ಸಭೆಗಳನ್ನು ಕರೆಯುವಲ್ಲಿ ಮತ್ತು ನಡೆಸುವಲ್ಲಿ ಸಮರ್ಪಕ ಮಂಡಳಿ ಪ್ರಕ್ರಿಯೆಗಳನ್ನು ಅನುಸರಿಸಿದ್ದಿತು; ಕಂಪೆನಿಯು ಸದಸ್ಯರುಗಳ ಸಾಮಾನ್ಯ ಸಭೆಗಳ ನಡೆವಳಿಗಳನ್ನು ದಾಖಲಿಸುವ ಸಲುವಾಗಿ ಸಮರ್ಪಕ ಪುಸ್ತಕಗಳನ್ನು ನಿರ್ವಹಿಸಿರುವುದು, ನಿರ್ದೇಶಕರುಗಳ ಮಂಡಳಿ ಮತ್ತು ನಿರ್ದೇಶಕರುಗಳ ಸಮಿತಿಯ ಸಭೆಗಳ ನಡೆವಳಿಗಳನ್ನು, ಇ–ಮತ ಚಲಾವಣೆಯ ಮೂಲಕ ಅನುಮೋದಿಸಲಾದ ನಿರ್ಣಯಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಸಾಮಾನ್ಯ ಸಭೆಗಳ ನಡೆವಳಿಗಳ ಪುಸ್ತಕದಲ್ಲಿ ದಾಖಲಿಸಲಾಗಿದ್ದಿತು.

7.2 ಸಮೀಕ್ಷೆಯ ಅಡಿಯಲ್ಲಿನ ಅವಧಿಯಲ್ಲಿ ನಡೆಯಲಾದ ನಿರ್ದೇಶಕರುಗಳ ಮಂಡಳಿಯ ಸಂಯೋಜನೆಯಲ್ಲಿನ ಬದಲಾವಣೆಗಳು ಅಧಿನಿಯಮದ ಅನುವುಗಳ ಅನುಸಾರವೇ ಆಗಿರುವುದು.

7.3 (i) ಪ್ರಸಕ್ತ ಸಾಲಿನಲ್ಲಿ ಕಂಪನಿಯು ಪ್ರತಿಯೊಂದು ಷೇರಿಗೂ ರೂ.1,000/–ದಂತೆ 1,15,58,687ರಷ್ಟು ಸಂಖ್ಯೆಯ ಷೇರುಗಳನ್ನು ನೀಡಿರುವುದು. ಈ ಬಂಡವಾಳ ಷೇರುಗಳ ನೀಡಿಕೆಯ ಹೊರತಾಗಿ, ಷೇರುಗಳ ಯಾವುದೇ ಸಾರ್ವಜನಿಕ, ಆಧ್ಯತೆಯ ನೀಡಿಕೆಗಳು ಅಥವಾ ಡಿಬೆಂಚರುಗಳು ಅಥವಾ ಸ್ವೆಟ್ ಈಕ್ವಿಟಿಗಳು ಇರಲಿಲ್ಲ;

(ii) ಭದ್ರತೆಗಳನ್ನು ಹಿಂಖರೀದಿಸುವ ಆಧಾರದ ಮೇರೆಗೆ ಖರೀದಿಸಿದ ದೃಷ್ಟಾಂತಗಳು ಇರಲಿಲ್ಲ.

(iii) ವಿಲೀನ, ಏಕೀಕರಣ, ಪುನರ್–ನಿರ್ಮಾಣ, ಇತ್ಯಾದಿಗಳ ನಿದರ್ಶನಗಳು ಇರಲಿಲ್ಲ;

(iv) ಕಂಪೆನಿಯು ಯಾವುದೇ ವಿದೇಶಿ ತಂತ್ರಜ್ಞಾನ ಸಹಯೋಗದೊಂದಿಗೆ ಯಾವುದೇ ಒಡಂಬಡಿಕೆಯನ್ನೂ ಮಾಡಿಕೊಂಡಿರುವುದಿಲ್ಲ.

8. ಪರಿಮಿತಿಗಳು :

8.1) **ಕಂಪನಿಯು, ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 173ರ ಅನುವುಗಳನ್ನು ಹಾಗೂ ಅಲ್ಲದೆಯೇ ಕಾರ್ಯದರ್ಶೀಯ ಮಾನದಂಡ–1ರ ಅನುವುಗಳನ್ನು ಅನುಸರಿಸಿರುವುದಿಲ್ಲ.**

ಎ) ಕಂಪನಿಯು, 2018 ಕ್ಯಾಲೆಂಡರ್ ವರ್ಷದಲ್ಲಿ ಕೇವಲ ಮೂರು ಸಭೆಗಳನ್ನು ನಡೆಸಿದ್ದಿತು (ನಿರ್ದೇಶಕರುಗಳ ಮಂಡಳಿಯ ಕನಿಷ್ಠ ನಾಲ್ಕು ಸಭೆಗಳಿಗೆ ಬದಲಾಗಿ) ನಡೆಸಲಾದ ನಿರ್ದೇಶಕರುಗಳ ಮಂಡಳಿಯ ಎರಡು ಸಭೆಗಳ ನಡುವೆ ಒಂದು ನೂರ ಇಪ್ಪತ್ತು ದಿನಗಳಿಗೂ ಮೀರಿದಂತೆ ಅಂತರವಿದ್ದಿತು.

ಬಿ) ಎರಡು ಕ್ಯಾಲೆಂಡರ್ ತ್ರೈಮಾಸಿಕದಲ್ಲಿ ನಿರ್ದೇಶಕರುಗಳ ಮಂಡಳಿಯ ಕಡೆಯ ಪಕ್ಷ ಒಂದು ಸಭೆಯನ್ನು ನಡೆಸಿರಲಿಲ್ಲ ಹಾಗೂ 2018–19 ಹಣಕಾಸು ಸಾಲಿನಲ್ಲಿ ನಡೆಸಲಾದಂತಹ ನಿರ್ದೇಶಕರುಗಳ ಮಂಡಳಿಯ ಸಭೆಗಳ ನಡುವೆ ನಡುವೆ ಒಂದು ನೂರ ಇಪ್ಪತ್ತು ದಿನಗಳಿಗೂ ಅಧಿಕ ಅಂತರವಿದ್ದಿತು.

8.2) ಕಂಪನಿಯು, ರಾಜ್ಯದ ಉದ್ದಗಲಕ್ಕೂ ವಿವಿಧ ಸ್ಥಳಗಳಲ್ಲಿ ಇರುವಂತಹ ನೀರಾವರಿ ಮತ್ತು ನಿರ್ಮಾಣ ಯೋಜನೆಗಳು, ನಿವೇಶನಗಳು ಮತ್ತು

ಅಣೆಕಟ್ಟೆಗಳನ್ನು ಪೂರ್ಣಗೊಳಿಸುವ ಸಲುವಾಗಿ ಅನೇಕ ಸಂಖ್ಯೆಯ ಗುತ್ತಿಗೆದಾರರುಗಳನ್ನು ನೇಮಕ ಮಾಡಿದ್ದಿತು. ಗುತ್ತಿಗೆದಾರರುಗಳು, ನಿರ್ಮಾಣಗಳನ್ನು, ಕಾರ್ಯಗತಗೊಳಿಸುವ ಸಲುವಾಗಿ ಸಿವಿಲ್ ಮತ್ತು ಇತರೆ ಕೂಲಿ ಗುತ್ತಿಗೆಯ ಅಡಿಯಲ್ಲಿ ತಮ್ಮ ವೇತನ ಪಟ್ಟಿಯ ಅಡಿಯಲ್ಲಿ ಕೆಲಸಗಾರರನ್ನು ನೇಮಕ ಮಾಡಿಕೊಳ್ಳುವರು. ಕಂಪನಿಯು ಕೂಡ ತನ್ನ ನೋಂದಾಯಿತ ಕಚೇರಿಯಲ್ಲಿ ಕೂಲಿ ಗುತ್ತೆಗೆದಾರರುಗಳನ್ನು ನೇಮಕ ಮಾಡಿಕೊಂಡಿದ್ದಿತು. ಕಂಪನಿಯು, ಓರ್ವ ಪ್ರಧಾನ ಉದ್ಯೋಗದಾತರಾಗಿ ಗುತ್ತಿಗೆ ಕೂಲಿ (ನಿಯಂತ್ರಣ ಮತ್ತು ತೊಡೆದುಹಾಕುವಿಕೆ) ಅಧಿನಿಯಮ, 1970 ಮತ್ತು ಅದಕ್ಕೆ ಅನುಗುಣವಾಗಿ ಕರ್ನಾಟಕ ನಿಯಮಗಳು, 1974ರ ಅನುವುಗಳನ್ನು ವಿಶೇಷವಾಗಿ ನಿರ್ಮಾಣ ಯೋಜನೆಗಳು, ನಿವೇಶನಗಳು ಮತ್ತು ಅಣೆಕಟ್ಟೆಗಳಲ್ಲಿ ಅನುಸರಿಸಿರಲಿಲ್ಲ.

ಸಹಿ/–
ಕೆ.ಎನ್. ನಾಗೇಶ ರಾವ್
ಕಾರ್ಯನಿರತ ಕಂಪನಿ ಕಾರ್ಯದರ್ಶಿ
ಎಫ್‌ಸಿಎಸ್ 3000 ಸಿಓಪಿ 12861
ಐಡಿ ಸಂಖ್ಯೆ : 12014ಕೆಆರ್1122000

ಬೆಂಗಳೂರು
21ನೇ ಡಿಸೆಂಬರ್, 2020
ಯು.ಡಿ.ಐ.ಎನ್. ಸಂಖ್ಯೆ : ಎಫ್003000ಬಿ001579157

ಉದ್ದೇಶಪೂರ್ವಕವಾಗಿ ಖಾಲಿ ಬಿಡಲಾಗಿದೆ.

2019–20ನೇ ಹಣಕಾಸು ಸಾಲಿನ ಕಾರ್ಯದರ್ಶೀಯ ಲೆಕ್ಕಪರಿಶೋಧನಾ ವರದಿಗೆ ಅನುಬಂಧ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಸದಸ್ಯರಿಗೆ

ನಮ್ಮ ಅದೇ ದಿನಾಂಕದ (18 ಸೆಪ್ಟಂಬರ್ 2019) ಕಾರ್ಯದರ್ಶೀಯ ವರದಿಯನ್ನು ಈ ಪತ್ರದ ಜೊತೆಯಲ್ಲಿ ಓದತಕ್ಕದ್ದು.

1. ಕಾರ್ಯದರ್ಶೀಯ ದಾಖಲೆಗಳ ನಿರ್ವಹಣೆ ಮತ್ತು ಸಂಸ್ಥಿಕ ಮತ್ತಿತರೆ ಅನ್ವಯಗೊಳ್ಳುವ ಅಧಿನಿಯಮ, ನಿಯಮಗಳ ಅನುವುಗಳು, ನಿಯಂತ್ರಣಗಳು, ಪ್ರಮಾಣಕಗಳಿಗೆ ಬದ್ಧತೆಯಿಂದ ಕೂಡಿರುವುದು ಕಂಪನಿಯ ವ್ಯವಸ್ಥಾಪನೆಯ/ಆಡಳಿತಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಕಾರ್ಯದರ್ಶೀಯ ದಾಖಲೆಗಳು ಅನುಪಾಲನೆಗಳ ಮೇಲೆ ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

2. ಕಾರ್ಯದರ್ಶೀಯ ದಾಖಲೆಗಳ ಯಥಾರ್ಥತೆಯ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಪಡೆದುಕೊಳ್ಳುವ ಸಲುವಾಗಿ ನಾವು ಲೆಕ್ಕಪರಿಶೋಧನೆಯ ಪರಿಪಾಠಗಳನ್ನು ಮತ್ತು ಪ್ರಕ್ರಿಯೆಗಳನ್ನು ಅನುಸರಿಸಿರುವೆವು. ಕಾರ್ಯದರ್ಶೀಯ ದಾಖಲೆಗಳಲ್ಲಿ ಯಥಾರ್ಥತೆಯಿಂದ ಕೂಡಿದ ವಾಸ್ತವಾಂಶಗಳನ್ನು ಪ್ರತಿಬಿಂಭಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪರಿಶೀಲನೆಯನ್ನು ಪರೀಕ್ಷಾ–ಪರಿಶೀಲನೆಯ ಆಧಾರದ ಮೇರೆಗೆ ಮಾಡಲಾಯಿತು. ನಾವು ಅನುಸರಿಸಿದ ಪ್ರಕ್ರಿಯೆಗಳು ಮತ್ತು ಪರಿಪಾಠಗಳು ನಮ್ಮ ಅಭಿಪ್ರಾಯಗಳಿಗೆ ಒಂದು ನ್ಯಾಯಸಮ್ಮತ ಆಧಾರವನ್ನು ನೀಡಿರುವವು ಎಂಬ ವಿಶ್ವಾಸವನ್ನು ನಾವು ಹೊಂದಿರುವೆವು.

3. ನಾವು ಕಂಪನಿಯ ಹಣಕಾಸಿಗೆ ಸಂಬಂಧಿತ ದಾಖಲೆಗಳು ಮತ್ತು ಲೆಕ್ಕಪುಸ್ತಕಗಳ ಯಥಾರ್ಥತೆಯನ್ನು ಮತ್ತು ಸೂಕ್ತತೆಯನ್ನು ಪರಿಶೀಲಿಸಿರುವುದಿಲ್ಲ.

4. ಎಲ್ಲೆಲ್ಲಿ ಅಗತ್ಯತೆಯಿರುವುದೋ, ಅಂತಹ ಕಡೆಗಳಲ್ಲಿ ನಾವು ಅಧಿನಿಯಮಗಳು, ನಿಯಮಗಳು, ನಿಯಂತ್ರಣಗಳು ಹಾಗೂ ಅಲ್ಲದೆಯೇ ಘಟನೆಗಳು ಸಂಭವಿಸಿರುವವುಗಳ ಮೇಲೆ ಆಡಳಿತ ಮಂಡಳಿಯ ಹೇಳಿಕೆಗಳನ್ನು ಪಡೆದುಕೊಂಡಿರುವೆವು.

ಸಹಿ/–

ಕೆ.ಎನ್. ನಾಗೇಶ ರಾವ್

ಕಾರ್ಯನಿರತ ಕಂಪನಿ ಕಾರ್ಯದರ್ಶಿ

ಎಫ್‌ಸಿಎಸ್ 3000 ಸಿಓಪಿ 12861

ಐಡಿ ಸಂಖ್ಯೆ : 12014ಕೆಆರ್1122000

ಬೆಂಗಳೂರು

21ನೇ ಡಿಸೆಂಬರ್, 2020

ಯು.ಡಿ.ಐ.ಎನ್. ಸಂಖ್ಯೆ : ಎಫ್003000ಬಿ001579157

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ವಿಶ್ವೇಶ್ವರಯ್ಯ ಜಲ ನಿಗಮದ ಸದಸ್ಯರುಗಳಿಗೆ

"ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವಂತಹ ಪ್ರತ್ಯೇಕ ಹಣಕಾಸು ತ:ಖ್ತೆಗಳ" ಲೆಕ್ಕಪರಿಶೋಧನೆಯ ಮೇಲಿನ ವರದಿ.

ನಮ್ಮ ಷರತ್ತುಬದ್ಧ ಅಭಿಪ್ರಾಯ

31 ಮಾರ್ಚ್ 2020ರಲ್ಲಿದ್ದಂತೆ ಆಸ್ತಿ–ಜವಾಬ್ದಾರಿ ತ:ಖ್ತೆ, ಆ ದಿನಾಂಕಕ್ಕೆ ಅಂತ್ಯಗೊಂಡಂತಹ ಪ್ರಸಕ್ತ ಸಾಲಿನ ಲಾಭ ಮತ್ತು ನಷ್ಟ ತ:ಖ್ತೆ ಹಾಗೂ ಹಣಕಾಸು ಹರಿವಿನ ತ:ಖ್ತೆ ಹಾಗೂ ಆ ದಿನಾಂಕಕ್ಕೆ ಅಂತ್ಯಗೊಂಡಂತಹ ಸಾಲಿಗೆ ಈಕ್ವಿಟಿಯಲ್ಲಿನ ಬದಲಾವಣೆಗಳು ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು ಹಾಗೂ ಅದಕ್ಕೆ ಲಗತ್ತಿಸಲಾಗಿರುವ ವಿವರಣಾತ್ಮಕ ಮಾಹಿತಿಯ ಸಂಕ್ಷಿಪ್ತ ವರದಿಯನ್ನು ಒಳಗೊಂಡಂತೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಈ ವರದಿಗೆ ಲಗತ್ತಿಸಲಾಗಿರುವ ಹಣಕಾಸು ತ:ಖ್ತೆಗಳನ್ನು (ಇನ್ನು ಮುಂದಕ್ಕೆ ಪ್ರತ್ಯೇಕ "ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡಗಳ ಅನುಸಾರ ಹಣಕಾಸು ತ:ಖ್ತೆಗಳು" ಎಂಬುದಾಗಿ ಉಲ್ಲೇಖಿಸಲ್ಪಡುವ) ನಾವು ಲೆಕ್ಕಪರಿಶೋಧನೆ ಮಾಡಿರುವೆವು.

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವಿನಂತೆ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳಂತೆ, ನಮ್ಮ ವರದಿಯ ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರ ಸಂಬಂಧಿತ ಕಂಡಿಕೆಯಲ್ಲಿ ವಿವರಿಸಿರುವಂತಹ ವಿಷಯಗಳ ಸಂಭಾವ್ಯ ಪರಿಣಾಮಗಳನ್ನು ಹೊರತುಪಡಿಸಿದಂತೆ, "ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವಂತಹ ಪ್ರತ್ಯೇಕ ಹಣಕಾಸು ತ:ಖ್ತೆಗಳು" ಕಂಪನಿಗಳ ಅಧಿನಿಯಮ, 2013ರ ಅಗತ್ಯತೆಯ ರೀತಿಯಲ್ಲಿ ಮಾಹಿತಿಯನ್ನು ನೀಡುತ್ತವೆ ಹಾಗೂ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಹಾಗೂ ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) ನಿಯಮಗಳು, 2015ರ ಜೊತೆಯಲ್ಲಿ ಓದಲ್ಪಡುವಂತಹ ಅಧಿನಿಯಮದ ಪರಿಚ್ಛೇದ 133ರಲ್ಲಿ ವಿವರಿಸಿರುವಂತೆ 31 ಮಾರ್ಚ್ 2020ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಗಳನ್ನು, ಹಾಗೂ ಅದೇ ದಿನಾಂಕಕ್ಕೆ ಅಂತ್ಯಗೊಂಡ ಸಾಲಿಗೆ ನಷ್ಟ ಹಾಗೂ ಸಮಗ್ರ ವರಮಾನ, ಈಕ್ವಿಟಿಯಲ್ಲಿನ ಬದಲಾವಣೆಗಳು ಹಾಗೂ ಕಂಪನಿಯ ನಗದು/ಹಣಕಾಸಿನ ಹರಿವುಗಳ ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತವಾದಂತಹ ಅಭಿಪ್ರಾಯಗಳನ್ನು ಒದಗಿಸುತ್ತವೆ.

ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ

ಎ) ಲಾಭ ಮತ್ತು ನಷ್ಟ ತ:ಖ್ತೆಯ ಟಿಪ್ಪಣಿ 22ರಲ್ಲಿ ಸೂಚಿಸಿರುವಂತೆ ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳ ಮೇಲಿನ ವೆಚ್ಚಗಳು ರೂ.12,782.74 ಲಕ್ಷ ಮೊತ್ತದಷ್ಟು ಒಟ್ಟಾರೆ ವೆಚ್ಚಗಳನ್ನು ಒಳಗೊಂಡಿರುತ್ತವೆ, ಅವು ಗುತ್ತಿಗೆದಾರರು ನೀಡುವ ಹಣಬಳಕೆ ಪ್ರಮಾಣಪತ್ರಗಳ ಆಧಾರದ ಮೇರೆಗೆ ಆಗಿರುತ್ತವೆ ಹಾಗೂ ಕಂಪನಿಯು ಈ ನಿಟ್ಟಿನಲ್ಲಿ ಸ್ವತಂತ್ರವಾಗಿ ಮೌಲ್ಯಮಾಪನ ಮಾಡಿರುವುದಿಲ್ಲ. ತತ್ಪರಿಣಾಮವಾಗಿ, ಅಂತಹ ವೆಚ್ಚಗಳ ಪರಿಪೂರ್ಣತೆಯ ಮೇಲೆ ನಾವು ಟೀಕೆಟಿಪ್ಪಣಿ ಮಾಡಲು ಸಾಧ್ಯವಾಗುವುದಿಲ್ಲ.

ಬಿ) ಟಿಪ್ಪಣಿ 25 (ಸಿ) – ಸರ್ಕಾರವು ದರಪಟ್ಟಿಗಳನ್ನು ಅಂತಿಮರೂಪಕ್ಕೆ ತರುವುದು ಬಾಕಿಯಿರುವಂತೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸುವುದರ ಪ್ರಭಾವವನ್ನು ಗಣನೆಗೆ ತೆಗೆದುಕೊಳ್ಳದೆಯೇ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಜಾರಿಗೊಳಿಸುವ ಮುಂಚಿನ ಅವಧಿಯಲ್ಲಿನ ದರಗಳ ಆಧಾರದ ಮೇರೆಗೆ ಗುತ್ತಿಗೆಗಳನ್ನು ನೀಡಿರುವುದಕ್ಕೆ ಸಂಬಂಧಿಸಿದಂತೆ ಅದರ ಪ್ರಭಾವ / ಪರಿಣಾಮವನ್ನು ಪ್ರಸ್ತುತ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

ಅಧಿನಿಯಮದ ಪರಿಚ್ಛೇದ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸಿನ ತ:ಖ್ತೆಗಳನ್ನು ನಾವು ಲೆಕ್ಕಪರಿಶೋಧನೆಯನ್ನು ಮಾಡಿರುವೆವು. ಅಂತಹ ಪ್ರಮಾಣಕಗಳ/ಮಾನದಂಡಗಳ ಅಡಿಯಲ್ಲಿನ ನಮ್ಮ ಜವಾಬ್ದಾರಿಗಳನ್ನು ನಮ್ಮ ವರದಿಯ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯ ವಿಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿವರಿಸಲಾಗಿದೆ. ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವಂತಹ ಔಚಿತ್ಯತೆಗಳ ಕೈಪಿಡಿ ಹಾಗೂ ಕಂಪನಿಗಳ ಅಧಿನಿಯಮ, 2013ರ ಅನುವುಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವಂತಹ ನಿಯಮಗಳ ಅಡಿಯಲ್ಲಿನ ಔಚಿತ್ಯತೆಗಳ ಅಗತ್ಯತೆಗಳೊಂದಿಗೆ, ಲೆಕ್ಕಪರಿಶೋಧನೆಗೆ ಒಳಪಡುವ ಕಂಪನಿಯಿಂದ ನಾವು ಸ್ವತಂತ್ರರಾಗಿರುವೆವು ಹಾಗೂ ನಾವು ಇತರೆ ಔಚಿತ್ಯತೆಗಳ ಅಗತ್ಯತೆಗಳನ್ನು ಈ ಅಗತ್ಯತೆಗಳ ಅನುಸಾರ ಹಾಗೂ

ಔಚಿತ್ಯತೆಗಳ ಸಂಹಿತೆಯ ಅನುಸಾರ ಪೂರೈಸಿರುವೆವು. ನಾವು ಪಡೆದುಕೊಂಡಿರುವಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಮರ್ಪಕವಾಗಿರುತ್ತವೆ ಹಾಗೂ ಸೂಕ್ತವಾಗಿರುತ್ತವೆ ಎಂಬ ವಿಶ್ವಾಸವು ನಮ್ಮಲ್ಲಿರುವುದು.

ಮಹತ್ವಪೂರ್ಣ ವಿಷಯಗಳು

ನಾವು, ಹಣಕಾಸು ತ:ಖ್ತೆಗಳಲ್ಲಿ ಇರುವಂತಹ ಈ ಕೆಳಗಿನ ವಿಷಯಗಳ ಬಗ್ಗೆ ಈ ಮೂಲಕ ನಿಮ್ಮ ಗಮನವನ್ನು ಸೆಳೆಯುತ್ತಿರುವೆವು :

ಎ) ಟಿಪ್ಪಣಿ ಸಂಖ್ಯೆ 4 : ಬಂಡವಾಳೀಕರಿಸಲಾದಂತಹ ಭೂಮಿಯ ಮೌಲ್ಯವು ಸಂಬಂಧಿತ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಂದ ಸ್ವೀಕರಿಸಲಾಗಿರುವ ಹಣ ಬಳಕೆ ಪ್ರಮಾಣಪತ್ರಗಳ ಆಧಾರದ ಮೇರೆಗೆ ಆಗಿರುತ್ತದೆ ಹಾಗೂ ಭೂಸ್ವಾಧೀನ ತೀರ್ಪುಗಳು/ ಒಪ್ಪಿಗೆ ತೀರ್ಪುಗಳು/ಬಡ್ಡಿ, ಇತ್ಯಾದಿ ವಿವಿಧ ಕಾರ್ಯವಿಧಾನಗಳು ಅಂತಿಮ ರೂಪಕ್ಕೆ ಬಂದನಂತರ ತಿದ್ದುಪಡಿಯ ಷರತ್ತಿಗೆ ಒಳಪಟ್ಟಿರುತ್ತವೆ.

ಬಿ) ಟಿಪ್ಪಣಿ ಸಂಖ್ಯೆ 4 : ಭೂಮಿಯನ್ನು ಖರೀದಿಸಿರುವ ಪ್ರಕರಣಗಳಲ್ಲಿ ಮ್ಯುಟೇಷನ್ ನಮೂದುಗಳನ್ನು ಪೂರ್ಣಗೊಳಿಸುವುದು ಬಾಕಿಯಿರುತ್ತದೆ.

ಸಿ) ಟಿಪ್ಪಣಿ ಸಂಖ್ಯೆ 18ರಲ್ಲಿ ಸೂಚಿಸಿರುವ ಮೊತ್ತಗಳು ಈ ವ್ಯಕ್ತಿಗಳು ಖಚಿತಪಡಿಸುವ ಹಾಗೂ ತತ್ಪರಿಣಾಮ ಹೊಂದಾಣಿಕೆಗಳು ಯಾವುದಾದರೂ ಇದ್ದಲ್ಲಿ ಅವುಗಳ ಷರತ್ತಿಗೆ ಒಳಪಟ್ಟಿರುತ್ತವೆ.

ಡಿ) ಟಿಪ್ಪಣಿ ಸಂಖ್ಯೆ 25 (ಎ) ತಿಳಿಸಲಾಗಿರುವ ಕಾರಣಗಳಿಗಾಗಿ ಕಾರ್ಯಗತಗೊಳಿಸಲಾದ ಹೆಚ್ಚುವರಿ ಪರಿಮಾಣದ ಕಾಮಗಾರಿಗಳ ಕಡೆಗೆ ಜವಾಬ್ದಾರಿಯನ್ನು ಅನುವು ಮಾಡದಿರುವ ಬಗ್ಗೆ.

ಇ) ಟಿಪ್ಪಣಿ ಸಂಖ್ಯೆ 18 – ಕಂಪನಿಗಳ ಅಧಿನಿಯಮ, 2013ರ ಷೆಡ್ಯೂಲು IIIರ ಅಗತ್ಯತೆಯಂತೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಪಾವತಿಸಲು ಬಾಕಿಯಿರುವ ಮೊತ್ತಗಳನ್ನು ಬಹಿರಂಗಪಡಿಸದಿರುವ ಬಗ್ಗೆ.

ಎಫ್) ಟಿಪ್ಪಣಿ ಸಂಖ್ಯೆ 11ರಲ್ಲಿ ಸೇರಿಸಿರುವ ಮೊತ್ತಗಳು –ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ (ಪ್ರತ್ಯೇಕಗೊಂಡ ಕಂಪನಿ) ಸ್ವೀಕರಿಸಲಾದ ಇತರೆ ಚಾಲ್ತಿ ಆಸ್ತಿಗಳು ಕಂಪನಿಯೊಂದಿಗೆ ಸಮನ್ವಯಗೊಳಿಸುವ ಷರತ್ತಿಗೆ ಒಳಪಟ್ಟಿರುವುದಕ್ಕೆ ಸಂಬಂಧಿಸಿದಂತೆ

ಈ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಿರುವುದಿಲ್ಲ.

ಪ್ರತ್ಯೇಕ ಹಣಕಾಸು ತ:ಖ್ತೆಗಳು ಮತ್ತು ಅವುಗಳ ಮೇಲಿನ ಲೆಕ್ಕಪರಿಶೋಧಕರ ವರದಿಗಳನ್ನು ಹೊರತುಪಡಿಸಿದಂತೆ ಇತರೆ ಮಾಹಿತಿಗಳು

ಕಂಪನಿಯ ನಿರ್ದೇಶಕರುಗಳ ಮಂಡಳಿಯು ಇತರೆ ಮಾಹಿತಿಗಳನ್ನು ಸಿದ್ಧಪಡಿಸುವಲ್ಲಿ ಜವಾಬ್ದಾರಿಯನ್ನು ಹೊಂದಿರುತ್ತದೆ. ಇತರೆ ಮಾಹಿತಿಗಳು ವ್ಯವಸ್ಥಾಪನೆಯು ಮಾಡಿರುವ ಚರ್ಚೆಗಳು ಹಾಗೂ ವಿಶ್ಲೇಷಣೆಗಳು, ನಿರ್ದೇಶಕರುಗಳ ಮಂಡಳಿಯ ವರದಿಗೆ ಅನುಬಂಧಗಳು ಸೇರಿದಂತೆ ನಿರ್ದೇಶಕರುಗಳ ಮಂಡಳಿಯ ವರದಿ, ವ್ಯವಹಾರಗಳ ಜವಾಬ್ದಾರಿ ವರದಿ, ಸಾಂಸ್ಥಿಕ ನಿರ್ವಹಣೆ ಹಾಗೂ ಷೇರುದಾರರುಗಳ ಮಾಹಿತಿ, ಇತ್ಯಾದಿ ಮಾಹಿತಿಗಳನ್ನು ಒಳಗೊಂಡಿರುತ್ತವೆ, ಆದರೆ ಪ್ರತ್ಯೇಕ ಹಣಕಾಸು ವರದಿಗಳು ಹಾಗೂ ಅವುಗಳ ಮೇಲೆ ನಮ್ಮ ಲೆಕ್ಕಪರಿಶೋಧಕರುಗಳ ವರದಿಯನ್ನು ಒಳಗೊಂಡಿರುವುದಿಲ್ಲ.

ಪ್ರತ್ಯೇಕ ಹಣಕಾಸು ತ:ಖ್ತೆಗಳ ಮೇಲೆ ನಮ್ಮ ಅಭಿಪ್ರಾಯವು ಇತರೆ ಮಾಹಿತಿಗಳನ್ನು ವ್ಯಾಪಿಸುವುದಿಲ್ಲ ಹಾಗೂ ಅವುಗಳ ಮೇಲೆ ನಾವು ಯಾವುದೇ ರೀತಿಯ ಭರವಸೆಯಿಂದ ಕೂಡಿದ ನಿರ್ಣಯವನ್ನು ವ್ಯಕ್ತಪಡಿಸುವುದಿಲ್ಲ.

ಪ್ರತ್ಯೇಕ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ನಮ್ಮ ಜವಾಬ್ದಾರಿಯು ಇತರೆ ಮಾಹಿತಿಗಳನ್ನು ಓದುವುದಾಗಿರುತ್ತದೆ, ಆ ರೀತಿ ಮಾಡುವಲ್ಲಿ, ಇತರೆ ಮಾಹಿತಿಗಳು ಪ್ರತ್ಯೇಕ ಹಣಕಾಸು ತ:ಖ್ತೆಗಳೊಂದಿಗೆ ವಿಷಯಕವಾಗಿ ಅಸಮಂಜಸತೆಗಳಿಂದ ಕೂಡಿರುತ್ತವೆಯೇ ಎಂಬುದನ್ನು ಪರಿಗಣಿಸುವುದಾಗಿರುತ್ತದೆ ಅಥವಾ ನಮ್ಮ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಅಥವಾ ಅನ್ಯಥಾ ನಾವು ಪಡೆದುಕೊಂಡಂತಹ ಮಾಹಿತಿಯಲ್ಲಿ ವಿಷಯಕ ತಪ್ಪು ಹೇಳಿಕೆಗಳು ಇರುವುದಾಗಿ ಕಂಡು ಬರುತ್ತದೆ.

ನಾವು ಕಾರ್ಯನಿರ್ವಹಿಸಿದ ಕೆಲಸಗಳ ಆಧಾರದ ಮೇರೆಗೆ ಆಗಿದ್ದಲ್ಲಿ, ಈ ಇತರೆ ಮಾಹಿತಿಗಳಲ್ಲಿ ವಿಷಯಕ ತಪ್ಪು ಹೇಳಿಕೆಗಳು ಇರುವುದಾಗಿ ನಾವು ತೀರ್ಮಾನಕ್ಕೆ ಬರುವೆವು, ನಾವು ಅಂತಹ ವಾಸ್ತವಾಂಶವನ್ನು ವರದಿ ಮಾಡುವ ಅಗತ್ಯತೆಯಿರುತ್ತದೆ. ಈ ನಿಟ್ಟಿನಲ್ಲಿ ಈ ವರದಿಯಲ್ಲಿ ಸೇರಿಸಲು ನಮಗೆ ಯಾವುದೇ ವಿಷಯವೂ ಇರುವುದಿಲ್ಲ.

ಇತರೆ ವಿಷಯಗಳು

31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಸಾಲಿಗೆ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವ ಪ್ರತ್ಯೇಕ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯ ಭಾಗವಾಗಿ, 31 ಮಾರ್ಚ್ 2019ಕ್ಕೆ ಅಂತ್ಯಗೊಂಡ ಹಿಂದಿನ ಸಾಲಿಗೆ ಹಣಕಾಸು ತ:ಖ್ತೆಗಳನ್ನು ತಿದ್ದುಪಡಿ ಮಾಡಲು ಹಾಗೂ ಅನ್ಯಥಾ ರೀತಿಯಲ್ಲಿ ಪುನರ್–ತಿಳಿಸುವ ಸಲುವಾಗಿ ಅನ್ವಯಗೊಳಿಸಲಾದ ಟಿಪ್ಪಣಿ ಸಂಖ್ಯೆ 24(4)ರಲ್ಲಿ ವಿವರಿಸಲಾಗಿರುವ ಹೊಂದಾಣಿಕೆಗಳನ್ನೂ ಸಹ ನಾವು ಲೆಕ್ಕ ಪರಿಶೋಧನೆ

ಮಡಿರುವೆವು. ನಮ್ಮ ಅಭಿಪ್ರಾಯದಲ್ಲಿ ಅಂತಹ ಹೊಂದಾಣೀಕೆಗಳು ಸೂಕ್ತವಾಗಿರುತ್ತವೆ ಹಾಗೂ ಅವುಗಳನ್ನು ಸಮರ್ಪಕವಾದ ರೀತಿಯಲ್ಲಿ ಅನ್ವಯಗೊಳಿಸಲಾಗಿರುತ್ತವೆ.

ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದ ಆದೇಶದ ಅನುಸಾರ ಪ್ರತ್ಯೇಕಗೊಳಿಸುವಿಕೆ ಯೋಜನೆಯ ಕಾರಣ 31 ಮಾರ್ಚ್ 2019ಕ್ಕೆ ಅಂತ್ಯಗೊಂಡ ಹಿಂದಿನ ಸಾಲಿಗೆ ಹಣಕಾಸು ತ:ಖ್ತೆಗಳನ್ನೂ ಸಹ ಕಂಪನಿಯು ಪುನರ್–ತಿಳಿಸಿರುವುದು. ಟಿಪ್ಪಣಿ 26 (ix) ರಲ್ಲಿ ತಿಳಿಸಿರುವಂತಹ ಹೊಂದಾಣಿಕೆಗಳನ್ನು ಅಳವಡಿಸಿಕೊಂಡು ಕಂಪನಿಯ ಹಿಂದಿನ ಅವಧಿಯ ಹಣಕಾಸು ಸ್ಥಿತಿಗತಿಗಳ ಲೆಕ್ಕಪರಿಶೋಧನೆ ಮಾಡಲು, ಸಮೀಕ್ಷಿಸಲು ಅಥವಾ ಇತರೆ ಯಾವುದೇ ಕಾರ್ಯವಿಧಾನಗಳನ್ನು ಅನ್ವಯಗೊಳಿಸುವ ಸಲುವಾಗಿ ನಮ್ಮನ್ನು ನೇಮಕ ಮಾಡಿರುವುದಿಲ್ಲ.

ಈ ವಿಷಯದಲ್ಲಿ ನಮ್ಮ ಅಭಿಪ್ರಾಯವು ಷರತ್ತುಬದ್ಧವಾಗಿರುವುದಿಲ್ಲ.

ಪ್ರತ್ಯೇಕ ಹಣಕಾಸು ತ:ಖ್ತೆಗಳ ನಿರ್ವಹಣೆಗಾಗಿ ವ್ಯವಸ್ಥಾಪನೆಯ ಹಾಗೂ ಅದರ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುವ ಇತರರುಗಳ ಜವಾಬ್ದಾರಿಗಳು.

ಅಧಿನಿಯಮದ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನು ಒಳಗೊಂಡಂತೆ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಕಂಪನಿಯ ಹಣಕಾಸಿನ ಸ್ಥಿತಿಗತಿ, ಹಣಕಾಸಿನ ನಿರ್ವಹಣೆ, ಈಕ್ವಿಟಿಯಲ್ಲಿನ ಬದಲಾವಣೆಗಳು ಹಾಗೂ ನಗದು/ಹಣಕಾಸಿನ ಹರಿವುಗಳ ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯಗಳನ್ನು ನೀಡುವಂತಹ, ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗುವ ಹಣಕಾಸು ತ:ಖ್ತೆಗಳ ತಯಾರಿಕೆಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134 (5)ರಲ್ಲಿ ತಿಳಿಸಲಾಗಿರುವ ವಿಷಯಗಳಿಗೆ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ. ಈ ಜವಾಬ್ದಾರಿಯು ಸತ್ಯಾಸತ್ಯತೆಯಿಂದ ಮತ್ತು ನ್ಯಾಯಸಮ್ಮತತೆಯಿಂದ ಕೂಡಿದ ಮತ್ತು ವಂಚನೆಗಳು ಅಥವಾ ತಪ್ಪುಗಳನ್ನು ಎಸಗುವುದರ ಕಾರಣ ವಿಷಯಕ ತಪ್ಪು ಹೇಳಿಕೆಗಳಿಂದ ಹೊರತಾದ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವ ಮತ್ತು ಮಂಡಿಸುವುದಕ್ಕೆ ಸೂಕ್ತವಾದಂತಹ ನಿಗಮದ ಆಸ್ತಿಗಳ ಸಂರಕ್ಷಣೆಗಾಗಿ ಅಧಿನಿಯಮದ ಅನುವುಗಳ ಅನುಸಾರ ಸಮರ್ಪಕವಾದಂತಹ ರೀತಿಯಲ್ಲಿ ಲೆಕ್ಕಪತ್ರಗಳ ನಿರ್ವಹಣೆಗಾಗಿ ಮತ್ತು ವಂಚನೆಗಳನ್ನು ತಡೆಯುವುದು ಮತ್ತು ಪತ್ತೆಹಚ್ಚುವುದು, ಸೂಕ್ತ ಲೆಕ್ಕವನ್ನಿಡುವಿಕೆಯ ಕಾರ್ಯನೀತಿಯ ಆಯ್ಕೆ ಮತ್ತು ಅದನ್ನು ಅನ್ವಯಗೊಳಿಸುವುದು, ನ್ಯಾಯಸಮ್ಮತತೆಯಿಂದ ಮತ್ತು ವಿವೇಚನೆಯಿಂದ ಕೂಡಿದ ತೀರ್ಮಾನಗಳನ್ನು ಕೈಗೊಳ್ಳುವುದು ಮತ್ತು ಅಂದಾಜುಗಳನ್ನು ಮಾಡುವುದು ಹಾಗೂ ಸಮರ್ಪಕವಾದ ರೀತಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಹಾಗೂ ನಿರ್ವಹಣೆ, ಇವುಗಳನ್ನೂ ಸಹ ಒಳಗೊಂಡಿರುತ್ತದೆ.

ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ, ತನ್ನ ಕಾರ್ಯಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಹೋಗುವಲ್ಲಿ ಕಂಪನಿಗೆ ಇರುವಂತಹ ಸಾಮರ್ಥ್ಯತೆಯನ್ನು ನಿರ್ಧಾರಣೆ ಮಾಡುವಲ್ಲಿ, ಕಾರ್ಯಚಟುವಟಿಕೆಗಳು ಮುಂದುವರೆದುಕೊಂಡು ಹೋಗುತ್ತಿರುವ ಸಂಸ್ಥೆಗೆ ಸಂಬಂಧಿತ ಹಾಗೂ ಅನ್ವಯಗೊಳ್ಳುವ ವಿಷಯಗಳನ್ನು ಬಹಿರಂಗಪಡಿಸುವಲ್ಲಿ ಹಾಗೂ ಕಂಪನಿಯನ್ನು ಸಮಾಪನಗೊಳಿಸುವ ಅಥವಾ ಅದರ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸುವ ಉದ್ದೇಶವನ್ನು ನಿರ್ದೇಶಕರುಗಳ ಮಂಡಳಿಯು ಹೊಂದಿರದ ಹೊರತು ಅಥವಾ ಅದಕ್ಕೆ ಯಾವುದೇ ಬದಲಿ ವಾಸ್ತವಿಕ ವ್ಯವಸ್ಥೆಗಳು ಇರದ ಹೊರತು, ಕಾರ್ಯಚಟುವಟಿಕೆಗಳು ಮುಂದುವರೆದುಕೊಂಡು ಹೋಗುತ್ತಿರುವ ಸಂಸ್ಥೆಯ ಆಧಾರದ ಮೇರೆಗೆ ತಯಾರಿಸಲಾದ ಲೆಕ್ಕವನ್ನಿಡುವಿಕೆ ವ್ಯವಸ್ಥೆಯನ್ನು ಬಳಸಿಕೊಳ್ಳುವಲ್ಲಿ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ.

ಕಂಪನಿಯ ಹಣಕಾಸಿನ ಸ್ಥಿತಿಗತಿಗಳಿಗೆ ಸಂಬಂಧಿತ ವರದಿಯ ತಯಾರಿಕಾ ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡುವಲ್ಲಿಯೂ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ.

ಪ್ರತ್ಯೇಕ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆ ಮಾಡುವಲ್ಲಿ ಲೆಕ್ಕಪರಿಶೋಧಕರುಗಳ ಜವಾಬ್ದಾರಿಗಳು

ಹಣಕಾಸು ತ:ಖ್ತೆಗಳು, ಒಟ್ಟಾರೆಯಾಗಿ ವಂಚಿಸುವ ಉದ್ದೇಶದಿಂದಲೇ ಆಗಿರಲಿ ಅಥವಾ ಕೈ ಅಚಾತುರ್ಯದಿಂದಲೇ ಆಗಿರಲಿ ಇರಬಹುದಾದಂತಹ ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿರುವವೆ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದು, ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವಂತಹ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶಗಳಾಗಿರುತ್ತವೆ. ನ್ಯಾಯಸಮ್ಮತ ಭರವಸೆಯು ಉನ್ನತ ಮಟ್ಟದ ಭರವಸೆಯಾಗಿರುತ್ತದೆ, ಆದರೆ ಲೆಕ್ಕಪರಿಶೋಧನೆಗೆ ಸಂಬಂಧಿತ ಮಾನದಂಡಗಳ ಅನುಸಾರ ನಡೆಸಲಾಗಿರುವ ಲೆಕ್ಕಪರಿಶೋಧನೆಯು ಸದಾಕಾಲವೂ, ವಿಷಯಕ ತಪ್ಪು ಹೇಳಿಕೆಗಳು

ಇರುವ ಸಂದರ್ಭಗಳಲ್ಲೆಲ್ಲವೂ ಪತ್ತೆಹಚ್ಚುವುದು ಎಂಬುದರ ಬಗ್ಗೆ ಖಾತರಿಯಿಂದ ಕೂಡಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆಗಳು ಅಥವಾ ಕೈಯಿಂದ ಆದಂತಹ ಅಚಾತುರ್ಯಗಳ ಕಾರಣ ಉದ್ಭವಿಸುತ್ತವೆ ಹಾಗೂ ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ಈ ಹಣಕಾಸು ತ:ಖ್ತೆಗಳ ಆಧಾರದ ಮೇರೆಗೆ ಬಳಕೆದಾರರುಗಳು ತೆಗೆದುಕೊಳ್ಳಲಾದಂತಹ ಆರ್ಥಿಕ ನಿರ್ಣಯಗಳ ಮೇಲೆ ಪರಿಣಾಮ ಬೀರುವುದನ್ನು ನ್ಯಾಯಸಮ್ಮತವಾಗಿ ನಿರೀಕ್ಷಿಸಿದಲ್ಲಿ ಅವುಗಳನ್ನು ಪರಿಗಣಿಸಲಾಗುವುದು.

ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ನಡೆಸಲಾಗುವ ಒಂದು ಲೆಕ್ಕಪರಿಶೋಧನೆಯ ಒಂದು ಭಾಗವಾಗಿ, ನಾವು ನಮ್ಮ ಸಂಪೂರ್ಣ ಲೆಕ್ಕಪರಿಶೋಧನೆಯ ಪ್ರಕ್ರಿಯೆಗಳ ಉದ್ದಕ್ಕೂ ನಮ್ಮ ವೃತ್ತೀಯ ತೀರ್ಮಾನವನ್ನು ಚಲಾಯಿಸುವೆವು ಹಾಗೂ ಲೆಕ್ಕಪರಿಶೋಧನಾ ಪ್ರಕ್ರಿಯೆಯ ಉದ್ದಕ್ಕೂ ನಮ್ಮ ವೃತ್ತೀಯ ಅನುಮಾನ ಪ್ರವೃತ್ತಿಯನ್ನು ನಿರ್ವಹಿಸಿಕೊಂಡು ಹೋಗುವೆವು.

– ವಂಚಿಸುವ ಉದ್ದೇಶದಿಂದಲೇ ಆಗಿರಲಿ ಅಥವಾ ಕೈಯಿಂದ ಆಗುವಂತಹ ಅಚಾತುರ್ಯದಿಂದಲೇ ಆಗಿರಲಿ ಇರಬಹುದಾದಂತಹ ವಿಷಯಕ ತಪ್ಪು ಹೇಳಿಕೆಗಳನ್ನು ಗುರುತಿಸುವುದು ಹಾಗೂ ಅವುಗಳ ಸಂಭಾವ್ಯ ಅಪಾಯಗಳ ನಿರ್ಧಾರಣೆ ಮಾಡುವುದು, ಇಂತಹ ಸಂಭಾವ್ಯ ಅಪಾಯಗಳಿಗೆ ಸ್ಪಂದಿಸುವಂತಹ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು ರೂಪಿಸುವುದು ಹಾಗೂ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ನಡೆಸಿಕೊಂಡು ಹೋಗುವುದು ಹಾಗೂ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಲುವಾಗಿ ಸಮರ್ಪಕವಾಗಿರುವಂತಹ ಹಾಗೂ ಸೂಕ್ತವಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರ ದಾಖಲೆಗಳನ್ನು ಪಡೆದುಕೊಳ್ಳುವುದು. ವಂಚನೆ, ಸುಳ್ಳು ಸಹಿ/ಸುಳ್ಳು ದಾಖಲೆ ಸೃಷ್ಟನೆ, ಉದ್ದೇಶಪೂರ್ವಕ ಲೋಪದೋಷಗಳು, ತಪ್ಪುಗಳಿಂದ ಕೂಡಿದ ನಿರೂಪಣೆಗಳು/ ಹೇಳಿಕೆಗಳು ಅಥವಾ ಆಂತರಿಕ ನಿಯಂತ್ರಣಗಳನ್ನು ಪಾಲಿಸದಿರುವುದು, ಇತ್ಯಾದಿಗಳನ್ನು ಒಳಗೊಂಡಿರಬಹುದಾದ್ದರಿಂದ ವಿಷಯಕ ತಪ್ಪು ಹೇಳಿಕೆಗಳನ್ನು ಪತ್ತೆಹಚ್ಚದಿರುವ ಸಂಭಾವ್ಯ ಅಪಾಯವು ತಪ್ಪುಗಳು ಅಥವಾ ಲೋಪದೋಷಗಳ ಕಾರಣದಿಂದ ಇರಬಹುದಾದ ಸಂಭಾವ್ಯ ಅಪಾಯಕ್ಕಿಂತಲೂ ದೊಡ್ಡದಾಗಿರುತ್ತದೆ.

❖ ಸಂದರ್ಭಗಳಿಗೆ ಸೂಕ್ತವೆನಿಸುವ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ನಿರೂಪಿಸುವ ಉದ್ದೇಶದಿಂದ ಲೆಕ್ಕಪರಿಶೋಧನೆಗೆ ಸೂಕ್ತವಾಗಿರುವಂತಹ ಆಂತರಿಕ ನಿಯಂತ್ರಣದ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವುದು. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (3) (i)ರ ಅಡಿಯಲ್ಲಿ, ಕಂಪನಿಯು ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯನ್ನು ಹೊಂದಿರುವುದೇ ಹಾಗೂ ಅಂತಹ ವ್ಯವಸ್ಥೆಯು ಪರಿಣಾಮಕಾರಿತ್ವದಿಂದ ಕಾರ್ಯನಿರ್ವಹಿಸುತ್ತಿರುವುದೇ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಿಪಡಿಸುವಲ್ಲಿಯೂ ಕೂಡ ನಾವು ಜವಾಬ್ದಾರಿಯುತರಾಗಿರುತ್ತೇವೆ.

❖ ಉಪಯೋಗಿಸಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದು ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಅಂದಾಜುಗಳ ನ್ಯಾಯಿಸಮ್ಮತತೆ ಹಾಗೂ ವ್ಯವಸ್ಥಾಪನೆಯು ಈ ನಿಟ್ಟಿನಲ್ಲಿ ಮಾಡಿರುವಂತಹ ಬಹಿರಂಗಪಡಿಸುವಿಕೆಗಳು ಸೂಕ್ತವಾಗಿರುವವೆ ಎಂಬುದರ ಬಗ್ಗೆ ಮೌಲ್ಯಮಾಪನ ಮಾಡುವುದು.

❖ ಕಂಪನಿಯು ತನ್ನ ಕಾರ್ಯಾಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಆಧಾರದ ಮೇರೆಗಿನ ಲೆಕ್ಕವನಿಡುವಿಕೆಯನ್ನು ವ್ಯವಸ್ಥಾಪನೆಯು ಬಳಸಿಕೊಳ್ಳುತ್ತಿರುವುದರ ಸೂಕ್ತತೆಯ ಬಗ್ಗೆ ನಿರ್ಣಯಕ್ಕೆ ಬರುವುದು ಹಾಗೂ ಪಡೆದುಕೊಳ್ಳಲಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರಗಳ ಆಧಾರದ ಮೇರೆಗೆ, ತನ್ನ ಕಾರ್ಯಾಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಸಂಸ್ಥೆಯಾಗಿ ಮುಂದುವರೆಯುವ ಕಂಪನಿಯ ಸಾಮರ್ಥ್ಯತೆಯ ಬಗ್ಗೆ ಗಮನಾರ್ಹವಾದಂತಹ ರೀತಿಯಲ್ಲಿ ಅನುಮಾನವನ್ನು ಸೃಷ್ಟಿಸುವಂತಹ ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಿಷಯಕ ಅನಿಶ್ಚಿತತೆಯು ಇರುವುದೆ ಎಂಬುದರ ಬಗ್ಗೆ ನಿರ್ಣಯಕ್ಕೆ ಬರುವುದು. ವಿಷಯಕ ಅನಿಶ್ಚಿತತೆಯು ಇರುವುದಾಗಿ ನಮ್ಮ ನಿರ್ಣಯವನ್ನು ವ್ಯಕ್ತಪಡಿಸಿದಲ್ಲಿ, ಹಣಕಾಸು ತ:ಖ್ತೆಗಳಲ್ಲಿನ ಬಹಿರಂಗಪಡಿಸುವಿಕೆಗಳಿಗೆ ಸಂಬಂಧಿತ ವರದಿಯಲ್ಲಿ ನಾವು ಸದಸ್ಯರುಗಳ ಗಮನವನ್ನು ಸೆಳೆಯುವ ಅಗತ್ಯತೆಯಿರುತ್ತದೆ ಅಥವಾ, ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದಲ್ಲಿ, ನಮ್ಮ ಅಭಿಪ್ರಾಯವನ್ನು ಮಾರ್ಪಾಡುವ ಅಗತ್ಯತೆಯಿರುತ್ತದೆ. ನಮ್ಮ ನಿರ್ಣಯಗಳು/ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರುಗಳ ವರದಿಯ ದಿನಾಂಕದವರೆಗಿನ ನಾವು ಪಡೆದುಕೊಳ್ಳಲಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರಗಳ ಆಧಾರದ ಮೇರೆಗೆ ಆಗಿರುತ್ತವೆ. ಆದಾಗ್ಯೂ, ಭವಿಷ್ಯದ ಘಟನೆಗಳು ಅಥವಾ ಪರಿಸ್ಥಿತಿಗಳು ಕಂಪನಿಯ ತನ್ನ ಮುಂದುವರೆದುಕೊಂಡು ಹೋಗುತ್ತಿರುವ ಸಂಸ್ಥೆಯಾಗಿ ಮುಂದುವರೆಯುವುದನ್ನು ಸಮಾಪ್ತಿಗೊಳಿಸಬಹುದು.

❖ ಬಹಿರಂಗಪಡಿಸುವಿಕೆಗಳೂ ಸೇರಿದಂತೆ ಹಣಕಾಸು ತ:ಖ್ತೆಗಳ ಒಟ್ಟಾರೆ ನಿರೂಪಣೆ, ರಚನೆ ಹಾಗೂ ಅಡಕಗಳನ್ನು ಮೌಲ್ಯಮಾಪನ ಮಾಡುವುದು ಹಾಗೂ ಹಣಕಾಸು ತಖ್ತೆಗಳು ಮೂಲಾಧಾರವಾಗಿರುವ ವ್ಯವಹಾರಗಳು ಮತ್ತು ಘಟನೆಗಳನ್ನು ನ್ಯಾಯಸಮ್ಮತ ರೀತಿಯಲ್ಲಿ ನಿರೂಪಣೆಯನ್ನು ಸಾಧಿಸುವ

ರೀತಿಯಲ್ಲಿ ಪ್ರತಿನಿಧಿಸುವವೆ ಎಂಬುದರ ಬಗ್ಗೆ ಮೌಲ್ಯಮಾಪನ ಮಾಡುವುದು.

- ವಿಷಯಕತೆಯು ಪ್ರತ್ಯೇಕ ಹಣಕಾಸು ತ:ಖ್ತೆಗಳಲ್ಲಿನ ತಪ್ಪುಗಳಿಂದ ಕೂಡಿದ ಹೇಳಿಕೆಗಳ ಕೊಡುಗೆಯಾಗಿರುತ್ತದೆ, ಅದು ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ, ಹಣಕಾಸು ತ:ಖ್ತೆಗಳನ್ನು ನ್ಯಾಯಸಮ್ಮತವಾದ ಜ್ಞಾನವನ್ನು ಹೊಂದಿರುವ ಓರ್ವ ಬಳಕೆದಾರರ ಆರ್ಥಿಕ ನಿರ್ಣಯಗಳ ಮೇಲೆ ಪ್ರಭಾವವನ್ನು ಭೀರುವ ಸಂಭಾವ್ಯತೆಯನ್ನುಂಟು ಮಾಡುತ್ತದೆ. (i) ಲೆಕ್ಕಪರಿಶೋಧನಾ ಕೆಲಸಕಾರ್ಯಗಳ ವ್ಯಾಪ್ತಿಯನ್ನು ಪೂರ್ವಭಾವಿಯಾಗಿ ಯೋಜಿಸುವಲ್ಲಿ ಹಾಗೂ (ii) ಹಣಕಾಸು ತ:ಖ್ತೆಗಳಲ್ಲಿನ ಗುರುತಿಸಲ್ಪಟ್ಟಿರುವ ಯಾವುದೇ ತಪ್ಪು ಹೇಳಿಕೆಗಳ ಪ್ರಭಾವವನ್ನು ಮೌಲ್ಯಮಾಪನ ಮಾಡುವಲ್ಲಿ ನಾವು ಪರಿಮಾಣಾತ್ಮಕ ವಿಷಯಕತೆ ಹಾಗೂ ಗುಣಾತ್ಮಕ ಅಂಶಗಳನ್ನು ಪರಿಗಣಿಸುವೆವು.

- ಇನ್ನಿತರೆ ವಿಷಯಗಳ ನಡುವೆ, ಲೆಕ್ಕಪರಿಶೋಧನೆಯ ಪೂರ್ವಭಾವಿಯಾಗಿ ಯೋಜಿಸಲ್ಪಟ್ಟಿರುವ ವ್ಯಾಪ್ತಿ ಮತ್ತು ಸಮಯ ಹಾಗೂ ನಮ್ಮ ಲೆಕ್ಕಪರಿಶೋಧನೆಯ ವೇಳೆಯಲ್ಲಿ ನಾವು ಗುರುತಿಸಬಹುದಾದ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಲೋಪದೋಷಗಳನ್ನು ಒಳಗೊಂಡಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಗಮನಾರ್ಹ ಅಂಶಗಳನ್ನು ಹಣಕಾಸು ತ:ಖ್ತೆಗಳ ತಯಾರಿಕೆಯ ಜವಾಬ್ದಾರಿಯನ್ನು ಹೊಂದಿರುವ ವ್ಯವಸ್ಥಾಪನೆಯ ಗಮನಕ್ಕೆ ತರುವೆವು.

- ನಮ್ಮ ಸ್ವತಂತ್ರ್ಯತೆಯ ಬಗ್ಗೆ ಸೂಕ್ತ ಔಚಿತ್ಯತೆಗಳ ಅಗತ್ಯತೆಗಳನ್ನು ನಾವು ಅನುಸರಿಸಿರುವೆವು ಎಂಬುದರ ಬಗ್ಗೆಯೂ ನಾವು ಹೇಳಿಕೆಯನ್ನು ಹಾಗೂ ನಮ್ಮ ಸ್ವತಂತ್ರ್ಯತೆಯ ಮೇಲೆ ಹೊರೆಯಾಗಬಹುದೆಂಬುದಾಗಿ ನ್ಯಾಯಸಮ್ಮತವಾಗಿ ಯೋಚಿಸಬಹುದಾದ ಎಲ್ಲಾ ಸಂಬಂಧಗಳು ಹಾಗೂ ಇತರೆ ವಿಷಯಗಳನ್ನು ಹಾಗೂ ಅನ್ವಯಗೊಳ್ಳುವೆಡೆಗಳಲ್ಲಿ ಸಂಬಂಧಿತ ಮುಂಜಾಗ್ರತಾ ಕ್ರಮಗಳನ್ನೂ ಸಹ ಹಣಕಾಸು ತ:ಖ್ತೆಗಳ ತಯಾರಿಕೆಯ ಜವಾಬ್ದಾರಿಯನ್ನು ಹೊಂದಿರುವ ವ್ಯವಸ್ಥಾಪನೆಯ ಗಮನಕ್ಕೆ ತರುವೆವು.

ಹಣಕಾಸು ತ:ಖ್ತೆಗಳ ತಯಾರಿಕೆಯ ಜವಾಬ್ದಾರಿಯನ್ನು ಹೊಂದಿರುವ ವ್ಯವಸ್ಥಾಪನೆಯ ಗಮನಕ್ಕೆ ತರಲಾದಂತಹ ವಿಷಯಗಳಿಂದ ಪ್ರಸಕ್ತ ಅವಧಿಯ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಅತ್ಯಂತ ಗಮನಾರ್ಹ ವಿಷಯಗಳನ್ನು ನಾವು ನಿರ್ಧಾರಣೆ ಮಾಡುವೆವು ಮತ್ತು ಆದ್ದರಿಂದ ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳು. ನಿಯಮನಿಬಂಧನೆಗಳು ಅಥವಾ ನಿಯಂತ್ರಣಗಳು ವಿಷಯದ ಬಗ್ಗೆ ಸಾರ್ವಜನಿಕವಾಗಿ ಬಹಿರಂಗಪಡಿಸುವುದನ್ನು ಪ್ರತಿಬಂಧಿಸಿರದ ಹೊರತು, ನಾವು ಈ ವಿಷಯಗಳನ್ನು ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ವಿವರಿಸುವೆವು ಅಥವಾ ಅತ್ಯಂತ ಅಪರೂಪದ ಸಂದರ್ಭಗಳಲ್ಲಿ, ಆ ರೀತಿ ಮಾಡುವುದರಿಂದ ಪ್ರತೀಕೂಲ ಪರಿಣಾಮಗಳ ಕಾರಣ ಆ ರೀತಿ ತಿಳಿಸುವುದರಿಂದ ಸಾರ್ವಜನಿಕ ಹಿತಾಸಕ್ತಿಯು ಕುಂಟಿತಗೊಳ್ಳುವ ನ್ಯಾಯಸಮ್ಮತ ನಿರೀಕ್ಷೆಯು ಇದ್ದಲ್ಲಿ ವಿಷಯವನ್ನು ನಮ್ಮ ವರದಿಯಲ್ಲಿ ತಿಳಿಸಕೂಡದು ಎಂಬುದಾಗಿಯೂ ನಾವು ನಿರ್ಧಾರಣೆ ಮಾಡುವೆವು.

ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ

1. ಕೇಂದ್ರ ಸರ್ಕಾರವು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143ರ ಉಪ–ಪರಿಚ್ಛೇದ 11ರ ಷರತ್ತುಗಳ ಅಗತ್ಯತೆಯಂತೆ ನೀಡಿರುವಂತಹ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಅಗತ್ಯತೆಯಂತೆ, ಈ ಆದೇಶದ ಕಂಡಿಕೆ 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳ ಮೇಲೆ ಹೇಳಿಕೆಯನ್ನು ನಾವು "ಅನುಬಂಧ–ಬಿ"ರಲ್ಲಿ ನೀಡಿರುವೆವು.

2. ಅಧಿನಿಯಮದ ಪರಿಚ್ಛೇದ 143 (3)ರ ಅನುಸಾರ ಅಗತ್ಯತೆಯಂತೆ, ನಾವು ಈ ಕೆಳಗಿನವುಗಳನ್ನು ವರದಿ ಮಾಡುತ್ತಿರುವೆವು.

ಎ) ನಮ್ಮ ಅತ್ಯುತ್ತಮ ಅರಿವು ಹಾಗೂ ನಂಬಿಕೆ/ವಿಶ್ವಾಸದ ಅನುಸಾರ ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಅಗತ್ಯವಿರುವುದಾಗಿ ಕಂಡುಬಂದಂತಹ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ಒದಗಿಸುವಂತೆ ನಾವು ಕೋರಿರುವೆವು ಹಾಗೂ ಪಡೆದುಕೊಂಡಿರುವೆವು.

ಬಿ) ನಾವು ಅಂತಹ ಪುಸ್ತಕಗಳನ್ನು ಪರಿಶೀಲಿಸಿದ್ದರಿಂದ ಕಂಡುಬಂದಂತೆ ಕಂಪನಿಯು ಅಧಿನಿಯಮ/ನಿಯಮಗಳ ಅಗತ್ಯತೆಯಂತೆ ಲೆಕ್ಕಪತ್ರಗಳ ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದು.

ಸಿ) ಈ ವರದಿಯಲ್ಲಿ ವ್ಯವಹರಿಸಲಾಗಿರುವಂತಹ ಆಸ್ತಿ–ಜವಾಬ್ದಾರಿ ತ:ಖ್ತೆ, ಇತರೆ ಸಮಗ್ರ ವರಮಾನವೂ ಸೇರಿದಂತೆ ಲಾಭ ಮತ್ತು ನಷ್ಟ ತ:ಖ್ತೆ, ನಗದು/ಹಣಕಾಸಿನ ಹರಿವು ತ:ಖ್ತೆ ಹಾಗೂ ಈಕ್ವಿಟಿಯಲ್ಲಿನ ಬದಲಾವಣೆಗಳು ಸಂಬಂಧಿತ ಲೆಕ್ಕಪತ್ರಗಳ ಪುಸ್ತಕಗಳೊಂದಿಗೆ ತಾಳೆ ಹೊಂದುತ್ತವೆ.

ಡಿ) ನಮ್ಮ ಅಭಿಪ್ರಾಯದಲ್ಲಿ ಮೇಲೆ ತಿಳಿಸಲಾದಂತಹ ಪ್ರತ್ಯೇಕ ಹಣಕಾಸು ತ:ಖ್ತೆಗಳು ಸಂಬಂಧಿತ ನಿಯಮಗಳ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನು ಅನುಸರಿಸಿರುವವು.

ಇ) ಕಂಪನಿಯು ಸರ್ಕಾರಿ ಕಂಪನಿಯಾಗಿರುವುದು ಮತ್ತು ಆದ್ದರಿಂದ ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್. 463 (ಇ)

ದಿನಾಂಕ 5 ಜೂನ್ 2015ರ ಅನುಸಾರ, ಅಧಿನಿಯಮದ ಪರಿಚ್ಛೇದ 164 (2)ರ ಅಡಿಯಲ್ಲಿ ನಿರ್ದೇಶಕರುಗಳನ್ನು ಅನರ್ಹಗೊಳಿಸುವುದಕ್ಕೆ ಸಂಬಂಧಿತ ಅನುವುಗಳು ಹಾಗೂ ಅಧಿನಿಯಮದ ಪರಿಚ್ಛೇದ 197ರ ಅಡಿಯಲ್ಲಿ ವ್ಯವಸ್ಥಾಪನಾ ಅಧಿಕಾರಿಗಳ ಸಂಬಳ ಸಂಭಾವನೆಗಳಿಗೆ ಸಂಬಂಧಿತ ವಿಷಯಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

(ಎಫ್) ಕಂಪನಿಯ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆಗೆ ಸಂಬಂಧಿಸಿದಂತೆ ಹಾಗೂ ಅಂತಹ ನಿಯಂತ್ರಣಗಳು ಪರಿಣಾಮಕಾರಿತ್ವದಿಂದ ಕಾರ್ಯಾಚರಣೆಗೊಳ್ಳುತ್ತಿರುವುದಕ್ಕೆ ಸಂಬಂಧಿಸಿದಂತೆ, ಅನುಬಂಧ "ಎ"ನಲ್ಲಿ ನೀಡಲಾಗಿರುವ ನಮ್ಮ ಪ್ರತ್ಯೇಕ ವರದಿಯನ್ನು ಉಲ್ಲೇಖಿಸುವುದು. ನಮ್ಮ ವರದಿಯು, ಕಂಪನಿಯ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆ ಹಾಗೂ ಅದರ ಪರಿಣಾಮಕಾರಿತ್ವದ ಬಗ್ಗೆ ಬದಲಾವಣೆಗಳನ್ನು/ತಿದ್ದುಪಡಿಗಳನ್ನು ಮಾಡದ ಅಭಿಪ್ರಾಯವನ್ನು ವ್ಯಕ್ತಪಡಿಸುವುದು.

ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರುಗಳು) ನಿಯಮಗಳು, 2014ರ ನಿಯಮ II ಹಾಗೂ ಕಾಲಾನುಕಾಲಕ್ಕೆ ಅವುಗಳಿಗೆ ಮಾಡಲಾಗಿರುವಂತಹ ತಿದ್ದುಪಡಿಗಳ ಅನುವುಗಳ ಅನುಸಾರ ಲೆಕ್ಕಪರಿಶೋಧಕರುಗಳ ವರದಿಯಲ್ಲಿ ಸೇರ್ಪಡೆಗೊಳಿಸಬೇಕಾದ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಲಾಗಿರುವಂತಹ ಅತ್ಯುತ್ತಮ ಮಾಹಿತಿಯಂತೆ ಹಾಗೂ ನಮಗೆ ನೀಡಲಾಗಿರುವಂತಹ ವಿವರಣೆಗಳಂತೆ :

i. ಕಂಪನಿಯು ಹಣಕಾಸು ಸ್ಥಿತಿಗತಿಯ ಮೇಲೆ ಬಾಕಿಯಿರುವ ವಿವಾದಗಳ ಪ್ರಭಾವಗಳನ್ನು ತನ್ನ ಪ್ರತ್ಯೇಕ ಹಣಕಾಸು ತ:ಖ್ತೆಗಳಲ್ಲಿ ಬಹಿರಂಗಪಡಿಸಿರುವುದು. ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವ ಪ್ರತ್ಯೇಕ ಹಣಕಾಸು ತ:ಖ್ತೆಗಳ ಟಿಪ್ಪಣಿ 25ನ್ನು ಉಲ್ಲೇಖಿಸುವುದು.

ii. ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವ ಪ್ರತ್ಯೇಕ ಹಣಕಾಸು ತ:ಖ್ತೆಗಳಲ್ಲಿ ಪರಿಗಣಿಸುವ ಅಗತ್ಯತೆಯನ್ನು ಹೊಂದಿರುವ ಅನ್ವಯಗೊಳ್ಳುವ ಅಧಿನಿಯಮಗಳು ಅಥವಾ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಷಯಕ ನಷ್ಟಗಳ ಸಂಭಾವ್ಯತೆಯು ಇರುವಂತಹ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಕಂಪನಿಯು ಮಾಡಿಕೊಂಡಿರುವುದಿಲ್ಲ. ಮುಂದುವರೆದು, ಕಂಪನಿಯು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವ ಪ್ರತ್ಯೇಕ ಹಣಕಾಸು ತ:ಖ್ತೆಗಳ ಟಿಪ್ಪಣಿ 26(ಸಿ)ಯಲ್ಲಿ ಉಲ್ಲೇಖಿಸಿರುವಂತೆ ಯಾವುದೇ ಜನ್ಯ ಗುತ್ತಿಗೆಗಳನ್ನು ಕಂಪನಿಯು ಮಾಡಿಕೊಂಡಿರುವುದಿಲ್ಲ.

iii. ಕಂಪನಿಯ ಹೂಡಿಕೆದಾರರ ಶೈಕ್ಷಣಿಕ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸುವ ಅಗತ್ಯತೆಯಿದ್ದಂತಹ ಯಾವುದೇ ಮೊತ್ತಗಳು ಇರಲಿಲ್ಲ.

ಕಂಪನಿಯ ಲೆಕ್ಕಪತ್ರ ಪುಸ್ತಕಗಳು ಮತ್ತು ದಾಖಲೆಗಳನ್ನು ನಾವು ಮಾಡಿದ ಪರಿಶೀಲನೆಯ ಆಧಾರದ ಮೇರೆಗೆ, ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ಒದಗಿಸಲಾದ ವಿವರಣೆಗಳಂತೆ ಸೂಕ್ತವಾಗಿರುವುದಾಗಿ ನಾವು ಪರಿಗಣಿಸಿದ್ದರಿಂದ, ನಾವು ನಮ್ಮ ವರದಿಯನ್ನು ಅಧಿನಿಯಮದ ಪರಿಚ್ಛೇದ 143(5)ರ ಅನುಸಾರ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ನಿರ್ದೇಶನಗಳು ಮತ್ತು ಉಪ–ನಿರ್ದೇಶನಗಳ ಅನುಸಾರ ವರದಿಯನ್ನು "ಅನುಬಂಧ ಸಿ"ಯಲ್ಲಿ ಲಗತ್ತಿಸಿರುವೆವು.

ರಾವ್ ಅಸೋಸಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ಸಂಖ್ಯೆ : 003080S
ಸಹಿ/–
(ಸಂದೀಪ್ ಎಸ್. ಶೇಖರ್)
ಪಾಲುದಾರರು
ಸದಸ್ಯತ್ವ ಸಂಖ್ಯೆ : 232631
ಯು.ಡಿ.ಐ.ಎನ್. ಸಂಖ್ಯೆ : 21232631AAAAAZ2265

ಸ್ಥಳ : ಬೆಂಗಳೂರು
ದಿನಾಂಕ : 31.12.2020

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ 31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಸಾಲಿಗೆ ಲೆಕ್ಕಪತ್ರಗಳ ಮೇಲೆ ಲೆಕ್ಕಪರಿಶೋಧಕರ ವರದಿಯ "ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ" ಶೀರ್ಷಿಕೆಯ ಅಡಿಯಲ್ಲಿ ಕಂಡಿಕೆ 1ರಲ್ಲಿ ಉಲ್ಲೇಖಿಸಲ್ಪಟ್ಟಿರುವ ಅನುಬಂಧ – "ಎ"

ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಪರಿಚ್ಛೇದ 143ರ ಉಪ–ಪರಿಚ್ಛೇದ 3ರ ಷರತ್ತು (i) ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿ.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ (ಕಂಪನಿ) 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಅದೇ ದಿನಾಂಕಕ್ಕೆ ಅಂತ್ಯಗೊಂಡಂತಹ ಹಣಕಾಸು ಸಾಲಿಗೆ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವ ಕಂಪನಿಯ ಪ್ರತ್ಯೇಕ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯ ಭಾಗವಾಗಿ ಹಣಕಾಸು ವರದಿಯ ಮೇಲೆ ನಾವು ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಯನ್ನು ಮಾಡಿದೆವು.

ಆಂತರಿಕ ಹಣಕಾಸು ನಿಯಂತ್ರಣಗಳಿಗೆ ವ್ಯವಸ್ಥಾಪನೆಯ ಜವಾಬ್ದಾರಿ

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ನಿಗಮದಿಂದ ಸ್ಥಾಪಿಸಲಾಗಿರುವ ಹಣಕಾಸು ವರದಿಯ ಮಾನದಂಡವನ್ನು ಆಧರಿಸಿದಂತೆ ಆಂತರಿಕ ನಿಯಂತ್ರಣವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಹೋಗುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು, ಕಂಪನಿಯ ಕಾರ್ಯನೀತಿಗಳಿಗೆ ಬದ್ಧತೆಯಿಂದ ಕೂಡಿರುವುದನ್ನೂ ಒಳಗೊಂಡಂತೆ ತನ್ನ ವ್ಯಾಪಾರವ್ಯವಹಾರವನ್ನು ನಿಯಮಗಳ ಅನುಸಾರ ಮತ್ತು ದಕ್ಷತೆಯಿಂದ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿತ್ವದಿಂದ ಕಾರ್ಯಚರಣೆಗೊಳ್ಳುತ್ತಿದ್ದ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣದ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ, ತನ್ನ ಆಸ್ತಿಗಳನ್ನು ಸಂರಕ್ಷಿಸಿಕೊಳ್ಳುವುದು, ವಂಚನೆಗಳು ಮತ್ತು ತಪ್ಪುಗಳು ಸಂಭವಿಸುವುದನ್ನು ತಡೆಯುವುದು ಮತ್ತು ಅಂತಹ ಪ್ರಕರಣಗಳನ್ನು ಪತ್ತೆಹಚ್ಚುವುದು, ಲೆಕ್ಕವನ್ನಿಡುವಿಕೆಯ ದಾಖಲೆಗಳ ಯಥಾರ್ಥತೆ ಮತ್ತು ಪರಿಪೂರ್ಣತೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಶ್ವಸನೀಯತೆಯಿಂದ ಕೂಡಿದ ಹಣಕಾಸಿಗೆ ಸಂಬಂಧಿತ ಮಾಹಿತಿಯನ್ನು ಸಮಯೋಚಿತವಾಗಿ ತಯಾರಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರುಗಳ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಗಳ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವ ಮಾರ್ಗಸೂಚಿ ಟಿಪ್ಪಣಿ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹಾಗೂ ಮಾರ್ಗಸೂಚಿಗಳು ಹೊಂದಿರುತ್ತವೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ನಮ್ಮ ಲೆಕ್ಕಪರಿಶೋಧನೆಯು, ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ಇರಬಹುದಾದ ವಿಷಯಕ ದುರ್ಬಲತೆಯ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದು ಹಾಗೂ ನಿರ್ಧಾರಣೆ ಮಾಡಲಾದ ಸಂಭಾವ್ಯ ಅಪಾಯದ ಆಧಾರದ ಮೇರೆಗೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿರುತ್ತದೆ. ಆಯ್ಕೆಮಾಡಿಕೊಳ್ಳಲಾದ ಕಾರ್ಯವಿಧಾನವು ಹಣಕಾಸು ತ:ಖ್ತೆಗಳಲ್ಲಿನ ವಂಚನೆಗಳ ಕಾರಣವಾಗಿರಲಿ ಅಥವಾ ತಪ್ಪುಗಳನ್ನು ಎಸಗುವ ಕಾರಣಗಳಿಂದಾಗಿರಲೀ ವಿಷಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ

ನಾವು ಪಡೆದುಕೊಂಡಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರಗಳು ನಿಗಮದ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಆಧಾರವನ್ನು ಒದಗಿಸುವ ಸಲುವಾಗಿ ಸಮರ್ಪಕವಾಗಿರುತ್ತವೆ ಹಾಗೂ ಸೂಕ್ತವಾಗಿರುತ್ತವೆ ಎಂಬ ವಿಶ್ವಾಸವು ನಮಗಿದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ತಾತ್ಪರ್ಯ

ಹಣಕಾಸು ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವು, ಹಣಕಾಸು ವರದಿಯ ವಿಶ್ವಸನೀಯತೆಯನ್ನು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದಕ್ಕಾಗಿ ವಿನ್ಯಾಸಗೊಳಿಸುವ ಹಾಗೂ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸು ತ:ಖ್ತೆಗಳನ್ನು ತಯಾರಿಸುವ ಪ್ರಕ್ರಿಯೆಯಾಗಿರುತ್ತದೆ. ಕಂಪನಿಯ ಹಣಕಾಸು ವರದಿಯ ಮೇಲಿನ ಕಾರ್ಯನೀತಿಗಳು ಮತ್ತು ಕಾರ್ಯವಿಧಾನಗಳು ಈ ಮುಂದಿನ ಅಂಶಗಳನ್ನು ಒಳಗೊಂಡಿರುತ್ತವೆ ಆಂತರಿಕ ಹಣಕಾಸು ನಿಯಂತ್ರಣದ – (1) ಕಂಪನಿಯ ಆಸ್ತಿಗಳ ವ್ಯವಹಾರಗಳು ಮತ್ತು ವಿನ್ಯಾಸ/ ವ್ಯವಸ್ಥೆಯನ್ನು ನ್ಯಾಯಸಮ್ಮತವಾದಂತಹ ಮತ್ತು ಯಥಾರ್ಥತೆಯಿಂದ ಕೂಡಿದ ರೀತಿಯಲ್ಲಿ ಪ್ರತಿಬಿಂಭಿಸುವುದು–(2) ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ ಅನುಮತಿ ನೀಡುವ ಸಲುವಾಗಿ ಅಗತ್ಯವಿರುವಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ ಹಾಗೂ ಕಂಪನಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಕಂಪನಿಯ ವ್ಯವಸ್ಥಾಪನೆ/ಆಡಳಿತ ಮಂಡಳಿಯ ಮತ್ತು ನಿರ್ದೇಶಕರುಗಳ ಅನುಮತಿಯ ಅನುಸಾರವೇ ಮಾಡಲಾಗಿದೆ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು ಹಾಗೂ (3) ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ವಿಷಯಕ ಪ್ರಭಾವವನ್ನು ಭೀರುವಂತಹ ಕಂಪನಿಯ ಆಸ್ತಿಗಳ ಅನಧಿಕೃತ ಸ್ವಾಧೀನತೆ, ಬಳಕೆ ಅಥವಾ ವಿಲೆವಾರಿಗಳನ್ನು ತಡೆಯುವುದು ಅಥವಾ ಸಮಯೋಚಿತವಾಗಿ ಪತ್ತೆಹಚ್ಚುವುದು.

ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು

ವಂಚನೆ/ಒಳಸಂಚಿನ ಸಂಭಾವ್ಯತೆ ಅಥವಾ ಸಮರ್ಪಕ ಆಡಳಿತ ನಿಯಂತ್ರಣಗಳನ್ನು ಕಡೆಗಣಿಸುವುದು, ಇವುಗಳನ್ನೂ ಒಳಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳ ಕಾರಣ ವಿಷಯಕ ತಪ್ಪು ಹೇಳಿಕೆಗಳು ಅಥವಾ ವಂಚನೆಗಳು ಸಂಭವಿಸಬಹುದು ಹಾಗೂ ಅವುಗಳನ್ನು ಪತ್ತೆಹಚ್ಚಲು ಸಾಧ್ಯವಾಗದಿರಬಹುದು. ಅಲ್ಲದೆಯೇ, ಭವಿಷ್ಯದ ಅವಧಿಗಳಿಗೆ ಸಂಬಂಧಿತ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಪ್ರಕ್ಷೇಪಿಸುವುದು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಸ್ಥಿತಿಗತಿಗಳಲ್ಲಿನ ಬದಲಾವಣೆ ಅಥವಾ ಕಾರ್ಯನೀತಿಗಳು ಅಥವಾ ಕಾರ್ಯವಿಧಾನಗಳು ಹಾಳಾಗುವುದರಕಾರಣ ಅಸಮರ್ಪಕಗೊಳ್ಳುವ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುತ್ತದೆ.

ನಮ್ಮ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಮತ್ತು ನೀಡಲಾಗಿರುವ ವಿವರಣೆಗಳಂತೆ ಕಂಪನಿಯು ಎಲ್ಲಾ ವಿಷಯಕ ಅಂಶಗಳಲ್ಲಿ ಹಣಕಾಸು ವರದಿಯ ಮೇಲೆ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿರುವುದು ಹಾಗೂ ಭಾರತದ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಯ ಮೇಲೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣಗಳ ಅತ್ಯಗತ್ಯ ಭಾಗಗಳನ್ನು ಕಂಪನಿಯು ಪರಿಗಣಿಸಿದಂತೆ ಸ್ಥಾಪಿಸಿರುವ ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣದ ಆಧಾರದ ಮೇರೆಗೆ ಅಂತಹ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯು 31 ಮಾರ್ಚ್ 2020ರಲ್ಲಿದ್ದಂತೆ ಪರಿಣಾಮಕಾರಿತ್ವದಿಂದ ಕಾರ್ಯಾಚರಣೆಯಲ್ಲಿದ್ದಿತು.

ರಾವ್ ಅಸೋಸಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ಸಂಖ್ಯೆ : 003080S
ಸಹಿ/–
(ಜಿ ಸಂದೀಪ್ ಎಸ್ ಶೇಕರ್)
ಪಾಲುದಾರರು
ಸದಸ್ಯತ್ವ ಸಂಖ್ಯೆ : 232631
ಸ್ಥಳ : ಬೆಂಗಳೂರು
ದಿನಾಂಕ :24–06–2021
ಯು.ಡಿ.ಐ.ಎನ್. ಸಂಖ್ಯೆ : 21232631AAAAAZ2265

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – ಬಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಸದಸ್ಯರುಗಳಿಗೆ ಲೆಕ್ಕಪರಿಶೋಧಕರ ವರದಿಯ ಲೆಕ್ಕ ಪತ್ರಗಳು "ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ" ಶೀರ್ಷಿಕೆಯ ಅಡಿಯಲ್ಲಿ ಕಂಡಿಕೆ 2ರಲ್ಲಿ ಉಲ್ಲೇಖಿಸಲ್ಪಟ್ಟಿರುವ ಅನುಬಂಧ – "ಬಿ"

(i) ಕಂಪನಿಯ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ :

ಎ) ಕಂಪನಿಯು ಸ್ಥಿರಾಸ್ತಿಗಳ ಪರಿಮಾಣಾತ್ಮಕ ವಿವರಗಳು ಹಾಗೂ ಯಾವ ಸ್ಥಿತಿಯಲ್ಲಿರುತ್ತವೆ ಎಂಬುದನ್ನು ಒಳಗೊಂಡಂತೆ ಸಂಪೂರ್ಣ ವಿವರಗಳನ್ನು ತೋರಿಸಿದಂತೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಿರುವುದು.

ಬಿ) ಆಡಳಿತ ಮಂಡಳಿಯು ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಕಂಪನಿಯು ಚರಾಸ್ತಿಗಳ ಭೌತಿಕ ಪರಿಶೀಲನೆಗಾಗಿ ನಿಯತವಾಗಿ ದ್ವೈವಾರ್ಷಿಕ ಕಾರ್ಯಕ್ರಮವನ್ನು ಹೊಂದಿರುವುದು. ಆದಾಗ್ಯೂ, ಕಂಪನಿಯು 30 ಸೆಪ್ಟಂಬರ್ 2019ರವರೆಗೂ ಪ್ರಸಕ್ತ ಸಾಲಿನಲ್ಲಿ ಸ್ಥಿರಾಸ್ತಿಗಳ ಭೌತಿಕ ತಪಾಸಣೆಯನ್ನು ಹಂತಾನುಹಂತವಾಗಿ ಮಾಡಿರುತ್ತದೆ.

ಸಿ) ನಮಗೆ ಒದಗಿಸಲಾಗಿರುವ ಮಾಹಿತಿಯಂತೆ, ಕಂಪನಿಯು ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ ಸ್ಥಿರಾಸ್ತಿಗಳ ಹಕ್ಕು ಪತ್ರಗಳನ್ನು ಹೊಂದಿರುವುದು ಎಂಬುದಾಗಿ ನಾವು ಈ ಮೂಲಕ ವರದಿ ಮಾಡುತ್ತಿರುವೆವು.

(i) ಅರಸೀಕೆರೆಯಲ್ಲಿ ಕಟ್ಟಡ – ಕಾರ್ಯನಿರ್ವಾಹಕ ಅಭಿಯಂತರರು, ಎತ್ತಿನಹೊಳೆ ಯೋಜನೆ ವಿಭಾಗ ಕಚೇರಿ–3 : ಕಟ್ಟಡವನ್ನು ಅಗತ್ಯ ಅನುಮೋದನೆಗಳೊಂದಿಗೆ ಹಾಗೂ ಕಂಪನಿಯ ಯೋಜನೆಗಳು ಪೂರ್ಣಗೊಂಡನಂತರ ಮೇಲೆ ತಿಳಿಸಲಾದ ಭೂಮಿಯನ್ನು ಲೋಕೋಪಯೋಗಿ ಇಲಾಖೆಗೆ ಹಿಂತಿರುಗಿಸತಕ್ಕದ್ದು ಎಂಬ ಷರತ್ತಿನೊಂದಿಗೆ ಲೋಕೋಪಯೋಗಿ ಇಲಾಖೆಯ ಭೂಮಿಯಲ್ಲಿ ನಿರ್ಮಿಸಲಾಗಿರುವುದು.

(ii) ತುಮಕೂರಿನಲ್ಲಿ ಭೂಮಿ ಮತ್ತು ಕಚೇರಿ ಕಟ್ಟಡ, ಹೇಮಾವತಿ ಕಾಲೋನಿ : ಕಾವೇರಿ ನೀರಾವರಿ ನಿಗಮ ನಿಯಮಿತವು ಪ್ರಸ್ತುತ ಈ ಭೂಮಿಯ ಹಕ್ಕು ಪತ್ರವನ್ನು ಹೊಂದಿರುವುದು, ಅದನ್ನು ಕಂಪನಿಗೆ ಇನ್ನೂ ವರ್ಗಾಯಿಸಬೇಕಿರುತ್ತದೆ. ಆ ಭೂಮಿಯ ಮೇಲೆ ಕಂಪನಿಯು ಕಟ್ಟಡವನ್ನು ನಿರ್ಮಿಸಿರುವುದು.

(iii) ಬೆಂಗಳೂರಿನಲ್ಲಿ ನೋಂದಾಯಿತ ಕಚೇರಿಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತವು ಪ್ರತ್ಯೇಕಗೊಳಿಸುವಿಕೆ ಯೋಜನೆಯ ಅನುಸಾರ ಕಂಪನಿಗೆ ವರ್ಗಾಯಿಸಿರುವುದು. ಅದನ್ನು ಕಂಪನಿಯು ತನ್ನ ಕಾರ್ಯಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳುತ್ತಿರುವುದು.

(ii) ಕಂಪನಿಯ ಸರಕುಸಾಮಗ್ರಿಗಳಿಗೆ ಸಂಬಂಧಿಸಿದಂತೆ

ಭೂಮಿ ಅಗೆತದ ಸಮಯದಲ್ಲಿ ದೊರೆಯುವ ರಬ್ಬಲ್ ಮತ್ತು ಇತರೆ ಸಾಮಗ್ರಿಗಳನ್ನು ಹೊರತುಪಡಿಸಿದಂತೆ ಕಂಪನಿಯು ಯಾವುದೇ ಸರಕುಸಾಮಗ್ರಿಗಳನ್ನು ಹೊಂದಿರುವುದಿಲ್ಲ ಹಾಗೂ ಅವು ವಿಷಯಕ ಅಂಶವಾಗಿರುವುದಿಲ್ಲವಾದ್ದ ಕಾರಣ ಮತ್ತು ಅವುಗಳನ್ನು ಸಂಗ್ರಹಿಸಿಡುವುದು, ಅಂತಹ ಸಾಮಗ್ರಿಗಳ ಅಳತೆ ಮಾಡುವುದು, ನಿರ್ವಹಿಸುವುದು ಬಹಳ ಕಾಷ್ಟಸಾಧ್ಯವಾಗಿರುವುದರಿಂದ, ಕಂಪನಿಯು ಅಂತಹ ಸರಕುಸಾಮಗ್ರಿಗಳ ಭೌತಿಕ ಪರಿಶೀಲನೆಯನ್ನು ನಡೆಸಿರುವುದಿಲ್ಲ. ಇವುಗಳನ್ನು ಲೆಕ್ಕಪತ್ರ ಪುಸ್ತಕಗಳಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ.

(iii) ಸಾಲಗಳು ಮತ್ತು ಮುಂಗಡಗಳು

ಕಂಪನಿಯು ಭದ್ರತೆಯಿಂದ ಕೂಡಿದ ಅಥವಾ ಭದ್ರತೆಯಿಂದ ಕೂಡಿರದ ಯಾವುದೇ ಸಾಲಗಳನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 189ರ ಅಡಿಯಲ್ಲಿ ನಿರ್ವಹಿಸಲಾಗಿರುವ ರಿಜಿಸ್ಟರಿನಲ್ಲಿ ವ್ಯಾಪಿಸುವಂತಹ ಕಂಪನಿಗಳಿಗೆ, ಸಂಸ್ಥೆಗಳಿಗೆ, ನಿಯಮಿತ ಜವಾಬ್ದಾರಿಯ ಪಾಲುದಾರಿಕೆ ಸಂಸ್ಥೆಗಳಿಗೆ ಅಥವಾ ಇತರೆ ತಂಡಗಳಿಗೆ ನೀಡಿರುವುದಿಲ್ಲ. ಅದರಂತೆಯೇ, ಮೇಲೆ ತಿಳಿಸಲಾದ ಆದೇಶದ ಷರತ್ತುಗಳು 3 (iii) (ಎ) ಯಿಂದ (ಸಿ) ವರೆಗಿನ ಷರತ್ತುಗಳ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

(iv) ಸಾಲಗಳು, ಹೂಡಿಕೆಗಳು ಮತ್ತು ಖಾತರಿಗಳು

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ಕಂಪನಿಯು, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 185 ಮತ್ತು 186ರ ಅಡಿಯಲ್ಲಿ ವ್ಯಾಪಿಸಿರುವಂತಹ ತಂಡಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ ಅಥವಾ ಹೂಡಿಕೆಗಳನ್ನು ಮಾಡಿರುವುದಿಲ್ಲ ಅಥವಾ ಯಾವುದೇ ಖಾತರಿಗಳನ್ನು ಮತ್ತು ಭದ್ರತೆಗಳನ್ನು ನೀಡಿರುವುದಿಲ್ಲ. ಆದ್ದರಿಂದ ಮೇಲೆ ತಿಳಿಸಲಾದಂತಹ ಆದೇಶದ ಷರತ್ತು 3 (iv) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

(v) ಠೇವಣಿಗಳ ಸ್ವೀಕೃತಿ

ಕಂಪನಿಯು ಪರಿಚ್ಛೇದ 73ರಿಂದ 76ರ ಅನುವುಗಳು ಅಥವಾ ಕಂಪನಿಗಳ ಅಧಿನಿಯಮ 2013ರ ಇತರೆ ಸಂಬಂಧಿತ ಅನುವುಗಳ ಅಡಿಯಲ್ಲಿ ಅರ್ಥೈಸುವ ರೀತಿಯಲ್ಲಿ ಯಾವುದೇ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ. ಆದ್ದರಿಂದ, ಮೇಲೆ ತಿಳಿಸಲಾದಂತಹ ಆದೇಶದ ಷರತ್ತು ಸಂಖ್ಯೆ 3 (v) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

(vi) ವೆಚ್ಚ ದಾಖಲೆಗಳ ನಿರ್ವಹಣೆ :

ನಮ್ಮ ಅತ್ಯುತ್ತಮ ಅರಿವು ಮತ್ತು ನಮಗೆ ನೀಡಲಾಗಿರುವ ವಿವರಣೆಗಳಂತೆ, ಕಂಪನಿಗಳ ವಾಸ್ತವಿಕ ಖರ್ಚುವೆಚ್ಚಗಳ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ ನಿಯಮಗಳು, 2014ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 148ರ ಉಪ–ಪರಿಚ್ಛೇದ (1)ರ ಅಡಿಯ ಉತ್ಪಾದನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಂಪನಿಗೆ ಅನ್ವಯವಾಗುವುದಿಲ್ಲ

(vii) ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ :

ಎ) ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಹಾಗೂ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ನಾವು ಮಾಡಿದ ಪರಿಶೀಲನೆಗಳ ಆಧಾರದ ಮೇರೆಗೆ, ಪಾವತಿಸಲು ಬಾಕಿಯಾದಂತಹ ದಿನಾಂಕದಿಂದ 6 ತಿಂಗಳುಗಳಿಗೂ ಮೀರಿದಂತೆ ಪಾವತಿಸಲು ಬಾಕಿಯಿರುವಂತಹ ಈ ಕೆಳಗಿನ ಅವಿವಾದಿತ ಬಾಕಿಗಳನ್ನು ಹೊರತುಪಡಿಸಿದಂತೆ, ಕಂಪನಿಯು ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಮಾರಾಟ ತೆರಿಗೆ, ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸು ರಾಜಧನ ಹಾಗೂ ಇತರೆ ಯಾವುದಾದರೂ ಬಾಕಿಗಳು ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ಅವಿವಾದಿತ ಶಾಸನಬದ್ಧ ಬಾಕಿಗಳನ್ನು ಸಂಬಂಧಿತ ಇಲಾಖೆಗಳಿಗೆ ಪಾವತಿಸುವಲ್ಲಿ ಕಂಪನಿಯು ಸಾಮಾನ್ಯವಾಗಿ ನಿಯತವಾಗಿರುತ್ತದೆ. ಕೆಲವು ಪ್ರಕರಣಗಳಲ್ಲಿ ಪಾವತಿಸಲು ನಿಗದಿತಗೊಂಡಿದ್ದ ದಿನಾಂಕದಿಂದ ಸಂತುಲನ ಪಟ್ಟಿಯ ದಿನಾಂಕದಲ್ಲಿದ್ದಂತೆ 6 ತಿಂಗಳುಗಳಿಗೂ ಮೀರಿದಂತೆ ಇದ್ದಂತಹ ಬಾಕಿಗಳನ್ನು ಸಂಬಂಧಿತ ಇಲಾಖೆಗಳಿಗೆ ಪಾವತಿಸುವಲ್ಲಿ ವಿಳಂಬಗಳನ್ನೂ ಸಹ ಗಮನಿಸಲಾಯಿತು.

ಶಾಸನಬದ್ಧ ಬಾಕಿಗಳು	ಭಾರತೀಯ ರೂಪಾಯಿಗಳು ಲಕ್ಷದಲ್ಲಿ
ಸೇವಾ ತೆರಿಗೆ	4.45
ರಾಷ್ಟ್ರೀಯ ಪಿಂಚಣಿ ಯೋಜನೆ ಪಾವತಿಸಬೇಕಿರುವುದು	890.91
ಮೌಲ್ಯ ವರ್ಧಿತ ತೆರಿಗೆ	8.13
ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವ ತೆರಿಗೆ	4.62
ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸು	18.45
ಇತರೆ ಶಾಸನಬದ್ಧ ಬಾಕಿಗಳು	0.28
ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಿರುವ ರಾಜಧನ	1.53
ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವ ಜಿಎಸ್‌ಟಿ	5.04
ಒಟ್ಟು	**933.41**

ಬಿ) ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಯಾವುದೇ ವಿವಾದದ ಕಾರಣ ಭವಿಷ್ಯ ನಿಧಿ, ಆದಾಯ ತೆರಿಗೆ, ಸೇವಾ ತೆರಿಗೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಮಾರಾಟ ತೆರಿಗೆ, ಮೌಲ್ಯವರ್ಧಿತ ತೆರಿಗೆ ಪಾವತಿಗಳ ಬಾಕಿಗಳು ಇರಲಿಲ್ಲ.

(viii) ಸಾಲಗಳು / ಋಣಗಳ ಮರುಪಾವತಿ :

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಕಂಪನಿಯು ಹಣಕಾಸು ಸಂಸ್ಥೆಗಳಿಗೆ, ಸರ್ಕಾರಕ್ಕೆ, ಬ್ಯಾಂಕುಗಳಿಗೆ ಸಾಲಗಳು ಅಥವಾ ಋಣಗಳ ಮರುಪಾವತಿಯಲ್ಲಿ ತಪ್ಪಿತಸ್ತಗೊಂಡಿರಲಿಲ್ಲ.

(ix) ಸಾರ್ವಜನಿಕರಿಗೆ ಷೇರು ಮುಂತಾದವುಗಳ ಹಂಚಿಕೆ/ ನೀಡಿಕೆ

ನಮಗೆ ನೀಡಲಾದ ವಿವರಣೆಗಳು ಹಾಗೂ ಒದಗಿಸಲಾದ ಮಾಹಿತಿಯಂತೆ, ಕಂಪನಿಯು, ಸಾಲ ಸಾಧನಗಳೂ ಒಳಗೊಂಡಂತೆ ಪ್ರಾರಂಭಿಕ ಸಾರ್ವಜನಿಕ ನೀಡಿಕೆ ಅಥವಾ ಹೆಚ್ಚುವರಿ ಸಾರ್ವಜನಿಕ ನೀಡಿಕೆಗಳ ಮೂಲಕ ಋಣ/ಸಾಲಗಳ ಸಾಧನಗಳೂ ಸೇರಿದಂತೆ ಯಾವುದೇ ಹಣಕಾಸನ್ನು ಸಂಗ್ರಹಿಸಿರಲಿಲ್ಲ. ಮುಂದುವರೆದು, ಕಂಪನಿಯು ಯಾವ ಉದ್ದೇಶಕ್ಕಾಗಿ ಅವಧಿ ಸಾಲಗಳನ್ನು ಪಡೆದುಕೊಂಡಿದ್ದಿತೋ ಅದೇ ಉದ್ದೇಶಕ್ಕೆ ಬಳಸಿರುವುದು.

(x) ಕಂಪನಿಯಿಂದ ಅಥವಾ ಅದರ ಅಧಿಕಾರಿಗಳು ಮತ್ತು ಉದ್ಯೋಗಿಗಳಿಂದ ಆಗಿರುವ ವಂಚನೆಯ ಪ್ರಕರಣಗಳು

ನಮಗೆ ಒದಗಿಸಲಾದಂತಹ ಮಾಹಿತಿಯಂತೆ ಹಾಗೂ ನೀಡಲಗಿರುವ ವಿವರಣೆಗಳಂತೆ ಕಂಪನಿಯು ಯಾವುದೇ ವಂಚನೆಯ ಪ್ರಕರಣಗಳನ್ನು ಅಥವಾ ಪ್ರಸಕ್ತ ಸಾಲಿನಲ್ಲಿ ಯಾವುದೇ ವಂಚನೆಯ ಪ್ರಕರಣಗಳನ್ನು ಗಮನಿಸಿರುವುದಿಲ್ಲ ಅಥವಾ ವರದಿ ಮಾಡಿರುವುದಿಲ್ಲ. ಅದರಂತೆಯೇ, ಮೇಲೆ ತಿಳಿಸಲಾದ ಆದೇಶದ ಷರತ್ತು ಸಂಖ್ಯೆ 3(x)ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

(xi) ವ್ಯವಸ್ಥಾಪನಾ ಅಧಿಕಾರಿಗಳ ಸಂಭಾವನೆ

ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ವ್ಯವಸ್ಥಾಪಕ ಅಧಿಕಾರಿಗಳ ಸಂಭಾವನೆಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ ಎಫ್ ಸಂಖ್ಯೆ 463 (ಇ) ದಿನಾಂಕ 05 ಜೂನ್ 2015ರ ಅನುಸಾರ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 197ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

(xii) ನಿಧಿ ಕಂಪನಿ

ನಮ್ಮ ಅಭಿಪ್ರಾಯದಂತೆ ಕಂಪನಿಯು ನಿಧಿ ಕಂಪನಿ ಆಗಿರುವುದಿಲ್ಲ. ಆದ್ದರಿಂದ ಆದೇಶದ ಷರತ್ತು 3 (xii) ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ. ಆದ್ದರಿಂದ ಯಾವುದೇ ಟೀಕೆ ಟಿಪ್ಪಣಿಗಳು ಇರುವುದಿಲ್ಲ.

(xiii) ಸಂಬಂಧಿತ ತಂಡಗಳೊಂದಿಗೆ ವ್ಯವಹಾರಗಳು

ಆಡಳಿತ ಮಂಡಳಿಯು ನಮಗೆ ಒದಗಿಸಿರುವ ಮಾಹಿತಿಯಂತೆ ಮತ್ತು ನೀಡಲಾಗಿರುವ ವಿವರಣೆಗಳಂತೆ, ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದಗಳು 177 ಮತ್ತು 188ರ ಅನುವುಗಳ ಅನುಸಾರ ಅನ್ವಯಗೊಳ್ಳುವೆಡೆಗಳಲ್ಲಿ ಆಗಿರುತ್ತವೆ ಹಾಗೂ ಲಕ್ಕವನ್ನಿಡುವುದಕ್ಕೆ ಸಂಬಂಧಿತ ತಂಡಗಳೊಂದಿಗಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅನ್ವಯಗೊಳ್ಳುವ ಮಾನದಂಡಗಳ ಅನುಸಾರ ಅಗತ್ಯತೆ ಇರುವಂತೆ ವಿವರಗಳನ್ನು ಹಣಕಾಸು ತಃಖ್ತೆಗಳಲ್ಲಿ ಬಹಿರಂಗಪಡಿಲಾಗಿರುವುದು.

(xiv) ಷೇರುಗಳ ಆಧ್ಯಯತೆಯ ಹಂಚಿಕೆ ಹಾಗೂ ಖಾಸಗಿ ಹಂಚಿಕೆ

ಪ್ರಸಕ್ತ ಸಾಲಿನಲ್ಲಿ ಕಂಪನಿಯು ರೂ.1,667.62 ಕೋಟಿ ಮೊತ್ತದಷ್ಟು ಈಕ್ವಿಟಿ ಷೇರುಗಳನ್ನು ಕರ್ನಾಟಕ ಸರ್ಕಾರಕ್ಕೆ ಹಂಚಿಕೆ ಮಾಡಿರುವುದು. ಕಂಪನಿಯು ಶೇಕಡಾ 100ರಷ್ಟು ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿರುವುದರಿಂದ, ಆದೇಶದ ಷರತ್ತು 3 (xiii) ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ. ಮುಂದುವರೆದು, ಕಂಪನಿಯು ಷೇರು ಬಂಡವಾಳಕ್ಕಾಗಿ ಸ್ವೀಕರಿಸಿದ್ದಂತಹ ಮುಂಗಡ ಮೊತ್ತ ರೂ.204.50 ಕೋಟಿಯನ್ನು ಪ್ರಸಕ್ತ ಸಾಲಿನಲ್ಲಿ ವಿಶೇಷ ಘಟಕ ಯೋಜನೆ/ಬುಡಕಟ್ಟು ಜನಾಂಗಕ್ಕೆ ಸಂಬಂಧಿತ ಉಪ–ಯೋಜನೆ ಕಾಮಗಾರಿಗಳ ಕಡೆಗೆ ಅನುದಾನಗಳನ್ನಾಗಿ ಪರಿವರ್ತಿಸಿದ್ದಿತು, ಇದಕ್ಕೆ ಸರ್ಕಾರದಿಂದ ಅಗತ್ಯವಿದ್ದಂತಹ ಅನುಮೋದನೆಯನ್ನು ಪಡೆದಿರುವುದು.

(xv) ನಗದೇತರ ವ್ಯವಹಾರಗಳು

ಆಡಳಿತ ಮಂಡಳಿಯು ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಮತ್ತು ನೀಡಲಾಗಿರುವ ವಿವರಣೆಗಳಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 192ರಲ್ಲಿ ಉಲ್ಲೇಖಿಸಲಾಗಿರುವಂತೆ ಕಂಪನಿಯು ನಿರ್ದೇಶಕರುಗಳೊಂದಿಗೆ ಅಥವಾ ಅವರುಗಳಿಗೆ ಸಂಬಂಧಿತ ವ್ಯಕ್ತಿಗಳೊಂದಿಗೆ ಯಾವುದೇ ನಗದೇತರ ವ್ಯವಹಾರಗಳನ್ನು ನಡೆಸಿರುವುದಿಲ್ಲ

(xvi) ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಪರಿಚ್ಛೇದ 45–1ಎ ಅಡಿಯಲ್ಲಿ ನೋಂದಣಿ

ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ಭಾರತೀಯ ರಿಸರ್ವ್ ಬ್ಯಾಂಕು ಅಧಿನಿಯಮ, 1934ರ ಪರಿಚ್ಛೇದ 45–1ಎ ಅಡಿಯಲ್ಲಿನ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ರಾವ್ ಅಸೋಸಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ಸಂಖ್ಯೆ : 003080S
ಸಹಿ/–
(ಸಂದೀಪ್ ಎಸ್. ಶೇಖರ್)
ಪಾಲುದಾರರು
ಸದಸ್ಯತ್ವ ಸಂಖ್ಯೆ : 232631
ಯು.ಡಿ.ಐ.ಎನ್. ಸಂಖ್ಯೆ : 21232631AAAAAZ2265

ಸ್ಥಳ : ಬೆಂಗಳೂರು
ದಿನಾಂಕ : 31.12.2020

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – ಸಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಸದಸ್ಯರುಗಳಿಗೆ (ಕಂಪನಿ) 31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಸಾಲಿಗೆ ನಮ್ಮ ಅದೇ ದಿನಾಂಕದ ವರದಿಯಲ್ಲಿ "ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳ" ಮೇಲಿನ ವರದಿಯಲ್ಲಿ ಉಲ್ಲೇಖಿಸಿರುವಂತೆ.

ಎ. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143 (5)ರ ಅಡಿಯಲ್ಲಿ ನಿರ್ದೇಶನಗಳು

ಕ್ರಮ ಸಂಖ್ಯೆ	ನಿರ್ದೇಶನಗಳು	ಉತ್ತರಗಳು
1	ಲೆಕ್ಕವನ್ನಿಡುವಿಕೆಯ ಎಲ್ಲಾ ವ್ಯವಹಾರಗಳನ್ನು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಮೂಲಕ ಸಂಸ್ಕರಿಸುವ ಸಲುವಾಗಿ ಕಂಪನಿಯು ವ್ಯವಸ್ಥೆಯನ್ನು ಹೊಂದಿರುವುದೆ? ಹೌದು ಎಂದಾದಲ್ಲಿ ಲೆಕ್ಕವನ್ನಿಡುವಿಕೆಯ ವ್ಯವಹಾರಗಳನ್ನು ಮಾಹಿತಿ ತಂತ್ರಜ್ಞಾನದ ಮೂಲಕವಲ್ಲದೆಯೇ ಅನ್ಯ ಮಾರ್ಗದಲ್ಲಿ ಸಂಸ್ಕರಿಸಿದಲ್ಲಿ ಲೆಕ್ಕಪತ್ರಗಳ ಸಮಗ್ರತೆಯ ಮೇಲೆ ಆಗಬಹುದಾದ ಪರಿಣಾಮಗಳನ್ನು ಹಣಕಾಸಿನ ಪರಿಣಾಮಗಳು ಯಾವುದಾದರೂ ಇದ್ದಲ್ಲಿ, ಅವುಗಳ ಜೊತೆಯಲ್ಲಿ ತಿಳಿಸುವುದು.	ಕಂಪನಿಯು ತನ್ನ ಹಣಕಾಸು ಮತ್ತು ಲೆಕ್ಕವನ್ನಿಡುವುದಕ್ಕೆ ಸಂಬಂಧಿಸಿದಂತೆ ಟ್ಯಾಲಿ ತಂತ್ರಾಂಶ ಉಪಯೋಗಿಸುತ್ತಿರುವುದು. ಕಂಪನಿಯು ಕೈಯಿಂದ ನಿರ್ವಹಿಸಲಾಗುವ ರಿಜಿಸ್ಟರುಗಳು ಅವೆಂದರೆ ನಗದು ಪುಸ್ತಕ, ಚೆಕ್ಕುಗಳ ಮೂಲಕ ಹಣಕಾಸನ್ನು ಹೊರಸೆಳೆಯುವುದಕ್ಕೆ ಸಂಬಂಧಿತ ಪುಸ್ತಕ, ಕಾಮಗಾರಿಗಳ ರಿಜಿಸ್ಟಾರು, ಎಫ್‌ಎಸ್‌ಡಿ, ಇಎಂಡಿ ರಿಜಿಸ್ಟರುಗಳು, ಮುಂಗಡಗಳ ರಿಜಿಸ್ಟರು, ಇತ್ಯಾದಿಗಳನ್ನು ವಿಭಾಗಗಳ ಮಟ್ಟದಲ್ಲಿ ಲೋಕೋಪಯೋಗಿ ಇಲಾಖೆಯ ಸಂಹಿತೆಯ ಅನುವುಗಳ ಅನುಸಾರ ನಿರ್ವಹಿಸಲಾಗಿರುವುದು ಹಾಗೂ ಅವುಗಳನ್ನು ಟ್ಯಾಲಿ ತಂತ್ರಾಂಶವನ್ನು ಬಳಸಿಕೊಂಡು ಲೆಕ್ಕವನ್ನಿಡುವಿಕೆಯ ಜೋಡಿ ನಮೂದಿಗೆ ಪರಿವರ್ತಿಸಲಾಗುವುದು. ಕೈಯಿಂದ ನಿರ್ವಹಿಸಲಾಗುವ ರಿಜಿಸ್ಟರುಗಳನ್ನು ಟ್ಯಾಲಿ ತಂತ್ರಾಂಶ ಅನ್ವಯದೊಂದಿಗೆ ನಿಯತಕಾಲಿಕವಾಗಿ ಸಮನ್ವಯಗೊಳಿಸಲಾಗುವುದು.
2	ಹೊರಗಿನ ಸಾಲಗಾರರು ಕಂಪನಿಗೆ ನೀಡಲಾಗಿರುವಂತಹ ಹಾಗೂ ಪ್ರಸ್ತುತ ಇರುವಂತಹ ಸಾಲಗಳ ಪುನರ್–ರಚನೆ ಅಥವಾ ಸಾಲ/ಋಣ/ಬಡ್ಡಿ, ಇತ್ಯಾದಿಗಳನ್ನು ಕಂಪನಿಯು ಮರುಪಾವತಿಸಲು ಸಾಧ್ಯವಾಗದೆಯೇ ಮನ್ನಾ ಮಾಡಲಾಗಿರುವ, ದಾಖಲೆಗಳಿಂದ ತೆಗೆದುಹಾಕಲಾಗಿರುವ (ರೈಟ್ ಆಫ್) ಪ್ರಕರಣಗಳು ಯಾವುದಾದರೂ ಇರುವವೆ? ಹೌದು ಎಂದಾದಲ್ಲಿ ಹಣಕಾಸು ಸ್ಥಿತಿಗತಿಗಳ ಮೇಲೆ ಅವುಗಳ ಪ್ರಭಾವವನ್ನು ತಿಳಿಸುವುದು.	ಪ್ರಸಕ್ತ ಸಾಲಿನಲ್ಲಿ ಇರುವಂತಹ ಯಾವುದೇ ಸಾಲಗಳನ್ನು ಪುನರ್–ರಚಿಸಿರುವುದಿಲ್ಲ/ಪುನರ್–ವ್ಯವಸ್ಥೆ ಮಾಡಿರುವುದಿಲ್ಲ.
3	ಕೇಂದ್ರ/ರಾಜ್ಯ ಸರ್ಕಾರ/ಸಂಸ್ಥೆಗಳಿಂದ ನಿರ್ದಿಷ್ಟ ಯೋಜನೆಗಳಿಗಾಗಿ ಸ್ವೀಕರಿಸಲಾಗಿರುವ/ಸ್ವೀಕರಿಸಬೇಕಾಗಿರುವ ಹಣಕಾಸನ್ನು ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ ಸಮರ್ಪಕವಾಗಿ ಲೆಕ್ಕ ವನ್ನಿಡಲಾಗಿರುವುದೆ/ಬಳಸಿಕೊಳ್ಳಲಾಗಿರುವುದೆ? ಮಾರ್ಗಾಂತರಣ ಪ್ರಕರಣಗಳ ಪಟ್ಟಿಯನ್ನು ನೀಡುವುದು.	ರಾಜ್ಯ ಸರ್ಕಾರದಿಂದ ನಿರ್ಧಿಷ್ಟ ಯೋಜನೆಗಳಿಗಾಗಿ ಸ್ವೀಕರಿಸಲಾಗಿರುವ ಅನುದಾನವನ್ನು ಸಮರ್ಪಕವಾಗಿ ಲೆಕ್ಕವನ್ನಿಡಲಾಗಿರುವುದು ಹಾಗೂ ಅನುದಾನಗಳ ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ ಉಪಯೋಗಿಸಿಕೊಳ್ಳಲಾಗಿರುವುದು ಹಾಗೂ ಯಾವುದೇ ಮಾರ್ಗಾಂತರಣಗಳನ್ನು ಗಮನಿಸಿರುವುದಿಲ್ಲ.

ಬಿ. ಕಂಪನಿಗೆ ಸಂಬಂಧಿತ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು

ಕ್ರಮ ಸಂಖ್ಯೆ	ನಿರ್ದೇಶನಗಳು	ಅನುಸರಣಾ ಕ್ರಮಗಳು
ಎ	ಉಪಯೋಗಪಡಿಸಿಕೊಳ್ಳದೇ ಕಂಪನಿಯು ಮಾಲಿಕತ್ವವನ್ನು ಹೊಂದಿರುವಂತಹ ಭೂಮಿಯ ಅಕ್ರಮ ಒತ್ತುವರಿಗಳನ್ನು ತಡೆಯುವ ಸಲುವಾಗಿ ಕಂಪನಿಯು ಸಮರ್ಪಕ ಕ್ರಮಗಳನ್ನು ತೆಗೆದುಕೊಂಡಿರುವುದೆ, ಕಂಪನಿಯ ಯಾವುದಾದರೂ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿರುವುದೆ, ಯಾವುದಾದರೂ ಭೂಮಿಯು ವಿವಾದದ ಅಡಿಯಲ್ಲಿರುವುದೆ, ಉಪಯೋಗಿಸಿಕೊಳ್ಳದೇ ಇರುವುದೆ ಅಥವಾ ಯಾವುದಾದರೂ ಭೂಮಿಯನ್ನು ಅಗತ್ಯವಿಲ್ಲದೆಯೇ ಹೆಚ್ಚುವರಿಯಾಗಿರುವುದಾಗಿ ತಿಳಿಸಲಾಗಿರುವುದೆ? ವಿವರಗಳನ್ನು ಒದಗಿಸುವುದು.	ನಮಗೆ ನೀಡಿರುವ ಮಾಹಿತಿಯಂತೆ, ಕಂಪನಿಯು ಯಾವುದೇ ಉಪಯೋಗವಿಲ್ಲದ ಭೂಮಿಯನ್ನು ಹೊಂದಿರುವುದಿಲ್ಲ. ಕಂಪನಿಯ ಯಾವುದೇ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದಿಲ್ಲ/ ವಿವಾದದ ಅಡಿಯಲ್ಲಿರುವುದಿಲ್ಲ/ ಉಪಯೋಗಿಸಿಕೊಳ್ಳದೇ ಬಿಟ್ಟಿರುವುದಿಲ್ಲ ಅಥವಾ ಅಗತ್ಯವಿಲ್ಲದೇ ಅಧಿಕ ಪ್ರಮಾಣದಲ್ಲಿ ಇರುವುದಾಗಿ ಘೋಷಿಸಿರುವುದಿಲ್ಲ. ವ್ಯವಸ್ಥಾಪನೆಯು ನೀಡಿರುವ ಮಾಹಿತಿಯನ್ನು ನಾವು ವಿಶ್ವಾಸಕ್ಕೆ ತೆಗೆದುಕೊಂಡಿರುವೆವು.
ಬಿ	ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ ಹಾಗೂ ಅವುಗಳಿಗೆ ಪರಸ್ಪರ ಅಭಿಮುಖವಾಗಿ ಒಡಂಬಡಿಕೆಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಮೈಲಿಗಲ್ಲುಗಳನ್ನು ಮೇಲ್ವಿಚಾರಣೆ ಮಾಡುವ ವ್ಯವಸ್ಥೆಯು ಇರುವುದೆ ಹಾಗೂ ದರ/ ಮೌಲ್ಯ ಹೆಚ್ಚಳದ ಪರಿಣಾಮ ಇದೆಯೇ? ಬ್ಯಾಂಕು ಖಾತರಿಗಳನ್ನು ಸಮಯೋಚಿತವಾಗಿ ಪುನರ್–ಊರ್ಜಿತಗೊಳಿಸಿಕೊಳ್ಳಲಾಗಿರುವುದೆ?	ಕಂಪನಿಯು ಕಾರ್ಯಗತಗೊಳಿಸಲಾಗುವ ಕಾಮಗಾರಿಗಳು ಹಾಗೂ ಅವುಗಳಿಗೆ ಪರಸ್ಪರ ಅಭಿಮುಖವಾಗಿ ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೈಲಿಗಲ್ಲುಗಳನ್ನು ಮೇಲ್ವಿಚಾರಣೆ ಮಾಡುವ ವ್ಯವಸ್ಥೆಯನ್ನು ಕಂಪನಿಯು ಹೊಂದಿರುವುದು, ಅಂತಹ ವ್ಯವಸ್ಥೆಯು ಕಾಮಗಾರಿಯು ಪ್ರಾರಂಭಗೊಳ್ಳುವಿಕೆ, ಕಾರ್ಯಗತಗೊಳ್ಳುವಿಕೆಯ ಕಾರ್ಯಕ್ರಮ, ಪ್ರಗತಿಯ ಸಮೀಕ್ಷೆ, ವಿಳಂಬಗಳಿಗಾಗಿ ದಂಡ, ಇತ್ಯಾದಿಗಳನ್ನು ವ್ಯವಹರಿಸುವುದು. ಸಂಬಂಧಿತ ಅಧಿಕಾರಿಗಳು ಕಾರ್ಯನಿರ್ವಾಹಕ ಇಂಜಿನಿಯರ್‌ರವರು / ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು/ ಮುಖ್ಯ ಇಂಜಿನಿಯರ್‌ರವರುಗಳ ಮಟ್ಟದಲ್ಲಿ ನಡೆಯುವಂತಹ ಸಮೀಕ್ಷಾ ಸಭೆಗಳಲ್ಲಿ ಟೆಂಡರು ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ರೀತಿಯಲ್ಲಿ ಕಾಮಗಾರಿಯ ಪ್ರಗತಿಯನ್ನು ಸಮೀಕ್ಷಿಸುವರು. ಸಮೀಕ್ಷೆಯ ಅಧಾರದ ಮೇರೆಗೆ ಅಡೆತಡೆಗಳು, ಇತ್ಯಾದಿಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ನಿವಾರಿಸುವ ಸಲುವಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಹಾಗೂ ಗುತ್ತಿಗೆ ಅವಧಿಯನ್ನು ವಿಸ್ತರಿಸುವುದು, ವಿಳಂಬಕ್ಕಾಗಿ ದಂಡವನ್ನು ವಿಧಿಸುವುದು, ಗುತ್ತಿಗೆಯನ್ನು ಅಂತಿಮಗೊಳಿಸುವುದು, ಇತ್ಯಾದಿ ಗುತ್ತಿಗೆ ಷರತ್ತುಗಳ ಅನುಸಾರ ಅಪೇಕ್ಷಿತ ಪ್ರಗತಿಯನ್ನು ಸಾಧಿಸುವ ಸಲುವಾಗಿ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ದರ ಹೆಚ್ಚಳದ ಮೇಲಿನ ಪ್ರಭಾವಕ್ಕೆ ಸಂಬಂಧಿಸಿದಂತೆ, ಪ್ರಗತಿಯಲ್ಲಿರುವ ಎಲ್ಲಾ ಕಾಮಗಾರಿಗಳಿಗೂ ಅನ್ವಯಗೊಳ್ಳುವ ಎಲ್ಲಾ ಒಡಂಬಡಿಕೆಗಳಲ್ಲಿಯೂ ಅಂತರ್ಗತ ದರ ಹೆಚ್ಚಳ ಷರತ್ತು ಒಳಗೊಂಡಿರುತ್ತದೆ. ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬವಾದಗಲೆಲ್ಲಾ ವಿಳಂಬಗಳಿಗೆ ಸಮರ್ಪಕ ವಿಶ್ಲೇಷಣೆಯನ್ನು ಮಾಡಲಾಗುವುದು ಹಾಗೂ ಗುತ್ತಿಗೆ ಅವಧಿಯನ್ನು ದಂಡವನ್ನು ವಿಧಿಸುವುದರೊಂದಿಗೆ ಅಥವಾ ದಂಡವನ್ನು ವಿಧಿಸದೆಯೇ ವಿಸ್ತರಿಸುವ ಸಲುವಾಗಿ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು. ಬ್ಯಾಂಕು ಖಾತರಿಗಳನ್ನು ನವೀಕರಿಸುವುದಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ವಿಳಂಬಗಳಾಗಿರುತ್ತವೆ. 28 ಡಿಸೆಂಬರ್ 2020ರಲ್ಲಿದ್ದಂತೆ ರೂ.135.90 ಕೋಟಿ ಮೊತ್ತವನ್ನು ಒಳಗೊಂಡಂತೆ 68 ಸಂಖ್ಯೆಗಳಷ್ಟು ಬ್ಯಾಂಕು ಖಾತರಿಗಳ ಅವಧಿಗಳು ಮುಕ್ತಾಯಗೊಂಡಿದ್ದವು.

(ಸಿ)	ಕೈ ಬಿಡಲಾಗಿರುವ ಯೋಜನೆಗಳ ಮೇಲೆ ಭರಿಸಲಾಗಿರುವಂತಹ ವೆಚ್ಚವನ್ನು ಪರಿಮಾಣೀಕರಿಸುವುದು ಹಾಗೂ ದಾಖಲೆಗಳಿಂದ ತೆಗೆದುಹಾಕಲಾಗಿರುವ (ರಿಟನ್–ಆಫ್) ವಾಸ್ತವಿಕ ಮೊತ್ತವನ್ನು ಇಲ್ಲಿ ನಮೂದಿಸುವುದು.	ನಮಗೆ ಒದಗಿಸಲಾಗಿರುವ ಮಾಹಿತಿಯಂತೆ, ಕಂಪನಿಯ ಯಾವುದೇ ಯೋಜನೆಯನ್ನೂ ಕೈಬಿಟ್ಟಿರುವುದಿಲ್ಲ.
(ಡಿ)	ರಾಜ್ಯ ಸರ್ಕಾರದ ಪುನರ್ವಸತಿ ಮತ್ತು ಪುನರ್–ವ್ಯವಸ್ಥೆ ಕಾರ್ಯನೀತಿಯ ಅಡಿಯಲ್ಲಿ ಭೂ ಪರಿಹಾರವೂ ಒಳಗೊಂಡಂತೆ ಭೂಸ್ವಾಧೀನಕ್ಕಾಗಿ ಪಾವತಿಯ ವ್ಯವಸ್ಥೆಯಿಂದ ಮಾರ್ಗಾಂತರಣಗಳನ್ನು ವಿವರಿಸುವುದು. ಭೂ ವಿವಾದಗಳ ಕಾರಣಗಳನ್ನು ತಿಳಿಸುವುದು.	ವ್ಯವಸ್ಥಾಪನೆಯು ನಮಗೆ ಒದಗಿಸಿದ ಮಾಹಿತಿಯಂತೆ, ಭೂಸ್ವಾಧೀನ ಪಾವತಿಗಳನ್ನು ವಿಶೇಷ ಭೂಸ್ವಾಧೀನ ಅಧಿಕಾರಿಗಳು / ಸಹಾಯಕ ಆಯುಕ್ತರುಗಳು ಪಾವತಿಸುತ್ತಾರೆ ಹಾಗೂ ಅಂತಹ ಪಾವತಿಗಳು ರಾಜ್ಯ ಸರ್ಕಾರದ ಕಾರ್ಯನೀತಿಯ ಅನುಸಾರವೇ ಆಗಿರುತ್ತದೆ. ಸಾಮಾನ್ಯವಾಗಿ ಭೂ ವಿವಾಧಗಳಿಗೆ ಕಾರಣಗಳು ಹೆಚ್ಚುವರಿ ಭೂ ಪರಿಹಾರದ ಪಾವತಿಗಾಗಿ ಆಗಿರುತ್ತವೆ.
(ಇ)	ಸಾಲಗಳು/ಸಹಾಯಾನುಧನಗಳು/ಸಹಾಯಧನಗಳ ಪರಿಣಾಮಕಾರಿತ್ವದಿಂದ ಕೂಡಿದ ಬಳಕೆಯ ವ್ಯವಸ್ಥೆಯನ್ನು ಪರಿಶೀಲಿಸುವುದು. ಹಣಕಾಸಿನ ಮಾರ್ಗಾಂತರಣದ ಪ್ರಕರಣಗಳ ಪಟ್ಟಿ ಮಾಡುವುದು.	ನಮ್ಮ ಪರಿಶೀಲನೆಯ ಪ್ರಕಾರ, ಕಂಪನಿಯು ಅನುದಾನಗಳು / ಸಾಲಗಳ ಪರಿಣಾಮಕಾರಿತ್ವದಿಂದ ಕೂಡಿದ ಬಳಕೆಗಾಗಿ ಸಮರ್ಪಕ ವ್ಯವಸ್ಥೆಯನ್ನು ಹೊಂದಿರುತ್ತದೆ. ಕಂಪನಿಯು ಪ್ರಸಕ್ತ ಸಾಲಿನಲ್ಲಿ ಯಾವುದೇ ಸಹಾಯಧನವನ್ನು ಪಡೆದಿರುವುದಿಲ್ಲ. ಬಂಡವಾಳ ವೆಚ್ಚಗಳು, ಪರಿಶಿಷ್ಟ ಜಾತಿಯ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ–ಯೋಜನೆ ಕಾಮಗಾರಿಗಳು ಹಾಗೂ ಅವಧಿ ಸಾಲಗಳ ಮರುಪಾವತಿಗಳನ್ನು ಹಂಚಿಕೆಗೆ ಬಾಕಿಯಿರುವ ಷೇರುಗಳ ಅರ್ಜಿ ಶುಲ್ಕ ಎಂಬುದಾಗಿ ಪ್ರಾರಂಭಿಕವಾಗಿ ಅನುವು ಮಾಡಲಾಗುವುದು. ತದನಂತರ, ಪರಿಶಿಷ್ಟ ಜಾತಿಯ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ–ಯೋಜನೆ ಕಾಮಗಾರಿಗಳಿಗಳ ಕಡೆಗಿನ ವೆಚ್ಚಗಳನ್ನು ಕರ್ನಾಟಕ ಸರ್ಕಾರದ ಆದೇಶದ ಮೂಲಕ ವರಮಾನ ಅನುದಾನಗಳನ್ನಾಗಿ ಪರಿವರ್ತಿಸಲಾಗುವುದು ಹಾಗೂ ಅವಧಿ ಸಾಲಗಳ ಮೇಲಿನ ಬಡ್ಡಿ ಹಾಗೂ ರಿಪೇರಿ ಕಾಮಗಾರಿಗಳಿಗಾಗಿ ಸಂಬಂಧಿಸಿದಂತೆ ವರಮಾನ ಅನುದಾನವನ್ನು ಒದಗಿಸಲಾಗುವುದು.
(ಎಫ್)	ಎಐಬಿಪಿ ಯೋಜನೆಯ ಮೂಲಕ ಸ್ವೀಕರಿಸಲಾದಂತಹ ಹಣಕಾಸನ್ನು ಪ್ರತ್ಯೇಕವಾಗಿ ಅದೇ ಯೋಜನೆಗಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಂಪನಿಯು ಮೇಲ್ವಿಚಾರಣ ವ್ಯವಸ್ಥೆಯನ್ನು ಹೊಂದಿರುವುದೆ?	
(ಜಿ)	ಎಐಬಿಪಿ ಯೋಜನೆಯ ಅಡಿಯಲ್ಲಿ ಪ್ರಸ್ತಕ ಹಣಕಾಸು ಸಾಲಿನಲ್ಲಿ ಸ್ವೀಕರಿಸಲಾದ ಮೊತ್ತ ಹಾಗೂ ಭರಿಸಲಾದ ವೆಚ್ಚಗಳನ್ನು ಪರಿಶೀಲಿಸುವುದು. ಹಣಕಾಸನ್ನು ಇತರೆ ಯೋಜನೆಗಳಿಗೆ ಮಾರ್ಗಾಂತರಣಗಳನ್ನು ಮಾಡಿದ್ದಲ್ಲಿ ಅದರ ಬಗ್ಗೆ ವರದಿ ಮಾಡುವುದು.	ಕಂಪನಿಯು ಕಾರ್ಯಗತಗೊಳಿಸುತ್ತಿರುವ ಯೋಜನೆಗಳು ಎಐಬಿಪಿ ಯೋಜನೆಯ ಅಡಿಯಲ್ಲಿ ಬರುವುದಿಲ್ಲವಾದ್ದರಿಂದ ಈ ಅಂಶಗಳು ಅನ್ವಯಗೊಳ್ಳುವುದಿಲ್ಲ.
(ಎಚ್)	ಎಐಬಿಪಿ ಯೋಜನೆಗಳ ಮೇಲೆ ಜಲ ಸಂಪನ್ಮೂಲ ಇಲಾಖೆಯು ರೂಪಿಸಿರುವ ಮಾರ್ಗಸೂಚಿಗಳಿಗೆ ಕಂಪನಿಯು ಬದ್ಧವಾಗಿದೆಯೆ? ಮಾರ್ಗಾಂತರಣಗಳ ಪ್ರಕರಣಗಳನ್ನು ಉಲ್ಲೇಖಿಸುವುದು.	

ರಾವ್ ಅಸೋಸಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ಸಂಖ್ಯೆ : 003080S

ಸಹಿ/–
(ಸಂದೀಪ್ ಎಸ್. ಶೇಖರ್)
ಪಾಲುದಾರರು
ಸದಸ್ಯತ್ವ ಸಂಖ್ಯೆ : 232631
ಯು.ಡಿ.ಐ.ಎನ್. ಸಂಖ್ಯೆ : 21232631AAAAAZ2265

ಸ್ಥಳ : ಬೆಂಗಳೂರು
ದಿನಾಂಕ : 31.12.2020

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇದರ 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಅವಧಿಯ ಲೆಕ್ಕಪತ್ರಗಳ ಮೇಲೆ ಪರಿಚ್ಛೇದ 143 (6) (ಬಿ) ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆ ಟಿಪ್ಪಣಿಗಳು.

ಕಂಪನಿಗಳ ಅಧಿನಿಯಮ, 2013ರ ಅನುವುಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಹಣಕಾಸಿನ ವರದಿಯ ಚೌಕಟ್ಟಿನ ಪ್ರಕಾರ 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಅವಧಿಗೆ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇದರ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಅಧಿನಿಯಮದ ಪರಿಚ್ಛೇದ 139 (5)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು, ಅಧಿನಿಯಮದ ಪರಿಚ್ಛೇದ 143ರ ಅಡಿಯಲ್ಲಿ ಲೆಕ್ಕಪರಿಶೋಧನೆಗಾಗಿ ಅಧಿನಿಯಮದ ಪರಿಚ್ಛೇದ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಮಾನದಂಡಗಳ ಅನುಸಾರ ನಡೆಸಲಾದಂತಹ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಹಣಕಾಸು ತ:ಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಜವಾಬ್ದಾರರಾಗಿರುತ್ತಾರೆ. ಇದನ್ನು ಮಾಡಲಾಗಿದೆ ಎಂಬುದಾಗಿ ಅವರು ತಮ್ಮ 31 ಡಿಸೆಂಬರ್ 2020 ದಿನಾಂಕದ ಲೆಕ್ಕಪರಿಶೋಧನಾ ವರದಿಯ ಮೂಲಕ ತಿಳಿಸಿರುತ್ತಾರೆ.

ನಾವು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು, ಇದರ 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಅವಧಿಗೆ ಅಧಿನಿಯಮದ ಪರಿಚ್ಛೇದ 143 (6) (ಎ) ಅಡಿಯಲ್ಲಿ ಹಣಕಾಸು ತ:ಖ್ತೆಗಳ ಪೂರಕ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರುಗಳ ಕಾರ್ಯಗಳಿಗೆ ಸಂಬಂಧಿತ ಕಾಗದಪತ್ರಗಳನ್ನು ಗಮನಿಸದೆಯೇ ಸ್ವತಂತ್ರವಾಗಿ ನಡೆಸಲಾಯಿತು ಹಾಗೂ ಪ್ರಾಥಮಿಕವಾಗಿ ಶಾಸನಬದ್ಧ ಲೆಕ್ಕಪರಿಶೋಧಕರುಗಳು ಮತ್ತು ಕಂಪನಿಯ ಸಿಬ್ಬಂದಿಯೊಂದಿಗೆ ಪ್ರಶ್ನಾವಳಿಗಳು ಹಾಗೂ ಅಲ್ಲದೆಯೇ ಲೆಕ್ಕಪತ್ರಗಳ ಆಯ್ಕೆ ಮಾಡಿಕೊಳ್ಳಲಾದಂತಹ ಕೆಲವು ದಾಖಲೆಗಳ ಪರಿಶೀಲನೆಗೆ ಸೀಮಿತಗೊಳಿಸಲಾಯಿತು.

ನನ್ನ ಈ ಪೂರಕ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಅಧಿನಿಯಮದ ಪರಿಚ್ಛೇದ 143 (6) (ಬಿ) ಅಡಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿಗೆ ಪೂರಕವಾಗಿ ನಮ್ಮ ಕಡೆಯಿಂದ ಇನ್ನೂ ಹೆಚ್ಚಿನ ಟೀಕೆ ಟಿಪ್ಪಣಿಗಳು ಉದ್ಭವಿಸುವಂತಹ ಯಾವುದೇ ಗಮನಾರ್ಹ ಅಂಶಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ.

ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ

ಸಹಿ/–

(ಇ. ಪಿ. ನಿವೇದಿತ)

ಪ್ರಧಾನ ಮಹಾಲೇಖಾಪಾಲರು ಸಾಮಾನ್ಯ

(ಲೆಕ್ಕಪರಿಶೋಧನೆ–I)

ಕರ್ನಾಟಕ, ಬೆಂಗಳೂರು

ಸ್ಥಳ : ಬೆಂಗಳೂರು

ದಿನಾಂಕ : 18–03–2021

ಸಿಐಎನ್: ಯು41000ಕೆಎ2016ಎಸ್‌ಜಿಸಿ097260

31 ಮಾರ್ಚ್ 2020ರಲ್ಲಿದ್ದಂತೆ ಸಂತುಲನ ಪಟ್ಟಿ

(ರೂ. ಲಕ್ಷಗಳಲ್ಲಿ)

ವಿವರಗಳು	ಟಿಪ್ಪಣಿ ಸಂಖ್ಯೆ	ಪ್ರಸಕ್ತ ವರದಿಯ ಸಾಲಿನ ಅಂತ್ಯದಲ್ಲಿದ್ದಂತೆ ಅಂಕಿ ಸಂಖ್ಯೆಗಳು	ಹಿಂದಿನ ವರದಿಯ ಸಾಲಿನ ಅಂತ್ಯದಲ್ಲಿದ್ದಂತೆ ಅಂಕಿ ಸಂಖ್ಯೆಗಳು (ಪುನರ್ ತಿಳಿಸಿರುವುದು)
ಆಸ್ತಿಗಳು			
1. ಚಾಲ್ತಿಯೇತರ ಆಸ್ತಿಗಳು			
(ಎ) ಸ್ವತ್ತು ಸ್ಥಾವರಗಳು ಮತ್ತು ಉಪಕರಣಗಳು	4ಎ	**2,29,072.67**	38,909.59
(ಬಿ) ಆಸ್ತಿಗಳನ್ನು ಬಳಸುವಿಕೆಗಾಗಿನ ಹಕ್ಕು	4ಬಿ	**11.17**	–
(ಸಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	5ಎ	**9,25,097.07**	8,18,652.48
(ಡಿ) ಹಣಕಾಸು ಆಸ್ತಿಗಳು			
ಸಾಲಗಳು ಮತ್ತು ಮುಂಗಡಗಳು	6	**601.43**	16,846.44
(ಇ) ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು (ನಿವ್ವಳ)	7	–	–
(ಎಫ್) ಚಾಲ್ತಿ ತೆರಿಗೆ ಆಸ್ತಿಗಳು (ನಿವ್ವಳ) – ಆದಾಯ ತೆರಿಗೆ ಮರುಪಾವತಿ		**284.06**	334.58
		11,55,066.40	**8,74,743.09**
2.ಚಾಲ್ತಿ ಆಸ್ತಿಗಳು			
(ಎ) ಹಣಕಾಸು ಆಸ್ತಿಗಳು			
(i) ನಗದು ಮತ್ತು ನಗದಿಗೆ ಸಮಾನವಾದವುಗಳು	8	**54,790.43**	59,590.03
(ii) ವ್ಯಾಪಾರ ಸ್ವೀಕೃತಗೊಳ್ಳಬೇಕಾಗಿರುವವುಗಳು	9	**13.26**	5.67
(iii) ಸಾಲಗಳು ಮತ್ತು ಮುಂಗಡಗಳು	6	**11.56**	10.65
(iv) ಇತರೆ ಹಣಕಾಸು ಆಸ್ತಿಗಳು	10	**5,126.14**	5,671.34
(ಬಿ) ಇತರೆ ಚಾಲ್ತಿ ಆಸ್ತಿಗಳು	11	**44,179.35**	56,129.62
		1,04,120.74	**1,21,407.30**
ಒಟ್ಟು		**12,59,187.14**	**9,96,150.39**
ಈಕ್ವಿಟಿ ಮತ್ತು ಹೊಣೆಗಳು			
ಈಕ್ವಿಟಿ			
ಷೇರುದಾರರ ನಿಧಿಗಳು			
(ಎ) ಈಕ್ವಿಟಿ ಷೇರು ಬಂಡವಾಳ	12	**4,03,499.09**	2,36,737.33
(ಬಿ) ಇತರೆ ಈಕ್ವಿಟಿಗಳು	13	**4,45,572.52**	4,19,835.17
		8,49,071.61	**6,56,572.50**
ಹೊಣೆಗಳು			
1. ಚಾಲ್ತಿಯೇತರ ಹೊಣೆಗಳು			
(ಎ) ಹಣಕಾಸು ಹೊಣೆಗಳು			
i. ಸಾಲಗಳು	14	**1,69,072.41**	1,28,540.68
ii. ಇತರೆ ಹಣಕಾಸು ಹೊಣೆಗಳು	15	**45,688.72**	38,596.21
(ಬಿ) ಅನುವುಗಳು	16	**32.80**	5.04
(ಸಿ) ಇತರೆ ಚಾಲ್ತಿಯೇತರ ಹೊಣೆಗಳು	17	**2,067.35**	4,406.29
		2,16,861.28	**1,71,548.23**
2. ಚಾಲ್ತಿ ಹೊಣೆಗಳು			
ಎ) ಹಣಕಾಸು ಹೊಣೆಗಳು			
(i) ಸಾಲಗಳು	14	**35,857.43**	25,357.14
(ii) ವ್ಯಾಪಾರ ಸಂದಾಯಗಳು	18		
ಎ) ಅತಿಸಣ್ಣ ಪ್ರಮಾಣದ ಉದ್ದಿಮೆಗಳು ಮತ್ತು ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಪಾವತಿಸಬೇಕಿರುವ ಒಟ್ಟಾರೆ ಬಾಕಿಗಳು		–	–
ಬಿ) ಅತಿಸಣ್ಣ ಪ್ರಮಾಣದ ಉದ್ದಿಮೆಗಳು ಮತ್ತು ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಹೊರತುಪಡಿಸಿದಂತೆ ಇತರೆ ಸಾಲದಾತರುಗಳಿಗೆ ಪಾವತಿಸಬೇಕಿರುವ ಒಟ್ಟಾರೆ ಬಾಕಿಗಳು		**1,565.55**	203.01
iii) ಇತರೆ ಹಣಕಾಸು ಹೊಣೆಗಳು	15	**1,43,512.24**	1,35,572.14
(ಬಿ) ಇತರೆ ಚಾಲ್ತಿ ಹೊಣೆಗಳು	17ಎ	**12,301.14**	6,747.02
(ಸಿ) ಅನುವುಗಳು	16	**17.89**	150.36
		1,93,254.26	**1,68,029.67**
ಒಟ್ಟು		**12,59,187.14**	**9,96,150.39**
ಕಂಪನಿಯ ಹಿನ್ನೆಲೆ ಮತ್ತು ಅದರ ಕಾರ್ಯಚಟುವಟಿಕೆಗಳು	1		
ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ	2		
ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು	3		
ಹಣಕಾಸು ತ:ಖ್ತೆಗಳಿಗೆ ಹೆಚ್ಚುವರಿ ಮಾಹಿತಿ	24-26		

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಸಹಿ/–
ಎನ್. ಲಕ್ಷ್ಮಣ ರಾವ್ ಪೇಶ್ವೆ
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 02543038

ಸಹಿ/–
ಆರ್. ಚೆಲುವರಾಜು
ನಿರ್ದೇಶಕರು
ಡಿಐಎನ್: 08220118

ಸಹಿ/–
ಜ್ಯೋತಿ ಡಿ ಕುಂದರ್
ಪ್ರಧಾನ ವ್ಯವಸ್ಥಾಪಕರು–ಹಣಕಾಸು

ಸಹಿ/–
ಜಿ.ಎಸ್. ಪ್ರಕಾಶ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 22.12.2020

ಲಗತ್ತಿಸಲಾಗಿರುವ ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ರಾವ್ ಅಶೋಕಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 003080S
ಸಹಿ/–
ಸಂದೀಪ್ ಎಸ್. ಶೇಕರ್
ಪಾಲುದಾರರು
ಸದಸ್ಯತ್ವ ಸಂಖ್ಯೆ : 232631
ಯು.ಡಿ.ಐ.ಎನ್:21232631AAAAAZ2265

ಸಿಐಎನ್: ಯು41000ಕೆಎ2016ಎಸ್‌ಜಿಸಿ097260

31 ಮಾರ್ಚ್ 2020ಕ್ಕೆ ವರ್ಷಾಂತ್ಯದ ಲಾಭ ಮತ್ತು ನಷ್ಟಗಳ ತ:ಖ್ತೆ

(ರೂ. ಲಕ್ಷಗಳಲ್ಲಿ)

ವಿವರಗಳು	ಟಿಪ್ಪಣಿ	ಪ್ರಸಕ್ತ ವರದಿಯ ಸಾಲಿನ ಅಂತ್ಯದಲ್ಲಿದ್ದಂತೆ ಅಂಕಿ ಸಂಖ್ಯೆಗಳು	ಹಿಂದಿನ ವರದಿಯ ಸಾಲಿನ ಅಂತ್ಯದಲ್ಲಿದ್ದಂತೆ ಅಂಕಿ ಸಂಖ್ಯೆಗಳು (ಪುನರ್ ತಿಳಿಸಿರುವುದು)
1. ವರಮಾನ			
ಕಾರ್ಯಾಚರಣೆಗಳಿಂದ ವರಮಾನ	19	**9.01**	0.92
ಇತರೆ ವರಮಾನ	20	**16.599.36**	30,323.00
ಒಟ್ಟು ವರಮಾನ		**16,608.37**	30,323.92
2.ವೆಚ್ಚಗಳು			
ಸಿಬ್ಬಂದಿವೇತನ ಮತ್ತು ಸೌಲಭ್ಯಗಳು	21	**1,120.18**	337.76
ಸವಕಳಿ	4ಎ	**3,694.15**	336.04
ಕರ್ನಾಟಕ ಸರ್ಕಾರದ ಯೋಜನೆಗಳ ಮೇಲಿನ ವೆಚ್ಚಗಳು	22	**12,782.74**	27,050.25
ಇತರೆ ವೆಚ್ಚಗಳು	23	**18,488.25**	5,698.31
ಒಟ್ಟು ವೆಚ್ಚಗಳು		**36,085.32**	**33,422.35**
3. ಅಸಾಧಾರಣ ಮತ್ತು ವಿಶೇಷ ಬಾಬ್ತುಗಳು ಹಾಗೂ ತೆರಿಗೆಗೆ ಮುಂಚಿನ ಲಾಭ		**(19,476.95)**	(3,098.44)
4. ಅಸಾಧಾರಣ ಬಾಬ್ತುಗಳು		–	–
5. ತೆರಿಗೆ ಮುಂಚಿನ ಲಾಭ/(ನಷ್ಟ)		**(19,476.95)**	**(3,098.44)**
ಕಳೆಯುವುದು: ತೆರಿಗೆ ವೆಚ್ಚಗಳು			
– ಚಾಲ್ತಿ ತೆರಿಗೆ		–	–
– ಮುಂದೂಡಲ್ಪಟ್ಟಿರುವ ತೆರಿಗೆ ಬೇಡಿಕೆ/ (ಕ್ರೆಡಿಟ್)		–	139.04
6. ತೆರಿಗೆ ನಂತರ ಪ್ರಸಕ್ತ ಸಾಲಿನ ಲಾಭ/(ನಷ್ಟ)		**(19,476.95)**	(3,237.47)
7. ಇತರೆ ಸಮಗ್ರ ವರಮಾನ			
ಎ) ಲಾಭ ಮತ್ತು ನಷ್ಟ ತ:ಖ್ತೆಗೆ ಮರು–ವರ್ಗೀಕರಣ ಮಾಡದ ಬಾಬ್ತುಗಳು			
i. ವಿವರಿಸಲ್ಪಟ್ಟಿರುವ ಪ್ರಯೋಜನಗಳ ಯೋಜನೆಯ ಪುನರ್–ನಿರ್ಧಾರಣೆ		**(0.60)**	(0.80)
ii. ಲಾಭ ಮತ್ತು ನಷ್ಟ ತ:ಖ್ತೆಗೆ ಮರು ವರ್ಗೀಕರಣ ಮಾಡದ ಬಾಬ್ತುಗಳ ಮೇಲೆ ಆದಾಯ ತೆರಿಗೆ		–	–
ಒಟ್ಟು (ಎ)		**(0.60)**	(0.80)
8.ಒಟ್ಟು ಸಮಗ್ರ ವರಮಾನ		**(19,477.55)**	(3,238.27)
ತೂಗಲ್ಪಟ್ಟಿರುವ ಸರಾಸರಿ ಷೇರುಗಳು ಬಾಕಿಯಿರುವುದು – ಮೂಲ		**3,28,45,215**	1,52,79,694
ತೂಗಲ್ಪಟ್ಟಿರುವ ಸರಾಸರಿ ಷೇರುಗಳು ಬಾಕಿಯಿರುವುದು – ದುರ್ಬಲಗೊಳಿಸಲಾದ		**3,28,45,215**	1,52,79,694
ಷೇರು ಒಂದಕ್ಕೆ (ರೂ. ಗಳಲ್ಲಿ)			
– ಮೂಲ		**(59.30)**	(21.19)
– ದುರ್ಬಲಗೊಳಿಸಲ್ಪಟ್ಟ		**(59.30)**	(21.19)
(ಪ್ರತಿ ಷೇರಿಗೆ ಮುಖ ಬೆಲೆ ರೂ. 1000/–)			
ಕಂಪನಿಯ ಹಿನ್ನೆಲೆ ಮತ್ತು ಅದರ ಕಾರ್ಯಚಟುವಟಿಕೆಗಳು	**1**		
ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ	**2**		
ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು	**3**		
ಹಣಕಾಸು ತ:ಖ್ತೆಗಳಿಗೆ ಹೆಚ್ಚುವರಿ ಮಾಹಿತಿ	**24–26**		

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಸಹಿ/–
ಎನ್. ಲಕ್ಷ್ಮಣ ರಾವ್ ಪೇಶ್ವೆ
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 02543038

ಸಹಿ/–
ಆರ್. ಚೆಲುವರಾಜು
ನಿರ್ದೇಶಕರು
ಡಿಐಎನ್: 08220118

ಸಹಿ/–
ಜ್ಯೋತಿ ಡಿ ಕುಂದರ್
ಪ್ರಧಾನ ವ್ಯವಸ್ಥಾಪಕರು–ಹಣಕಾಸು

ಸಹಿ/–
ಜಿ.ಎಸ್. ಪ್ರಕಾಶ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 22.12.2020

ಲಗತ್ತಿಸಲಾಗಿರುವ ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ರಾವ್ ಅಸೋಸಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 003080S
ಸಹಿ/–
ಸಂದೀಪ್ ಎಸ್. ಶೇಕರ್
ಪಾಲುದಾರರು
ಸದಸ್ಯತ್ವ ಸಂಖ್ಯೆ : 232631
ಯು.ಡಿ.ಐ.ಎನ್:21232631AAAAAZ2265

ಸಿಐಎನ್: ಯು41000ಕೆಎ2016ಎಸ್‌ಜಿಸಿ097260

31 ಮಾರ್ಚ್ 2020ರ ವರ್ಷಾಂತ್ಯಕ್ಕೆ ಹಣಕಾಸು ಹರಿವಿನ ತ:ಖ್ತೆ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರ ಅಂತ್ಯಗೊಂಡ ಸಾಲಿಗೆ	31 ಮಾರ್ಚ್ 2019ರ ಅಂತ್ಯಗೊಂಡ ಸಾಲಿಗೆ (ಪುನರ್‌ತಿಳಿಸಿರುವುದು)
1.ಕಾರ್ಯಾಚರಣೆ ಚಟುವಟಿಕೆಗಳಿಂದ ಹಣಕಾಸಿನ ಹರಿವು		
ತೆರಿಗೆ ಪಾವತಿಗೆ ಮುಂಚಿನ ನಿವ್ವಳ ನಷ್ಟ	**(19,476.95)**	(3,098.44)
ಇತರೆ ಸಮಗ್ರ ವರಮಾನ	**(0.60)**	(0.80)
ಈ ಕೆಳಗಿನವುಗಳಿಗಾಗಿ ಹೊಂದಾಣಿಕೆಗಳು :		
ಬಡ್ಡಿಯಿಂದ ವರಮಾನ	**(3,737.35)**	(2,366.23)
ಸವಕಳಿ	**3,694.15**	336.04
ಕಾರ್ಯೋಪಯುಕ್ತ ಬಂಡವಾಳದಲ್ಲಿನ ಬದಲಾವಣೆಗಳಿಗೆ ಮುಂಚಿನ ಕಾರ್ಯಾಚರಣೆಗಳಿಂದ ಲಾಭ	**(19,520.75)**	(5,129.42)
ಕಾರ್ಯೋಪಯುಕ್ತ ಬಂಡವಾಳದಲ್ಲಿನ ಬದಲಾವಣೆಗಳು:		
ವ್ಯಾಪಾರ ಸ್ವೀಕೃತಿಗಳಲ್ಲಿ (ಹೆಚ್ಚಳ)/ಇಳಿಮುಖಗೊಂಡಿರುವುದು	**(7.59)**	(0.92)
ಸಾಲಗಳು ಮತ್ತು ಮುಂಗಡಗಳಲ್ಲಿ (ಹೆಚ್ಚಳ)/ಇಳಿಮುಖ	**(0.91)**	(9.69)
ಚಾಲ್ತಿ ಆಸ್ತಿಗಳಲ್ಲಿ (ಹೆಚ್ಚಳ)/ಇಳಿಕೆ	**11,679.47**	(16,607.91)
ಇತರೆ ಚಾಲ್ತಿ ಆಸ್ತಿಗಳಲ್ಲಿ (ಹೆಚ್ಚಳ)/ ಇಳಿಕೆ	**50.52**	(202.17)
ಚಾಲ್ತಿ ಹಣಕಾಸು ಆಸ್ತಿಗಳಲ್ಲಿ (ಹೆಚ್ಚಳ)/ ಇಳಿಕೆ	**(625.38)**	(271.99)
ಚಾಲ್ತಿ ಹಣಕಾಸು ಜವಾಬ್ದಾರಿಗಳಲ್ಲಿ ಹೆಚ್ಚಳ/ (ಇಳಿಕೆ)	**683.03**	(197.88)
ಚಾಲ್ತಿ ಜವಾಬ್ದಾರಿಗಳಲ್ಲಿ ಹೆಚ್ಚಳ/ (ಇಳಿಕೆ)	**5,554.12**	2,619.52
ವ್ಯಾಪಾರ ಸಂದಾಯಗಳಲ್ಲಿ ಹೆಚ್ಚಳ/(ಇಳಿಕೆ)	**1,362.55**	(751.41)
ಅನುವುಗಳಲ್ಲಿ ಹೆಚ್ಚಳ/(ಇಳಿಕೆ)	**(104.72)**	64.13
ಕಾರ್ಯಾಚರಣೆ ಚಟುವಟಿಕೆಗಳಿಂದ (ಬಳಸಲಾದ) ನಿವ್ವಳ ಹಣಕಾಸಿನ ಹರಿವು	**(929.66)**	**(20,487.76)**
ಹೂಡಿಕೆ ಚಟುವಟಿಕೆಗಳಿಂದ ನಗದಿನ ಹರಿವು		
ಸ್ಥಿರಾಸ್ತಿಗಳ ಖರೀದಿ ಹಾಗೂ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಗೆ*	**(2,93,025.17)**	(5,75,461.35)
ಬಂಡವಾಳ ಕಾಮಗಾರಿಗಳಿಗಾಗಿ ಸಜ್ಜುಗೊಳ್ಳುವ ಸಲುವಾಗಿ ಗುತ್ತಿಗೆದಾರರುಗಳಿಗೆ ಮುಂಗಡ ಪಾವತಿ (ನಿವ್ವಳ)	**16,245.01**	7,267.84
ಸ್ವೀಕರಿಸಲಾಗಿರುವ ಬಡ್ಡಿ	**2,809.03**	1,885.07
ವಿಶೇಷ ಭೂ ಸ್ವಾಧೀನ ಅಧಿಕಾರಿಯವರ ಬ್ಯಾಂಕು ಖಾತೆಯಲ್ಲಿ ಭೂ ಖರೀದಿಗಾಗಿ ಠೇವಣಿ	**3,744.74**	(22,974.57)
ಹಣಕಾಸು ವೆಚ್ಚಗಳು	**(18,766.55)**	(9,288.94)
ಹಣಕಾಸು ವೆಚ್ಚಗಳಿಗಾಗಿ ಸ್ವೀಕರಿಸಲಾದ ಅನುದಾನ	**18,766.55**	9,288.94
ಹೂಡಿಕೆ ಚಟುವಟಿಕೆಗಳಿಂದ (ಬಳಸಲಾದ)/ನಿವ್ವಳ ಹಣಕಾಸಿನ ಹರಿವು	**(2,70,226.40)**	**(5,89,283.01)**
ಹಣಕಾಸು ಚಟುವಟಿಕೆಗಳಿಂದ ಹಣಕಾಸಿನ ಹರಿವು		
ನೀಡಲಾಗಿರುವ ಷೇರು ಬಂಡವಾಳ	**1,66,761.76**	**1,11,150.46**
ಹಂಚಿಕೆ ಮಾಡಲು ಬಾಕಿಯಿರುವ ಷೇರು ಅರ್ಜಿಯ ಹಣ (ನಿವ್ವಳ)	**45,214.90**	29,861.30
ದೀರ್ಘಾವಧಿ ಸಾಲಗಳಿಂದ ಸ್ವೀಕೃತಿಗಳು	**76,402.36**	1,19,050.00
ದೀರ್ಘಾವಧಿ ಸಾಲಗಳ ಮರುಪಾವತಿ	**(25,370.33)**	(14,866.47)
ಪ್ರತ್ಯೇಕತೆಯ ಯೋಜನೆಯ ಅನುಸರಣೆಯಂತೆ ಹಂಚಿಕೆ ಮಾಡಲು ಬಾಕಿ ಇರುವ ಷೇರುಗಳು	–	3,69,890.37
ಸ್ವೀಕರಿಸಲಾಗಿರುವ ಉಳಿಸಿಕೊಳ್ಳಲ್ಪಡುವ ಹಣಕಾಸು	**7,092.51**	5,916.77
ಹಣಕಾಸು ಚಟುವಟಿಕೆಗಳಿಂದ ನಿವ್ವಳ ಹಣಕಾಸಿನ ಹರಿವು/(ಬಳಸಲಾದ)	**2,70,101.19**	**6,21,002.43**

ಸಿಐಎನ್: ಯು41000ಕೆಎ2016ಎಸ್‌ಜಿಸಿ097260

31 ಮಾರ್ಚ್ 2020ರ ವರ್ಷಾಂತ್ಯಕ್ಕೆ ಹಣಕಾಸಿನ ಹರಿವಿನ ತ:ಖ್ತೆ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರ ಅಂತ್ಯಗೊಂಡ ಸಾಲಿಗೆ	31 ಮಾರ್ಚ್ 2019ರ ಅಂತ್ಯಗೊಂಡ ಸಾಲಿಗೆ (ಪುನರ್ ತಿಳಿಸಿರುವುದು)
ನಗದು ಮತ್ತು ನಗದಿಗೆ ಸಮಾನವಾದವುಗಳಲ್ಲಿ ನಿವ್ವಳ ಹೆಚ್ಚಳ/(ಇಳಿಕೆ)	**(1,054.86)**	11,231.67
ವರ್ಷದ ಪ್ರಾರಂಭದಲ್ಲಿ ನಗದು ಮತ್ತು ನಗದಿಗೆ ಸಮಾನವಾದವುಗಳು	**25,829.16**	14,597.49
ವರ್ಷದ ಅಂತ್ಯದಲ್ಲಿ ನಗದು ಮತ್ತು ನಗದಿಗೆ ಸಮಾನವಾದವುಗಳು	**24,774.30**	25,829.16

ಟಿಪ್ಪಣಿ:

1. ಮೇಲಿನ ಹಣಕಾಸು ಹರಿವಿನ ತ:ಖ್ತೆಯನ್ನು ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) 2015ರ ಹಣಕಾಸು ಹರಿವಿನ ತ:ಖ್ತೆಗಳ ಮೇಲಿನ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 7ರಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ "ಪರೋಕ್ಷ ಪದ್ಧತಿ"ಯಲ್ಲಿ ತಯಾರಿಸಲಾಗಿದೆ.
2. ಹಿಂದಿನ ಸಾಲಿನ ಅಂಕಿಸಂಖ್ಯೆಗಳನ್ನು ಅಗತ್ಯವಿರುವ ಕಡೆಗಳಲ್ಲಿ ಪುನರ್–ಹೊಂದಾಣಿಕೆ ಮಾಡಲಾಗಿದೆ/ಪುನರ್–ಗುಂಪು ಮಾಡಲಾಗಿದೆ.
3. ನಗದು ಮತ್ತು ನಗದಿಗೆ ಸಮನಾದವುಗಳು ಖಜಾನೆಯಲ್ಲಿರುವ ಠೇವಣಿಗಳ ಶಿಲ್ಕನ್ನೂ ಒಳಗೊಂಡಂತೆ ನಗದು ಮತ್ತು ಬ್ಯಾಂಕು ಶಿಲ್ಕುಗಳನ್ನು ಪ್ರತಿನಿಧಿಸುತ್ತವೆ.
4. ನಗದು ಮತ್ತು ನಗದಿಗೆ ಸಮಾನವಾದವುಗಳ ಸಮನ್ವಯಗೊಳಿಸಿರುವಿಕೆಯು ಟಿಪ್ಪಣಿ –8ರ ಪ್ರಕಾರ ಆಗಿರುತ್ತದೆ.
5. *ಹೂಡಿಕೆ ಚಟುವಟಿಕೆಗಳಿಂದ ನಗದಿನ ಹರಿವು ಹಂಚಿಕೆ ಮಾಡಲಾಗಿರುವ ವೆಚ್ಚಗಳನ್ನು ಒಳಗೊಂಡಿರುತ್ತದೆ.
6. ಹಣಕಾಸು/ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳನ್ನು ಅವು ಪ್ರಗತಿಯಲ್ಲಿರುವ ಬಂಡವಾಳ ಯೋಜನೆಗಳಿಗೆ ಸಂಬಂಧಿಸಿರುವುದರಿಂದ ಹೂಡಿಕೆ ಚಟುವಟಿಕೆಗಳಿಂದ ಹಣಕಾಸಿನ ಹರಿವು ಎಂಬುದಾಗಿ ವರ್ಗೀಕರಿಸಲಾಗಿರುವುದು.

ನಗದು ಮತ್ತು ನಗದಿಗೆ ಸಮನಾದವುಗಳ ಹಣಕಾಸು ತಃಖ್ತೆಗಳೊಂದಿಗೆ ಸಮನ್ವಯಗೊಳಿಸಿರುವಿಕೆ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರ ಅಂತ್ಯಗೊಂಡ ಸಾಲಿಗೆ	31 ಮಾರ್ಚ್ 2019ರ ಅಂತ್ಯಗೊಂಡ ಸಾಲಿಗೆ (ಪುನರ್ ತಿಳಿಸಿರುವುದು)
ಉಳಿತಾಯ ಖಾತೆಗಳಲ್ಲಿನ ಶಿಲ್ಕು	**5,140.48**	7,554.50
ಚಾಲ್ತಿ ಖಾತೆಗಳಲ್ಲಿನ ಶಿಲ್ಕು	**1,560.01**	53.41
3 ತಿಂಗಳುಗಳ ಒಳಗೆ ಅವಧಿ ಮುಕ್ತಾಯಗೊಳ್ಳುವ ಠೇವಣಿ ಖಾತೆಗಳಲ್ಲಿನ ಶಿಲ್ಕು	**18,073.31**	18,220.75
ಜಿಲ್ಲಾ ಖಾಜನೆಯಲ್ಲಿರುವ ಶಿಲ್ಕು	**0.50**	0.50
	24,774.30	25,829.16
ಕೂಡುವುದು: ವಿಶೇಷ ಭೂಸ್ವಾಧೀನ ಅಧಿಕಾರಿಯವರ ಬ್ಯಾಂಕು ಖಾತೆಯಲ್ಲಿರುವ ಶಿಲ್ಕು	**5,299.84**	12,389.88
ಕೂಡುವುದು: ವಿಶೇಷ ಭೂಸ್ವಾಧೀನ ಅಧಿಕಾರಿಯವರ ಬ್ಯಾಂಕು ಖಾತೆಯಲ್ಲಿನ 3 ತಿಂಗಳುಗಳ ಒಳಗೆ ಅವಧಿಯು ಮುಕ್ತಾಯ ಗೊಳ್ಳುವ ಠೇವಣಿಗಳ ಶಿಲ್ಕು	**24,716.29**	21,370.99
ಸಂತುಲನ ಪಟ್ಟಿಯ ಪ್ರಕಾರ ನಗದು ಮತ್ತು ನಗದಿಗೆ ಸಮಾನಾದವುಗಳು	**54,790.43**	59,590.03

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಸಹಿ/–
ಎನ್. ಲಕ್ಷ್ಮಣ ರಾವ್ ಪೇಶ್ವೆ
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 02543038

ಸಹಿ/–
ಆರ್. ಚೆಲುವರಾಜು
ನಿರ್ದೇಶಕರು
ಡಿಐಎನ್: 08220118

ಸಹಿ/–
ಜ್ಯೋತಿ ಡಿ ಕುಂದರ್
ಪ್ರಧಾನ ವ್ಯವಸ್ಥಾಪಕರು–ಹಣಕಾಸು

ಸಹಿ/–
ಜಿ.ಎಸ್. ಪ್ರಕಾಶ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 22.12.2020

ಲಗತ್ತಿಸಲಾಗಿರುವ ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ರಾವ್ ಅಸೋಸಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 003080S
ಸಹಿ/–
ಸಂದೀಪ್ ಎಸ್. ಶೇಕರ್
ಪಾಲುದಾರರು
ಸದಸ್ಯತ್ವ ಸಂಖ್ಯೆ : 232631
ಯು.ಡಿ.ಐ.ಎನ್:21232631AAAAAZ2265

31 ಮಾರ್ಚ್ 2020ರ ಅಂತ್ಯಗೊಂಡ ಸಾಲಿಗೆ ಈಕ್ವಿಟಿಯಲ್ಲಿನ ಬದಲಾವಣೆಗಳ ತ:ಖ್ತೆ

(ಎ) ಈಕ್ವಿಟಿ ಷೇರು ಬಂಡವಾಳ

(ರೂ. ಲಕ್ಷಗಳಲ್ಲಿ)

ವಿವರಗಳು	ಷೇರುಗಳ ಸಂಖ್ಯೆ	ಮೊತ್ತ
1 ಏಪ್ರಿಲ್ 2018ರಲ್ಲಿದ್ದಂತೆ ಶಿಲ್ಕು	**1,25,58,687**	1,25,586.87
ಪ್ರಸಕ್ತ ಸಾಲಿನಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು	**1,11,15,046**	1,11,150.46
31 ಮಾರ್ಚ್ 2019ರಲ್ಲಿದ್ದಂತೆ ಶಿಲ್ಕು	**2,36,73,733**	**2,36,737.33**
1 ಏಪ್ರಿಲ್ 2019ರಲ್ಲಿದ್ದಂತೆ ಶಿಲ್ಕು	**2,36,73,733**	2,36,737.33
ಪ್ರಸಕ್ತ ಸಾಲಿನಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು	**1,66,76,176**	1,66,761.76
31 ಮಾರ್ಚ್ 2020ರಲ್ಲಿದ್ದಂತೆ ಶಿಲ್ಕು	**4,03,49,909**	**4,03,499.09**

(ಬಿ) ಇತರೆ ಈಕ್ವಿಟಿ

(ರೂ. ಲಕ್ಷಗಳಲ್ಲಿ)

ವಿವರಗಳು	ಮೀಸಲಿರುವಿಕೆ ಮತ್ತು ಮಿಗುತಾಯಗಳು				
	ಹಂಚಿಕೆಗೆ ಬಾಕಿ ಉಳಿದಿರುವ ಷೇರುಗಳು ಡಿಮೆರ್ಜ್ ಯೋಜನೆಗೆ ಅನುಗುಣವಾಗಿ	ಷೇರುಗಳನ್ನು ಹಂಚಲು ಬಾಕಿ ಇರುವ ಷೇರು ಅರ್ಜಿಗಳ ಹಣ	ಉಳಿಸಿಕೊಳ್ಳಲ್ಪಟ ಗಳಿಕೆಗಳು	ಇತರೆ ಸಮಗ್ರ ಆದಾಯ	ಒಟ್ಟಾರೆ ಇತರೆ ಈಕ್ವಿಟಿಗಳು
1 ಏಪ್ರಿಲ್ 2018 ರಲ್ಲಿದ್ದಂತೆ ಶಿಲ್ಕು	3,69,890.37	32,319.13	(8,997.43)	0.07	**3,93,212.14**
ಪೂರ್ವಾವಧಿ ಹೊಂದಾಣಿಕೆಗಳು	–	–	–	–	–
1 ಏಪ್ರಿಲ್ 2018ರಲ್ಲಿದ್ದಂತೆ ಪುನರ್–ತಿಳಿಸಲ್ಪಟ್ಟ ಶಿಲ್ಕು	3,69,890.37	32,319.13	(8,997.43)	0.07	**3,93,212.14**
ಪ್ರಸಕ್ತ ಸಾಲಿಗೆ ಲಾಭ/(ನಷ್ಟ)			(3,237.47)	–	**(3,237.47)**
ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದ ಮೊತ್ತ	–	1,41,011.76	–	–	**1,41,011.76**
ಹಂಚಿಕೆಗೆ ಬಾಕಿ ಉಳಿದಿರುವ ಷೇರುಗಳು ಡಿಮೆರ್ಜ್ ಯೋಜನೆಗೆ ಅನುಗುಣವಾಗಿ	–	–	–	–	–
ಪ್ರಸಕ್ತ ಸಾಲಿನಲ್ಲಿ ಹಂಚಿಕೆ ಮಾಡಲಾದ ಷೇರುಗಳು	–	(1,11,150.46)	–	–	**(1,11,150.46)**
ಪ್ರಸಕ್ತ ಸಾಲಿಗೆ ಇತರೆ ಸಮಗ್ರ ವರಮಾನ	–	–		(0.80)	**(0.80)**
31 ಮಾರ್ಚ್ 2019ರಲ್ಲಿದ್ದಂತೆ ಶಿಲ್ಕು	**3,69,890.37**	**62,180.43**	**(12,234.91)**	**(0.73)**	**4,19,835.17**
1 ಏಪ್ರಿಲ್ 2019ರಲ್ಲಿದ್ದಂತೆ ಶಿಲ್ಕು	3,69,890.37	62,180.43	(12,234.91)	(0.73)	4,19,835.17
ಪ್ರಸಕ್ತ ಸಾಲಿಗೆ ಲಾಭ/(ನಷ್ಟ)		–	(19,476.95)	–	(19,476.95)
ಪೂರ್ವಾವಧಿ ಹೊಂದಾಣಿಕೆಗಳು	–		–	–	–
ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದ ಮೊತ್ತ	–	2,24,351.66	–	–	**2,24,351.66**
ಪ್ರಸಕ್ತ ಸಾಲಿನಲ್ಲಿ ಹಂಚಿಕೆ ಮಾಡಲಾದ ಷೇರುಗಳು	–	(1,66,761.76)	–	–	**(1,66,761.76)**
ಪ್ರಸಕ್ತ ಸಾಲಿನಲ್ಲಿ ಷೇರುಗಳ ಮರು ವರ್ಗೀಕರಣ*	–	(12,375.00)	–	–	**(12,375.00)**
ಪ್ರಸಕ್ತ ಸಾಲಿಗೆ ಇತರೆ ಸಮಗ್ರ ವರಮಾನ	–	–	–	(0.60)	**(0.60)**
31 ಮಾರ್ಚ್ 2020ರಲ್ಲಿದ್ದಂತೆ ಶಿಲ್ಕು	**3,69,890.37**	**1,07,395.33**	**(31,711.86)**	**(1.33)**	**4,45,572.52**

ಮೀಸಲಿರಿಸಿರುವಿಕೆಗಳು ಮತ್ತು ಮಿಗುತಾಯಗಳ ಸ್ವರೂಪ ಹಾಗೂ ಚಲನೆಗಳಿಗಾಗಿ ಟಿಪ್ಪಣಿ ಸಂಖ್ಯೆ 13 ನ್ನು ಉಲ್ಲೇಖಿಸುವುದು.

*ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಜಸಂಇ 21 ಎನ್‌ಎಂಎಸ್ 2019 ದಿನಾಂಕ 26.03.2019ರ ಮೂಲಕ ರೂ.12,735 ಲಕ್ಷ ಮೊತ್ತವನ್ನು ಬಿಡುಗಡೆಗೊಳಿಸಿತು ಹಾಗೂ ಈ ಅನುದಾನಗಳನ್ನು ಸಮಾಜ ಕಲ್ಯಾಣ ಇಲಾಖೆಯು ಅನುಮೋದಿಸಿರುವ ಕಾಮಗಾರಿಗಳಿಗೆ ಬಳಸಿಕೊಳ್ಳುವಂತೆ ನಿರ್ದೇಶಿಸಿತು. ಈ ನಿಟ್ಟಿನಲ್ಲಿ ಸರ್ಕಾರದ ಸ್ಪಷ್ಟನೆಗಳು ಬಾಕಿಯಿದ್ದಂತೆ, ಕಂಪನಿಯು ತಾನು ಸ್ವೀಕರಿಸಿದ ಅನುದಾನಗಳನ್ನು ಷೇರು ಅರ್ಜಿ ಮೊತ್ತಗಳ ಅಡಿಯಲ್ಲಿ ವರ್ಗೀಕರಿಸಿದ್ದಿತು. ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಜಸಂಇ 02 ಎಂಬಿಐ 2019 ದಿನಾಂಕ 23.12.2019ರ ಮೂಲಕ ಈ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯು ಎಸ್‌ಸಿಪಿ/ಟಿಎಸ್‌ಪಿ ಯೋಜನೆಗಳ ಅಡಿಯಲ್ಲಿ ವಸತಿ ಶಾಲೆಗಳು/ಹಾಸ್ಟೆಲುಗಳ ನಿರ್ಮಾಣ ಕಾಮಗಾರಿಗಳನ್ನು ವಹಿಸಲಾಗಿರುವಂತಹ ಮೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ (ಕೆಆರ್‌ಐಇಎಸ್), ಇವರಿಗೆ ವರ್ಗಾಯಿಸುವಂತೆ ನಿರ್ದೇಶಿಸಿತು. ಅದರಂತೆಯೇ ಷೇರು ಅರ್ಜಿ ಹಣಕಾಸನ್ನು ಪುನರ್–ವರ್ಗೀಕರಿಸಲಾಯಿತು.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

	ಸಹಿ/–	ಸಹಿ/–	ಸಹಿ/–	ಸಹಿ/–
	ಎನ್. ಲಕ್ಷ್ಮಣ ರಾವ್ ಪೇಶ್ವೆ	**ಆರ್. ಚೆಲುವರಾಜು**	**ಜ್ಯೋತಿ ಡಿ ಕುಂದರ್**	**ಜಿ.ಎಸ್. ಪ್ರಕಾಶ್**
ಸ್ಥಳ : ಬೆಂಗಳೂರು	ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು	ಪ್ರಧಾನ ವ್ಯವಸ್ಥಾಪಕರು–ಹಣಕಾಸು	ಕಂಪನಿ ಕಾರ್ಯದರ್ಶಿ
ದಿನಾಂಕ : 22.12.2020	ಡಿಐಎನ್ : 02543038	ಡಿಐಎನ್: 08220118		

ಲಗತ್ತಿಸಲಾಗಿರುವ ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ರಾವ್ ಅಸೋಸಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 003080S
ಸಹಿ/–
ಸಂದೀಪ್ ಎಸ್. ಶೇಕರ್
ಪಾಲುದಾರರು
ಸದಸ್ಯತ್ವ ಸಂಖ್ಯೆ : 232631
ಯು.ಡಿ.ಐ.ಎನ್:21232631AAAAAZ2265

ಉದ್ದೇಶಪೂರ್ವಕವಾಗಿ ಖಾಲಿ ಬಿಡಲಾಗಿದೆ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

1. ಕಂಪನಿಯ ಹಿನ್ನೆಲೆ ಹಾಗೂ ಅದರ ಕಾರ್ಯಚಟುವಟಿಕೆಗಳು

(ಎ) ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವನ್ನು ಸರ್ಕಾರಿ ಆದೇಶ ಸಂಖ್ಯೆ ಜಸಂಇ 35 ವಿಬ್ಯಾಇ 2016 ದಿನಾಂಕ 20.08.2016ರ ಅನ್ವಯ ಕಂಪನಿಗಳ ಅಧಿನಿಯಮ 2013ರ ಅನುವುಗಳ ಅಡಿಯಲ್ಲಿ ಕರ್ನಾಟಕ ಸರ್ಕಾರವು ಸಂಪೂರ್ಣವಾಗಿ ಮಾಲೀಕತ್ವವನ್ನು ಹೊಂದಿರುವ ಕಂಪನಿಯಾಗಿ ದಿನಾಂಕ 20.10.2016ರಂದು ನೋಂದಣಿ ಮಾಡಿಸಲಾಯಿತು.

(ಬಿ) ಕಂಪನಿಯ ಪ್ರಮುಖ ಉದ್ದೇಶಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ:

(i) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಅನುಕೂಲತೆಗಳನ್ನು ರೂಪಿಸುವುದಕ್ಕಾಗಿ ತಜ್ಞರುಗಳ ಸಮಿತಿಯು ಸಲ್ಲಿಸುವ ಅಧ್ಯಯನ ವರದಿಯನ್ನು ಆಧಾರಿಸಿದಂತೆ ಪ್ರಸ್ತಾಪಿಸಲಾಗುವ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಮತ್ತು ಕಾರ್ಯಗತಗೊಳಿಸುವುದು ಹಾಗೂ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಮತ್ತು ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಗಳನ್ನು ಮತ್ತು ಈ ಯೋಜನೆಗಳಿಗೆ ಸಂಬಂಧಿಸಿದ ಯೋಜನೆಗಳು ಕರ್ನಾಟಕ ನೀರಾವರಿ ನಿಗಮದಿಂದ ಈ ಕಂಪನಿಗೆ ವರ್ಗಾಯಿಸಲಾಗಿದೆ ಹಾಗೂ ಕರ್ನಾಟಕದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ ಬರ ಪೀಡಿತ ಪ್ರದೇಶಗಳ ನೀರಿನ ಅಗತ್ಯತೆಯನ್ನು ಪೂರೈಸುವ ಸಲುವಾಗಿ ಕರ್ನಾಟಕ ಸರ್ಕಾರವು ಕಾಲಾನುಕಾಲಕ್ಕೆ ಈ ಕಂಪನಿಗೆ ವಹಿಸಬಹುದಾದ ಇತರೆ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಮತ್ತು ಕಾರ್ಯಗತಗೊಳಿಸುವುದು.

(ii) ಅಣೆಕಟ್ಟುಗಳು, ಜಲಾಶಯಗಳು, ಬ್ಯಾರೇಜುಗಳು, ಸಣ್ಣ ನಾಲೆಗಳು, ಏತ ನೀರಾವರಿ ಯೋಜನೆಗಳು, ಸೌರ ನೀರಾವರಿ ಯೋಜನೆಗಳು, ಕೊಳವೆ ಮಾರ್ಗಗಳು, ರಸ್ತೆ ಕಾಮಗಾರಿಗಳು, ವಿದ್ಯುತ್ ಉತ್ಪಾದನೆ ಹಾಗೂ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಕಾಡಾ) ಕಾಮಗಾರಿಗಳನ್ನು ಒಳಗೊಂಡಂತೆ ಇತರೆ ಉದ್ದೇಶಗಳನ್ನು ಒಳಗೊಂಡಿರುವ ಎಲ್ಲಾ ರೀತಿಯ ಮೂಲಸೌಕರ್ಯಗಳ ಪೂರ್ವಭಾವಿ ಯೋಜನೆ, ಪರಿಶೀಲನೆ, ಮೌಲ್ಯಮಾಪನ ಮಾಡುವಿಕೆ, ನಿರ್ಮಾಣ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾಡುವುದು.

(iii) ನೀರಿನ ಪರಿಣಾಮಕಾರಿತ್ವದಿಂದ ಕೂಡಿದ ಬಳಕೆಗಾಗಿ ಅತ್ಯಾಧುನಿಕ ನೀರಾವರಿ ಯೋಜನೆಗಳು/ ತುಂತುರು, ಹನಿ ನೀರಾವರಿ, ಸೌರ ಜಲ ಪಂಪುಗಳು ಮತ್ತಿತರೆ ಪದ್ಧತಿಗಳು ಅಥವಾ ವ್ಯವಸ್ಥೆಗಳನ್ನು ಪ್ರೋತ್ಸಾಹಿಸುವುದು, ಅಳವಡಿಸಿಕೊಳ್ಳುವುದು ಹಾಗೂ ನೀರು ಬಳಕೆ ಯೋಜನೆಗಳ ನಿರ್ಮಾಣದಿಂದ ತೊಂದರೆಗೆ ಒಳಗಾದ ಜನತೆ ಮತ್ತು ಸ್ಥಳಗಳಿಗೆ ಪುನರ್ವಸತಿ ಕಲ್ಪಿಸುವುದನ್ನೂ ಒಳಗೊಂಡಂತೆ ಕರ್ನಾಟಕ ಸರ್ಕಾರವು ವಹಿಸಿಕೊಡುವ ನೀರಾವರಿ ಯೋಜನೆಗಳನ್ನು ನಿರ್ಮಿಸುವುದು ಕಾರ್ಯಾಚರಣೆ ಗೊಳಿಸುವುದು, ನಿರ್ವಹಿಸುವುದು ಹಾಗೂ ಅರಣ್ಯೀಕರಣಕ್ಕಾಗಿ ಸೂಕ್ತ ಯೋಜನೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಸೂಕ್ತ ಮಾರ್ಗೋಪಾಯಗಳು, ಮಾನದಂಡಗಳು ಕಂಡುಕೊಳ್ಳುವ ಮೂಲಕ ಪ್ರವಾಹಗಳನ್ನು ತಡೆಯುವುದು ಹಾಗೂ ಅಲ್ಲದೆಯೇ ನದಿಗಳಲ್ಲಿ/ಕೆರೆಗಳಲ್ಲಿ ನ್ಯಾವಿಗೇಶನ್, ಲೀಷರ್/ಮನೋರಂಜನೆ ಚಟುವಟಿಕೆಗಳು, ಮೀನುಗಾರಿಕೆ, ಇತ್ಯಾದಿಗಳನ್ನು ಒದಗಿಸುವುದು.

(ಸಿ) ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಜಸಂಇ 35 ವಿಬ್ಯಾಇ 2016 ದಿನಾಂಕ 20.08.2016ರ ಮೂಲಕ ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಈ ಯೋಜನೆಗಳಿಗೆ ಸಂಬಂಧಿತ ಯೋಜನೆಗಳನ್ನು ಹಾಗೂ ಕರ್ನಾಟಕದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳಿಗೆ ಬರ ಪೀಡಿತ ಪ್ರದೇಶಗಳ ನೀರಿನ ಅಗತ್ಯತೆಯನ್ನು ಪೂರೈಸುವ ಯೋಜನೆಗಳು ಮತ್ತು ಮುಂದುವರೆದುಕೊಂಡು ಹೋಗುತ್ತಿರುವ ಇತರೆ ಯಾವುದಾದರೂ ಯೋಜನೆಗಳು ಇದ್ದಲ್ಲಿ, ಅವುಗಳನ್ನು ಈ ಕಂಪನಿಗೆ ವರ್ಗಾಯಿಸಿತು. ಸರ್ಕಾರಿ ಆದೇಶ ಸಂಖ್ಯೆ ಜಸಂಇ 130 ವಿಬ್ಯಾಇ 2016 ದಿನಾಂಕ 18.11.2016ರ ಪ್ರಕಾರ ಕರ್ನಾಟಕ ಸರ್ಕಾರವು ತಾತ್ವಿಕವಾಗಿ ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಯೋಜನೆ, ವಾಣಿವಿಲಾಸ ಸಾಗರ, ಗಾಯಿತ್ರಿ ಜಲಾಶಯದ ಮುಂದುವರೆದುಕೊಂಡು ಹೋಗುತ್ತಿರುವ ಕಾಮಗಾರಿಗಳ ಆಸ್ತಿಗಳನ್ನು ಮತ್ತು ಜವಾಬ್ದಾರಿಗಳನ್ನು ಈ ಕಂಪನಿಗೆ ವರ್ಗಾಯಿಸಿರುವುದು, ಮೇಲೆ ತಿಳಿಸಲಾದ ಯೋಜನೆಗಳ ಆಸ್ತಿಗಳು ಮತ್ತು ಜವಾಬ್ದಾರಿಗಳ ಅಂತಿಮ ವರ್ಗಾವಣೆಯು ಬಾಕಿಯಿರುವುದು. ಮುಂದುವರೆದು, ಮೇಲೆ ತಿಳಿಸಲಾದ ಯೋಜನೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳನ್ನು ಮತ್ತು ಈ ಕಛೇರಿಗೆ ಹೊಂದಿಕೊಂಡಿರುವ ಹುದ್ದೆಗಳನ್ನು ಮತ್ತು ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬಂದ್ದಿಗಳನ್ನು ಕರ್ನಾಟಕ ಸರ್ಕಾರವು ಈ ಕಂಪನಿಗೆ ವರ್ಗಾವಣೆ ಮಾಡುತ್ತಿದೆ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

(ಡಿ) ಸರ್ಕಾರವು, ವಿಶೇಷ ಘಟಕ ಯೋಜನೆ (ಎಸ್‌ಸಿಪಿ)/ ಬುಡಕಟ್ಟು ಜನಾಂಗದ ಉಪ–ಯೋಜನೆ (ಟಿಎಸ್‌ಪಿ) ಯೋಜನೆಗಳನ್ನು ಸಮಾಜದ ಹಿಂದುಳಿದ ವರ್ಗಗಳಿಗಾಗಿ ನೀರಾವರಿ ಮತ್ತು ಇತರೆ ಅನುಕೂಲತೆಗಳ ಕಾಮಗಾರಿಗಳನ್ನೂ ಹಾಗೂ ಇತರೆ ಸರ್ಕಾರಿ ಯೋಜನೆಯಾದ ನಬಾರ್ಡ್ ಕಾಮಗಾರಿಗಳನ್ನು ಈ ಕಂಪನಿಗೆ ವಹಿಸಿಕೊಟ್ಟಿದೆ.

2. ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ

ಸೂಪರ್ ನ್ಯೂಮರರಿ (Super Numarary) ಉದ್ಯೋಗಿಗಳಿಗೆ ಗ್ರಾಚ್ಯೂಟಿ ಪಾವತಿ, ಯೋಜನೆಯು ವರ್ಗಾವಣೆಗೊಂಡಾಗ ಕಾಮಗಾರಿಗಳ ಬಾಕಿಬಿಲ್ಲುಗಳ ಪಾವತಿ, ದರ ಹೆಚ್ಚಳಗೊಂಡಾಗ ಬರುವ ಹೆಚ್ಚುವರಿ ಪಾವತಿಗಾಗಿ ಬರುವ ಕೋರಿಕೆಗಳು, ಹೆಚ್ಚುವರಿ ಹಣಕಾಸು ಪಾವತಿ ಬಾಧ್ಯತೆಗಳು ಹಾಗೂ ಬೆಳೆ ಪರಿಹಾರ ಪಾವತಿ, ಮುಂತಾದ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದಂತೆ ಹಣಕಾಸು ತ:ಖ್ತೆಗಳನ್ನು ಚಾರಿತ್ರಿಕ ವೆಚ್ಚ ಸಂಪ್ರದಾಯದ ಅಡಿಯಲ್ಲಿ ಮುಂದುವರೆಯುವ ಸಂಸ್ಥೆ ಹಾಗೂ ಪ್ರಾಪ್ತತೆಯ ಆಧಾರದ ಮೇಲೆ ತಯಾರಿಸಲಾಗಿರುತ್ತದೆ ಹಾಗೂ ಇವುಗಳನ್ನು ಹೊರತುಪಡಿಸಿ (ಎ) ನ್ಯಾಯಸಮ್ಮತ ಮೌಲ್ಯಗಳಲ್ಲಿ ಲೆಕ್ಕಹಾಕಲಾಗುವ ಕೆಲವು ಹಣಕಾಸು ಸಾಧನಗಳು ಹಾಗೂ (ಬಿ) ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನಗಳು (ಆಸ್ತಿ)/ ಜವಾಬ್ದಾರಿಗಳನ್ನು ಹೊರತುಪಡಿಸಿದಂತೆ ತನ್ನ ವ್ಯವಹಾರಗಳನ್ನು ನಡೆಸಿಕೊಂಡುಹೋಗುತ್ತಿರುವ ಕಂಪನಿಯಾಗಿ ಹಾಗೂ ಸಂಚಿತ ಆಧಾರದ ಮೇರೆಗೆ ಸಾಂಪ್ರದಾಯಿಕ ಮೂಲ ಬೆಲೆ ಆಧಾರದ ಮೇರೆಗೆ ತಯಾರಿಸಲಾಗಿದೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 133ರ ಅಡಿಯಲ್ಲಿ ಅಧಿಸೂಚನೆಗೊಂಡಿರುವ ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) ನಿಯಮಗಳು, 2015ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಕಡ್ಡಾಯವಾಗಿ ಪಾಲಿಸಬೇಕಾದ ಭಾರತದ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ವಿಷಾಯಕ ಅಂಶಗಳನ್ನು ಅನುಸರಿಸಿರುತ್ತದೆ ಹಾಗೂ ಅನಿಶ್ಚತೆಯಿಂದ ಕೂಡಿರುವುದರಿಂದ ಇವುಗಳ ವ್ಯವಹಾರಗಳು ಖಚಿತವಾದ ನಂತರ ಲೆಕ್ಕವನಿಡುವುದು.

3.ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು

ಕಂಪನಿಯು ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು ಕೆಲವು ಕುಡಿಯುವ ನೀರು ಮತ್ತು ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿರ್ದಿಷ್ಟ ಗುರಿಯೊಂದಿಗೆ ಸ್ಥಾಪಿಸಲಾಗಿರುವುದು. ಕಂಪನಿಯ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳನ್ನು ಸಾಧ್ಯವಾದಷ್ಟು ಮಟ್ಟಿನ ಕಾರ್ಯಸಾಧ್ಯತೆಯೊಂದಿಗೆ ನೀರು ಸರಬರಾಜಿಗಾಗಿ ನೀರಿನ ದರಗಳ ವಸೂಲಾತಿ ಮಾಡುವುದರೊಂದಿಗೆ ಹಾಗೂ ಉಳಿದ ಭಾಗವನ್ನು ಈ ಕಂಪನಿಯ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗುವ ಹಣಕಾಸಿನ ಸಹಾಯದಿಂದ ಭರಿಸಲಾಗುವುದು. ಆದ್ದರಿಂದ ಹಣಕಾಸು ತ:ಖ್ತೆಗಳನ್ನು ಮುಂದುವರೆಯುತ್ತಿರುವ ಕಂಪನಿ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ.

3.1 ಮೌಲ್ಯಮಾಪನಗಳ ಬಳಕೆ

ಹಣಕಾಸು ತ:ಖ್ತೆಗಳ ತಯಾರಿಕೆಯು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ (ಜಿ.ಎ.ಎ.ಪಿ) ಅನುಸಾರವೇ ಆಗಿರುತ್ತದೆ ಹಾಗೂ ಆಡಳಿತ ಮಂಡಳಿಯು ಹಣಕಾಸು ತ:ಖ್ತೆಗಳ ದಿನಾಂಕದಂದು ಆಸ್ತಿಗಳು ಮತ್ತು ಹೊಣೆಗಳು ಮತ್ತು ಆಕಸ್ಮಿಕ ಜವಾಬ್ದಾರಿಗಳ ವರದಿ ಮಾಡಲಾಗಿರುವ ಮೊತ್ತಗಳ ಮೇಲೆ ಪ್ರಭಾವ ಭೀರಬಹುದಾದವುಗಳ ಮೌಲ್ಯಮಾಪನಗಳು ಮತ್ತು ಕಲ್ಪನೆಗಳು ಮಾಡುವ ಅಗತ್ಯತೆಯಿರುತ್ತದೆ. ಈ ವರದಿಯ ಜೊತೆಯಲ್ಲಿರುವ ಹಣಕಾಸು ತ:ಖ್ತೆಗಳಲ್ಲಿ ಬಳಸಲಾಗಿರುವ ಮೌಲ್ಯಮಾಪನಗಳು ಮತ್ತು ಕಲ್ಪನೆಗಳು ಆಡಳಿತ ಮಂಡಳಿಯ ಸಂಬಂಧಿತ ವಾಸ್ತವಾಂಶಗಳು ಹಾಗೂ ಸಂದರ್ಭಗಳ ಮೌಲ್ಯಮಾಪನದ ಆಧಾರದ ಮೇರೆಗೆ ಆಗಿರುತ್ತದೆ. ವಾಸ್ತವಿಕ ಫಲಿತಾಂಶಗಳು ಅಂತಹ ಮೌಲ್ಯಮಾಪನಗಳಿಗಿಂತ ಭಿನ್ನವಾಗಿರಬಹುದು. ಲೆಕ್ಕವನ್ನಿಡುವಿಕೆಯ ಮೌಲ್ಯಮಾಪನಗಳಿಗೆ ಮಾಡಲಾಗುವ ಯಾವುದೇ ಪರಿಷ್ಕರಣೆಯನ್ನು ಚಾಲ್ತಿ ಮತ್ತು ಮುಂದಿನ ಅವಧಿಗಳಲ್ಲಿ ಮುಂದಾಲೋಚನೆಯಿಂದ ಗುರುತಿಸಲಾಗುವುದು ಪರಿವರ್ತನೆಯ ಪರಿಣಾಮದ ಸಮನ್ವಯಗೊಳಿಸುವಿಕೆಗಳು ಹಾಗೂ ವಿವರಣೆಗಳನ್ನು ಟಿಪ್ಪಣಿ 2ರಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

3.2 ಖಂಡಾವಾರು ವರದಿ ಮಾಡುವಿಕೆ:

ಕಂಪನಿಯು ಕೇವಲ ನಿರ್ದಿಷ್ಟ ಭೌಗೋಳಿಕ ಕ್ಷೇತ್ರದಲ್ಲಿ ಕಾರ್ಯಾಚರಣೆ ನಡೆಸುತ್ತಿದೆ ಹಾಗೂ ಅದು ನೀರಾವರಿ ಮೂಲಸೌಕರ್ಯಗಳನ್ನು ಸೃಷ್ಟಿಸುವುದು ಹಾಗೂ ಅವುಗಳ ಕಾರ್ಯಾಚರಣೆಗಳನ್ನು ನಡೆಸುವುದು, ಆದ್ದರಿಂದ ಕಂಪನಿಗೆ ಯಾವುದೇ ವರದಿ ಮಾಡುವಂತಹ ಯಾವುದೇ ಸೆಗ್‌ಮೆಂಟ್‌ಗಳು ಇರುವುದಿಲ್ಲ.

3.3 ವರಮಾನದ ಗುರುತಿಸುವಿಕೆ:

ನೀರಾವರಿಗಾಗಿ ನೀರನ್ನು ಹರಿಸುವುದರಿಂದ ಬರುವ ವರಮಾನವನ್ನು ಕರ್ನಾಟಕ ನೀರಾವರಿ ಅಧಿನಿಯಮ ಹಾಗೂ ಅದರ ಅಡಿಯಲ್ಲಿನ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ಪ್ರಾಪ್ತತೆಯ ಆಧಾರದ ಮೇರೆಗೆ ಗುರುತಿಸಲಾಗುವುದು.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಸಣ್ಣ ಕಲ್ಲುಗಳ ಮಾರಟ, ಗಟ್ಟಿ ಕಲ್ಲು, ಮಣ್ಣು, ಟೆಂಡರು ನಮೂನೆಗಳು, ಇವುಗಳ ಮಾರಾಟ, ಭೂಮಿ ಮತ್ತು ಕಟ್ಟಡದ ಬಳಕೆಗಾಗಿ ಬರುವ ಬಾಡಿಗೆ/ ಕ್ರಯ ವರಮಾನ, ಕಾಮಗಾರಿಯ ಪ್ರಗತಿಯಲ್ಲಿನ ವಿಳಂಬಕ್ಕೆ ದಂಡ, ಗುತ್ತಿಗೆದಾರರುಗಳಿಗೆ ಹೆಚ್ಚುವರಿ ಪಾವತಿ ಮೇಲಿನ ವರಮಾನ, ಬಡ್ಡಿ, ವಿವಿಧ ಆದಾಯ, ಸಾಮಾನ್ಯ ವ್ಯವಹಾರದಲ್ಲಿ ಆಗಿರದ ಇತರೆ ವರಮಾನ/ಸ್ವೀಕೃತಿಗಳನ್ನು, ಅವುಗಳು ಅಂತಿಮವಾಗಿ ಸ್ವೀಕೃತಿಗೊಳ್ಳುವುದರಲ್ಲಿ ಅನಿಶ್ಚಿತತೆ ಇರುತ್ತದೆಯಾದ್ದರಿಂದ ವಾಸ್ತವಿಕವಾಗಿ ವಸೂಲಾತಿಯಾದನಂತರ ಗುರುತಿಸಲಾಗುವುದು. ಮೂರು ವರ್ಷಗಳಿಗೂ ಮೀರಿದಂತೆ ಬಾಕಿಯಿರುವ ಹಳೆಯ ಚೆಕ್ಕುಗಳನ್ನು ವರಮಾನವನ್ನಾಗಿ ಗುರುತಿಸಲಾಗುವುದು.

3.4 ಸರಕು ಸಾಮಗ್ರಿಗಳು

ಉತ್ಪನದ ಸಂದರ್ಭಗಳಲ್ಲಿ ಹೊರತೆಗೆದ ಅವಶೇಷ ಹಾಗೂ ಮತ್ತಿತರೆ ಸಾಮಗ್ರಿಗಳಿಗೆ ಯಾವುದೇ ಮೌಲ್ಯವನ್ನೂ ನಿಗದಿಪಡಿಸಿರುವುದಿಲ್ಲ. ಆದಾಗ್ಯೂ, ಗುತ್ತಿಗೆದಾರರುಗಳಿಗೆ ನೀಡುವ ರಬ್ಬಲ್ ಹಾಗೂ ಇತರೆ ಸಾಮಗ್ರಿಗಳಿಗೆ ಗುತ್ತಿಗೆ ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ವಸೂಲಾತಿ ಮಾಡಲಾಗುವುದು ಹಾಗೂ ಸರ್ಕಾರಕ್ಕೆ ಪಾವತಿಸಬೇಕಾದ ರಾಜಧನವನ್ನು ಕಳೆದು ನಿವ್ವಳ ಮೊತ್ತವನ್ನು ಲಾಭ ಮತ್ತು ನಷ್ಟ ತ:ಖ್ತೆಗೆ ಜಮೆ ಮಾಡಲಾಗುವುದು.

3.5 ನಗದು ಮತ್ತು ನಗದಿಗೆ ಸಮಾನವಾದವುಗಳು (ಹಣಕಾಸಿನ ಹರಿವಿನ ತ:ಖ್ತೆಯ ಉದ್ದೇಶಕ್ಕಾಗಿ)

ನಗದು, ಕಛೇರಿ (ಗಳಲ್ಲಿ) ಇರುವಂತಹ ನಗದು ಹಾಗೂ ಬ್ಯಾಂಕ್‌ಗಳಲ್ಲಿರುವ ಬೇಡಿಕೆ ಠೇವಣಿಗಳನ್ನು ಒಳಗೊಂಡಿರುತ್ತದೆ. ನಗದಿಗೆ ಸಮಾನವಾದವುಗಳು ಅಲ್ಪಾವಧಿ ಶಿಲ್ಕುಗಳಾಗಿರತಕ್ಕದ್ದು, (ಪಡೆದುಕೊಂಡ ದಿನಾಂಕದಿಂದ ಮೂಲ ಮುಕ್ತಾಯದ ಅವಧಿಯು ಮೂರು ತಿಂಗಳುಗಳ ಒಳಗೆ ಇರತಕ್ಕದ್ದು) ನಗದಿನ ಅರಿತಿರುವ ಮೊತ್ತಕ್ಕೆ ತತ್‌ಕ್ಷಣವೇ ಪರಿವರ್ತಿಸಬಹುದಾದ ರೀತಿಯಲ್ಲಿ ಅಧಿಕ ಪ್ರಮಾಣದಲ್ಲಿ ಹಣಕಾಸಿಗೆ ಪರಿವರ್ತಿತಗೊಳ್ಳಬಲ್ಲ ಹೂಡಿಕೆಗಳಾಗಿರತಕ್ಕದ್ದು ಹಾಗೂ ಅವು ಮೌಲ್ಯದಲ್ಲಿನ ಬದಲಾವಣೆಗಳ ಗಮನಾರ್ಹವಲ್ಲದ ಸಂಭಾವ್ಯ ಅಪಾಯಗಳ ಷರತ್ತಿಗೆ ಒಳಪಟ್ಟಿರತಕ್ಕದ್ದು.

ಹಣಕಾಸು ಹರಿವಿನ ತ:ಖ್ತೆ

ಹಣಕಾಸು/ ನಗದಿನ ಹರಿವನ್ನು ಪರೋಕ್ಷ ಪದ್ಧತಿಯನ್ನು ಬಳಸಿಕೊಂಡು ವರದಿ ಮಾಡಲಾಗುವುದು, ಅದರಿಂದಾಗಿ ತೆರಿಗೆ ಪಾವತಿಗೆ ಮುಂಚಿನ ಲಾಭ/(ನಷ್ಟ)ವನ್ನು ನಗದೇತರ ಸ್ವರೂಪದ ವ್ಯವಹಾರಗಳ ಪ್ರಭಾವಗಳಿಗೆ ಹಾಗೂ ಹಿಂದಿನ ಅಥವಾ ಭವಿಷ್ಯದ/ಮುಂದಿನ ನಗದು ಸ್ವೀಕೃತಿಗಳು ಅಥವಾ ಪಾವತಿಗಳ ಮುಂದೂಡಿಕೆಗಳು ಅಥವಾ ಸಂಚಿತಗೊಂಡಿರುವಿಕೆಗಳ ಕಡೆಗೆ ಹೊಂದಾಣಿಕೆ ಮಾಡಲಾಗುವುದು. ಕಂಪನಿಯ ಕಾರ್ಯಾಚರಣೆಗಳು ಹೂಡಿಕೆಗಳು ಹಾಗೂ ಹಣಕಾಸು ನೀಡುವಿಕೆ (ಫೈನಾನ್ಸಿಂಗ್) ಚಟುವಟಿಕೆಗಳನ್ನು ಲಭ್ಯವಿರುವ ಮಾಹಿತಿಯ ಆಧಾರದ ಮೇರೆಗೆ ವಿಂಗಡಣೆ ಮಾಡತಕ್ಕದ್ದು.

3.6 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

(ಎ) ಕಂಪನಿಯು ಕಾರ್ಯಗತಗೊಳಿಸುತ್ತಿರುವ ಯೋಜನೆಗಳು ಅಣೆಕಟ್ಟೆಗಳು, ಜಲಾಶಯಗಳು, ಅಡ್ಡಗಟ್ಟೆಗಳು, ಸೇತುವೆಗಳು, ನಾಲೆಗಳು, ನಾಲಾ ವ್ಯವಸ್ಥೆಗಳು, ಏತ ನೀರಾವರಿ ಯೋಜನೆಗಳು, ಕೆರೆಗಳನ್ನು ತುಂಬಿಸುವಿಕೆ, ಇತ್ಯಾದಿಗಳನ್ನು ಒಳಗೊಂಡಿರುತ್ತವೆ. ಆಸ್ತಿಯು ಉದ್ದೇಶಿತ ಬಳಕೆಗೆ ಸಿದ್ದಗೊಂಡ ಸಂದರ್ಭದಲ್ಲಿ, ಅದರ ನಿರ್ಮಾಣದ ವೆಚ್ಚವನ್ನು ಸೂಕ್ತ ಕಟ್ಟಡಗಳು, ಅಣೆಕಟ್ಟೆಗಳು, ನಾಲೆಗಳು, ಏತ ನೀರಾವರಿ ಯೋಜನೆಗಳು, ಇತ್ಯಾದಿಗಳಿಗೆ ವರ್ಗಾಯಿಸಲಾಗುವುದು ಹಾಗೂ ಅವುಗಳ ಮೇಲೆ ಸವಕಳಿಯನ್ನು ಅನುವು ಮಾಡಲಾಗುವುದು. ಅಂತಹ ಹಂತವು ಪೂರ್ಣಗೊಳ್ಳುವವರೆವಿಗೂ, ನಿರ್ಮಾಣದ ವೆಚ್ಚವನ್ನು (ಅದು ಕೆಲವು ಪ್ರಕರಣಗಳಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಅಂತಿಮ ಪಾವತಿಗಾಗಿ ಸಕ್ಷಮ ಅಧಿಕಾರಿಗಳ ಅನುಮತಿಯು ಬಾಕಿಯಿರುವ ಪ್ರಕರಣಗಳಲ್ಲಿ ಭಾಗಶ: ಮಾಡಲಾಗಿರುವ ಪಾವತಿಗಳನ್ನು ಒಳಗೊಂಡಿರುತ್ತದೆ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅಡಿಯಲ್ಲಿ ವರ್ಗೀಕರಿಸಲಾಗುವುದು ಹಾಗೂ ಮೂಲ ಬೆಲೆಯಲ್ಲಿ ತಿಳಿಸಲಾಗುವುದು. ನಿರ್ಮಾಣದ ಅಡಿಯಲ್ಲಿರುವ ಆಸ್ತಿಗೆ ನೇರವಾಗಿ ಕಾರಣವಾಗಿರುವಂತಹ ನಿರ್ಮಾಣದ ವೇಳೆಯಲ್ಲಿನ ವೆಚ್ಚವನ್ನು ಹಾಗೂ ಬಂಡವಾಳೀಕರಿಸಲು ಅರ್ಹಗೊಳ್ಳುವ ಅದಕ್ಕಾಗಿ ಪಡೆಯಲಾಗುವ ಸಾಲಗಳ ಮೇಲಿನ ವೆಚ್ಚವನ್ನೂ ಸಹ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅಡಿಯಲ್ಲಿ ಬಂಡವಾಳೀಕರಿಸಲಾಗುವುದು.

(ಬಿ) ಸರಬರಾಜು ಹಾಗೂ ಸ್ಥಾಪನೆ/ಸ್ಥಿರಗೊಳಿಸುವಿಕೆ ಗುತ್ತಿಗೆಗೆ ಸಂಬಂಧಿಸಿದಂತೆ, ಸ್ವೀಕರಿಸಲಾದ ಹಾಗೂ ಒಪ್ಪಿಕೊಳ್ಳಲಾದ ಸರಬರಾಜುಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಎಂಬುದಾಗಿ ಪರಿಗಣಿಸಲಾಗುವುದು.

3.7 ವೆಚ್ಚಗಳ ಹಂಚಿಕೆ (ನಿರ್ಮಾಣದ ವೇಳೆಯಲ್ಲಿ)

(i) ಉದ್ದೇಶಿತ ಬಳಕೆಗೆ ಸಿದ್ಧವಿಲ್ಲದ ಆಸ್ತಿಗಳು ಸಂಬಂಧಿಸಿರುವ ಯೋಜನೆಗಳು ಹಾಗೂ ಇತರೆ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ನೇರ ವೆಚ್ಚ, ಸಂಬಂಧಿತ ಆಕಸ್ಮಿಕ ವೆಚ್ಚಗಳು

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಹಾಗೂ ಆ ಕಾಮಗಾರಿಯ ಕಾರಣದಿಂದ ತೆಗೆದುಕೊಳ್ಳಲಾಗಿರುವ ಸಾಲದ ಮೇಲಿನ ಬಡ್ಡಿ ಇವುಗಳನ್ನು ಒಳಗೊಂಡಂತೆ ಮೂಲ ಬೆಲೆಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ನೇರ ವೆಚ್ಚಗಳೆಂದರೆ ಕಾರ್ಯಪಾಲಕ ಇಂಜಿನಿಯರ್‌ರವರುಗಳ ಕಛೇರಿ ಗಳಲ್ಲಿ ಭರಿಸಲಾಗಿರುವ ವರಮಾನ ವೆಚ್ಚಗಳನ್ನು (ಅಣೆಕಟ್ಟೆಗಳು, ಅಡ್ಡಗಟ್ಟೆಗಳು, ನಾಲೆಗಳು, ಉಪ–ನಾಲೆಗಳು, ವಿತರಣಾ ನಾಲೆಗಳು, ಏತ ನೀರಾವರಿ ಯೋಜನೆಗಳು, ಇವುಗಳ ದುರಸ್ತಿ ಮತ್ತು ನಿರ್ವಹಣಾ ವೆಚ್ಚಗಳನ್ನು ಸಂದೇಹಾಸ್ಪದ ಸಾಲಗಳ ಹವಣಿಕೆ ಆಸ್ತಿಗಳ ಮೇಲೆ ಸವಕಳಿ ಇತ್ಯಾದಿಗಳನ್ನು ಹೊರತುಪಡಿಸಿದಂತೆ) ಗುರುತಿಸಲಾಗುವುದು ಹಾಗೂ ವ್ಯವಸ್ಥಿತ ಆಧಾರದ ಮೇರೆಗೆ ಸಂಬಂಧಿತ ಕಾರ್ಯಪಾಲಕ ಇಂಜಿನಿಯರ್‌ರವರ ಪ್ರಗತಿಯಲ್ಲಿರುವ ಕಾಮಗಾರಿಗಳ ಅಡಿಯಲ್ಲಿ ಆಸ್ತಿಗಳಿಗೆ ಹಂಚಿಕೆ ಮಾಡಲಾಗುವುದು. ಪೂರ್ಣಗೊಂಡಿರುವ ಆಸ್ತಿಗಳಿಗೆ ಹಂಚಿಕೆ ಮಾಡಲಾಗುವ ವರಮಾನ ವೆಚ್ಚವನ್ನು ಲಾಭ ಮತ್ತು ನಷ್ಟ ತ:ಖ್ತೆಗೆ ಹಾಕಲಾಗುವುದು

(ii) ಯಾವುದೇ ಅಪರೋಕ್ಷ ವೆಚ್ಚಗಳನ್ನು ಬಳಸಲು ಸಿದ್ಧವಾಗಿರುವ, ಆದರೆ ಪೂರ್ಣಗೊಂಡಿರುವ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೂಲಕ ಹಾದು ಹೋಗುವ ಆಸ್ತಿಗೆ ವಿಧಿಸಲಾಗುವುದಿಲ್ಲ ಹಾಗೂ ತತ್‌ಕ್ಷಣವೇ ಸ್ಥಿರಾಸ್ತಿಗಳಿಗೆ ವರ್ಗಾವಣೆ ಮಾಡಲಾಗುವುದು.

(iii) ಮುಖ್ಯ ಇಂಜಿನಿಯರ್‌ರವರ ಕಛೇರಿ, ಅಧೀಕ್ಷಕ ಇಂಜಿನಿಯರ್‌ರವರ ಕಛೇರಿಗಳು, ನೊಂದಾಯಿತ ಕಛೇರಿ, ಕೇಂದ್ರ ಕಛೇರಿಯ ಸ್ಥಿರಾಸ್ತಿಗಳ ನಿರ್ಮಾಣಕ್ಕೆ ನೇರವಾಗಿ ಸಂಬಂಧಿಸಿರುವ ಆಡಳಿತ ಮತ್ತು ಇತರೆ ಸಾಮಾನ್ಯ ವೆಚ್ಚಗಳನ್ನು ಗುರುತಿಸಲಾಗುವುದು ಹಾಗೂ ಪ್ರಧಾನ ಆಸ್ತಿಗಳಿಗೆ ವ್ಯವಸ್ಥಿತ ಆಧಾರದ ಮೇರೆಗೆ ಹಂಚಿಕೆ ಮಾಡಲಾಗುವುದು.

(iv) ವಿಶೇಷ ಭೂಸ್ವಾಧೀನ ಅಧಿಕಾರಿಯವರ ಕಛೇರಿಗಳು ಭರಿಸಿರುವ ವರಮಾನ ವೆಚ್ಚಗಳನ್ನು (ಆಸ್ತಿಗಳ ಮೇಲಿನ ಸವಕಳಿಯನ್ನು ಹೊರತುಪಡಿಸಿ) ಭೂಮಿ ಎಂಬುದಾಗಿ ಬಂಡವಾಳೀಕರಿಸಲಾಗುವುದು

3.8 ಆಸ್ತಿಗಳು, ಸ್ಥಾವರ ಮತ್ತು ಉಪಕರಣಗಳು

(i) ಕರ್ನಾಟಕ ಸರ್ಕಾರದಿಂದ ಹಂಚಿಕೆ ಮಾಡಲಾಗಿರುವ ಮೌಲ್ಯ ಎಂಬುದಾಗಿ ಕರ್ನಾಟಕ ಸರ್ಕಾರವು ವರ್ಗಾವಣೆ ಮಾಡಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಕಂಪನಿಯ ಲೆಕ್ಕಪತ್ರಗಳ ಪುಸ್ತಕಗಳಲ್ಲಿನ ಮೌಲ್ಯ ಎಂಬುದಾಗಿ ಪರಿಗಣಿಸಲಾಗಿದೆ.

(ii) ಇತರೆ ಎಲ್ಲಾ ಸ್ಥಿರಾಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವಿಕೆ, ಬಂಡವಾಳೀಕರಿಸಿಕೊಳ್ಳಲಾಗಿದೆ ಎಂಬುದಾಗಿ ಭಾವಿಸಲಾಗಿರುವ ದಿನಾಂಕದವರೆಗೆ ನಿರ್ಮಾಣದ ಅವಧಿಯಲ್ಲಿ ಹಂಚಿಕೆ ಮಾಡಲಾಗಿರುವ ವೆಚ್ಚಗಳು ಸೇರಿದಂತೆ ಮೂಲ ಬೆಲೆಯಲ್ಲಿ ತಿಳಿಸಲಾಗಿದೆ.

(iii) ರಸ್ತೆಗಳು ಉಪಾಂಗಗಳಾದ ಸೇತುವೆಗಳನ್ನು ಹಾಗೂ ಸುರಂಗಗಳೂ ಒಳಗೊಂಡಿರುತ್ತವೆ.

(iv) ಭೂಮಿಯ ವೆಚ್ಚವು ಸ್ವಾಧೀನ ವೆಚ್ಚ, ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದವರೆಗೆ ಪಾವತಿಸಲಾಗಿರುವ ಬಡ್ಡಿ, ಹೆಚ್ಚಿಸಲಾಗಿರುವ ಪರಿಹಾರದ ಮೊತ್ತ, ನ್ಯಾಯಾಲಯಗಳು ತಮ್ಮ ಆದೇಶದಲ್ಲಿ ನೀಡಿರುವ ಬಡ್ಡಿ, ಪುನರ್ವಸತಿಯ ಮೇಲಿನ ವೆಚ್ಚ, ನಿರ್ಮಾಣಗಳು, ಬಗರ್‌ಹುಕುಂ ಪಾವತಿಗಳು, ಬೆಳೆ ಪರಿಹಾರ, ವಿಶೇಷ ಭೂಸ್ವಾಧೀನ ಅಧಿಕಾರಿಗಳ ಕಛೇರಿಗಳು ಭರಿಸಿರುವ ವರಮಾನ ವೆಚ್ಚಗಳು ಯೋಜನೆಯಿಂದ ತೊಂದರೆಗೆ ಈಡಾದ ಜನತೆಗೆ/ಕುಟುಂಬಗಳಿಗೆ ಸಾಮಾಜಿಕ ಅರಣ್ಯ, ಇವುಗಳನ್ನು ಒಳಗೊಂಡಿರುತ್ತದೆ.

(v) ಅಡ್ಡಗಟ್ಟೆಗಳು, ಜಲಾಶಯಗಳು, ವಿಯರ್‌ಗಳು, ಏತ ನೀರಾವರಿ ನಿರ್ಮಾಣಗಳು ಹಾಗೂ ಅಣೆಕಟ್ಟೆಗಳ ಸಿವಿಲ್ ಕಾಮಗಾರಿಗಳು ಉಪಾಂಗ ದ್ವಾರಗಳು ಮತ್ತು ಇತರೆ ಅಂತರ್ಗತ ಭಾಗಗಳನ್ನು ಒಳಗೊಂಡಿರುತ್ತದೆ.

(vi) ಸಂಸ್ಥೆಗೆ / ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದ ಕಾಮಗಾರಿಯು ಟೆಂಡರ್ ಷರತ್ತುಗಳ ಪ್ರಕಾರ ಸಂಪೂರ್ಣ ರೀತಿಯಲ್ಲಿ ಪೂರ್ಣಗೊಂಡಿರುತ್ತದೆ ಎಂಬುದಾಗಿ ಮುಖ್ಯ ಇಂಜಿನಿಯರ್‌ರವರು / ಅಧೀಕ್ಷಕ ಇಂಜಿನಿಯರ್‌ರವರು / ಕಾರ್ಯಪಾಲಕ ಇಂಜಿನಿಯರ್‌ರವರು ನೀಡಿರುವ ಕಾಮಗಾರಿಗಳು ಪೂರ್ಣಗೊಂಡಿರುವಿಕೆ ಪ್ರಮಾಣಪತ್ರಗಳು ಅಥವಾ ವಿಭಾಗೀಯ ಮಟ್ಟದಲ್ಲಿ ತಯಾರಿಸಲಾಗಿರುವ ಅಂತಿಮ ಬಿಲ್ಲುಗಳ ಘೋಷ್ವಾರೆಯು ನಾಲೆಗಳು ಮತ್ತಿತರೆ ನೀರಾವರಿ ವ್ಯವಸ್ಥೆಗಳು ಮುಂತಾದ ನೀರಾವರಿ ನಿರ್ಮಾಣಗಳು ಮುಂತಾದ ಉದ್ದೇಶಿತ ಬಳಕೆಗೆ ಸಿದ್ಧಗೊಂಡಿರುವ ಆಸ್ತಿಗಳನ್ನು ಬಂಡವಾಳೀಕರಿಸಲು ಆಧಾರವಾಗಿರುವುದು.

(vii) ಖರೀದಿಸಲಾದ ಆಸ್ತಿಗಳಿಗೆ ಸಂಬಂಧಿಸಿದಂತೆ, ಅವುಗಳ ಪ್ರಸ್ತುತ ಸ್ಥಳಕ್ಕೆ ತರುವಲ್ಲಿ, ಅದರ ಉದ್ದೇಶಿತ ಬಳಕೆಗೆ ಸಿದ್ಧಗೊಳ್ಳುವವರೆವಿಗೂ ಭರಿಸಲಾಗುವ ಆಕಸ್ಮಿಕ ವೆಚ್ಚಗಳು ಯಾವುದಾದರೂ ಇದ್ದಲ್ಲಿ, ಅವುಗಳೂ ಸೇರಿದಂತೆ ಬಂಡವಾಳೀಕರಿಸಲಾಗುವುದು.

(viii) ಬೃಹತ್ ಪ್ರಮಾಣದ ನವೀಕರಣಕ್ಕೆ ಸಂಬಂಧಿಸಿದಂತೆ, ಕೈಗೊಳ್ಳಲಾದ ಅಂತಹ ಚಟುವಟಿಕೆಗಳು ಆಸ್ತಿಯಿಂದ ಉತ್ಪತ್ತಿಯಾಗುವ ಆರ್ಥಿಕ ವರಮಾನವು ಹೆಚ್ಚಳಗೊಳ್ಳುವ ನಿರೀಕ್ಷೆಯಿಂದ ಮಾಡಲಾಗುವ ವೆಚ್ಚಗಳನ್ನು ಬಂಡವಾಳೀಕರಿಸಲಾಗುವುದು.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

3.9 ಸವಕಳಿ

ಸವಕಳಿಯನ್ನು ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಅನುಸೂಚಿ–IIರಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ನೇರ ಮಾರ್ಗ ಆಧಾರದ ಮೇರೆಗೆ ಅನುವು ಮಾಡಲಾಗುವುದು:

(i) ಎಲ್ಲಾ ಆಸ್ತಿಗಳಿಗೂ ಶೇಷಾತ್ಮಕ ಮೌಲ್ಯವು ಯಾವುದೂ ಇರುವುದಿಲ್ಲ ಎಂಬುದಾಗಿ ಪರಿಗಣಿಸಲಾಗುವುದು.

(ii) ಖರೀದಿಸಲಾದ ತಂತ್ರಾಂಶಗಳ ಮೌಲ್ಯವನ್ನು ಖರೀದಿಸಲಾದ ಸಾಲಿನಲ್ಲಿಯೇ ಲೆಕ್ಕಪುಸ್ತಕಗಳ ದಾಖಲೆಗಳಿಂದ ತೆಗೆದುಹಾಕಲಾಗುವುದು (ರೈಟ್– ಆಫ್).

(iii) ಚಲಿಸುವ ಆಸ್ತಿಗಳನ್ನು ಹೊರತುಪಡಿಸಿದಂತೆ, ಪ್ರಸಕ್ತ ಇರುವಂತಹ ಆಸ್ತಿಗಳಿಗೆ ಮಾಡಲಾದ ಸೇರ್ಪಡೆಗಳ ಮೇಲೆ ಸವಕಳಿಯ ಉದ್ದೇಶಕ್ಕಾಗಿ ಆಸ್ತಿಗಳ ಬಾಳಿಕೆ ಅವಧಿಯನ್ನು ಮೂಲ ಆಸ್ತಿಗಳ ಶೇಷಾತ್ಮಕ ಬಾಳಿಕೆ ಅವಧಿಗೆ ಸೀಮಿತಗೊಳಿಸಲಾಗುವುದು.

(iv) ಕಂಪನಿಗಳ ಅಧಿನಿಯಮ 2013ರ ಅನುಸೂಚಿ–IIರಲ್ಲಿ ಯಾವುದೇ ಬಳಸಬಹುದಾದ ಅವಧಿಯನ್ನು ಪ್ರತ್ಯೇಕವಾಗಿ ನಿರ್ದಿಷ್ಟಪಡಿಸಿರದ ಈ ಕೆಳಗಿನ ಆಸ್ತಿಗಳ ಪ್ರವರ್ಗಗಳಿಗೆ ತಾಂತ್ರಿಕ ಅಭಿಪ್ರಾಯವನ್ನು ಪಡೆದುಕೊಂಡಿದ್ದು, ಸದರಿ ಬಳಸಬಹುದಾದ ಅವಧಿಯನ್ನು ಈ ಕೆಳಕಂಡಂತೆ ನೀಡಿದೆ.

ಕ್ರಮ ಸಂಖ್ಯೆ	ವಿವರಣೆ	ಆಸ್ತಿಯನ್ನು ಬಳಸಬಹುದಾದ ಅವಧಿ
1	ಅಣೆಕಟ್ಟೆಗಳು ಮತ್ತು ಅಡ್ಡಗಟ್ಟೆಗಳು (ಎ) ಅಣೆಕಟ್ಟೆಗಳು, ವಿಯರ್‌ಗಳು, ಜಲಾಶಯಗಳು ಮತ್ತು ಅಡ್ಡಗಟ್ಟೆಗಳು (ಬಿ) ಅಣೆಕಟ್ಟೆಗಳು, ಜಲಾಶಯಗಳು, ವಿಯರ್ ಹಾಗೂ ಅಡ್ಡಗಟ್ಟೆಗಳ ಗೇಟುಗಳು (ಯಾಂತ್ರಿಕ ಹಾಗೂ ಜೋಡಿಸಲಾಗಿರುವ ಭಾಗಗಳು)	100 ವರ್ಷಗಳು ಸಿವಿಲ್ ಕಾಮಗಾರಿಗಳಿಗೆ 100 ವರ್ಷಗಳು, ಯಾಂತ್ರಿಕ ಮತ್ತು ಸಮಗ್ರ ಭಾಗವಾಗಿರುವಂತೆ ಮಾಡಲಾಗಿರುವ (ಎಂಬೆಡೆಡ್) ಭಾಗಗಳಿಗೆ 12 ವರ್ಷಗಳು
2	ನಾಲೆಗಳು, ಶಾಖಾ ನಾಲೆಗಳು ಹಾಗೂ ವಿತರಣಾ ನಾಲೆಗಳ (ಮುಕ್ತ ನಾಲೆಗಳು ಮತ್ತು ಕೊಳವೆ ಮಾರ್ಗಗಳು)/ ಟನಲ್	100 ವರ್ಷಗಳು
3	ಏತ ನೀರಾವರಿ ವ್ಯವಸ್ಥೆಗಳ ಸಿವಿಲ್ ಬಿಡಿಭಾಗಗಳು/ಕಾಮಗಾರಿಗಳು	100 ವರ್ಷಗಳು
4	(ಎ)ವಿದ್ಯುತ್–ಯಾಂತ್ರಿಕ ಕಾಮಗಾರಿಗಳು ಮತ್ತು ಉಪ–ಸ್ಟೇಷನ್ನುಗಳು ಹಾಗೂ ನೀರಾವರಿ ವ್ಯವಸ್ಥೆಗೆ ಪ್ರಸರಣ ಮಾರ್ಗಗಳು ಒಳಗೊಂಡಂತೆ ಪಂಪು ಮಾಡುವ ವ್ಯವಸ್ಥೆಯ ಉಪ–ಸ್ಟೇಷನ್ನುಗಳು ಮತ್ತು ಪ್ರಸರಣ ಮಾರ್ಗಗಳು (ಬಿ) ನೀರಾವರಿ ವ್ಯವಸ್ಥೆಗಳ ನೀರೆತ್ತುವ ಕೊಳವೆ ಮಾರ್ಗಗಳು	ಎಂಎಸ್ ಕೊಳವೆಗಳು/ಎಚ್‌ಡಿಪಿಇ ಕೊಳವೆಗಳು – 30 ವರ್ಷಗಳು ವಿದ್ಯುತ್ ಯಾಂತ್ರಿಕ ಕಾಮಗಾರಿಗಳು– 12 ವರ್ಷಗಳು ಉಪ–ಸ್ಟೇಷನ್ನುಗಳು 25 ವರ್ಷಗಳು ನೀರನ್ನು ಎತ್ತುವ ಪ್ರಧಾನ ಕೊಳವೆ ಮಾರ್ಗಗಳು – 30 ವರ್ಷಗಳು
5	ಅಕ್ವೆಡಕ್ಟ್‌ಗಳು	100 ವರ್ಷಗಳು
6	ಟ್ಯಾಂಕುಗಳು (ಕೆರೆಗಳು)	100 ವರ್ಷಗಳು

3.10 ಹಣಕಾಸಿನ ಸಾಧನಗಳು

ಕಂಪನಿಯು ಹಣಕಾಸಿನ ಸಾಧನಗಳನ್ನು ಪ್ರತಿಯೊಂದು ಸಂತುಲನ ಪಟ್ಟಿಯ ದಿನಾಂಕದಂದು ಇರುವಂತಹ ನ್ಯಾಯಸಮ್ಮತ ಮೌಲ್ಯದಲ್ಲಿ ಮೌಲ್ಯಮಾಪನ ಮಾಡುತ್ತದೆ. ನ್ಯಾಯಸಮ್ಮತ ಮೌಲ್ಯವೆಂದರೆ ಆಸ್ತಿಯನ್ನು ಮಾರಾಟ ಮಾಡಿದಲ್ಲಿ ಪಡೆಯಬಹುದಾದ ಅಥವಾ ಮೌಲ್ಯಮಾಪನ ಮಾಡುವ ದಿನಾಂಕದಂದು ಮಾರುಕಟ್ಟೆಯಲ್ಲಿ ಭಾಗವಹಿಸುವವರ ನಡುವೆ ವ್ಯವಸ್ಥಿತ ವ್ಯವಹಾರದಲ್ಲಿ ಹೊಣೆಗಾರಿಕೆಯ ವರ್ಗಾವಣೆ ಮಾಡಲು ಪಾವತಿಸಲಾಗುವ ಮೊತ್ತ ನ್ಯಾಯಸಮ್ಮತ ಮೌಲ್ಯವು ಆಸ್ತಿಯನ್ನು ಮಾರಾಟ ಮಾಡಲು ಅಥವಾ ಹೊಣೆಯನ್ನು ವರ್ಗಾವಣೆ ಮಾಡಲು;

(i) ಆಸ್ತಿ ಅಥವಾ ಹೊಣೆಗಾರಿಕೆಗಾಗಿನ ಪ್ರಧಾನ ಮಾರುಕಟ್ಟೆಯಲ್ಲಿ ಅಥವಾ

(ii) ಪ್ರಧಾನ ಮಾರುಕಟ್ಟೆಯ ಅನುಪಸ್ಥಿತಿಯಲ್ಲಿ, ಆಸ್ತಿ ಅಥವಾ ಹೊಣೆಗಾರಿಕೆಯ ಅತ್ಯುತ್ತಮ ಅನುಕೂಲಕರವಾದ ಮಾರುಕಟ್ಟೆಯಲ್ಲಿ ನಡೆಯುತ್ತದೆ ಎಂಬ ಪರಿಕಲ್ಪನೆಯ ಆಧಾರದ ಮೇರೆಗೆ ಆಗಿರುತ್ತದೆ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಪ್ರಾರಂಭಿಕ ಗುರುತಿಸುವಿಕೆ:

ಹಣಕಾಸಿನ ಆಸ್ತಿಗಳು ಮತ್ತು ಹಣಕಾಸು ಜವಾಬ್ದಾರಿಗಳನ್ನು ಪ್ರಾರಂಭಿಕವಾಗಿ ನ್ಯಾಯಸಮ್ಮತ ಮೌಲ್ಯದಲ್ಲಿ ಅಳೆಯಲಾಗುವುದು. ಹಣಕಾಸು ಆಸ್ತಿಗಳು ಮತ್ತು ಹಣಕಾಸು ಜವಾಬ್ದಾರಿಗಳನ್ನು ಖರೀದಿಸುವ ಸಲುವಾಗಿ ಅಥವಾ ನೀಡಿಕೆಗೆ (ಲಾಭ ಅಥವಾ ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿನ ಹಣಕಾಸು ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಹೊರತುಪಡಿಸಿ) ಕಾರಣವಾಗಿರುವ ವ್ಯವಹಾರ ವೆಚ್ಚಗಳನ್ನು ಹಣಕಾಸು ಆಸ್ತಿಗಳಿಗೆ ಅಥವಾ ಹಣಕಾಸು ಜವಾಬ್ದಾರಿಗಳಿಗೆ ಪ್ರಾರಂಭಿಕ ಗುರುತಿಸುವಿಕೆಯ ಮೇಲೆ ಅನ್ವಯಗೊಳ್ಳುವ ರೀತಿಯಲ್ಲಿ ಸೇರಿಸಲಾಗುವುದು ಅಥವಾ ಕಳೆಯಲಾಗುವುದು.

ಹಣಕಾಸು ಆಸ್ತಿಗಳು ಅಥವಾ ಹಣಕಾಸು ಜವಾಬ್ದಾರಿಗಳನ್ನು ಲಾಭ ಅಥವಾ ನಷ್ಟದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಖರೀದಿಸಲಾಗಿರುವ ಹಣಕಾಸು ಆಸ್ತಿಗಳು ಅಥವಾ ಜವಾಬ್ದಾರಿಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ತತ್‌ಕ್ಷಣವೇ ಗುರುತಿಸಲಾಗುವುದು. ಲಾಭ ಅಥವಾ ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳನ್ನು ಅಥವಾ ಹಣಕಾಸಿನ ಹೊಣೆಗಾರಿಕೆಗಳನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ನೇರವಾಗಿ ವ್ಯವಹಾರ ವೆಚ್ಚವು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲ್ಪಟ್ಟಿದೆ.

ತದನಂತರದಲ್ಲಿ ಗುರುತಿಸುವಿಕೆ

ಹಣಕಾಸು ಆಸ್ತಿಗಳು

ಎ) ಕ್ರಮೇಣ ಕಳೆದುಹಾಕಲಾದಂತಹ ಮೌಲ್ಯಗಳಲ್ಲಿ ಹಣಕಾಸು ಆಸ್ತಿಗಳು:

ಹಣಕಾಸು ಆಸ್ತಿಗಳನ್ನು ಗುತ್ತಿಗೆಯ ನಗದು ಹರಿವುಗಳನ್ನು ಸಂಗ್ರಹಿಸುವ ಉದ್ದೇಶದಿಂದ ಈ ಆಸ್ತಿಗಳನ್ನು ಹೊಂದುವ ವ್ಯವಹಾರದ ಉದ್ದೇಶದೊಂದಿಗೆ ಈ ಹಣಕಾಸು ಆಸ್ತಿಗಳನ್ನು ವ್ಯವಹಾರದ ಒಳಗೆ ಹೊಂದಿದ್ದಲ್ಲಿ ಹಾಗೂ ಹಣಕಾಸು ಆಸ್ತಿಯ ಗುತ್ತಿಗೆ ಷರತ್ತುಗಳು ಬಾಕಿಯಿರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿಯು ಮಾತ್ರ ಆಗಿರುವಂತಹ ನಗದಿಗೆ ನಿರ್ದಿಷ್ಟ ದಿನಾಂಕಗಳಂದು ಹಣಕಾಸು ಆಸ್ತಿಯು ಕಾರಣವಾದಲ್ಲಿ ಪರಿಣಾಮಕಾರಿತ್ವದಿಂದ ಕೂಡಿದ ಬಡ್ಡಿಯನ್ನು ಬಳಸಿಕೊಂಡು ತದನಂತರದಲ್ಲಿ ಕ್ರಮೇಣ ಕಳೆದುಹಾಕಿದ/ತಗ್ಗಿಸಿದ ಮೌಲ್ಯದಲ್ಲಿ ಅಳೆಯಲಾಗುವುದು. ವ್ಯಾಪಾರ ಸ್ವೀಕೃತಿಗಳು, ಸಾಲಗಳು ಮತ್ತು ಮುಂಗಡಗಳು, ಠೇವಣಿಗಳು, ಸ್ವೀಕರಿಸಬೇಕಾಗಿರುವ ಬಡ್ಡಿ, ಸ್ವೀಕರಿಸಬೇಕಾಗಿರುವ ಬಾಡಿಗೆ ಮತ್ತು ನಗದು ಅಥವಾ ವಸ್ತುವಿನ ರೂಪದಲ್ಲಿ ವಸೂಲಾತಿ ಮಾಡಬೇಕಾದ ಇತರೆ ಮುಂಗಡಗಳು, ಇತ್ಯಾದಿ ಹಣಕಾಸು ಆಸ್ತಿಗಳನ್ನು ಕ್ರಮೇಣ ಕಳೆದುಹಾಕಿದ ಮೌಲ್ಯದಲ್ಲಿ ಗುರುತಿಸಲಾಗುವುದು.

ಬಿ) ಇತರೆ ಸಮಗ್ರ ವರಮಾನದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಹಣಕಾಸು ಆಸ್ತಿಗಳು

ಹಣಕಾಸು ಆಸ್ತಿಗಳನ್ನು ಗುತ್ತಿಗೆಯ ನಗದು ಹರಿವುಗಳನ್ನು ಸಂಗ್ರಹಿಸುವ ಉದ್ದೇಶದಿಂದ ಈ ಆಸ್ತಿಗಳನ್ನು ಹೊಂದುವ ವ್ಯವಹಾರದ ಉದ್ದೇಶದೊಂದಿಗೆ ಈ ಹಣಕಾಸು ಆಸ್ತಿಗಳನ್ನು ವ್ಯವಹಾರದ ಒಳಗೆ ಹೊಂದಿದ್ದಲ್ಲಿ ಹಾಗೂ ಹಣಕಾಸು ಆಸ್ತಿಯ ಗುತ್ತಿಗೆ ಷರತ್ತುಗಳ ಬಾಕಿಯಿರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿಯು ಮಾತ್ರ ಆಗಿರುವಂತಹ ನಗದಿಗೆ ನಿರ್ದಿಷ್ಟ ದಿನಾಂಕಗಳಂದು ಹಣಕಾಸು ಆಸ್ತಿಯು ಕಾರಣವಾದಲ್ಲಿ ಇತರೆ ಸಮಗ್ರ ವರಮಾನದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಹಣಕಾಸು ಆಸ್ತಿಗಳನ್ನು ಅಳೆಯಲಾಗುವುದು. ಪ್ರಸ್ತುತ ಕಂಪನಿಯು ಅಂತಹ ಯಾವುದೇ ಹಣಕಾಸು ಆಸ್ತಿಗಳನ್ನು ಹೊಂದಿರುವುದಿಲ್ಲ.

ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಹಣಕಾಸು ಆಸ್ತಿಗಳು

ಹಣಕಾಸು ಆಸ್ತಿಗಳನ್ನು ಕ್ರಮೇಣ ತಗ್ಗಿಸಿದ ಮೌಲ್ಯಗಳಲ್ಲಿ ಅಳೆಯದ ಹೊರತು ಅಥವಾ ಪ್ರಾರಂಭಿಕ ಗುರುತಿಸುವಿಕೆಯ ಮೇಲೆ ಇತರೆ ಸಮಗ್ರ ವರಮಾನದ ಮೂಲಕ ನ್ಯಾಯಸಮ್ಮತ ಮೌಲ್ಯದಲ್ಲಿ ಅಳೆಯದ ಹೊರತು ಲಾಭ ಅಥವಾ ನಷ್ಟದ ಮೂಲಕ ಅಳೆಯಲಾಗುವುದು. ವ್ಯಾಪಾರವ್ಯವಹಾರ ಮತ್ತು ಇತರೆ ಸ್ವೀಕೃತಿಗಳು ಸಂತುಲನ ಪಟ್ಟಿಯ ದಿನಾಂಕದಿಂದ ವರ್ಷದ ಒಳಗೆ ಅವಧಿ ಮುಕ್ತಾಯಗೊಂಡು ಸ್ವೀಕರಿಸಬೇಕಾದವುಗಳು ಹೊಂದಿರುವ ಮೊತ್ತಗಳು ಅಲ್ಪಾವಧಿಯ ಅವಧಿ ಮುಕ್ತಾಯ /ಈ ಸಾಧನಗಳ ವಸೂಲಾತಿ ಮಾಡುವಿಕೆಗಳ ಕಾರಣ ನ್ಯಾಯಸಮ್ಮತ ಮೌಲ್ಯವು ಬಹುಮಟ್ಟಿಗೆ ಸದೃಶವಾಗಿರುತ್ತದೆ.

ಹಣಕಾಸು ಹೊಣೆಗಳು:

ಹಣಕಾಸು ಜವಾಬ್ದಾರಿಗಳನ್ನು ಪರಿಣಾಮಕಾರಿತ್ವದಿಂದ ಕೂಡಿದ ಬಡ್ಡಿ ಪದ್ಧತಿಯನ್ನು ಬಳಸಿಕೊಂಡು ಕ್ರಮೇಣ ತಗ್ಗಿಸಿದ ಮೌಲ್ಯದಲ್ಲಿ ಲೆಕ್ಕಹಾಕಲಾಗುವುದು. ಸಾಲಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳು, ಸಂಚಿತಗೊಂಡಿರುವ ಬಡ್ಡಿ ಭದ್ರತಾ ಠೇವಣಿಗಳು ಹಾಗೂ ಉಳಿಸಿಕೊಂಡಿರುವ ಹಣಕಾಸುಗಳು, ಇತ್ಯಾದಿ ಇತರೆ ಹಣಕಾಸು ಜವಾಬ್ದಾರಿಗಳನ್ನು ಕ್ರಮೇಣ ತಗ್ಗಿಸಿದ ಮೌಲ್ಯಗಳಲ್ಲಿ ಲೆಕ್ಕಹಾಕಲಾಗುವುದು. ವ್ಯಾಪಾರವ್ಯವಹಾರ ಮತ್ತು ಇತರೆ ಸ್ವೀಕೃತಿಗಳು ಸಂತುಲನ ಪಟ್ಟಿಯ ದಿನಾಂಕದಿಂದ ವರ್ಷದ ಒಳಗೆ ಅವಧಿ ಮುಕ್ತಾಯಗೊಂಡು ಸ್ವೀಕರಿಸಬೇಕಾದವುಗಳು ಹೊಂದಿರುವ ಮೊತ್ತಗಳು ಅಲ್ಪಾವಧಿಯ ಅವಧಿ ಮುಕ್ತಾಯ/ಈ ಸಾಧನಗಳ ವಸೂಲಾತಿ ಮಾಡುವಿಕೆಗಳ ಕಾರಣ ನ್ಯಾಯಸಮ್ಮತ ಮೌಲ್ಯವು ಬಹುಮಟ್ಟಿಗೆ ಸದೃಶವಾಗಿರುತ್ತದೆ.

ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಿಕೆ

ಎ) ಹಣಕಾಸು ಆಸ್ತಿಗಳ / ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಿಕೆ ಆಸ್ತಿಯಿಂದ ನಗದು ಹರಿವಿಗೆ ಗುತ್ತಿಗೆ ಹಕ್ಕುಗಳು ಮುಕ್ತಾಯಗೊಂಡಾಗ, ಅಥವಾ ಅದು ಹಣಕಾಸು ಆಸ್ತಿಯನ್ನು ಹಾಗೂ ಅಂತಹ ಆಸ್ತಿಯ ಗಮನಾರ್ಹವಾದಂತಹ ಎಲ್ಲಾ

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಸಂಭಾವ್ಯ ಅಪಾಯಗಳು ಮತ್ತು ಮಾಲೀಕತ್ವದ ಪ್ರತಿಫಲವನ್ನು ಮತ್ತೊಂದು ತಂಡಕ್ಕೆ ವರ್ಗಾಯಿಸಿದ ಸಂದರ್ಭದಲ್ಲಿ ಕಂಪನಿಯು ಹಣಕಾಸು ಆಸ್ತಿಯ ಮನ್ನಣೆಯನ್ನು ಹಿಂಪಡೆಯುತ್ತದೆ. ಆಸ್ತಿಯ ಮನ್ನಣೆಯನ್ನು ಸಂಪೂರ್ಣವಾಗಿ ಹಿಂಪಡೆದನಂತರ, ಅಂತಹ ಆಸ್ತಿಯು ಹೊಂದಿದ್ದ ಮೌಲ್ಯ ಹಾಗೂ ಅದರ ವರ್ಗಾವಣೆಯ ಮೇಲೆ ಸ್ವೀಕರಿಸಲಾದ ಅಥವಾ ಸ್ವೀಕರಿಸಬೇಕಾದ ಪ್ರತಿಫಲದ ಮೊತ್ತದ ವ್ಯತ್ಯಾಸದ ಮೊತ್ತವನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಗುರುತಿಸಲಾಗುವುದು.

ಬಿ) ಕಂಪನಿಯು ತನ್ನ ಹಣಕಾಸು ಜವಾಬ್ದಾರಿಗಳನ್ನು, ಅವುಗಳಿಗೆ ಸಂಬಂಧಿಸಿದಂತೆ ತನ್ನ ನಿರ್ಬಂಧ/ ಕಟ್ಟುಪಾಡುಗಳಿಂದ ಬಿಡುಗಡೆಹೊಂದಿದಾಗ/ರದ್ದುಗೊಳಿಸಿದಾಗ ಅಥವಾ ಅದರ ಅವಧಿಯು ಮುಕ್ತಾಯಗೊಂಡಾಗ ಮಾತ್ರ ಮನ್ನಣೆಯನ್ನು ಹಿಂಪಡೆಯುತ್ತದೆ. ಮನ್ನಣೆಯನ್ನು ಹಿಂಪಡೆಯಲಾದ ಹಣಕಾಸು ಜವಾಬ್ದಾರಿಯ ಪ್ರತಿಫಲ/ಮೊತ್ತ ಹಾಗೂ ಪಾವತಿಸಬೇಕಾದ ಅಥವಾ ಪಾವತಿಸಲಾಗಿರುವ ಪ್ರತಿಫಲ/ಮೊತ್ತಗಳ ನಡುವಿನ ವ್ಯತ್ಯಾಸದ ಮೊತ್ತವನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಗುರುತಿಸಲಾಗುವುದು.

3.11 ಹಣಕಾಸು ಆಸ್ತಿಗಳು ದುರ್ಬಲಗೊಳ್ಳುವಿಕೆ

1. ಮಾರುಕಟ್ಟೆ ಮೌಲ್ಯವನ್ನು ಹೊಂದಿರದ ಹಾಗೂ ನ್ಯಾಯಸಮ್ಮತ ಮೌಲ್ಯವನ್ನು ವಿಶ್ವಸನೀಯವಾಗಿ ಲೆಕ್ಕಹಾಕಲು ಸಾಧ್ಯವಿಲ್ಲದ ದರಗಳನ್ನು ಸೂಚಿಸಿರದ ಈಕ್ವಿಟಿ ಸಾಧನಗಳ ಮೇಲಿನ ಹೂಡಿಕೆಗಳನ್ನು ಮೂಲ ಬೆಲೆಯಲ್ಲಿ ಲೆಕ್ಕಹಾಕಲಾಗುವುದು.

2. ವ್ಯಾಪಾರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು:.

   ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ, 3 ವರ್ಷಗಳಿಗೂ ಮೀರಿದಂತೆ ವಸೂಲಾತಿಯಾಗಲು ಬಾಕಿಯಿರುವಂತಹ ನೀರಿನ ದರಗಳ ಪಾವತಿಗಾಗಿನ ತಗಾದೆಗಳಿಗೆ ಸಂಬಂಧಿಸಿದಂತೆ, ವಿವೇಚನೆಯಿಂದ ಕೂಡಿದ ಪದ್ಧತಿಯಂತೆ ಕರ್ನಾಟಕ ನೀರಾವರಿ ಅಧಿನಿಯಮ, 1965ರ ಪ್ರಕಾರ ಅಂತಹ ಸ್ವೀಕರಿಸಬೇಕಾದವುಗಳನ್ನು ಭೂಕಂದಾಯ ಬಾಕಿಗಳು ಎಂಬ ರೀತಿಯಲ್ಲಿ ವಸೂಲಾತಿ ಮಾಡಬೇಕಾದರೂ ಸಹ ಸ್ವೀಕರಿಸಬೇಕಾದವುಗಳ ದುರ್ಬಲಗೊಳ್ಳುವಿಕೆಯನ್ನು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ದಾಖಲಿಸಲಾಗುವುದು.

ಇತರೆ ಆಸ್ತಿಗಳು ದುರ್ಬಲಗೊಳ್ಳುವಿಕೆ

ನೀರಾವರಿ ಮೂಲಸೌಕರ್ಯವಾಗಿದ್ದು, ಕಂಪನಿಯ ಹಣಕಾಸು ಗಳಿಕೆಯ ಆಸ್ತಿಗಳು ಅಣೆಕಟ್ಟೆಗಳು, ನಾಲಾ ವ್ಯವಸ್ಥೆಗಳು, ಏತ ನೀರಾವರಿ ಯೋಜನೆಗಳು, ಅಡ್ಡಗಟ್ಟೆಗಳು ಹಾಗೂ ಸೇತುವೆಗಳು, ಇತ್ಯಾದಿಗಳನ್ನು ಒಳಗೊಂಡಿರುತ್ತವೆ. ಅಂತಹ ಆಸ್ತಿಗಳನ್ನು ಕೈಚಾಚುವ ದೂರದಲ್ಲಿನ ವ್ಯವಹಾರಗಳಲ್ಲಿ ಮಾರುಕಟ್ಟೆ ಮಾಡಬಹುದಾದ ಪೂರ್ವನಿದರ್ಶನಗಳು ಇರುವುದಿಲ್ಲ, ಮುಂದುವರೆದು, ನಾಲಾ ವ್ಯವಸ್ಥೆಗಳ ಹಾಗೂ ಇತರೆ ವರ್ಗಗಳ ಆಸ್ತಿಗಳ ಬಾಳಿಕೆ ಅವಧಿಯು 100 ವರ್ಷಗಳು ಎಂಬುದಾಗಿ ಖಚಿತಪಡಿಸಿಕೊಳ್ಳಲಾಗಿದೆ, ನ್ಯಾಯಸಮ್ಮತ ಯಥಾರ್ಥತೆಯೊಂದಿಗೆ ಈ ಆಸ್ತಿಗಳ ಉಳಿಕೆ ಬಾಳಿಕೆ ಅವಧಿಯಲ್ಲಿ ಮೌಲ್ಯಮಾಪನ ಮಾಡಲ್ಪಟ್ಟ ಮುಂದಿನ/ಭವಿಷ್ಯದ ನಗದು ಹರಿವನ್ನು ಪ್ರಕ್ಷೇಪಿಸಲು ಸಾಧ್ಯವಿರುವುದಿಲ್ಲ. ಈ ವಾಸ್ತವಾಂಶದ ಕಾರಣ ಬಳಕೆಯಲ್ಲಿನ ಮೌಲ್ಯಮಾಪನ ಮಾಡಲ್ಪಟ್ಟ ಮುಂದಿನ/ ಭವಿಷ್ಯದ ನಗದು ಹರಿವುಗಳು ಮತ್ತು ಮೌಲ್ಯದ ಅಂದಾಜಿಗೆ ಬರಲು ಸಾಧ್ಯವಿರುವುದಿಲ್ಲ, ಆದ್ದರಿಂದ ದುರ್ಬಲಗೊಳ್ಳುವಿಕೆಯಿಂದ ನಷ್ಟಗಳು ಸಂಭವಿಸಿರುವವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಕಂಪನಿಗೆ ಸಾಧ್ಯವಿಲ್ಲ.

3.12 ಸೇವೆಯಿಂದ ನಿವೃತ್ತಿ ಹಾಗೂ ಇತರೆ ಪ್ರಯೋಜನಗಳು

ಎ) ಉದ್ಯೋಗಿಗಳ ಅಲ್ಪಾವಧಿಯ ಪ್ರಯೋಜನಗಳು

ಉದ್ಯೋಗಿಗಳು ನೀಡಿರುವ ಸೇವೆಗಳಿಗೆ ಬದಲಾಗಿ ಪಾವತಿಸಲು ನಿರೀಕ್ಷಿಸಲಾಗುವ ಉದ್ಯೋಗಿಗಳ ಅಲ್ಪಾವಧಿ ನಿರೀಕ್ಷಿತ ಪ್ರಯೋಜನಗಳ ರಿಯಾಯಿತಿಯನ್ನು ನೀಡಿರದ ಮೊತ್ತವನ್ನು ಉದ್ಯೋಗಿಗಳು ಸೇವೆಯನ್ನು ನೀಡಿರುವ ವರ್ಷದಲ್ಲಿ ಗುರುತಿಸಲಾಗುವುದು. ಈ ಪ್ರಯೋಜನಗಳು, ಕಾರ್ಯನಿರ್ವಹಣಾ ಪ್ರೋತ್ಸಾಹ ಧನ ಹಾಗೂ ರಜೆ ದಿನಗಳಲ್ಲಿ ಕೆಲಸ ಮಾಡಿದ್ದಕ್ಕೆ ಪರಿಹಾರದ ಹಣ, ಇವುಗಳನ್ನು ಒಳಗೊಂಡಿರುತ್ತದೆ ಹಾಗೂ ಇವುಗಳನ್ನು ವಾರ್ಷಿಕ ವರದಿ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಹನ್ನೆರಡು ತಿಂಗಳುಗಳಿಗೆ ಮುಂಚಿತವಾಗಿ ಇತ್ಯರ್ಥಗೊಳಿಸುವುದನ್ನು ನಿರೀಕ್ಷಿಸಲಾಗುತ್ತದೆ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಬಿ) ನಿವೃತ್ತಿ ಮತ್ತು ರಜೆ ಸಂಬಳ

ಅದಕ್ಕಾಗಿ ಹೊಣೆಗಳನ್ನು ಈ ಕೆಳಗಿನಂತೆ ಗುರುತಿಸಲಾಗುವುದು

ನೌಕರರ ವರ್ಗ	ರಜೆ ವೇತನ	ಗ್ರಾಚ್ಯುಟಿ	ಪಿಂಚಣಿ/ ಪಿಂಚಣಿ ನಿಧಿಗೆ ವಂತಿಕೆ	ಭವಿಷ್ಯ ನಿಧಿ / ಉದ್ಯೋಗಿಗಳ ರಾಜ್ಯ ವಿಮೆ
ಸರ್ಕಾರದಿಂದ ನಿಯೋಜನೆಗೊಂಡ ನೌಕರರು	ಎ) ಕಂಪನಿಯಿಂದ ಯಾವುದೇ ವಂತಿಕೆ ಇರುವುದಿಲ್ಲ ಬಿ) ಆದಗ್ಯೂ, ಕಂಪನಿಯ ಸೇವೆಯ ಅವಧಿಯಲ್ಲಿ ಅವರು ಬಳಸಿಕೊಂಡ ರಜೆ ನಗದೀಕರಣವನ್ನು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಪ್ರಕಾರ ನಿಯಂತ್ರಿಸಲಾಗುವುದು	ಕಂಪನಿಯಿಂದ ಯಾವುದೇ ವಂತಿಕೆ ಇರುವುದಿಲ್ಲ	ಕಂಪನಿಯಿಂದ ಯಾವುದೇ ವಂತಿಕೆ ಇರುವುದಿಲ್ಲ	ಕಂಪನಿಯಿಂದ ಯಾವುದೇ ವಂತಿಕೆ ಇರುವುದಿಲ್ಲ
ಸಾರ್ವಜನಿಕ ವಲಯದ ಉದ್ದಿಮೆ/ ನಿಗಮದಿಂದ ನಿಯೋಜನೆ	ಅನ್ವಯಗೊಳ್ಳುವ ರಜೆ ಸಂಬಳದ ವಂತಿಕೆಯನ್ನು ನಿಯೋಜನೆಯ ಷರತ್ತುಗಳ ಪ್ರಕಾರ ವಾಸ್ತವಿಕ ಆಧಾರದ ಮೇರೆಗೆ ಅನುವು ಮಾಡಲಾಗುವುದು/ ಪಾವತಿಸಲಾಗುವುದು	ನಿಯೋಜನೆಯ ಷರತ್ತುಗಳ ಪ್ರಕಾರ ವಾಸ್ತವಿಕ ಆಧಾರದ ಮೇರೆಗೆ ಅನ್ವಯಗೊಳ್ಳುವ ವಂತಿಕೆಯನ್ನು ಅನುವು ಮಾಡಲಾಗುವುದು/ ಪಾವತಿಸಲಾಗುವುದು.	ನಿಯೋಜನೆಯ ಷರತ್ತುಗಳ ಪ್ರಕಾರ ವಾಸ್ತವಿಕ ಆಧಾರದ ಮೇರೆಗೆ ಅನ್ವಯಗೊಳ್ಳುವ ವಂತಿಕೆಯನ್ನು ಅನುವು ಮಾಡಲಾಗುವುದು/ ಪಾವತಿಸಲಾಗುವುದು.	ನಿಯೋಜನೆಯ ಷರತ್ತುಗಳ ಪ್ರಕಾರ ವಾಸ್ತವಿಕ ಆಧಾರದ ಮೇರೆಗೆ ಅನ್ವಯಗೊಳ್ಳುವ ವಂತಿಕೆಯನ್ನು ಅನುವು ಮಾಡಲಾಗುವುದು/ ಪಾವತಿಸಲಾಗುವುದು.
ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಪದವೃಂದದ ನೌಕರರು	ಕಂಪನಿಯು ಸ್ವತಂತ್ರ ವಿಮಾಗಣಕರಿಂದ ಪ್ರತಿ ಸಂತುಲನ ಪಟ್ಟಿಯ ದಿನಾಂಕದಂದು ಮಾಡಿಸಲಾಗುವ ಮೌಲ್ಯಮಾಪನದ ಆಧಾರದ ಮೇರೆಗೆ ರಜೆ ವೇತನ ಮತ್ತು ಕಂತನ್ನು ಅನುವು ಮಾಡುತ್ತದೆ	ಕಂಪನಿಯ ಗ್ರಾಚ್ಯುಟಿ ಪರಿಹಾರಗಳ ರೂಪದಲ್ಲಿ ನಿವೃತ್ತಿ ಸೌಲಭ್ಯಗಳನ್ನು ಪ್ರತಿ ಸಂತುಲನ ಪಟ್ಟಿಯ ದಿನಾಂಕದಂದು ಸ್ವತಂತ್ರ ವಿಮಾಗಣಕರಿಂದ ಲೆಕ್ಕ ಹಾಕಿಸುತ್ತದೆ.	ಉದ್ಯೋಗಿಗಳು ಇಪಿಎಫ್ ಅಧಿನಿಯಮದಡಿಯಲ್ಲಿ ವಿವರಿಸಲಾಗಿರುವ ಪಿಂಚಣಿಗೆ ಅರ್ಹರಾಗಿರುತ್ತಾರೆ.	ಭವಿಷ್ಯ ನಿಧಿ ಅಧಿನಿಯಮದ ಪ್ರಕಾರ ಅನ್ವಯಗೊಳ್ಳುವ ವಂತಿಕೆಯನ್ನು ಅನುವು ಮಾಡಲಾಗುವುದು / ಪಾವತಿಸಲಾಗುವುದು
ಹೆಚ್ಚುವರಿ ಕೆಲಸಕ್ಕಾಗಿ ನೇಮಕ ಮಾಡಲಾದ ಉದ್ಯೋಗಿಗಳು	ರಜೆ ಸಂಬಳವು, ಯಾವುದಾದರೂ ಇದ್ದಲ್ಲಿ, ಅದನ್ನು ಗುರುತಿಸಲಾಗುವುದು ಹಾಗೂ ಪಾವತಿಯ ಆಧಾರದ ಮೇರೆಗೆ ಲೆಕ್ಕಪತ್ರಗಳಲ್ಲಿ ತೋರಿಸಲಾಗುವುದು	ಗ್ರಾಚ್ಯುಟಿ ಯಾವುದಾದರೂ ಇದ್ದಲ್ಲಿ, ಅದನ್ನು ಗುರುತಿಸಲಾಗುವುದು ಹಾಗೂ ಪಾವತಿಯ ಆಧಾರದ ಮೇರೆಗೆ ಲೆಕ್ಕಪತ್ರಗಳಲ್ಲಿ ತೋರಿಸಲಾಗುವುದು	ಪಿಂಚಣಿ ಪ್ರಯೋಜನಗಳು ಯಾವುದಾದರೂ ಇದ್ದಲ್ಲಿ, ಅದನ್ನು ಗುರುತಿಸಲಾಗುವುದು ಹಾಗೂ ಪಾವತಿಯ ಆಧಾರದ ಮೇರೆಗೆ ಲೆಕ್ಕಪತ್ರಗಳಲ್ಲಿ ತೋರಿಸಲಾಗುವುದು	ಭವಿಷ್ಯ ನಿಧಿ ಮತ್ತು ನೌಕರರ ರಾಜ್ಯ ವಿಮಾ ಪ್ರಯೋಜನಗಳನ್ನು ನೀಡಲಾಗುವುದಿಲ್ಲ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ನೌಕರರುಗಳಿಗೆ ನೀಡಬೇಕಾದ ಪ್ರಯೋಜನಗಳನ್ನು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ Ind AS ಮಾನದಂಡ 19 ನೌಕರರುಗಳಿಗೆ ನೀಡಬೇಕಾದ ಪ್ರಯೋಜನಗಳು – ಇದರ ಅಡಿಯಲ್ಲಿ ಲೆಕ್ಕವನ್ನಿಡಲಾಗುವುದು

ಪ್ರಸಕ್ತ ಸಾಲಿನ ವಿಮಾಗಣಿತದ ಲೆಕ್ಕಾಚಾರದ ಪ್ರಕಾರ ಗಳಿಕೆಗಳು ಮತ್ತು ನಷ್ಟಗಳನ್ನು ಮತ್ತೊಂದು ಸಮಗ್ರ ವರಮಾನದಲ್ಲಿ ಗುರುತಿಸಲಾಗುವುದು ಹಾಗೂ ಅವುಗಳನ್ನು ವರಮಾನ ತ:ಖ್ತೆಯಲ್ಲಿ ಮನ್ನಣೆ ನೀಡಲಾಗುವುದಿಲ್ಲ. ಪ್ರಸಕ್ತ ಸೇವಾ ವೆಚ್ಚ ಮತ್ತು ಹಿಂದಿನ ಸಾಲಿನ ಸೇವಾ ವೆಚ್ಚಗಳನ್ನು ಉದ್ಯೋಗಿಗಳಿಗೆ ನೀಡಲಾಗುವ ಪ್ರಯೋಜನಗಳ ಅಡಿಯಲ್ಲಿ ಮನ್ನಣೆ ನೀಡಲಾಗುವುದು ಹಾಗೂ ನಿವ್ವಳ ಬಡ್ಡಿ ವೆಚ್ಚ ಅಥವಾ ವರಮಾನವನ್ನು ಹಣಕಾಸು ವೆಚ್ಚಗಳ ಅಡಿಯಲ್ಲಿ ಮನ್ನಣೆ ನೀಡಲಾಗುವುದು. ನಿರ್ದಿಷ್ಟವಾಗಿ ವಿವರಿಸಲ್ಪಟ್ಟಿರುವ ಕಾಣಿಕೆ ಯೋಜನೆಗಳಿಗಾಗಿ, ಪಿಂಚಣಿ ವೆಚ್ಚಗಳು ಹಾಗೂ ನಿವೃತ್ತಿಯ ನಂತರದ ಪ್ರಯೋಜನಗಳಿಗೆ ಸಂಬಂಧಿಸಿದಂತೆ ವರಮಾನ ತ:ಖ್ತೆಗೆ ಖರ್ಚನ್ನು ಹಾಕಿರುವ ಮೊತ್ತವು ಪ್ರಸಕ್ತ ಸಾಲಿನಲ್ಲಿ ಪಾವತಿಸಬೇಕಾದ ನಿವೃತ್ತಿಯ ನಂತರದ ಪ್ರಯೋಜನಗಳಾಗಿರುತ್ತವೆ.

3.13 ಸಾಲಗಳ ವೆಚ್ಚಗಳು

(i) ಸಾಲಗಳ ವೆಚ್ಚಗಳು ಬಡ್ಡಿ ಹಾಗೂ ಬದ್ಧತೆಯ ವೆಚ್ಚಗಳು, ಖಾತರಿ ಶುಲ್ಕ, ವ್ಯವಸ್ಥೆ ಮಾಡುವವರ ಶುಲ್ಕಗಳು, ದರ ನಿಗದಿ ಮತ್ತು ನಿಗಾವಣೆ ಶುಲ್ಕಗಳು, ಬಡ್ಡಿ ವೆಚ್ಚಗಳಿಗೆ ಹೊಂದಾಣಿಕೆ ಎಂಬುದಾಗಿ ಪರಿಗಣಿಸುವಷ್ಟರ ಮಟ್ಟಿಗೆ ವಿದೇಶಿ ಹಣಕಾಸಿನ ಚಲಾವಣೆಯಲ್ಲಿ ಪಡೆದುಕೊಂಡ ಸಾಲಗಳು ಹಾಗೂ ಅದರಲ್ಲಿ ಸ್ವೀಕರಿಸಲಾದ ಅಥವಾ ಸ್ವೀಕರಿಸಬೇಕಾಗಿರುವ ಅನುದಾನಗಳನ್ನು ವಿನಿಮಯ ದರ ವ್ಯತ್ಯಯಗಳು ಒಳಗೊಂಡಿರುತ್ತವೆ. ಬಡ್ಡಿ ವೆಚ್ಚವನ್ನು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ Ind AS 109ರಲ್ಲಿ ನಿರ್ದಿಷ್ಟಪಡಿಸಿರುವಂತೆ ಜಾರಿಯಲ್ಲಿರುವ ಬಡ್ಡಿ ದರ ಪದ್ಧತಿಯ ಆಧಾರದ ಮೇರೆಗೆ ಲೆಕ್ಕಹಾಕಲಾಗುವುದು. ಸ್ಥಿರಾಸ್ತಿಗಳ ನಿರ್ಮಾಣವು ಪೂರ್ಣಗೊಳ್ಳುವವರೆಗಿನ ಅಥವಾ ಸ್ವಾಧೀನ ಅವಧಿಗೆ ಸಾಲಗಳನ್ನು ಪಡೆದಿದ್ದಕ್ಕೆ ಸಂಬಂಧಿತ ವೆಚ್ಚವನ್ನು ಅವುಗಳು ಯಾವುದಕ್ಕೆ ಸಂಬಂಧಿಸಿರುವವೋ ಅಂತಹ ಆಸ್ತಿಯ ಜೊತೆ ಬಂಡವಾಳೀಕರಿಸತಕ್ಕದ್ದು. ಸಾಲಗಳ ವೆಚ್ಚಗಳು ಮಾಲೀಕರ ಈಕ್ವಿಟಿಯ ವಾಸ್ತವಿಕ ಅಥವಾ ಅಂತರ್ಗತಗೊಂಡಿರುವ ವೆಚ್ಚಗಳನ್ನು ಒಳಗೊಂಡಿರುವುದಿಲ್ಲ. ಆಸ್ತಿಯ ವೆಚ್ಚದ ಭಾಗವಾಗಿ ಸಾಲಗಳನ್ನು ಪಡೆದಿದ್ದಕ್ಕೆ ಸಂಬಂಧಿತ ವೆಚ್ಚಗಳನ್ನು ಬಂಡವಾಳೀಕರಿಸುವುದನ್ನು ಈ ಕೆಳಗಿನ ಷರತ್ತುಗಳು ಪೂರೈಕೆಗೊಂಡಾಗ ಪ್ರಾರಂಭಿಸತಕ್ಕದ್ದು.

ಎ) ಆಸ್ತಿಯ ಸ್ವಾಧೀನ ಅಥವಾ ನಿರ್ಮಾಣಕ್ಕಾಗಿ ಮಾಡಲಾದ ವೆಚ್ಚವನ್ನು ಭರಿಸಲಾಗಿದ್ದಲ್ಲಿ;

ಬಿ) ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳನ್ನು ಭರಿಸಲಾಗಿದ್ದಲ್ಲಿ; ಹಾಗೂ

ಸಿ) ಆಸ್ತಿಯನ್ನು ಅದರ ಉದ್ದೇಶಿತ ಬಳಕೆಗೆ ಸಿದ್ಧತೆಗೊಳಿಸುವ ಸಲುವಾಗಿನ ಚಟುವಟಿಕೆಗಳು ಪ್ರಗತಿಯಲ್ಲಿದ್ದಲ್ಲಿ.

ii) ಆಸ್ತಿಯ ಮೇಲಿನ ವೆಚ್ಚವು ನಗದು ಪಾವತಿಗಳಲ್ಲಿ, ಇತರೆ ಆಸ್ತಿಗಳ ವರ್ಗಾವಣೆಯಲ್ಲಿ ಅಥವಾ ಬಡ್ಡಿ ಪಾವತಿಯ ಬಾಧ್ಯತೆಯನ್ನು ಹೊಂದಿರುವ ಜವಾಬ್ದಾರಿಗಳಲ್ಲಿ ಪರಿಣಮಿಸುವಂತಹ ವೆಚ್ಚಗಳನ್ನು ಮಾತ್ರ ಒಳಗೊಂಡಿರುತ್ತದೆ. ಸಾಲಗಳ ವೆಚ್ಚಗಳ ಬಂಡವಾಳೀಕರಣವು, ಆಸ್ತಿಯನ್ನು ಸಿದ್ಧಗೊಳಿಸಲು ಅಗತ್ಯವಿರುವ ಎಲ್ಲಾ ಚಟುವಟಿಕೆಗಳು ಪೂರ್ಣಗೊಂಡನಂತರ ಮುಕ್ತಾಯಗೊಳ್ಳುತ್ತದೆ. ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳ ಬಂಡವಾಳೀಕರಣವನ್ನು ಅದರ ಉದ್ದೇಶಿತ ಬಳಕೆಗಾಗಿ ಆಸ್ತಿಗಳನ್ನು ಸಿದ್ಧಗೊಳಿಸಲು ಅಗತ್ಯವಿರುವ ಕಾರ್ಯಚಟುವಟಿಕೆಗಳ ಮುಂದುವರಿದ ಅವಧಿಗಳಲ್ಲಿ ಅಸಾಮಾನ್ಯ ಕಾರಣಗಳಿಂದ ಅಡಚಣೆಗಳಿಗೆ ಒಳಗಾದಲ್ಲಿ ಅಮಾನತ್ತಿನಲ್ಲಿಡತಕ್ಕದ್ದು. ಆದಾಗ್ಯೂ, ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಅಭಿವೃದ್ಧಿ ಇಲ್ಲದಿದ್ದರೂ ಗಮನಾರ್ಹ ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರ್ಯವನ್ನು ಮುಂದುವರೆಸಿಕೊಂಡು ಹೋಗಿದ್ದಲ್ಲಿ ಅಥವಾ ತಾತ್ಕಾಲಿಕವಾಗಿ ವಿಳಂಬಗೊಳಿಸುವುದು ಆಸ್ತಿಯನ್ನು ಅದರ ಉದ್ದೇಶಿತ ಬಳಕೆಗಾಗಿ ಸಿದ್ಧಗೊಳಿಸಲು ಅಗತ್ಯ ಭಾಗವಾಗಿದ್ದಲ್ಲಿ, ಈ ಅವಧಿಗಳಿಗೆ ಸಂಬಂಧಿಸಿದಂತೆ ಸಾಲಗಳ ವೆಚ್ಚಗಳನ್ನು ಬಂಡವಾಳೀಕರಿಸತಕ್ಕದ್ದು.

(iii) ಅರ್ಹತೆಯನ್ನು ಪಡೆಯುವ ಆಸ್ತಿಯನ್ನು ಭಾಗಗಳಲ್ಲಿ ನಿರ್ಮಾಣ ಮಾಡಿದಾಗ ಹಾಗೂ ಇತರ ಭಾಗಗಳ ನಿರ್ಮಾಣವು ಮುಂದುವರೆದಿದ್ದಾಗಲೂ ಪೂರ್ಣಗೊಂಡಂತಹ ಭಾಗವು ಬಳಸಲು ಸಾಧ್ಯವಾದಲ್ಲಿ ಭಾಗಕ್ಕೆ ಸಂಬಂಧಿಸಿದಂತೆ ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳನ್ನು ಬಂಡವಾಳೀಕರಿಸುವುದು ಅಂತ್ಯಗೊಳ್ಳುತ್ತದೆ. ಆಸ್ತಿಯನ್ನು ಅದರ ಉದ್ದೇಶಿತ ಬಳಕೆಗಾಗಿ ಅಂದರೆ, ವಾಣಿಜ್ಯ ಉತ್ಪಾದನೆಯನ್ನು ಪ್ರಾರಂಭಿಸಲು ಸಿದ್ಧಗೊಂಡಿದ್ದಲ್ಲಿ ಸಾಲಗಳ ವೆಚ್ಚಗಳನ್ನು ಬಂಡವಾಳೀಕರಿಸತಕ್ಕದ್ದು ಹಾಗೂ ತದನಂತರ ಸಾಲಗಳ ಎಲ್ಲಾ ವೆಚ್ಚಗಳನ್ನು ವರಮಾನದ ಖರ್ಚಿಗೆ ಹಾಕತಕ್ಕದ್ದು. ವಾಣಿಜ್ಯ ಉತ್ಪಾದನೆಯು ವಾಸ್ತವಿಕವಾಗಿ ಪ್ರಾರಂಭಗೊಳ್ಳುವಲ್ಲಿ ವಿಳಂಬಗೊಂಡಿದ್ದಲ್ಲಿ ಸಾಲಗಳ ವೆಚ್ಚಗಳನ್ನು ಕ್ರಮೇಣ ತಗ್ಗಿಸತಕ್ಕದ್ದಲ್ಲ ಅಥವಾ ಮುಂದಿನ ಅವಧಿಗೆ ಮುಂದೂಡತಕ್ಕದ್ದಲ್ಲ.

3.14 ಗುತ್ತಿಗೆಗಳಿಗಾಗಿ ಲೆಕ್ಕವನ್ನಿಡುವಿಕೆ

ಗುತ್ತಿಗೆಗಳನ್ನು ನೀಡುವವರು ಮಾಲಿಕತ್ವದ ಸಂಭಾವ್ಯ ಅಪಾಯಗಳನ್ನು ಮತ್ತು ಪ್ರತಿಫಲಗಳ ಗಮನಾರ್ಹ ಸ್ಥಿತಿಗತಿಯನ್ನು ಉಳಿಸಿಕೊಂಡಲ್ಲಿ ಅಂತಹ ಆಸ್ತಿಯನ್ನು

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಕಾರ್ಯಾಚರಣೆಗೊಂಡಿರುವ ಗುತ್ತಿಗೆ ಎಂಬುದಾಗಿ ವರ್ಗೀಕರಿಸಲಾಗುವುದು. ಕಾರ್ಯಾಚರಣೆಗೊಂಡಿರುವ ಗುತ್ತಿಗೆಯ ಬಾಡಿಗೆಗಳನ್ನು ಗುತ್ತಿಗೆಯ ಅವಧಿಯಲ್ಲಿ ಗುತ್ತಿಗೆಗಳನ್ನು ನೀಡುವವರ ನಿರೀಕ್ಷಿತ ಹಣದುಬ್ಬರ ವೆಚ್ಚಗಳ ಹೆಚ್ಚಳಗಳಿಗೆ ಪರಿಹಾರ ನೀಡುವುದಕ್ಕಾಗಿ ನಿರೀಕ್ಷಿತ ಸಾಮಾನ್ಯ ಹಣದುಬ್ಬರದೊಂದಿಗೆ ಆಗಿರದ ಹೊರತು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ನೇರ ಮಾರ್ಗ ಪದ್ಧತಿಯ ಅಡಿಯಲ್ಲಿ ಮನ್ನಣೆ ನೀಡಲಾಗುವುದು. ಸ್ವೀಕರಿಸಲಾದ ಗುತ್ತಿಗೆ ಪ್ರೋತ್ಸಾಹಕಗಳನ್ನು ಗುತ್ತಿಗೆ ಅವಧಿಯ ಒಟ್ಟಾರೆ ಗುತ್ತಿಗೆ ವೆಚ್ಚಗಳ ಅಂತರ್ಗತ ಭಾಗವನ್ನಾಗಿ ಮನ್ನಣೆ ನೀಡಲಾಗುವುದು.

ಏಪ್ರಿಲ್ 2019ರಿಂದ ಜಾರಿಗೆ ಬಂದಂತೆ, ಕಂಪನಿಯು ಗುತ್ತಿಗೆಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 116ನ್ನು ಅಳವಡಿಸಿಕೊಂಡಿರುವುದು ಹಾಗೂ ಮಾರ್ಪಾಡು ಮಾಡಲ್ಪಟ್ಟಿರುವಂತಹ ಪೂರ್ವಾನ್ವಯ ಪದ್ಧತಿಯನ್ನು ಬಳಸಿಕೊಂಡು 1 ಏಪ್ರಿಲ್ 2019ರಲ್ಲಿ ಚಾಲ್ತಿಯಲ್ಲಿರುವಂತಹ ಎಲ್ಲಾ ನಿರ್ದಿಷ್ಟ ಅವಧಿಯ ಗುತ್ತಿಗೆಗಳಿಗೆ ಅನ್ವಯಗೊಳಿಸಿರುವುದು. ಅದರ ಆಧಾರದ ಮೇರೆಗೆ ಹಾಗೂ ಮಾನದಂಡದಲ್ಲಿನ ನಿರ್ದಿಷ್ಟ ಮಧ್ಯಂತರ ಅನುವುಗಳ ಅಡಿಯಲ್ಲಿ ಅನುಮತಿಸಿರುವಂತೆ, ಕಂಪನಿಯು ತುಲನಾತ್ಮಕ ಅಂಕಿಸಂಖ್ಯೆಗಳನ್ನು ಪುನರ್–ತಿಳಿಸುವ ಅಗತ್ಯತೆಯಿರುವುದಿಲ್ಲ.

ಎಲ್ಲಾ ಗುತ್ತಿಗೆಗಳನ್ನು ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ, ಆಸ್ತಿಯ ಬಳಸುವಿಕೆಯ ಹಕ್ಕು ಹಾಗೂ ಗುತ್ತಿಗೆ ಜವಾಬ್ದಾರಿಯನ್ನು ಪರಿಗಣಿಸುವ ಮೂಲಕ ಲೆಕ್ಕವನ್ನಿಡಲಾಗಿರುವುದು.

ಕಡಿಮೆ ಮೌಲ್ಯದ ಆಸ್ತಿಗಳ ಗುತ್ತಿಗೆಗಳು; ಮತ್ತು 12 ತಿಂಗಳುಗಳು ಮತ್ತು ಅದಕ್ಕೂ ಕಡಿಮೆ ಅವಧಿಯ ಗುತ್ತಿಗೆಗಳು.

ಗುತ್ತಿಗೆಯಲ್ಲಿ ಅಡಕವಾಗಿರುವಂತಹ ದರವನ್ನು ಉಲ್ಲೇಖಿಸಿದಂತೆ (ಮಾದರಿಯಾಗಿರುವ ಪ್ರಕರಣದಂತೆ), ನಿರ್ಧರಿಸಲ್ಪಡುವ ರಿಯಾಯಿತಿ ದರದೊಂದಿಗೆ ಗುತ್ತಿಗೆ ಜವಾಬ್ದಾರಿಗಳನ್ನು ಗುತ್ತಿಗೆಯನ್ನು ನೀಡಿರುವವರಿಗೆ ಬಾಕಿಯಿರುವ ಪಾವತಿಗಳ ಗುತ್ತಿಗೆಯ ಅವಧಿಯ ಮೇಲೆ ಪ್ರಸಕ್ತ ಮೌಲ್ಯದಲ್ಲಿ ಲೆಕ್ಕಹಾಕಲಾಗುವುದು, (ಇದನ್ನು ತತ್‌ಕ್ಷಣವೇ ನಿರ್ಧಾರಣೆ ಮಾಡಲು ಸಾಧ್ಯವಿರುವುದಿಲ್ಲವಾದಲ್ಲಿ) ಅಂತಹ ಸಂದರ್ಭದಲ್ಲಿ ಗುತ್ತಿಗೆಯು ಪ್ರಾರಂಭಗೊಂಡನಂತರ ಹೆಚ್ಚಳಗೊಳಿಸಲ್ಪಟಂತಹ ಸಾಲದ ಮೇಲಿನ ಬಡ್ಡಿ ದರವನ್ನು ಉಪಯೋಗಿಸಿಕೊಳ್ಳಲಾಗುವುದು. ಅವುಗಳು ಒಂದು ಸೂಚ್ಯಾಂಕ ಅಥವಾ ದರದ ಮೇಲೆ ಅವಲಂಭಿತವಾಗಿದ್ದಲ್ಲಿ, ವ್ಯತ್ಯಯಗೊಳ್ಳಬಹುದಾದ ಗುತ್ತಿಗೆ ಪಾವತಿಗಳನ್ನು ಮಾತ್ರ ಗುತ್ತಿಗೆ ಜವಾಬ್ದಾರಿಯನ್ನು ನಿರ್ಧಾರಣೆ ಮಾಡಲು ಸೇರಿಸಲಾಗುವುದು. ಅಂತಹ ಪ್ರಕರಣದಲ್ಲಿ, ಗುತ್ತಿಗೆ ಜವಾಬ್ದಾರಿಯ ಪ್ರಾರಂಭಿಕ ನಿರ್ಧಾರಣೆಯು ಸಂಪೂರ್ಣ ಗುತ್ತಿಗೆ ಅವಧಿಯಲ್ಲಿ ಬದಲಾವಣೆಗೊಳ್ಳದೆಯೇ ಉಳಿದಿರುತ್ತದೆ ಎಂಬುದಾಗಿ ಊಹಿಸುತ್ತದೆ. ಇತರೆ ವ್ಯತ್ಯಯಗೊಳ್ಳಬಹುದಾದ ಗುತ್ತಿಗೆ ಪಾವತಿಗಳು ಅವುಗಳು ಸಂಬಂಧಿಸಿರುವಂತಹ ಅವಧಿಯಲ್ಲಿ ವೆಚ್ಚ ಮಾಡಲ್ಪಟ್ಟಿರುತ್ತವೆ.

ಪ್ರಾರಂಭಿಕ ಪರಿಗಣನೆಯ ವೇಳೆಯಲ್ಲಿ, ಗುತ್ತಿಗೆ ಜವಾಬ್ದಾರಿಯು ಹೊಂದಿರಬಹುದಾದ ಮೌಲ್ಯವು ಈ ಕೆಳಗಿನವುಗಳನ್ನೂ ಸಹ ಒಳಗೊಂಡಿರುತ್ತದೆ;

(i) ಯಾವುದೇ ಉಳಿಕೆ ಮೌಲ್ಯ ಖಾತರಿ ಅಡಿಯಲ್ಲಿ ಪಾವತಿಗಾಗಿ ನಿರೀಕ್ಷಿತ ಮೊತ್ತಗಳು

(ii) ಕಂಪನಿಯ ಪರವಾಗಿ ನೀಡಲಾಗಿರುವಂತಹ ಯಾವುದೇ ಖರೀದಿ ಆಯ್ಕೆಯ ಚಲಾಯಿಸಬಹುದಾದ ದರ/ಮೌಲ್ಯ, ಅಂತಹ ಆಯ್ಕೆಯನ್ನು ಮಾಡಿಕೊಳ್ಳಬಹುದು ಎಂಬುದು ನ್ಯಾಯಸಮ್ಮತವಾಗಿ ಖಚಿತವಾಗಿದ್ದಲ್ಲಿ;

(iii) ಗುತ್ತಿಗೆಯನ್ನು ಅಂತ್ಯಗೊಳಿಸಲು ಯಾವುದಾದರೂ ದಂಡವನ್ನು ಪಾವತಿಸಬೇಕಿದ್ದಲ್ಲಿ, ಗುತ್ತಿಗೆಯ ಷರತ್ತನ್ನು ಚಲಾಯಿಸಲಾದಂತಹ ಅಂತ್ಯಗೊಳಿಸುವಿಕೆ ಆಯ್ಕೆಯ ಆಧಾರದ ಮೇರೆಗೆ ಅಂದಾಜು ಮಾಡಿದ್ದಲ್ಲಿ.

ಆಸ್ತಿಗಳ ಬಳಸುವಿಕೆಯ ಹಕ್ಕನ್ನು ಗುತ್ತಿಗೆ ಜವಾಬ್ದಾರಿಯ ಮೊತ್ತದಲ್ಲಿ ಪ್ರಾರಂಭಿಕವಾಗಿ ನಿರ್ಧಾರಣೆ ಮಾಡಲಾಗುವುದು ಹಾಗೂ ಸ್ವೀಕರಿಸಲಾದಂತಹ ಯಾವುದೇ ಗುತ್ತಿಗೆ ಪ್ರೋತ್ಸಾಹಕಗಳಿಂದ ತಗ್ಗಿಸಲಾಗುವುದು ಹಾಗೂ ಈ ಕೆಳಗಿನವುಗಳಿಗಾಗಿ ಹೆಚ್ಚಳಗೊಳಿಸಲಾಗುವುದು :

(i) ಗುತ್ತಿಗೆಯು ಪ್ರಾರಂಭಗೊಂಡಾಗ ಅಥವಾ ಅದಕ್ಕೂ ಮುಂಚಿತವಾಗಿ ಮಾಡಲಾಗಿರುವ ಗುತ್ತಿಗೆ ಪಾವತಿಗಳು

(ii) ಭರಿಸಲಾಗಿರುವಂತಹ ಪ್ರಾರಂಭಿಕ ನೇರ ವೆಚ್ಚಗಳು; ಹಾಗೂ

(iii) ಗುತ್ತಿಗೆ ಆಸ್ತಿಯನ್ನು ಕಿತ್ತುಹಾಕುವ, ತೆಗೆದುಹಾಕುವ ಅಥವಾ ಪೂರ್ವಸ್ಥಿತಿಗೆ ತರುವುದಕ್ಕೆ ಗುತ್ತಿಗೆ ಷರತ್ತುಗಳ ಅನುಸಾರ ಕಂಪನಿಯು ಅಗತ್ಯತೆಯನ್ನು ಹೊಂದಿದ್ದಲ್ಲಿ, ಪರಿಗಣಿಸಲಾಗಿರುವಂತಹ ಯಾವುದೇ ಅನುವಿನ ಮೊತ್ತ.

ಪ್ರಾರಂಭಿಕ ನಿರ್ಧಾರಣೆಯ ನಂತರ, ಉಳಿಕೆ ಶಿಲ್ಕಿನ ಮೇಲೆ ಒಂದು ಏಕಪ್ರಕಾರ ದರದಲ್ಲಿ ವಿಧಿಸಲಾಗಿರುವ ಬಡ್ಡಿಯ ಪರಿಣಾಮವಾಗಿ ಗುತ್ತಿಗೆ ಜವಾಬ್ದಾರಿಗಳು ಹೆಚ್ಚಳಗೊಳ್ಳುತ್ತವೆ ಹಾಗೂ ಗುತ್ತಿಗೆ ಪಾವತಿಗಳು ಮಾಡಿದಂತೆಲ್ಲಾ ಇಳಿಮುಖಗೊಳ್ಳುತ್ತವೆ. ಆಸ್ತಿಗಳ ಬಳಸುವಿಕೆ ಹಕ್ಕನ್ನು ಗುತ್ತಿಗೆಯ ಉಳಿಕೆ ಅವಧಿಯಾದ್ಯಂತ ಅಥವಾ ಆರ್ಥಿಕವಾಗಿ ಉಪಯೋಗಕ್ಕೆ ಬರಬಹುದಾದಂತಹ ಆಸ್ತಿಯ ಉಳಿಕೆ ಅವಧಿಯಾದ್ಯಂತ, ವಿರಳವಾಗಿ, ಇದು ಗುತ್ತಿಗೆ ಅವಧಿಗಿಂತ ಕಡಿಮೆಯಾಗಿರುತ್ತದೆ ಎಂಬುದಾಗಿ

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ತೀರ್ಮಾನಿಸಿದಲ್ಲಿ ಈ ಅವಧಿಯಾದ್ಯಂತ ಮೌಲ್ಯವನ್ನು ಕ್ರಮೇಣ ಸರಳ ರೇಖೆ ಆಧಾರದ ಮೇಲೆ ತಗ್ಗಿಸಲಾಗುವುದು. (ಅಮಾರ್ಟೈಸ್ಡ್)

ಕಂಪನಿಯು ಯಾವುದೇ ಗುತ್ತಿಗೆಯ ಅವಧಿಯ ತನ್ನ ಅಂದಾಜನ್ನು ಪರಿಷ್ಕರಿಸಿದಂದು, ಅದು ಪರಿಷ್ಕೃತ ಅವಧಿಯಾದ್ಯಂತ ಪಾವತಿಸುವ ಸಲುವಾಗಿ ಪಾವತಿಗಳನ್ನು ಪ್ರತಿಬಿಂಭಿಸುವ ಸಲುವಾಗಿ ಅದು ಹೊಂದಿರುವಂತಹ ಗುತ್ತಿಗೆ ಜವಾಬ್ದಾರಿಯ ಮೊತ್ತವನ್ನು ಹೊಂದಾಣಿಕೆ ಮಾಡುತ್ತದೆ, ಅಂತಹ ಹೊಂದಾಣಿಕೆ ಮಾಡಲ್ಪಟ್ಟ ಮೊತ್ತವು ಪರಿಷ್ಕೃತ ರಿಯಾಯಿತಿ ದರವನ್ನು ಬಳಸಿಕೊಂಡು ಅಳವಡಿಸಿಕೊಳ್ಳಲಾದಂತಹ ರಿಯಾಯಿತಿ ದರಗಳಾಗಿರುತ್ತವೆ.

ಭವಿಷ್ಯದಲ್ಲಿನ ಗುತ್ತಿಗೆ ಪಾವತಿಗಳ ವ್ಯತ್ಯಯಗೊಳ್ಳುವಂತಹ ಅಂಶವು ಒಂದು ದರ ಅಥವಾ ಸೂಚ್ಯಾಂಕವನ್ನು ಅವಲಂಭಿಸಿದ್ದಲ್ಲಿ ಗುತ್ತಿಗೆ ಜವಾಬ್ದಾರಿಗಳು ಹೊಂದಿರುವ ಮೌಲ್ಯವನ್ನೂ ಸಹ ಅದೇ ರೀತಿಯಲ್ಲಿ ಪರಿಷ್ಕರಿಸಲಾಗುವುದು, ಆದರೆ ರಿಯಾಯಿತಿ ದರವು ಬದಲಾವಣೆಗೊಳ್ಳದೆಯೇ ಇರುತ್ತದೆ. ಎರಡೂ ಪ್ರಕರಣಗಳಲ್ಲಿ, ಆಸ್ತಿಯ ಬಳಸುವಿಕೆಯ ಹಕ್ಕು ಹೊಂದಿರುವ ಪರಿಷ್ಕೃತ ಮೊತ್ತವನ್ನು ಉಳಿಕೆ ಗುತ್ತಿಗೆ ಅವಧಿಯಾದ್ಯಂತ (ಪರಿಷ್ಕೃತ) ಕ್ರಮೇಣಾ ತಗ್ಗಿಸುತ್ತಾ ಹೋಗುವುದರೊಂದಿಗೆ ಒಂದು ಸಮನಾದ ಹೊಂದಾಣಿಕೆಯನ್ನು ಮಾಡಲಾಗುವುದು. ಆಸ್ತಿಯ ಬಳಸುವಿಕೆಯ ಹಕ್ಕು ಹೊಂದಿರುವ ಮೊತ್ತವನ್ನು ಶೂನ್ಯಕ್ಕೆ ಹೊಂದಾಣಿಕೆ ಮಾಡಿದಲ್ಲಿ, ಮಾಡಲಾಗುವ ಇನ್ನೂ ಹೆಚ್ಚಿನ ಇಳಿಕೆಯನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಪರಿಗಣಿಸಲಾಗುವುದು.

ಗುರುತಿಸಲ್ಪಟ್ಟಿರುವ ಆಸ್ತಿಯ ಬಳಕೆಗೆ ಕಂಪನಿಗೆ ಹಕ್ಕನ್ನು ನೀಡುವ ಹಾಗೂ ಗುತ್ತಿಗೆಯನ್ನು ನೀಡುವವರು ಕಂಪನಿಗೆ ಸೇವೆಗಳನ್ನು ಒದಗಿಸುವ ಅಗತ್ಯತೆಯನ್ನು ಹೊಂದಿರುವಂತಹ ಗುತ್ತಿಗೆಗಳಿಗೆ ಸಂಬಂಧಿಸಿದಂತೆ, ಕಂಪನಿಯು ಸಂಪೂರ್ಣ ಗುತ್ತಿಗೆಯನ್ನು ಒಂದು ನಿರ್ದಿಷ್ಟ ಅವಧಿಯ ಗುತ್ತಿಗೆ (ಲೀಸ್) ಎಂಬುದಾಗಿ ಪರಿಗಣಿಸುವುದನ್ನು ಆಯ್ಕೆ ಮಾಡಿಕೊಂಡಿರುವುದು, ಅಂದರೆ ಅದು ಗುತ್ತಿಗೆ ಪಾವತಿಗಳಿಗೆ ಯಾವುದೇ ಮೊತ್ತವನ್ನು ಹಂಚಿಕೆ ಮಾಡುವುದಿಲ್ಲ ಮತ್ತು ಸರಬರಾಜುದಾರರು ಗುತ್ತಿಗೆಯ ಒಂದು ಭಾಗವಾಗಿ ಒದಗಿಸುವಂತಹ ಸೇವೆಗಳಿಗೆ ಪ್ರತ್ಯೇಕವಾಗಿ ಲೆಕ್ಕವನ್ನಿಡುವುದಿಲ್ಲ.

3.15 ವರಮಾನದ ಮೇಲಿನ ತೆರಿಗೆ

(i) ಪ್ರಸಕ್ತ ಸಾಲಿಗೆ ತೆರಿಗೆ ವೆಚ್ಚಗಳು ಪ್ರಸಕ್ತ ಸಾಲಿನ ತೆರಿಗೆ ಹಾಗೂ ಮುಂದೂಡಲ್ಪಟ್ಟ ತೆರಿಗೆ ಎರಡನ್ನೂ ಒಳಗೊಂಡಿರುತ್ತದೆ. ತೆರಿಗೆ ವೆಚ್ಚಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಮನ್ನಣೆ ನೀಡಲಾಗಿರುವ ಬಾಬ್ತುಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಮಾತ್ರ ತೆರಿಗೆ ವೆಚ್ಚಗಳನ್ನು ಪರಿಗಣಿಸಲಾಗುವುದು. ಇತರೆ ಸಮಗ್ರ ವರಮಾನದಲ್ಲಿ ಮನ್ನಣೆ ನೀಡಲಾಗಿರುವ ಬಾಬ್ತುಗಳು ಮೇಲಿನ ತೆರಿಗೆಗಳು ಹಾಗೂ ಈಕ್ವಿಟಿಗೆ ನೇರವಾಗಿ ಸಂಬಂಧಿಸಿರುವ ಬಾಬ್ತುಗಳು ಮೇಲಿನ ತೆರಿಗೆಗಳನ್ನೂ ಸಹ ಇತರೆ ಸಮಗ್ರ ವರಮಾನ ಹಾಗೂ ಈಕ್ವಿಟಿಗೆ ನೇರವಾಗಿ ಸಂಬಂಧಿಸಿರುವ ಬಾಬ್ತುಗಳನ್ನಾಗಿ ಪರಿಗಣಿಸಲಾಗುವುದು. ಪ್ರಸಕ್ತ ಸಾಲಿನ ತೆರಿಗೆಯು ಆದಾಯ ತೆರಿಗೆ ಅಧಿನಿಯಮ, 1961ರ ಅನುವುಗಳ ಅನುಸಾರ ಪ್ರಸಕ್ತ ಸಾಲಿಗೆ ನಿರ್ಧಾರಣೆ ಮಾಡಲಾದ ತೆರಿಗೆಯನ್ನು ವಿಧಿಸಬೇಕಾದ ಮೊತ್ತದ ಮೇಲೆ ಪಾವತಿಸಬೇಕಾದ ತೆರಿಗೆಯ ಮೊತ್ತ. ತೆರಿಗೆ ನಿಯಮಗಳ ಅನುಸಾರ ಪಾವತಿಸಲಾದ ಕನಿಷ್ಠ ಬದಲಿ ತೆರಿಗೆ (ಮಿನಿಮಮ್ ಆಲ್ಟರ್‌ನೇಟ್ ಟ್ಯಾಕ್ಸ್), ಭವಿಷ್ಯದಲ್ಲಿ ಆದಾಯ ತೆರಿಗೆಯ ಪ್ರತಿಯಾಗಿ ಹೊಂದಾಣಿಕೆಯ ರೂಪದಲ್ಲಿ ಭವಿಷ್ಯದ ಆರ್ಥಿಕ ಪ್ರಯೋಜನಗಳನ್ನು ನೀಡುತ್ತದೆ, ಕಂಪನಿಯು ಸಾಮಾನ್ಯ ಆದಾಯ ತೆರಿಗೆಯನ್ನು ಪಾವತಿಸುತ್ತದೆ ಎಂಬುದನ್ನು ದೃಢಪಡಿಸುವ ಸಾಕ್ಷಾಧಾರಗಳು ಇದ್ದಲ್ಲಿ ಇದನ್ನು ಆಸ್ತಿಯನ್ನಾಗಿ ಪರಿಗಣಿಸಲಾಗುವುದು. ಅದರಂತೆಯೇ, ಅದರ ಜೊತೆಯಲ್ಲಿರುವ ಭವಿಷ್ಯದ ಆರ್ಥಿಕ ಪ್ರಯೋಜನಗಳು ಕಂಪನಿಗೆ ಬರುತ್ತವೆ ಎಂಬ ಸಾಧ್ಯತೆಯಿದ್ದಲ್ಲಿ ಕನಿಷ್ಠ ಬದಲಿ ತೆರಿಗೆಯನ್ನು (ಮಿನಿಮಮ್ ಆಲ್ಟರ್‌ನೇಟ್ ಟ್ಯಾಕ್ಸ್), ಸಂತುಲನ ಪಟ್ಟಿಯಲ್ಲಿ ಆಸ್ತಿಯಾಗಿ ಪರಿಗಣಿಸಲಾಗುವುದು.

(ii) ಆಸ್ತಿಗಳು ಮತ್ತು ಹೊಣೆಗಳು ಮತ್ತು ಕಂಪನಿಯ ಹಣಕಾಸು ತ:ಖ್ತೆಗಳಲ್ಲಿ ಅವುಗಳು ಹೊಂದಿರುವ ಮೊತ್ತಗಳ ನಡುವೆ ಉದ್ಭವಿಸುವ ತಾತ್ಕಾಲಿಕ ವ್ಯತ್ಯಾಸಗಳ ಮೇಲಿನ ಮುಂದೂಡಲ್ಪಟ್ಟ ತೆರಿಗೆಯನ್ನು ಪರಿಗಣಿಸಲಾಗುವುದು. ತೆರಿಗೆ ದರಗಳನ್ನು ಮತ್ತು ವಿಧಿಸಲಾಗಿರುವ ತೆರಿಗೆ ನಿಯಮಗಳನ್ನು ಅಥವಾ ವರದಿಯ ದಿನಾಂಕದಂದು ಗಮನಾರ್ಹವಾಗಿ ವಿಧಿಸಲಾಗಿರುವ ನಿಯಮಗಳ ಅನುಸಾರ ಮುಂದೂಡಲ್ಪಟ್ಟ ತೆರಿಗೆಯನ್ನು ಲೆಕ್ಕಹಾಕಲಾಗುವುದು. ಮುಂದೂಡಲ್ಪಟ್ಟ ತೆರಿಗೆ ಜವಾಬ್ದಾರಿಗಳನ್ನು ಎಲ್ಲಾ ತೆರಿಗೆಯನ್ನು ವಿಧಿಸಬೇಕಾದ ತಾತ್ಕಾಲಿಕ ವ್ಯತ್ಯಾಸಗಳನ್ನು ಪರಿಗಣಿಸಲಾಗುವುದು / ಮುಂದಿನ ತೆರಿಗೆ ಅವಧಿಗೆ ಮುಂದಕ್ಕೆ ತೆಗೆದುಕೊಂಡು ಹೋಗಲಾಗಿರುವಂತಹ ಬಳಸಿಕೊಳ್ಳದಿರುವ ನಷ್ಟಗಳು ಮತ್ತು ತೆರಿಗೆ ಜಮೆಗಳನ್ನು ಭವಿಷ್ಯದ ತೆರಿಗೆಯನ್ನು ವಿಧಿಸಬೇಕಾದ ಲಾಭವು ಲಭ್ಯವಿರುವುದು, ಅದಕ್ಕೆ ಪ್ರತಿಯಾಗಿ ತಾತ್ಕಾಲಿಕ ವ್ಯತ್ಯಾಸಗಳನ್ನು ಬಳಸಿಕೊಳ್ಳಬಹುದು ಎಂಬ ಸಾಧ್ಯತೆಯು ಇರುವಷ್ಟರ ಮಟ್ಟಿಗೆ ಮಾತ್ರ ಪರಿಗಣಿಸಲಾಗುವುದು.

ಕಂಪನಿಯು ತೆರಿಗೆ ನಷ್ಟದ ಇತಿಹಾಸವನ್ನು ಹೊಂದಿದ್ದಲ್ಲಿ, ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳನ್ನು ಕಂಪನಿಯು ಸಮರ್ಪಕ ತಾತ್ಕಾಲಿಕ ವ್ಯತ್ಯಾಸಗಳನ್ನು ಹೊಂದಿರುವುದು ಅಥವಾ ದೃಢಪಡಿಸಬಹುದಾದ ರೀತಿಯಲ್ಲಿ ಸಮರ್ಪಕ ತೆರಿಗೆಯನ್ನು ವಿಧಿಸಬಹುದಾದ ಲಾಭವು ಲಭ್ಯವಿದ್ದಲ್ಲಿ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗೆ ಮನ್ನಣೆ ನೀಡಲಾಗುವುದು.

(iii) ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು ಮತ್ತು ಹೊಣೆಗಳು, ಅಂತಹ ಬಾಬ್ತುಗಳು ಅದೇ ನಿರ್ವಹಣಾ ತೆರಿಗೆ ನಿಯಮಗಳು ವಿಧಿಸುವ ಆದಾಯದ ಮೇಲಿನ ತೆರಿಗೆಗೆ ಸಂಬಂಧಿಸಿದ್ದಲ್ಲಿ ಅವುಗಳು ಸರಿದೂಗುತ್ತವೆ ಹಾಗೂ ಕಂಪನಿಯು ಅಂತಹ ಸರಿದೂಗಿಸುವಿಕೆಗಳಿಗೆ ಒತ್ತಾಯಪಡಿಸಬಹುದಾದ ಹಕ್ಕನ್ನು ಹೊಂದಿರುತ್ತದೆ. ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳನ್ನು ಅವುಗಳ ವಸೂಲಾತಿಗಾಗಿ ಪ್ರತಿಯೊಂದು ದಿನಾಂಕದಂದು ಸಮೀಕ್ಷಿಸಲಾಗುವುದು.

(iv) ಕಂಪನಿಯು ಆದಾಯ ತೆರಿಗೆ ಅಧಿನಿಯಮ, 1961ರ ಪರಿಚ್ಛೇದ 115ಬಿಎಎ ಅಡಿಯಲ್ಲಿ ತೆರಿಗೆ ವಿಧಿಸುವುದನ್ನು ಆಯ್ಕೆ ಮಾಡಿಕೊಂಡಿರುವುದು.

3.16 ಅನುವುಗಳು, ಆಕಸ್ಮಿಕ ಹೊಣೆಗಳು ಮತ್ತು ಆಕಸ್ಮಿಕ ಆಸ್ತಿಗಳು

ಹಿಂದಿನ ಘಟನೆಯ ಪರಿಣಾಮವಾಗಿ ಪ್ರಸಕ್ತ ಕಾನೂನಾತ್ಮಕ ಅಥವಾ ರಚನಾತ್ಮಕ ಬದ್ಧತೆಯಿದ್ದಲ್ಲಿ ಹಾಗೂ ಕಂಪನಿಯು ಅಂತಹ ಬದ್ಧತೆಯನ್ನು ಇತ್ಯರ್ಥಗೊಳಿಸಬೇಕಾದ ಸಾಧ್ಯತೆಯಿದ್ದಲ್ಲಿ ಅಂತಹ ಅನುವುಗಳಿಗೆ ಮನ್ನಣೆ ನೀಡಲಾಗುವುದು. ಸಂತುಲನಪಟ್ಟಿಯ ದಿನಾಂಕದಂದು ಬದ್ಧತೆಯನ್ನು ಇತ್ಯರ್ಥಗೊಳಿಸುವ ಸಲುವಾಗಿ ಅಗತ್ಯವಿರುವುದನ್ನು ಆಡಳಿತ ಮಂಡಳಿಯು ಅತ್ಯುತ್ತಮ ರೀತಿಯಲ್ಲಿ ಮೌಲ್ಯಮಾಪನ ಮಾಡಿದ ರೀತಿಯಲ್ಲಿ ಅನುವುಗಳನ್ನು ಲೆಕ್ಕಹಾಕಲಾಗುವುದು ಹಾಗೂ ಪರಿಣಾಮವು ವಸ್ತುವಾಗಿರುವ ರೀತಿಯಲ್ಲಿ ಪ್ರಸಕ್ತ ಮೌಲ್ಯಕ್ಕೆ ರಿಯಾಯಿತಿಯನ್ನು ನೀಡಲಾಗುವುದು. ಆಕಸ್ಮಿಕ ಜವಾಬ್ದಾರಿಗಳನ್ನು ಮನ್ನಣೆ ಮಾಡಲಾಗುವುದಿಲ್ಲ, ಆದರೆ ಇವುಗಳ ಬಗ್ಗೆ ಟಿಪ್ಪಣಿಗಳಲ್ಲಿ ತಿಳಿಸಲಾಗುವುದು. ಆದರೆ ಎಲ್ಲಿ ಆರ್ಥಿಕ ಪ್ರಯೋಜನಗಳ ಸಂಭಾವ್ಯತೆಯಿರುತ್ತದೆಯೋ ಹಾಗೂ ಎಲ್ಲಿ ಅದು ಕಾರ್ಯಸಾಧ್ಯವೋ, ಅವುಗಳ ಹಣಕಾಸು ಪ್ರಭಾವವನ್ನು ಲೆಕ್ಕಹಾಕಬಹುದೋ ಅಂತಹ ಸಂದರ್ಭಗಳಲ್ಲಿ ಹಣಕಾಸು ತ:ಖ್ತೆಗಳಲ್ಲಿ ತೋರಿಸಲಾಗುವುದು.

3.17 ಷೇರು ಒಂದರ ಗಳಿಕೆಗಳು

ಷೇರು ಒಂದಕ್ಕೆ ಮೂಲ ಗಳಿಕೆಯನ್ನು ಪ್ರಸಕ್ತ ಅವಧಿಯಲ್ಲಿ ಬಾಕಿಯಿರುವಂತಹ ಈಕ್ವಿಟಿ ಷೇರುಗಳು ತೂಗಲ್ಪಟ್ಟ ಸರಾಸರಿ ಸಂಖ್ಯೆಯಿಂದ ಈಕ್ವಿಟಿ ಷೇರುದಾರರುಗಳ ಕಾರಣ ಪಾವತಿಸಬೇಕಾದ ತೆರಿಗೆಯನ್ನು ಪಾವತಿಸಿದನಂತರ ನಿವ್ವಳ ಲಾಭ/ನಿವ್ವಳ ನಷ್ಟವನ್ನು ವಿಭಜಿಸುವ ಮೂಲಕ ಲೆಕ್ಕಹಾಕಲಾಗುವುದು. ಷೇರು ಒಂದಕ್ಕೆ ಮೂಲ ಗಳಿಕೆಗಳನ್ನು ಕಂಡುಕೊಳ್ಳುವ ಸಲುವಾಗಿ ತೂಗಲ್ಪಟ್ಟ ಸರಾಸರಿ ಸಂಖ್ಯೆಯ ಈಕ್ವಿಟಿ ಷೇರುಗಳು ಹಾಗೂ ಅಲ್ಲದೆಯೇ ದುರ್ಬಲಗೊಳ್ಳಬಲ್ಲ ಸಂಭಾವ್ಯ ಈಕ್ವಿಟಿ ಷೇರುಗಳ ಪರಿವರ್ತನೆಯ ನಂತರ ನೀಡಬಹುದಾಗಿದ್ದ ತೂಗಲ್ಪಟ್ಟ ಸರಾಸರಿ ಸಂಖ್ಯೆಯ ಈಕ್ವಿಟಿ ಷೇರುಗಳ ಈಕ್ವಿಟಿ ಷೇರುದಾರರಿಗೆ ಸಂಬಂಧಿತ ತೆರಿಗೆಯನ್ನು ಕಳೆದನಂತರ (ದುರ್ಬಲಗೊಳಿಸಲ್ಪಟ್ಟ ಗಳಿಕೆಗಳನ್ನು ಹೊಂದಾಣಿಕೆ ಮಾಡಿಕೊಂಡ ನಂತರ) ಲಾಭ/ ನಷ್ಟದಿಂದ ವಿಭಜಿಸುವ ಮೂಲಕ ಷೇರು ಒಂದಕ್ಕೆ ದುರ್ಬಲಗೊಳಿಸಲ್ಪಟ್ಟ ಗಳಿಕೆಗಳನ್ನು ಲೆಕ್ಕಹಾಕಲಾಗುವುದು.

3.18 ಸರ್ಕಾರಿ ಅನುದಾನಗಳು

(i) ಸರ್ಕಾರದ ಅನುದಾನಗಳನ್ನು ಈ ಕೆಳಗಿನ ಸಂದರ್ಭಗಳಲ್ಲಿ ಅನುದಾನ ಎಂಬುದಾಗಿ ಮನ್ನಣೆ ನೀಡಬೇಕಾಗುವುದು.

ಎ) ಅಂತಹ ಅನುದಾನಗಳಿಗೆ ಹೊಂದಿಕೊಂಡಂತಿರುವ ಷರತ್ತುಗಳನ್ನು ಕಂಪನಿಯು ಅನುಸರಿಸುವುದು ಎಂಬ ನ್ಯಾಯಸಮ್ಮತ ಭರವಸೆಯು ಇದ್ದಲ್ಲಿ; ಮತ್ತು

ಬಿ) ಅಂತಿಮ ವಸೂಲಾತಿಯನ್ನು ಮಾಡಲಾಗುವುದು ಎಂಬುದಾಗಿ ನ್ಯಾಯಸಮ್ಮತ ಭರವಸೆಯಿದ್ದಲ್ಲಿ

ಸಿ) ಅನುದಾನದ ಮೊತ್ತದ ಯಾವುದೇ ಭಾಗವನ್ನು ಮರುಪಾವತಿಸಬೇಕಿರುವುದಿಲ್ಲ ಅಥವಾ ಮರುಪಾವತಿಸ ಬೇಕಾಗಬಹುದಾದ ಸಾಧ್ಯತೆಗಳು ಉದ್ಭವಿಸುವುದಿಲ್ಲ ಮತ್ತು

(ii) ಸರ್ಕಾರದ ಅನುದಾನ ಮೂಲಕ ಸ್ವಾಧೀನ ಪಡೆಸಿಕೊಳ್ಳಲಾದ ಆಸ್ತಿಗಳಿಗೆ, ಸ್ವೀಕರಿಸಿದ ಅನುದಾನದಲ್ಲಿ ಸಂಬಂಧಿತ ವೆಚ್ಚವನ್ನು ಕಡಿತಗೊಳಿಸಿ ಲೆಕ್ಕಹಾಕಲಾಗುತ್ತದೆ.

(iii) ವಿತ್ತೀಯವಲ್ಲದ ಸರ್ಕಾರದ ಅನುದಾನ ಮತ್ತು ಸಂಬಂಧಿತ ಆಸ್ತಿಯನ್ನು ಲೆಕ್ಕಪುಸ್ತಕಗಳಲ್ಲಿ ಅತ್ಯಲ್ಪ ಮೌಲ್ಯದಲ್ಲಿ ಗುರುತಿಸಲಾಗುತ್ತದೆ.

(iV) ಆದಾಯಕ್ಕೆ ಸಂಬಂಧಿತ ಅನುದಾನಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಅನುದಾನಕ್ಕೆ ಹೊಂದಿಕೊಂಡಂತಿರುವ

ಬದ್ಧತೆಗಳನ್ನು ಪೂರೈಸುವುದಕ್ಕಾಗಿನ ವೆಚ್ಚಗಳನ್ನು ಭರಿಸುವ ಅವಧಿಯ ಪೂರ್ತಿ ಮನ್ನಣೆ ನೀಡತಕ್ಕದ್ದು.

3.19 ಕಾಮಗಾರಿ ಬಿಲ್ಲುಗಳು ಮತ್ತು ವೆಚ್ಚಗಳು

(i) ವರ್ಷದ ಅಂತ್ಯದಲ್ಲಿದ್ದಂತೆ ಕಾಮಗಾರಿ ಬಿಲ್ಲುಗಳಿಗಾಗಿನ ಹೊಣೆಗಳನ್ನು (ಬಂಡವಾಳ ಮತ್ತು ವರಮಾನ ಲೆಕ್ಕಗಳೆರಡಕ್ಕೂ ಸಂಬಂಧಿಸಿದಂತೆ) ಪ್ರತಿ ಹಣಕಾಸು ಸಾಲಿನ 31 ಮಾರ್ಚ್ ರಂದು ಅಥವಾ ಅದಕ್ಕೂ ಮುಂಚಿತವಾಗಿ ಕಾರ್ಯಗತಗೊಳಿಸಲಾದ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮನ್ನಣೆ ನೀಡಲಾಗುವುದು.

(ii) ಹೆಚ್ಚುವರಿ ಪರಿಮಾಣಗಳ ಮತ್ತು ಹೆಚ್ಚುವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಹಣಕಾಸು ಬಾಧ್ಯತೆಗಳನ್ನು ಸಕ್ಷಮ ಅಧಿಕಾರಿಗಳು ಅನುಮೋದನೆ ನೀಡಿದ ನಂತರ ಮನ್ನಣೆ ನೀಡಲಾಗುವುದು/ಸಂಚಿತಗೊಳ್ಳುವುದು.

(iii) ದರ ಹೆಚ್ಚಳಕ್ಕಾಗಿ ಜವಾಬ್ದಾರಿಯನ್ನು ಗುತ್ತಿಗೆದಾರರುಗಳು ಅಂತಹ ಪಾವತಿಗಾಗಿ ಕೋರಿಕೆಗಳನ್ನು ಸಲ್ಲಿಸಿದಾಗ ಹಾಗೂ ಕಂಪನಿಯು ಅವುಗಳನ್ನು ಒಪ್ಪಿಕೊಂಡಾಗ ಮನ್ನಣೆ ನೀಡಲಾಗುವುದು.

3.20 ಸರ್ಕಾರಿ ಯೋಜನೆಗಳ ಮೇಲಿನ ವೆಚ್ಚಗಳು

ವಿಶೇಷ ಘಟಕ ಯೋಜನೆ (ಎಸ್‌ಸಿಪಿ)/ಬುಡಕಟ್ಟು ಉಪ–ಯೋಜನೆ (ಟಿಎಸ್‌ಪಿ), ಅಚ್ಚುಕಟ್ಟು ಪ್ರಾದೇಶಾಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳು, ಇವೇ ಮುಂತಾದ ಸರ್ಕಾರಿ ಯೋಜನೆಗಳ ಮೇಲಿನ ವೆಚ್ಚಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ, ಅಂತಹ ತ:ಖ್ತೆಯ ಅವಧಿಯ ವೆಚ್ಚಗಳು ಎಂಬುದಾಗಿ ಖರ್ಚಿಗೆ ಹಾಕಲಾಗುವುದು.

3.21 ಪೂರ್ವಾವಧಿ ವೆಚ್ಚಗಳು

ಕಂಪನಿಯು ಈ ಕೆಳಗಿನವುಗಳ ಮೂಲಕ ಪೂರ್ವಾವಧಿಯ ತಪ್ಪುಗಳನ್ನು ವಿಷಾಯಕಗಳನ್ನು ತಿದ್ದುಪಡಿ ಮಾಡುವುದು:

i) ತಪ್ಪುಗಳು ಸಂಭವಿಸಿರುವ ಇತ್ತೀಚಿನ ಪೂರ್ವಾವಧಿಗೆ (ಗಳಿಗೆ) ತುಲನಾತ್ಮಕ ಮೊತ್ತಗಳನ್ನು ಪುನರ್ ತಿಳಿಸುವುದು.

ii) ತಪ್ಪು ಇತ್ತೀಚಿನ ಪೂರ್ವಾವಧಿಗಳ ಮುಂಚಿತವಾಗಿ ಸಂಭವಿಸಿದ್ದಲ್ಲಿ, ಆಸ್ತಿಗಳು, ಹೊಣೆಗಳು ಮತ್ತು ಈಕ್ವಿಟಿಗಳ ಪ್ರಾರಂಭಿಕ ಶಿಲ್ಕನ್ನು ಪ್ರಸ್ತುತಪಡಿಸಲಾಗಿರುವ ಇತ್ತೀಚಿನ ಪೂರ್ವಾವಧಿ ಅವಧಿಗೆ ಪುನರ್ ತಿಳಿಸುವುದು.

ಉದ್ದೇಶಪೂರ್ವಕವಾಗಿ ಖಾಲಿ ಬಿಡಲಾಗಿದೆ.

ಹಣಕಾಸು ತ.ಪತ್ರಿಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

4 ಎ) ಸ್ವತ್ತು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು
(ಹಣಕಾಸು ವರ್ಷ 2019–2020)

(ರೂ. ಲಕ್ಷಗಳಲ್ಲಿ)

ವಿವರಗಳು	ಒಟ್ಟು ಮೌಲ್ಯ				ಸವಕಳಿ						ನಿವ್ವಳ ಮೌಲ್ಯ	
	ಏಪ್ರಿಲ್ 1 2019ರಲ್ಲಿದ್ದಂತೆ ಮೌಲ್ಯ (ಪುನರ್ ತಿಳಿಸಿರುವುದು)	ಸೇರ್ಪಡೆಗಳು	ವಿಲೇವಾರಿ/ ಹೊಂದಾಣಿಕೆ/ ಪುನರ್ ವರ್ಗೀಕರಣ	ಮಾರ್ಚ್31 2020ರಲ್ಲಿದ್ದಂತೆ ಮೌಲ್ಯ	ಕ್ರೋಡೀಕೃತ ಸವಕಳಿ ಏಪ್ರಿಲ್ 1, 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)	ವರ್ಗೀಕರಣದಿಂದ ಪುನರ್ ಹೊಂದಾಣಿಕೆ	ಏಪ್ರಿಲ್ 1,2019 ರಂತೆ ಸಂಚಿತ ಸವಕಳಿ ಪುನರ್‌ತಿಳಿಸಿರುವುದು	ಪ್ರಸಕ್ತ ಸಾಲಿಗೆ ಸವಕಳಿ	ವಿಲೇವಾರಿ ಹೊಂದಾಣಿಕೆ ಪುನರ್ ವರ್ಗೀಕರಣ	ಕ್ರೋಡೀಕೃತ ಸವಕಳಿ ಮಾರ್ಚ 31, 2020 ರಲ್ಲಿದ್ದಂತೆ	ಮಾರ್ಚ 31,2020 ರಂತೆ ನಿವ್ವಳ ಮೊತ್ತ	ಮಾರ್ಚ 31,2019 ರಂತೆ ನಿವ್ವಳ ಮೊತ್ತ (ಪುನರ್‌ತಿಳಿಸಿರುವುದು)
ಕಟ್ಟಡಗಳು ಮತ್ತು ವಸಾಹತುಗಳು	3,251.85	184.59	–	3,436.44	122.08	–	122.08	41.03	–	163.10	3,273.34	3,129.77
ಗಣಕ ಯಂತ್ರಗಳು	116.13	45.76	(2.92)	158.97	46.17	–	46.17	45.27	–	91.44	67.53	69.96
ಪೀಠೋಪಕರಣಗಳು ಮತ್ತು ಜೋಡಣೆಗಳು	723.35	37.76	–	761.11	114.42	–	114.42	77.59	–	192.00	569.11	608.93
ಭೂಮಿ –ಮುಕ್ತ ಹಿಡಿತ	34,050.77	14,278.92	–	48,329.69	–		–	–		–	48,329.69	34,050.77
ವಾಹನಗಳು	349.67	6.60	–	356.27	84.03	–	84.03	49.48	–	133.51	222.76	265.64
ಯಂತ್ರೋಪಕರಣಗಳು ಹಾಗೂ ಸಲಕರಣೆಗಳು	9.92	–	–	9.92	1.34		1.34	0.66		2.00	7.92	8.58
ಕಚೇರಿ ಸಲಕರಣೆಗಳು	479.47	12.21	2.92	494.60	152.47	–	152.47	98.46	–	250.93	243.67	327.00
ವಿದ್ಯುತ್ ಜೋಡಣೆಗಳು	111.99	–	–	111.99	12.09	–	12.09	11.21	–	23.30	88.69	99.90
ಸೇತುವೆ ಮತ್ತು ಅಣೆಕಟ್ಟು (ಸರ್ಕಾರಿ ಜಾಗದಲ್ಲಿ ನಿರ್ಮಿಸಲಾಗಿದೆ)	361.55	–	–	361.55	12.51	–	12.51	12.51	–	25.02	336.53	349.04
ನಾಲೆಗಳು ಮತ್ತು ಶಾಖೆಗಳು–ಟನ್ನೆಲ್	–	38,428.59	–	38,428.59	–	–	–	321.29	–	321.29	38,107.30	–
ಏತ ನೀರಾವರಿ ಪದ್ಧತಿ		–			–	–		–	–			
i) ಸಿವಿಲ್ ಕಾಮಗಾರಿಗಳು	–	80,988.29	–	80,988.29	–	–	–	477.96	–	477.96	80,510.32	–
ii) ವಿದ್ಯುತ್ ಯಾಂತ್ರೀಕೃತ	–	46,282.62	–	46,282.62	–	–	–	2,276.19	–	2,276.19	44,006.43	–
iii) ಪೈಪುಗಳು	–	5,248.91	–	5,248.91	–	–	–	103.26	–	103.26	5,145.65	–
iv) ರೈಸಿಂಗ್ ಮೈನ್	–	4,499.19	–	4,499.19	–	–	–	88.51	–	88.51	4,410.68	–
v) ಉಪ ಸ್ಟೇಷನ್ನುಗಳು	–	3,843.80	–	3,843.80	–	–	–	90.74	–	90.74	3,753.06	–
ಒಟ್ಟು	**39,454.68**	**1,93,857.24**	–	**2,33,311.92**	**545.09**	–	**545.09**	**3,694.15**	–	**4,239.24**	**2,29,072.67**	**38,909.59**

ಸ್ವತ್ತು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು
(ಹಣಕಾಸು ವರ್ಷ 2018–2019)

(ರೂ. ಲಕ್ಷಗಳಲ್ಲಿ)

ವಿವರಗಳು	ಒಟ್ಟು ಮೌಲ್ಯ				ಸವಕಳಿ						ನಿವ್ವಳ ಮೌಲ್ಯ	
	ಏಪ್ರಿಲ್ 1 2018ರಲ್ಲಿದ್ದಂತೆ ಮೌಲ್ಯ (ಪುನರ್‌ತಿಳಿಸಿರುವುದು)	ಸೇರ್ಪಡೆಗಳು	ವಿಲೇವಾರಿ/ ಹೊಂದಾಣಿಕೆ/ ಪುನರ್ ವರ್ಗೀಕರಣ	ಮಾರ್ಚ್31 2019ರಲ್ಲಿದ್ದಂತೆ ಮೌಲ್ಯ	ಕ್ರೋಡೀಕೃತ ಸವಕಳಿ ಏಪ್ರಿಲ್ 1, 2018ರಲ್ಲಿದ್ದಂತೆ ಪುನರ್‌ತಿಳಿಸಿರುವುದು	ವರ್ಗೀಕರಣದಿಂದ ಪುನರ್ ಹೊಂದಾಣಿಕೆ	ಏಪ್ರಿಲ್ 1,2018 ರಂತೆ ಸಂಚಿತ ಸವಕಳಿ ಪುನರ್‌ತಿಳಿಸಿರುವುದು	ಪ್ರಸಕ್ತ ಸಾಲಿಗೆ ಸವಕಳಿ	ವಿಲೇವಾರಿ ಹೊಂದಾಣಿಕೆ ಪುನರ್ ವರ್ಗೀಕರಣ	ಕ್ರೋಡೀಕೃತ ಸವಕಳಿ ಮಾರ್ಚ 31, 2019 ರಲ್ಲಿದ್ದಂತೆ	ಮಾರ್ಚ 31,2019 ರಂತೆ ನಿವ್ವಳ ಮೊತ್ತ	ಮಾರ್ಚ 31,2018 ರಂತೆ ನಿವ್ವಳ ಮೊತ್ತ (ಪುನರ್‌ತಿಳಿಸಿರುವುದು)
ಕಟ್ಟಡಗಳು ಮತ್ತು ವಸಾಹತುಗಳು	3,203.38	61.09	(12.62)	3,251.85	53.03	(0.02)	53.01	69.12	(0.05)	122.08	3,129.77	3,150.37
ಗಣಕ ಯಂತ್ರಗಳು	79.25	26.76	10.12	116.13	14.50	0.38	14.88	31.12	0.16	46.17	69.96	64.36
ಪೀಠೋಪಕರಣಗಳು ಮತ್ತು ಜೋಡಣೆಗಳು	691.53	43.18	(11.36)	723.35	40.00	–	40.00	74.60	(0.18)	114.42	608.93	651.54
ಭೂಮಿ –ಮುಕ್ತ ಹಿಡಿತ	20,331.21	13,719.56	–	34,050.77	–	–	–	–	–	–	34,050.77	20,331.21
ವಾಹನಗಳು	349.67	–	–	349.67	34.70	–	34.70	49.33	–	84.03	265.64	314.97
ಯಂತ್ರೋಪಕರಣಗಳು ಹಾಗೂ ಸಲಕರಣೆಗಳು	9.92	–	–	9.92	0.68	–	0.68	0.66	–	1.34	8.58	9.24
ಕಚೇರಿ ಸಲಕರಣೆಗಳು	366.86	62.28	50.33	479.47	62.82	0.96	63.79	88.02	0.66	152.47	327.00	303.07
ವಿದ್ಯುತ್ ಜೋಡಣೆಗಳು	121.18	27.27	(36.46)	111.99	1.99	–	1.99	10.69	(0.59)	12.09	99.90	119.19
ಸೇತುವೆ ಮತ್ತು ಅಣೆಕಟ್ಟು (ಸರ್ಕಾರಿ ಜಾಗದಲ್ಲಿ ನಿರ್ಮಿಸಲಾಗಿದೆ)	–	361.55	–	361.55	–	–	–	12.51	–	12.51	349.04	–
ಒಟ್ಟು	**25,152.99**	**14,301.69**	**–**	**39,454.68**	**207.71**	**1.33**	**209.04**	**336.04**	**0.00**	**545.09**	**8,909.59**	**24,943.95**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

4 ಬಿ ಆಸ್ತಿಗಳ ಬಳಕೆಯ ಹಕ್ಕು

ಕಂಪನಿಯು ಹೊಂದಿರುವಂತಹ ಆಸ್ತಿಗಳ ಬಳಕೆಯ ಹಕ್ಕಿನ ವಿವರಗಳು ಈ ಕೆಳಗಿನಂತಿರುತ್ತವೆ (ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದಂತೆ	31 ಮಾರ್ಚ್ 2019ರಲ್ಲಿದಂತೆ
ಈ ಹಿಂದಿನ ಸಂತುಲನ ಪಟ್ಟಿ ಅನುಸಾರ:	–	–
ಪ್ರಸಕ್ತ ಸಾಲಿನಲ್ಲಿ ಪರಿಗಣಿಸಿರುವುದು	**11.77**	–
ಪ್ರಸಕ್ತ ಸಾಲಿನಲ್ಲಿ ಕ್ರಮೇಣ ತಗ್ಗಿಸಲಾಗಿರುವ ಮೌಲ್ಯ (ಅಮಾರ್ಟಿಸೇಷನ್)	**0.60**	–
ಹೊಂದಲಾಗಿರುವ ನಿವ್ವಳ ಮೌಲ್ಯ	**11.17**	–

ಎ) ಈ ಕೆಳಗಿನವರುಗಳಿಗೆ ಸೇರಿದ ಭೂವಿಯಲ್ಲಿ ನಿರ್ಮಿಸಲಾದ ಕಟ್ಟಡಗಳು ಮತ್ತು ವಸಾಹತುಗಳಲ್ಲಿ ಒಳಗೊಂಡಿರುತ್ತದೆ.

ಅ. ಕಾರ್ಯನಿರ್ವಾಹಕ ಇಂಜಿನಿಯರ್, ಎತ್ತಿನಹೊಳೆ ಯೋಜನೆ, ವಿಭಾಗ, ಅರಸಿಕೆರೆಯಲ್ಲಿ ಸರ್ಕಾರದ ಭೂಮಿಯಲ್ಲಿ

ಆ. ಕಾರ್ಯನಿರ್ವಾಹಕ ಇಂಜಿನಿಯರ್, ಎತ್ತಿನಹೊಳೆ ಯೋಜನೆ, ವಿಭಾಗ, ತುಮಕೂರು. ಇತರೆ ಸಂಸ್ಥೆಗಳ ಭೂಮಿಯಲ್ಲಿ ಕಟ್ಟಡ ಮತ್ತು ಕಾಲೋನಿಗಳ ನಿರ್ಮಾಣ ಮಾಡಲಾಗಿರುತ್ತದೆ.

ಬಿ) ಪ್ರಸಕ್ತ ಸಾಲಿನಲ್ಲಿ ಕಂಪನಿಯು ಈ ಕೆಳಕಂಡಂತೆ ಒಟ್ಟು ಭೂಮಿಯನ್ನು ರೂ. 14278.92 ಲಕ್ಷಗಳು ಬಂಡವಾಳೀಕರಿಸಿರುವುದು (ಹಿಂದಿನ ವರ್ಷ ರೂ. 13719.56 ಲಕ್ಷಗಳು). (ರೂ. ಲಕ್ಷಗಳಲ್ಲಿ)

ವಿವರಗಳು	2019–20	2018–19
1) ವಿಶೇಷ ಭೂಸ್ವಾಧೀನ ಅಧಿಕಾರಿಯವರ ಕಛೇರಿಯ ನಿರ್ಮಾಣ ಅವಧಿಯ ವೆಚ್ಚಗಳು (ಸ್ಥಾಪನೆಯ ವೆಚ್ಚಗಳು)	**289.36**	178.03
2) ಸರ್ಕಾರಿ ಆದೇಶ ಸಂಖ್ಯೆ ಜಸಂಇ 95 ವಿಬ್ಯಾಇ 2016 ದಿನಾಂಕ 18–11–2016 ಮೂಲಕ ಮಾಡಲಾದ ಸಚಿವ ಸಂಪುಟದ ಅನುಮೋದನೆಯ ಪ್ರಕಾರ ಭೂಮಿಯನ್ನು ನೇರವಾಗಿ ಖರೀದಿಸಿರುವುದು	**4,540.62**	8,841.67
3) ವಿಶೇಷ ಭೂಸ್ವಾಧೀನ ಅಧಿಕಾರಿಯವರಿಂದ /ಸಹಾಯಕ ಆಯುಕ್ತರವರಿಂದ ಸ್ವೀಕರಿಸಲಾಗಿರುವ ಬಳಕೆ ಪ್ರಮಾಣಪತ್ರದ ಆಧಾರದ ಮೇರೆಗೆ ಭೂಸ್ವಾಧೀನ ಪ್ರಕ್ರಿಯೆಯ ಪ್ರಕಾರ ಸ್ವಾಧೀನಪಡಿಸಿಕೊಳ್ಳಲಾದಂತಹ ಭೂಮಿ	**9,527.61**	4,610.58
4) ಪರಿಹಾರಕ ಅರಣ್ಯೀಕರಣ ಶುಲ್ಕಗಳು	**(420.05)**	88.45
5) ಅಧಿಸೂಚನೆ ಮತ್ತು ಸಂಬಂಧಿತ ಶುಲ್ಕಗಳು	**341.38**	0.84
ಒಟ್ಟು	**14,278.92**	**13,719.56**

ಸಿ) ಬಂಡವಾಳೀಕರಿಸಲಾಗಿರುವ ಭೂಮಿಯ ಮೌಲ್ಯವು ವಿವಿಧ ಕಾರ್ಯವಿಧಾನಗಳು ಹಾಗೂ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ನೀಡಲಾಗುವ ಪರಿಹಾರ ತೀರ್ಪುಗಳು, ಒಪ್ಪಿಗೆ ತೀರ್ಪುಗಳು ಹಾಗೂ ಬಡ್ಡಿ, ಯಾವುದಾದರೂ ಇದ್ದಲ್ಲಿ, ಇತ್ಯಾದಿಗಳ ಕಾರಣಗಳಿಂದ ಉದ್ಭವಿಸುವ ಹೊಂದಾಣಿಕೆಗಳ ಪೂರ್ಣಗೊಳ್ಳುವ ಷರತ್ತಿಗೆ ಒಳಪಟ್ಟಿರುತ್ತವೆ.

ಡಿ) ಕಂಪನಿಯು, ಸಹಾಯಕ ಆಯುಕ್ತರವರ ಕಚೇರಿ, ತರೀಕೆರೆ, ಇದನ್ನು ಹೊರತುಪಡಿಸಿದಂತೆ ಪರಿಚ್ಛೇದ 19 (2)ರ ಅಡಿಯಲ್ಲಿನ ಭೂ ಹರಿಹಾರ ನೀಡಿಕೆ ಆದೇಶದ ಅನುಸಾರ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ 4,268 ಎಕರೆಗಳು 2 ಗುಂಟೆಗಳಷ್ಟು ಒಟ್ಟಾರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದು. ಸಹಾಯಕ ಆಯುಕ್ತರವರ ಕಚೇರಿ, ತರೀಕೆರೆ, ಇದನ್ನು ಹೊರತುಪಡಿಸಿದಂತೆ ಇದರ ಪೈಕಿ 618 ಎಕರೆಗಳು, 18.60 ಗುಂಟೆಗಳಷ್ಟು ಭೂಮಿಗೆ ಸಂಬಂಧಿಸಿದಂತೆ ಕಂಪನಿಯ ಪರವಾಗಿ ಹಕ್ಕಿನ (ಮ್ಯುಟೇಷನ್) ನಮೂದುಗಳನ್ನು ದಾಖಲೆಗಳಲ್ಲಿ ಮಾಡಲಾಗಿರುವುದು ಹಾಗೂ ಉಳಿಕೆ 3,649 ಎಕರೆಗಳು, 23.40 ಗುಂಟೆಗಳಷ್ಟು ಭೂಮಿಗೆ ಸಂಬಂಧಿಸಿದಂತೆ ಕಂಪನಿಯ ಪರವಾಗಿ ಹಕ್ಕಿನ ನಮೂದುಗಳನ್ನು ಇನ್ನೂ ಮಾಡಬೇಕಾಗಿದೆ.

ಇ) ಮುಖ್ಯ ಇಂಜಿನಿಯರ್‌ರವರ ಕಚೇರಿ, ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರ ಕಚೇರಿಗಳಲ್ಲಿ ಭರಿಸಲಾಗುವ ಸಿಬ್ಬಂದಿ ವೆಚ್ಚಗಳು ಯೋಜನೆಗಳ ಕಾರಣದಿಂದ ಸಂಭವಿಸಿದ್ದಲ್ಲಿ, ಅವುಗಳನ್ನು ಅವರುಗಳ ಆಡಳಿತ ವ್ಯಾಪ್ತಿಯಲ್ಲಿ ಬರುವ ವಿಭಾಗೀಯ ಕಚೇರಿಗಳಿಗೆ ಸೂಕ್ತವಾಗಿ ಹಂಚಿಕೆ ಮಾಡಲಾಗುವುದು.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಎಫ್) ಪ್ರಸಕ್ತ ಸಾಲಿನಲ್ಲಿ ಕಂಪನಿಯು ನಾಲೆಗಳು ಮತ್ತು ಶಾಖಾ ನಾಲೆಗಳ ಅಡಿಯಲ್ಲಿ ರೂ.3,84,28.58 ಲಕ್ಷ ಮೊತ್ತವನ್ನು ಹಾಗೂ ಏತ ನೀರಾವರಿ ಯೋಜನೆಯ ಅಡಿಯಲ್ಲಿ ರೂ.1,40,862.80ರಷ್ಟು ಲಕ್ಷಗಳ ಮೊತ್ತವನ್ನು ಬಂಡವಾಳೀಕರಿಸಿರುವುದು. ಯೋಜನೆಯ ಮೊದಲ ಹಂತದಲ್ಲಿ, ಎರಡು ಪ್ಯಾಕೇಜುಗಳ ಅಡಿಯಲ್ಲಿ ಎರಡು ಏತ ನೀರಾವರಿ ಕಾಮಗಾರಿಗಳನ್ನು ಹಾಗೂ ಒಂದು ಪ್ಯಾಕೇಜಿನ ಅಡಿಯಲ್ಲಿ ಸುರಂಗ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಯಿತು. ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗ ನಾಲೆಗೆ ನೀರನ್ನು ಎತ್ತುವ ವ್ಯವಸ್ಥೆಯನ್ನು ಪೂರ್ಣಗೊಳಿಸಲಾಯಿತು ಹಾಗೂ ಪ್ರಾಯೋಗಿಕವಾಗಿ ವಾಣಿ ವಿಲಾಸ ಸಾಗರ ಅಣೆಕಟ್ಟೆಗೆ ಅಕ್ಟೋಬರ್ 2019ರಲ್ಲಿ ನೀರನ್ನು ಹೊರ ಬಿಡಲಾಯಿತು. ವಾಣಿ ವಿಲಾಸ ಸಾಗರದಲ್ಲಿನ ನೀರಿನ ಕೊರತೆಯನ್ನು ತಗ್ಗಿಸುವ ಸಲುವಾಗಿ ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗ ನಾಲೆಗೆ ನೀರನ್ನು ಎತ್ತುವ ಸಲುವಾಗಿ ಭದ್ರಾ ಜಲಾಶಯದ ಸಮೀಪ ನೀರನ್ನು ಎತ್ತುವ ಎರಡು ಸ್ಟೇಷನ್ನುಗಳನ್ನು ಆಗಸ್ಟ್ 2019ರಲ್ಲಿ ಕಾರ್ಯೋದ್ಯುಕ್ತಗೊಳಿಸಲಾಯಿತು.

ಜಿ) ವ್ಯವಸ್ಥಾಪಕ ನಿರ್ದೇಶಕರ ಸಂಭಾವನೆ, ತಾಂತ್ರಿಕ ಸಿಬ್ಬಂದಿಗಳ ಸಂಭಾವನೆ ಹಾಗೂ ಕಾನೂನು ಸೇವೆಗಳ ವೆಚ್ಚ ಇವುಗಳಿಗೆ ಸಂಬಂಧಿಸಿದಂತೆ ನೋಂದಾಯಿತ ಕಚೇರಿ, ಬೆಂಗಳೂರು, ಇಲ್ಲಿ ಭರಿಸಲಾಗುವ ವೆಚ್ಚಗಳನ್ನು, ಅವು ಯೋಜನೆಗಳಿಗೆ ಸಂಬಂಧಿಸಿದ್ದಲ್ಲಿ, ಅವುಗಳನ್ನು ಅವರುಗಳ ಆಡಳಿತ ವ್ಯಾಪ್ತಿಯಲ್ಲಿ ಬರುವ ವಿಭಾಗೀಯ ಕಚೇರಿಗಳಿಗೆ ಸೂಕ್ತವಾಗಿ ಹಂಚಿಕೆ ಮಾಡಲಾಗುವುದು.

5ಎ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

(ರೂ. ಲಕ್ಷಗಳಲ್ಲಿ)

ವಿವರಗಳು	01.04.2019 ರಲ್ಲಿದ್ದಂತೆ (ಪುನರ್–ತಿಳಿಸಿರುವುದು)	ಪ್ರಸಕ್ತ ಸಾಲಿನ ಸೇರ್ಪಡೆ	ಗುತ್ತಿಗೆದಾರರುಗಳಿಗೆ ನೀಡಿರುವ ಮುಂಗಡದ ಮೇಲೆ ಬಡ್ಡಿ / ವಸೂಲಾತಿ ಮಾಡಲಾದ ಕಲ್ಲುಮಣ್ಣುಗಳ ಮೌಲ್ಯ/ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡದ ಅನುಸಾರ ಮುಂದೂಡಲ್ಪಟ್ಟ ವರಮಾನ	ಪ್ರಸಕ್ತ ಸಾಲಿನ ಹೊಂದಾಣಿಕೆಗಳು/ ಬಂಡವಾಳೀಕರಿಸಿರುವುದು	31.03.2020 ರಲ್ಲಿದ್ದಂತೆ
ಕಟ್ಟಡಗಳು ಮತ್ತು ವಸಾಹತುಗಳು	810.47	264.83	–	(182.05)	**893.25**
ಅಡ್ಡಗಟ್ಟೆಗಳು	4,303.91	–	–	(4,303.91)	–
ಏತ ನೀರಾವರಿ ಯೋಜನೆಗಳು	5,88,166.01	8,469.60	879.08	(1,40,256.44)	**4,57,258.25**
ನಾಲೆಗಳು ಮತ್ತು ಶಾಖೆಗಳು	2,22,836.96	2,82,519.29	(1,622.78)	(39,086.95)	**4,64,646.52**
ರಸ್ತೆಗಳು, ಸೇತುವೆಗಳು ಮತ್ತು ಕಲ್ವರ್ಟುಗಳು	0.06	–	–	0.06	–
ಕೆರೆಗಳು	1,737.24	124.45	–	519.04	**1,342.65**
ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳು (ಬಂಡವಾಳೀಕರಿಸುವುದು ಬಾಕಿಯಿರುವ)	797.82	158.57	–	–	**956.40**
ಒಟ್ಟು	**8,18,652.48**	**2,91,536.75**	**(743.70)**	**(1,84,348.33)**	**9,25,097.07**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಎ) ಪ್ರಗತಿಯಲ್ಲಿರುವಂತಹ ಬಂಡವಾಳ ಕಾಮಗಾರಿಗಳು ಭೂ ಸ್ವಾಧೀನ ಪ್ರಕ್ರಿಯೆಗಳು ಬಾಕಿಯಿರುವ ಸಂದರ್ಭದಲ್ಲಿ ಕಂಪನಿ, ಭೂ ಮಾಲೀಕರು ಮತ್ತು ಗುತ್ತಿಗೆದಾರರ ನಡುವೆ ತ್ರಿಪಕ್ಷೀಯ ಒಡಂಬಡಿಕೆಯ ಮೂಲಕ ಒಪ್ಪಿಗೆಯನ್ನು ಪಡೆದುಕೊಳ್ಳುವ ಮೂಲಕ ಮಾಡಲಾಗಿರುವ ನಿರ್ಮಾಣಗಳನ್ನು ಒಳಗೊಂಡಿರುತ್ತವೆ.

ಬಿ) ಭದ್ರಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಯೋಜನೆಗಳ ಭಾಗಗಳು/ಯೋಜನೆಗಳನ್ನು ಭಾರತ ಸರ್ಕಾರದಿಂದ ಕೃಷ್ಣಾ ಜಲ ವಿವಾದ ನ್ಯಾಯಮಂಡಳಿಯ ಅಧಿಸೂಚನೆಯ ನಿರೀಕ್ಷೆಯಲ್ಲಿ ಕರ್ನಾಟಕ ಸರ್ಕಾರದ ತಾತ್ವಿಕ ಅನುಮೋದನೆಯ ಆಧಾರದ ಮೇರೆಗೆ ಕೈಗೆತ್ತಿಕೊಳ್ಳಲಾಗಿರುವುದು.

ಸಿ) 2013–14ರಲ್ಲಿ ಯೋಜನೆಯು ಪ್ರಾರಂಭಗೊಂಡಾಗಿನಿಂದಲೂ, ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆಯು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ 13.93 ಹೆಕ್ಟೇರುಗಳಷ್ಟು ಅರಣ್ಯ ಪ್ರದೇಶವನ್ನು ಮಾರ್ಗಾಂತರಣಗೊಳಿಸಿರುವುದಕ್ಕೆ ನೀಡಲಾಗಿರುವಂತಹ ಶಾಸನಬದ್ಧ ಅನುಮತಿಯ ಪ್ರತಿಯಾಗಿ ರಾಷ್ಟ್ರೀಯ ಹಸಿರು ನ್ಯಾಯಿಕ ಪೀಠದ ಮುಂದೆ ಸಲ್ಲಿಸಲಾಗಿರುವಂತಹ ಒಂದು ಮನವಿಯೂ ಸೇರಿದಂತೆ 7 ಪ್ರಕರಣಗಳಲ್ಲಿ ಪರಿಸರೀಯ ಮತ್ತು ಅರಣ್ಯ ಅನುಮತಿಗೆ ಸಂಬಂಧಿಸಿದ ಸಮಸ್ಯೆಗಳ ಮೇಲೆ ವಿವಾದಗಳನ್ನು ಎದುರಿಸುತ್ತಿರುವುದು. ಕುಡಿಯುವ ನೀರು ಭಾರತದ ಸಂವಿಧಾನದ ಕಲಂ 21ರ ಅಡಿಯಲ್ಲಿ ಮೂಲಭೂತ ಹಕ್ಕು ಆಗಿರುವುದಲ್ಲದೆಯೇ ರಾಜ್ಯ ಸರ್ಕಾರವು ಅಂತಹ ಕುಡಿಯುವ ನೀರನ್ನು ಒದಗಿಸುವಲ್ಲಿ ಬದ್ಧತೆಯನ್ನು ಹೊಂದಿರುತ್ತದೆ ಎಂಬುದಾಗಿ ವಾದಿಸಿದ್ದಲ್ಲದೆಯೇ ಕುಡಿಯುವ ನೀರಿನ ಲಭ್ಯತೆ, ಪರಿಸರದ ಮೇಲಿನ ಪ್ರಭಾವ ಹಾಗೂ ವೈಜ್ಞಾನಿಕವಾಗಿ ಅಧ್ಯಯನಗಳನ್ನು ನಡೆಸಿದ ನಂತರ ಪರಿಹಾರಕ ಕ್ರಮಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ತೆಗೆದುಕೊಳ್ಳಲಾಗಿರುವ ಕ್ರಮಗಳ ಬಗ್ಗೆ ಸೂಕ್ತ/ಸಂಬಂಧಿತ ದಾಖಲೆಗಳ ಸಾಕ್ಷಾಧಾರಗಳೊಂದಿಗೆ ಪರಿಸರದ ಸಂರಕ್ಷಣೆಗಾಗಿ ನ್ಯಾಯಿಕ ಪೀಠದ ಮುಂದೆ ತೆಗೆದುಕೊಳ್ಳಲಾಗಿರುವಂತಹ ಕ್ರಮಗಳ ಬಗ್ಗೆ ನಿಗಮವು ರಾಷ್ಟ್ರೀಯ ಹಸಿರು ನಿಗಮವು ತನ್ನ ಸಮರ್ಥ ವಾದವನ್ನು ಮಂಡಿಸಿತು. ಎಲ್ಲಾ 7 ಪ್ರಕರಣಗಳನ್ನು ನಿಗಮದ ಪರವಾಗಿ ವಿಲೇವಾರಿ ಮಾಡಲಾಯಿತು. ರಾಷ್ಟ್ರೀಯ ಹಸಿರು ಪೀಠವು "ಅರ್ಜಿದಾರರಾಗಲೀ ಅಥವಾ ಮೂಲ ಅರ್ಜಿದಾರರಾಗಲೀ ಯೋಜನೆಯ ಕಾರ್ಯಗತಗೊಳಿಸುವಿಕೆಯ ಪ್ರತಿಯಾಗಿ ಹಾಗೂ ಈ ಯೋಜನೆಗಾಗಿ ಸಕ್ಷಮ ಪ್ರಾಧಿಕಾರಗಳು ನೀಡಿರುವ ಅನುಮೋದನಾ ಆದೇಶಗಳನ್ನು ತಳ್ಳಿಹಾಕುವ ಸಲುವಾಗಿ ಯಾವುದೇ ಬಲವಾದ ಅಂಶಗಳನ್ನೂ ಮಂಡಿಸಿರುವುದಿಲ್ಲ ಹಾಗೂ ಈ ಎಂಬುದಾಗಿ ಸ್ಪಷ್ಟಪಡಿಸಿರುವಂತಹ ಹಾಗೂ ಮನವಿ ಸಂಖ್ಯೆ 54/2016 ಹಾಗೂ ಮೂಲ ಮನವಿ ಸಂಖ್ಯೆ 392/2016ರಲ್ಲಿ 24.05.2019ರಂದು ನೀಡಿರುವಂತಹ ಸವಿವರ ತೀರ್ಪಿನಲ್ಲಿ ಎರಡು ಪ್ರಕರಣಗಳನ್ನು ವಿಲೇವಾರಿ ಮಾಡಿರುವುದು. ಆದ್ದರಿಂದ, ಎರಡೂ ಮನವಿಗಳು ಹಾಗೂ ಅಲ್ಲದೆಯೇ ಮೂಲ ಮನವಿಯು ಯಾವುದೇ ಮೌಲ್ಯವನ್ನೂ ಹೊಂದಿರುವುದಿಲ್ಲ ಹಾಗೂ ಅವುಗಳನ್ನು ತಳ್ಳಿಹಾಕಲು ಭಾಧ್ಯವಾಗಿರುತ್ತವೆ ಎಂಬುದಾಗಿ ತಿಳಿಸಿರುವುದು. ಈ ತೀರ್ಪಿನ ವಿರುದ್ಧ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದ ವಿಶೇಷ ರಜೆ ಮನವಿ ಅರ್ಜಿಯನ್ನು 6.9.2019ರಂದು ತಳ್ಳಿಹಾಕಲಾಯಿತು.

ಡಿ) ಯೋಜನೆಗಳ ನಿರ್ಮಾಣಕ್ಕಾಗಿ ಪಡೆದ ಸಾಲಗಳ ಮೇಲೆ ಬಡ್ಡಿ ಪಾವತಿಯನ್ನು ಭರಿಸುವ ಸಲುವಾಗಿ ಕಂಪನಿಯು ಕರ್ನಾಟಕ ಸರ್ಕಾರದಿಂದ ಅನುದಾನಗಳನ್ನು ಸ್ವೀಕರಿಸಿರುವುದು. ಬಡ್ಡಿ ಪಾವತಿಯ ಕಡೆಗಿನ ವೆಚ್ಚವು "ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ –23 – ಸಾಲಗಳನ್ನು ಪಡೆಯುವುದರ ಮೇಲಿನ ವೆಚ್ಚಗಳು", ಇದರ ಅನುಸಾರ ಬಂಡವಾಳೀಕರಿಸಲು ಅರ್ಹತೆಯನ್ನು ಹೊಂದಿರುತ್ತದೆ. ಸಂಸ್ಥೆಗಳು ಸರ್ಕಾರಿ ಅನುದಾನಗಳನ್ನು ಈ ಕೆಳಗಿನವುಗಳ ಅಡಿಯಲ್ಲಿ ಲೆಕ್ಕವನ್ನಿಡುವ ಆಯ್ಕೆಯನ್ನು ನೀಡುವ ಮೂಲಕ ಭಾರತ ಸರ್ಕಾರವು, ಸರ್ಕಾರ ಅನುದಾನಗಳಿಗೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ–20ಕ್ಕೆ ತನ್ನ 20.09.2018 ದಿನಾಂಕದ ಅಧಿಸೂಚನೆ ತಿದ್ದುಪಡಿಯನ್ನು ಮಾಡಿತು.

ಎ) ಮುಂದೂಡಲ್ಪಟ್ಟಿರುವ ಆದಾಯ/ ವರಮಾನ ಹಾಗೂ ಆಸ್ತಿಗಳನ್ನು ಒಟ್ಟು ಮೌಲ್ಯದಲ್ಲಿ ಲೆಕ್ಕವನ್ನಿಡುವುದು ಅಥವಾ

ಬಿ) ಸರ್ಕಾರಿ ಅನುದಾನಗಳನ್ನು ಆಸ್ತಿಯ ಖರೀದಿಯ ಮೇಲೆ/ ಸ್ವಾಧೀನಪಡಿಸಿಕೊಳ್ಳುವುದರ ಮೇಲೆ ಭರಿಸಲಾದ ವೆಚ್ಚಗಳನ್ನು ಕಳೆಯುವುದರ ಮೂಲಕ ಲೆಕ್ಕವನ್ನಿಡುವುದು.

ಕಂಪನಿಯು ವೆಚ್ಚಗಳನ್ನು ಕಳೆಯುವ ಮೂಲಕ ಸರ್ಕಾರಿ ಅನುದಾನಗಳನ್ನು ಲೆಕ್ಕವನ್ನಿಡುವ ಪದ್ಧತಿಯನ್ನು ಆಯ್ಕೆ ಮಾಡಿಕೊಂಡಿರುವುದು 2018–19 ಹಣಕಾಸು ಸಾಲಿಗೆ (ವೆಚ್ಚವನ್ನು ಭರಿಸಲಾದ ಸಾಲು) ರೂ.23.92 ಲಕ್ಷ ಮೊತ್ತದಷ್ಟು ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ನಿವ್ವಳ ವೆಚ್ಚ (ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚದಿಂದ ಬಡ್ಡಿ ಮತ್ತು ಖಾತರಿ ಕಮಿಷನ್ನಿಗಾಗಿ ಸರ್ಕಾರಿ ಅನುದಾನಗಳನ್ನು ಕಳೆದನಂತರ) ಹಾಗೂ 2019–20 ಹಣಕಾಸು ಸಾಲಿಗೆ ರೂ.6.11 ಲಕ್ಷ ಮೊತ್ತದಷ್ಟು ವೆಚ್ಚಗಳನ್ನು ಪ್ರಸಕ್ತ ಸಾಲಿನಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಗೆ ಹಂಚಿಕೆ ಮಾಡಲಾಯಿತು.

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ
ಅವಧಿ ಸಾಲಗಳ ಮೇಲಿನ ಬಡ್ಡಿ	**15,671.55**	8,237.51
ಖಾತರಿ ಕಮಿಷನ್ನು	**1,831.17**	1,051.43
ದರ ನಿಗದಿ ಹಾಗೂ ನಿಗಾವಣೆ ಶುಲ್ಕ, ಸಾಲ ಪತ್ರಗಳ ತಯಾರಿಕೆ ವೆಚ್ಚಗಳು ಹಾಗೂ ಮುದ್ರಾಂಕ ಸುಂಕ	**6.11**	23.92
ಅವಧಿ ಸಾಲಗಳ ಕಡೆಗೆ ಅಡಮಾನ ಶುಲ್ಕಗಳು	**1,263.84**	–
ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ಒಟ್ಟಾರೆ ವೆಚ್ಚ (ಎ)	**18,772.67**	**9,312.86**
ಬಡ್ಡಿ ಪಾವತಿಗಾಗಿ ಸ್ವೀಕರಿಸಲಾದ ಅನುದಾನ	**15,671.55**	8,237.51
ಖಾತರಿ ಕಮಿಷನ್ನಿಗಾಗಿ ಸ್ವೀಕರಿಸಲಾದ ಅನುದಾನ	**1,831.17**	1,051.43
ಅಡಮಾನ ಶುಲ್ಕಗಳಿಗಾಗಿ ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾದ ಅನುದಾನಗಳು	**1,263.84**	–
ಸ್ವೀಕರಿಸಲಾದ ಒಟ್ಟಾರೆ ಅನುದಾನಗಳು (ಬಿ)	**18,766.55**	**9,288.94**
ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಗೆ ಹಂಚಿಕೆ ಮಾಡಲಾದ ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ನಿವ್ವಳ ವೆಚ್ಚ	**6.11**	23.92

6 ಸಾಲಗಳು ಮತ್ತು ಮುಂಗಡಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್ ತಿಳಿಸಿರುವುದು)
ಚಾಲ್ತಿಯೇತರ		
(ಎ) ಬಂಡವಾಳ ಮುಂಗಡಗಳು		
i) ಗುತ್ತಿಗೆದಾರರುಗಳಿಗೆ ಸಜ್ಜುಗೊಳ್ಳುವುದಕ್ಕಾಗಿ ನೀಡಲಾಗಿರುವ ಮುಂಗಡಗಳು – ಭದ್ರತೆಯಿಂದ ಕೂಡಿದ – ವಸೂಲಾತಿ ಮಾಡಲು ಉತ್ತಮ ಸ್ಥಿತಿಯಲ್ಲಿದೆ ಎಂಬುದಾಗಿ ಪರಿಗಣಿಸಲಾಗಿರುವ	**601.43**	16,846.44
ಒಟ್ಟು	**601.43**	16,846.44
ಚಾಲ್ತಿ		
ಭದ್ರತೆಯಿಂದ ಕೂಡಿರದ – ವಸೂಲಾತಿ ಮಾಡಲು ಉತ್ತಮ ಸ್ಥಿತಿಯಲ್ಲಿದೆ ಎಂಬುದಾಗಿ ಪರಿಗಣಿಸಲಾಗಿರುವ		
ಎ) ಸಿಬ್ಬಂದಿಗೆ ಮುಂಗಡಗಳು	**11.56**	10.65
ಒಟ್ಟು	**11.56**	10.65

ಎ) ಸಿಬ್ಬಂದಿಗೆ ಮುಂಗಡಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ :

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ
ಕಂಪನಿಯ ನಿರ್ದೇಶಕರುಗಳು ಅಥವಾ ಇತರೆ ಅಧಿಕಾರಿಗಳು	–	–
ಕಂಪನಿಯ ಯಾವುದಾದರೂ ನಿರ್ದೇಶಕರು ಪಾಲುದಾರರಾಗಿರುವ ಖಾಸಗಿ ಸಂಸ್ಥೆಯಿಂದ ಬಾಕಿಯಿರುವ ಮೊತ್ತ	–	–
ಕಂಪನಿಯ ಯಾವುದಾದರೂ ನಿರ್ದೇಶಕರು ಸದಸ್ಯರಾಗಿರುವ ಖಾಸಗಿ ಸಂಸ್ಥೆಯಿಂದ ಬಾಕಿಯಿರುವ ಮೊತ್ತ	–	–

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

7. ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು

(ರೂ. ಲಕ್ಷಗಳಲ್ಲಿ)

ವಿವರಗಳು	ಮಾರ್ಚ್ 2020 ರಲ್ಲಿದ್ದಂತೆ	ಮಾರ್ಚ್ 2019 ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಎ. ಮುಂದೂಡಲ್ಪಟ್ಟಿರುವ ತೆರಿಗೆ ಜವಾಬ್ದಾರಿ (ಸ್ವತ್ತು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು)	**8,644.22**	–
ಒಟ್ಟು (ಎ)	**8,644.22**	–
ಬಿ. ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು – ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ :		
ಒಳಸೇರ್ಪಡೆಗೊಂಡಿರದ ಸವಕಳಿ/ವ್ಯವಹಾರ ನಷ್ಟ	**8,644.22**	–
ಪೂರ್ವಭಾವಿ ವೆಚ್ಚಗಳು	–	–
ಗ್ರಾಚುಯಿಟಿಗಾಗಿ ಅನುವು	–	–
ಪರಿಚ್ಛೇದ 43ಬಿ– ತಿರಸ್ಕರಣೆಗಳು	–	–
ಪರಿಚ್ಛೇದ 40– ತಿರಸ್ಕರಣೆಗಳು	–	–
ಒಟ್ಟು (ಬಿ)	**8,644.22**	
ಸಿ. ನಿವ್ವಳ ಮುಂದೂಡಲ್ಪಟ್ಟಿರುವ ತೆರಿಗೆ ಜವಾಬ್ದಾರಿ/ (ಆಸ್ತಿ) (ಎ–ಬಿ)	–	–

7 ಎ. ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019 ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಆದಾಯ ತೆರಿಗೆ ಕಾಯ್ದೆ 1961 ಅಡಿಯಲ್ಲಿ ಒಳಸೇರ್ಪಡೆಗೊಳಿಸಿದ ಸವಕಳಿಯಿಂದ, ಅದು ಬಳಕೆಯಲ್ಲಿ ಸಂಭವನೀಯ ಮಟ್ಟಿಗೆ	**8,644.22**	–
ಸಂತುಲನ ಪಟ್ಟಿಗೆ ತೆಗೆದುಕೊಂಡು ಹೋಗುವ ಮೊತ್ತ	**8,644.22**	–

ಮುಂದೂಡಲ್ಪಟಿರುವ ಜವಾಬ್ದಾರಿ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್2019 ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಸ್ವತ್ತು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು	**8,644.22**	–
ಸಂತುಲನ ಪಟ್ಟಿಗೆ ತೆಗೆದುಕೊಂಡು ಹೋಗುವ ಮೊತ್ತ	**8,644.22**	–

ಮುಂದೂಡಲ್ಪಟ್ಟ ತೆರಿಗೆ ಉದ್ದೇಶಗಳಿಗಾಗಿ 31 ಮಾರ್ಚ್, 2020 ರಲ್ಲಿದ್ದಂತೆ ಗಮನಾರ್ಹವಾಗಿ ಜಾರಿಗೊಳಿಸಲಾಗಿದ್ದ ತೆರಿಗೆ ದರವು ಶೇಕಡಾ 22.88% ಆಗಿದ್ದಿತು ಹಾಗೂ 31 ಮಾರ್ಚ್, 2019 ರಲ್ಲಿ ಶೇಕಡಾ 26% ಆಗಿದ್ದಿತು.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಎ) ಲಾಭ ಅಥವಾ ನಷ್ಟದ ಅಡಿಯಲ್ಲಿ ಪರಿಗಣಿಸಲಾದ ಮೊತ್ತ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಚಾಲ್ತಿ ತೆರಿಗೆ/ಕನಿಷ್ಠ ಬದಲಿ ತೆರಿಗೆ	–	–
ಮುಂದೂಡಲ್ಪಟ್ಟಿರುವ ತೆರಿಗೆ (ಆದಾಯ)/ವೆಚ್ಚ :	–	
ತಾತ್ಕಾಲಿಕ ವ್ಯತ್ಯಾಸಗಳ ಉದ್ಭವ ಹಾಗೂ ಅವುಗಳನ್ನು ಹಿಂದುಮುಂದು ಮಾಡಿರುವುದು	–	139.04
ಒಟ್ಟಾರೆ ಮುಂದೂಡಲ್ಪಟ್ಟ ತೆರಿಗೆ (ಆದಾಯ)/ವೆಚ್ಚ	–	139.04
ನಿವ್ವಳ ತೆರಿಗೆ ವೆಚ್ಚ	–	139.04

ಆದಾಯ ತೆರಿಗೆ ಅಧಿನಿಯಮ, 1961ರ ಅಡಿಯಲ್ಲಿ ತೆರಿಗೆಯನ್ನು ವಿಧಿಸಬಹುದಾದ ಆದಾಯದ ಅನುಪಸ್ಥಿತಿಯಲ್ಲಿ ತೆರಿಗೆ ಪಾವತಿಗಾಗಿ ಅನುವನ್ನು ಮಾಡಿರುವುದಿಲ್ಲ.

ಬಿ) ಒಸಿಐ ಅಡಿಯಲ್ಲಿ ಪರಿಗಣಿಸಲಾದ ಮೊತ್ತ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
	ತೆರಿಗೆ (ವೆಚ್ಚ) ಲಾಭ	ತೆರಿಗೆ (ವೆಚ್ಚ) ಲಾಭ
ಉದ್ಯೋಗ–ಪೂರ್ವ ವಿವರಿಸಲ್ಪಟ್ಟಿರುವ ಪ್ರಯೋಜನಗಳ ಯೋಜನೆಗಳ ಅಡಿಯಲ್ಲಿ ಪುನರ್–ನಿರ್ಧಾರಣೆ ಮಾಡಲಾಗಿರುವ (ನಷ್ಟಗಳು)/ಗಳಿಕೆಗಳು	–	–
ಒಟ್ಟು	–	–

ಸಿ) ಜಾರಿಯಲ್ಲಿರುವ ಆದಾಯ ತೆರಿಗೆ ದರಗಳ ಸಮನ್ವಯಗೊಳಿಸುವಿಕೆ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಮುಂದುವರೆದುಕೊಂಡು ಹೋಗುತ್ತಿರುವ ಕಾರ್ಯಾಚರಣೆಗಳಿಂದ ಲಾಭ/ (ನಷ್ಟ)	**(19,477.50)**	(3,237.47)
ಕಂಪನಿಯ ದೇಶೀಯ ತೆರಿಗೆ ದರವನ್ನು (ಆದಾಯ ತೆರಿಗೆ) ಬಳಸಿಕೊಂಡಂತೆ ತೆರಿಗೆ	–	–
ಪ್ರಸಕ್ತ ಸಾಲಿಗೆ ಒಟ್ಟಾರೆ ಆದಾಯ ತೆರಿಗೆ ವೆಚ್ಚಗಳು	–	–

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಡಿ) ಮುಂದೂಡಲ್ಪಟ್ಟ ತೆರಿಗೆ ಶಿಲ್ಕುಗಳಲ್ಲಿನ ಚಲನೆ

(ರೂ. ಲಕ್ಷಗಳಲ್ಲಿ)

ಮುಂದೂಡಲ್ಪಟ್ಟ ತೆರಿಗೆ ಆಸ್ತಿ/ (ಜವಾಬ್ದಾರಿ)ಯ ವಿವರಗಳು	01.04.2018 ರಲ್ಲಿದ್ದಂತೆ	ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಪರಿಗಣಿಸಲಾಗಿರುವುದು	ಇತರೆ ಸಮಗ್ರ ವರಮಾನದಲ್ಲಿ	31 ಮಾರ್ಚ್ 2019ರಲ್ಲಿದ್ದಂತೆ
ಸ್ವತ್ತು ಸ್ಥಾವರಗಳು ಮತ್ತು ಯಂತ್ರೋಪಕರಣಗಳು	(25.32)	(6.73)	–	(32.05)
ಹೊಂದಾಣಿಕೆ ಮಾಡುವ ಮುಂಚಿನ ತೆರಿಗೆ ಆಸ್ತಿಗಳು/(ಹೊಣೆಗಳು)	139.04	(139.04)	–	–
ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳ/ (ಜವಾಬ್ದಾರಿಗಳ) ಸರಿದೂಗಿಸುವಿಕೆ	25.32	6.73	–	32.05
ನಿವ್ವಳ ಮುಂದೂಡಲ್ಪಟ್ಟ ತೆರಿಗೆ ಅಸ್ತಿಗಳು/ (ಹೊಣೆಗಳು)	–	–	–	–
ಒಟ್ಟು	**139.04**	**(139.04)**	–	–

(ರೂ. ಲಕ್ಷಗಳಲ್ಲಿ)

ಮುಂದೂಡಲ್ಪಟ್ಟ ತೆರಿಗೆ ಆಸ್ತಿ/ (ಜವಾಬ್ದಾರಿ)ಯ ವಿವರಗಳು	01.04.2019 ರಲ್ಲಿದ್ದಂತೆ	ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಪರಿಗಣಿಸಲಾಗಿರುವುದು	ಇತರೆ ಸಮಗ್ರ ವರಮಾನದಲ್ಲಿ	31 ಮಾರ್ಚ್ 2020ರಲ್ಲಿದ್ದಂತೆ
ಸ್ವತ್ತು, ಸ್ಥಾವರಗಳು ಮತ್ತು ಯಂತ್ರೋಪಕರಣ	(32.05)	8,676.27	–	**8,644.22**
ಹೊಂದಾಣಿಕೆ ಮಾಡುವ ಮುಂಚಿನ ತೆರಿಗೆ ಆಸ್ತಿಗಳು/ (ಹೊಣೆಗಳು)	–	–	–	–
ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳ (ಜವಾಬ್ದಾರಿಗಳ) ಸರಿದೂಗಿಸುವಿಕೆ	32.05	(8,676.27)	–	**(8,644.22)**
ನಿವ್ವಳ ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು/(ಹೊಣೆಗಳು)	–	–	–	–
ಒಟ್ಟು	–	–	–	–

ಇ) ಪರಿಗಣಿಸದಿರುವ ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು

ಆದಾಯ ತೆರಿಗೆ ಅಧಿನಿಯಮ, 1961ರ ಅಡಿಯಲ್ಲಿ ಕಡಿದುಕೊಳ್ಳಬಹುದಾದ ತಾತ್ಕಾಲಿಕ ವ್ಯತ್ಯಾಸಗಳನ್ನು ಬಳಸಿಕೊಳ್ಳುವ ಸಲುವಾಗಿ ನಿರ್ದಿಷ್ಟಪಡಿಸಲಾಗಿರುವ ಕಾಲಮಿತಿಯೊಳಗೆ ಭವಿಷದಲ್ಲಿನ ತೆರಿಗೆಯನ್ನು ವಿಧಿಸಬಹುದಾದ ಲಾಭಗಳ ಸಂಭಾವ್ಯತೆಯು ಇಲ್ಲದಿರುವುದರಿಂದ ಭವಿಷ್ಯದಲ್ಲಿನ ತೆರಿಗೆ ಲಾಭಗಳ ಸಂಭಾವ್ಯತೆಯ ಅನುಪಸ್ಥಿತಿಯ ಕಾರಣ, ಈ ಕೆಳಗಿನ ಬಾಬ್ತುಗಳಿಗೆ ಸಂಬಂಧಿಸಿದಂತೆ ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಯನ್ನು ಪರಿಗಣಿಸಿರುವುದಿಲ್ಲ. ಅಂತಹ ಬಾಬ್ತುಗಳ ವಿಭಜನೆಯು ಈ ಕೆಳಗಿನಂತಿರುತ್ತವೆ :

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019 ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
(i) ಗ್ರಾಚುಯಿಟಿಗಾಗಿ ಅನುವು	**0.38**	0.24
(ii) ಮುಂದಿನ ಅವಧಿಗೆ ತೆಗೆದುಕೊಂಡು ಹೋಗಲಾಗಿರುವ ವ್ಯವಹಾರ ನಷ್ಟಗಳು	**4,779.70**	1,463.88
(iii) ಪೂರ್ವಭಾವಿ ವೆಚ್ಚಗಳು	–	–
(iv) ಪರಿಚ್ಛೇದ 43ಬಿ ಅಡಿಯಲ್ಲಿ ತಿರಸ್ಕರಿಸಲ್ಪಟ್ಟಿರುವವುಗಳು	**135.41**	50.80
(v) ಮುಂದಿನ ಅವಧಿಗೆ ತೆಗೆದುಕೊಂಡು ಹೋಗಲಾಗಿರುವ ಸವಕಳಿ	**9,404.00**	134.19
(iv) ಪರಿಚ್ಛೇದ 40ಎ ಅಡಿಯಲ್ಲಿ ತಿರಸ್ಕರಿಸಲ್ಪಟ್ಟಿರುವವುಗಳು	**14.41**	2.65
ಒಟ್ಟು	**14,333.90**	**1,651.76**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

(ರೂ. ಲಕ್ಷಗಳಲ್ಲಿ)

8. ನಗದು ಮತ್ತು ನಗದಿಗೆ ಸಮಾನವಾದವುಗಳು

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಬ್ಯಾಂಕುಗಳಲ್ಲಿರುವ ಶಿಲ್ಕುಗಳು		
ಉಳಿತಾಯ ಖಾತೆಗಳಲ್ಲಿ		
ಎ) ವಿಶೇಷ ಭೂಸ್ವಾಧೀನ ಅಧಿಕಾರಿಗಳೊಂದಿಗೆ ಮತ್ತು ಸಹಾಯಕ ಆಯುಕ್ತರು (SLAO/AC)*	**5,299.84**	12,389.88
ಬಿ) ಇತರವುಗಳು	**5,140.48**	7,554.50
ಚಾಲ್ತಿ ಖಾತೆಗಳಲ್ಲಿ	**1,560.01**	53.41
ಠೇವಣಿ ಖಾತೆಗಳಲ್ಲಿ		
ಎ)3 ತಿಂಗಳುಗಳವರೆಗಿನ ಅವಧಿಯಲ್ಲಿ ಮುಕ್ತಾಯಗೊಳ್ಳುವವುಗಳು*	**42,789.60**	39,591.74
ಬಿ) 3ರಿಂದ 12 ತಿಂಗಳುಗಳವರೆಗಿನ ಅವಧಿಯಲ್ಲಿ ಮುಕ್ತಾಯಗೊಳ್ಳುವವುಗಳು	–	–
ಜಿಲ್ಲಾ ಖಜಾನೆ ಖಾತೆಗಳಲ್ಲಿ	**0.50**	0.50
ಒಟ್ಟು	**54,790.43**	**59,590.03**

* ಉಳಿತಾಯ ಖಾತೆಗಳಲ್ಲಿನ ಶಿಲ್ಕುಗಳು ಸಂಬಂಧಿತ ವಿಶೇಷ ಭೂಸ್ವಾಧೀನ ಅಧಿಕಾರಿಗಳು ಮತ್ತು ಸಹಾಯಕ ಆಯುಕ್ತರು ಭೂಸ್ವಾಧೀನಗಳು/ಪರಿಹಾರಗಳ ಪಾವತಿ, ಇತ್ಯಾದಿಗಳಿಗಾಗಿ ಬಿಡುಗಡೆಗೊಳಿಸಲಾಗಿರುವ ಪಾವತಿಗಳ ಕಡೆಗೆ ಪ್ರತ್ಯೇಕವಾಗಿ ಕಾರ್ಯಾಚರಣೆಗೊಳಿಸುವಂತಹ 6 ಬ್ಯಾಂಕು ಖಾತೆಗಳನ್ನು ಪ್ರತಿನಿಧಿಸುತ್ತವೆ. ಭೂಸ್ವಾಧೀನ ಪರಿಹಾರ ನೀಡಿಕೆ ಆದೇಶಗಳ ಆಧಾರದ ಮೇರೆಗೆ ಸಂಬಂಧಿತ ವಿಶೇಷ ಭೂಸ್ವಾಧೀನ ಅಧಿಕಾರಿಗಳು/ಸಹಾಯಕ ಆಯುಕ್ತರು ಮಾಡುವ ಕೋರಿಕೆಗಳ ಮೇರೆಗೆ ಕಂಪನಿಯು ಮೊತ್ತಗಳನ್ನು ಈ ಬ್ಯಾಂಕು ಖಾತೆಗಳಿಗೆ ವರ್ಗಾಯಿಸುತ್ತದೆ. ಈ ಮೊತ್ತಗಳನ್ನುವಿಶೇಷ ಭೂಸ್ವಾಧೀನ ಅಧಿಕಾರಿಗಳು/ಸಹಾಯಕ ಆಯುಕ್ತರು ಕ್ರಮೇಣ ಉಪಯೋಗಿಸುವುದರಿಂದ, ಅಲ್ಲಿಯವರೆಗೆ ಹೆಚ್ಚುವರಿಯಾಗಿರುವಂತಹ ಮೊತಗಳನ್ನು ಫ್ಲೆಕ್ಸಿ ಠೇವಣಿ ಯೋಜನೆಯಲ್ಲಿ ಇಡಲಾಗಿರುವುದು ಆದ್ದರಿಂದ 3 ತಿಂಗಳುಗಳ ಒಳಗೆ ಅವಧಿ ಮುಕ್ತಾಯಗೊಳ್ಳುವಂತಹ ನಿಶ್ಚಿತ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳು ವಿಶೇಷ ಭೂಸ್ವಾಧೀನ ಅಧಿಕಾರಿಗಳು/ಸಹಾಯಕ ಆಯುಕ್ತರ ಬ್ಯಾಂಕು ಖಾತೆಗಳ ಠೇವಣಿಗಳ ಮೊತ್ತ ರೂ.24,716.29 ಲಕ್ಷಗಳು ಒಳಗೊಂಡಿರುತ್ತವೆ.

9. ವ್ಯಾಪಾರ ಸ್ವೀಕೃತಿಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಆರು ತಿಂಗಳುಗಳಿಗೂ ಹೆಚ್ಚು ಅವಧಿಗೆ ಬಾಕಿಯಿರುವಂತಹ	**5.67**	3.55
ಇತರೆ ಸಾಲಗಳು		
ಭದ್ರತೆಯಿಂದ ಕೂಡಿರದ, ಅದರೆ ವಸೂಲಾತಿಯಾಗುವಲ್ಲಿ		
ಇತರೆ ಸಾಲಗಳು (ಉತ್ತಮ ಸ್ಥಿತಿಯಲ್ಲಿದೆ ಎಂಬುದಾಗಿ ಪರಿಗಣಿಸಲಾಗಿರುವ)	**7.59**	2.12
ಒಟ್ಟು	**13.26**	**5.67**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಭಾರತೀಯ ಲೆಕ್ಕವನ್ನಿಡುವಿಕೆಯ ಮಾನದಂಡ 109ರ ಅನುಸರಣೆಯಂತೆ ಸಾಲದ ವಸೂಲಾತಿಯ ಸಂಭಾವ್ಯತೆಯ ವರ್ಗೀಕರಣ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಉತ್ತಮ ಸ್ಥಿತಿಯಲ್ಲಿರುವುದಾಗಿ ಪರಿಗಣಿಸಲಾಗಿರುವ – ಭದ್ರತೆಯಿಂದ ಕೂಡಿರುವ ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು	–	–
ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು ಉತ್ತಮ ಸ್ಥಿತಿಯಲ್ಲಿರುವುದಾಗಿ ಪರಿಗಣಿಸಲಾಗಿರುವ – ಭದ್ರತೆಯಿಂದ ಕೂಡಿರದ	**13.26**	5.67
ಜಮೆಯ ಸಂಭಾವ್ಯ ಅಪಾಯದಲ್ಲಿ ಗಮನಾರ್ಹ ಹೆಚ್ಚಳವನ್ನು ಹೊಂದಿರುವಂತಹ ಕೂಡಿರುವ ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು	–	–
ಕೂಡಿರುವ ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು – ಜಮೆ ದುರ್ಬಲಗೊಂಡಿರುವುದು	–	–

ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾಗಿರುವವುಗಳು ಕರ್ನಾಟಕ ಸರ್ಕಾರದ ತಹಸೀಲ್ದಾರರುಗಳಿಂದ ಸ್ವೀಕರಿಸಬೇಕಿರುವ ನಿರ್ವಹಣಾ ಶುಲ್ಕಗಳನ್ನು ಪ್ರತಿನಿಧಿಸುತ್ತವೆ.

10. ಇತರೆ ಹಣಕಾಸು ಆಸ್ತಿಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019 ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಗುತ್ತಿಗೆದಾರರುಗಳಿಗೆ ನೀಡಲಾಗಿರುವ ಮುಂಗಡಗಳ ಮೇಲೆ ಸಂಚಿತಗೊಂಡಿರುವ ಹಾಗೂ ಬರಬೇಕಾಗಿರುವ ಬಡ್ಡಿ	**173.60**	2,272.50
ಬ್ಯಾಂಕು ಠೇವಣಿಗಳ ಮೇಲೆ ಸಂಚಿತಗೊಂಡಿರುವ ಆದರೆ ತತ್‌ಕ್ಷಣದಲ್ಲಿ ಸ್ವೀಕರಿಸಬೇಕಾಗಿರದ ಬಡ್ಡಿ	**1,505.05**	571.10
ಬ್ಯಾಂಕು ಠೇವಣಿಗಳ ಮೇಲೆ ಸ್ವೀಕರಿಸಬೇಕಾಗಿರುವ ಬಡ್ಡಿ	**42.74**	48.37
ಇತರೆ ಸರ್ಕಾರಿ ಸಂಸ್ಥೆಗಳಿಂದ ಬರಬೇಕಾಗಿರುವ ಬಾಕಿಗಳು	**2,979.80**	2,372.88
ಕರ್ನಾಟಕ ಸರ್ಕಾರದಿಂದ ಬರಬೇಕಿರುವ ಬಾಕಿಗಳು	**424,96**	406.50
ಒಟ್ಟು	**5,126.14**	**5,671.34**

ಕರ್ನಾಟಕ ಸರ್ಕಾರದಿಂದ ಬರಬೇಕಿರುವ ಅನುದಾನಗಳು ಎಸ್‌ಸಿಪಿ ಮತ್ತು ಟಿಎಸ್‌ಪಿ ಕಾಮಗಾರಿಗಳಿಗಾಗಿ ಅನುದಾನಗಳನ್ನು ಪ್ರತಿನಿಧಿಸುತ್ತವೆ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

11. ಇತರೆ ಚಾಲ್ತಿ ಆಸ್ತಿಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019 ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಭೂ ಸ್ವಾಧೀನಕ್ಕಾಗಿ ಮುಂಗಡಗಳು	**5,001.82**	5,272.63
ಸರಬರಾಜುದಾರರುಗಳು/ ಸೇವೆಗಳನ್ನು ಒದಗಿಸುವವರಿಗೆ ಮುಂಗಡಗಳು	**37,190.13**	49,051.87
ಮುಂಚಿತವಾಗಿಯೇ ಮಾಡಲಾಗಿರುವ ವೆಚ್ಚಗಳು	**3.52**	4.31
ಇತರರುಗಳಿಂದ ಬಾಕಿಗಳೂ – ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್)	**83.14**	33.20
ಇತರೆ ಮುಂಗಡಗಳು	**1,404.48**	1,404.48
ಉದ್ಯೋಗಿಗಳಿಂದ ಬರಬೇಕಿರುವ ಬಾಕಿಗಳು – ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್)	**496.26**	363.13
ಒಟ್ಟು	**44,179.35**	**56,129.62**

ಎ) ಸರಬರಾಜುದಾರರುಗಳಿಗೆ/ಸೇವೆಗಳನ್ನು ಒದಗಿಸುವವರಿಗೆ ಪಾವತಿಸಲಾಗಿರುವ ಮುಂಗಡಗಳು ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ ಕಡೆಗೆ ಪಾವತಿಗಳನ್ನು ಒಳಗೊಂಡಿರುತ್ತವೆ.

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019 ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ	**25,653.41**	23,055.30
ನಿರ್ಮಿತಿ ಕೇಂದ್ರ	**4,574.00**	3,890.00

12. ಈಕ್ವಿಟಿ ಷೇರು ಬಂಡವಾಳ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ		31 ಮಾರ್ಚ್ 2019 ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)	
	ಷೇರುಗಳ ಸಂಖ್ಯೆ	ಮೊತ್ತ	ಷೇರುಗಳ ಸಂಖ್ಯೆ	ಮೊತ್ತ
ಅಧಿಕೃತ ಬಂಡವಾಳ :				
ಈಕ್ವಿಟಿ ಷೇರುಗಳು ಪ್ರತಿಯೊಂದಕ್ಕೂ ರೂ.1,000/–ದಂತೆ	**5,00,00,000**	50,00,000.00	5,00,00,000	50,0000.00
ನೀಡಲ್ಪಟ್ಟಿರುವ/ಹಂಚಲ್ಪಟ್ಟಿರುವ ಬಂಡವಾಳ:				
ಈಕ್ವಿಟಿ ಷೇರುಗಳು ಪ್ರತಿಯೊಂದಕ್ಕೂ ರೂ.1,000/–ದಂತೆ	**4,03,49,909**	4,03,499.09	2,36,73,733	2,36,737.33
ಖರೀದಿಸಲು ಒಪ್ಪಿಕೊಂಡಿರುವ ಹಾಗೂ ಪಾವತಿಸಲಾಗಿರುವ ಬಂಡವಾಳ ಷೇರುಗಳು ಪ್ರತಿಯೊಂದಕ್ಕೂ ರೂ.1,000/–ದಂತೆ (ಹಿಂದಿನ ಸಾಲಿನಲ್ಲಿ: ಅನ್ವಯಗೊಳ್ಳುವುದಿಲ್ಲ)	**4,03,49,909**	4,03,499.09	2,36,73,733	2,36,737.33
ಒಟ್ಟು	**4,03,49,909**	4,03,499.09	**2,36,73,733**	**2,36,737.33**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಷೇರುಗಳ ಸಂಖ್ಯೆ ಮತ್ತು ಮೊತ್ತವನ್ನು ವರದಿಯು ಸಂಬಂಧಿಸಿರುವ ಸಾಲಿನ ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ ಇರುವ ಬಾಕಿಗಳ ನಡುವೆ ಸಮನ್ವಯಗೊಳಿಸುವಿಕೆ:

(ರೂ. ಲಕ್ಷಗಳಲ್ಲಿ)

ವಿವರಗಳು	ಈಕ್ವಿಟಿ ಷೇರುಗಳು		ಈಕ್ವಿಟಿ ಷೇರುಗಳು (ಪುನರ್‌ತಿಳಿಸಿರುವುದು)	
	31 ಮಾರ್ಚ್ 2020 ರಲ್ಲಿದ್ದಂತೆ		31 ಮಾರ್ಚ್ 2019ರಲ್ಲಿದ್ದಂತೆ	
	ಷೇರುಗಳ ಸಂಖ್ಯೆ	ಮೊತ್ತ	ಷೇರುಗಳ ಸಂಖ್ಯೆ	ಮೊತ್ತ
ವರ್ಷದ ಪ್ರಾರಂಭದಲ್ಲಿ ಷೇರುಗಳು	**2,36,73,733**	**2,36,737.33**	1,25,58,687	1,25,586.87
ಕೂಡುವುದು: ಪ್ರಸಕ್ತ ಸಾಲಿನಲ್ಲಿ ನೀಡಲಾದ ಷೇರುಗಳು	**1,66,76,176**	**1,66,761.76**	1,11,15,046	1,11,150.46
ವರ್ಷದ ಅಂತ್ಯದಲ್ಲಿ ಷೇರುಗಳು	**4,03,49,909**	**4,03,499.09**	**2,36,73,733**	**2,36,737.33**

ಕಂಪನಿಯು, ಷೇರು ಒಂದಕ್ಕೆ ರೂ.1,000 ಮುಖ ಬೆಲೆಯನ್ನು ಹೊಂದಿರುವಂತಹ ಕೇವಲ ಒಂದು ವರ್ಗದ ಷೇರನ್ನು ಮಾತ್ರ ನೀಡಿರುವುದು. ಈಕ್ವಿಟಿ ಷೇರನ್ನು ಹೊಂದಿರುವ ಪ್ರತಿಯೋರ್ವ ಷೇರುದಾರರು ಒಂದು ಷೇರಿಗೆ ಒಂದು ಮತವನ್ನು ಚಲಾಯಿಸುವ ಅರ್ಹತೆಯನ್ನು ಹೊಂದಿರುತ್ತಾರೆ. ಕಂಪನಿಯನ್ನು ಸಮಾಪನಗೊಳಿಸುವ ಸಂದರ್ಭದಲ್ಲಿ, ಆದ್ಯತೆಯ ಬಾಕಿಗಳು ಮತ್ತು ಕಂಪನಿಗೆ ಸಾಲಗಳನ್ನು ನೀಡಿರುವ ಇತರೆ ಸಂಸ್ಥೆಗಳ ಬಾಕಿಗಳನ್ನು ಇತ್ಯರ್ಥಗೊಳಿಸಿದನಂತರ ಈಕ್ವಿಟಿ ಷೇರುದಾರರು ಕಂಪನಿಯ ಆಸ್ತಿಗಳನ್ನು ಸ್ವೀಕರಿಸಲು ಅರ್ಹರಾಗಿರುತ್ತಾರೆ.

ಕಂಪನಿಯ ಒಟ್ಟಾರೆ ಷೇರುಗಳ ಪೈಕಿ ಶೇಕಡ 5ಕ್ಕಿಂತ ಅಧಿಕ ಷೇರುಗಳನ್ನು ಹೊಂದಿರುವ ಪ್ರತಿಯೋರ್ವ ಷೇರುದಾರರ ವಿವರಗಳು:

ಷೇರುದಾರರ ಹೆಸರು	ಈಕ್ವಿಟಿ ಷೇರುಗಳು		ಈಕ್ವಿಟಿ ಷೇರುಗಳು	
	31 ಮಾರ್ಚ್ 2020 ಲ್ಲಿದ್ದಂತೆ		31 ಮಾರ್ಚ್ 2019ರಲ್ಲಿದ್ದಂತೆ	
	ಹೊಂದಿರುವ ಷೇರುಗಳ ಸಂಖ್ಯೆ	ಶೇಕಡಾವಾರು ಹೊಂದಿರುವಿಕೆ	ಹೊಂದಿರುವ ಷೇರುಗಳ ಸಂಖ್ಯೆ	ಶೇಕಡಾವಾರು ಹೊಂದಿರುವಿಕೆ
ಕರ್ನಾಟಕ ಸರ್ಕಾರ (ನಾಮ ನಿರ್ದೇಶನದ ಮೂಲಕ)	**4,03,49,909**	100	2,36,73,733	100

13. ಇತರೆ ಈಕ್ವಿಟಿಗಳು

31.03.2019ರಲ್ಲಿದ್ದಂತೆ ಇತರೆ ಈಕ್ವಿಟಿಗಳು (ಪುನರ್ ತಿಳಿಸಿರುವುದು):

(ರೂ. ಲಕ್ಷಗಳಲ್ಲಿ)

ವಿವರಗಳು	ಮೀಸಲಿರಿಸಿರುವಿಕೆಗಳು ಮತ್ತು ಮಿಗುತಾಯಗಳು				
	ಹಂಚಿಕೆಗೆ ಬಾಕಿ ಉಳಿದಿರುವ ಷೇರುಗಳು ಡಿಮೆರ್ಜ್ ಯೋಜನೆಗೆ ಅನುಗುಣವಾಗಿ	ಹಂಚಿಕೆಗೆ ಬಾಕಿ ಇರುವ ಷೇರು ಅರ್ಜಿ ಶುಲ್ಕ	ಉಳಿಸಿಕೊಳ್ಳಲ್ಪಟ್ಟ ಗಳಿಕೆಗಳು	ಒಸಿಐನ ಇತರೆ ಬಾಬ್ತುಗಳು	ಒಟ್ಟಾರೆ ಇತರೆ ಈಕ್ವಿಟಿಗಳು
ಎ) ವರದಿಯು ಸಂಬಂಧಿಸಿರುವ ಅವಧಿಯ ಪ್ರಾರಂಭದ ಶಿಲ್ಕು (ಪುನರ್ ತಿಳಿಸಿರುವುದು)	3,69,890.37	32,319.13	(8,997.43)	0.07	3,93,212.14
ಬಿ) ಪೂರ್ವಾವಧಿಯ ಹೊಂದಾಣಿಕೆಗಳು	–	–	–	–	–
ಸಿ) ವರದಿಯು ಸಂಬಂಧಿಸಿರುವ ಅವಧಿಯ ಪುನರ್–ತಿಳಿಸಲ್ಪಟ್ಟಿರುವ ಪ್ರಾರಂಭದ ಶಿಲ್ಕು	3,69,890.37	32,319.13	(8,997.43)	0.07	3,93,212.14
ಡಿ) ಷೇರುಗಳ ಹಂಚಿಕೆಯ ಷೇರು ಅರ್ಜಿ ಶುಲ್ಕ	–	29,861.30	–	–	29,861.30
ಇ) ಪ್ರಸಕ್ತ ಸಾಲಿನ ಲಾಭ/(ನಷ್ಟ)	–	–	(3,237.47)	–	(3,237.47)
ಎಫ್) ಇತರೆ ಸಮಗ್ರ ವರಮಾನ	–	–	–	(0.80)	(0.80)
31.03.2019ರಲ್ಲಿದ್ದಂತೆ ಶಿಲ್ಕು	**3,69,890.37**	**62,180.43**	**(12,234.91)**	**(0.73)**	**4,19,835.17**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

31.3.2020ರಲ್ಲಿದ್ದಂತೆ ಇತರೆ ಈಕ್ವಿಟಿಗಳು

(ರೂ. ಲಕ್ಷಗಳಲ್ಲಿ)

ವಿವರಗಳು	ಮೀಸಲಿರಿಸಿರುವಿಕೆಗಳು ಮತ್ತು ಮಿಗುತಾಯಗಳು				
	ಹಂಚಿಕೆಗೆ ಬಾಕಿ ಉಳಿದಿರುವ ಷೇರುಗಳು ಡಿಮೆರ್ಜ್ ಯೋಜನೆಗೆ ಅನುಗುಣವಾಗಿ	ಹಂಚಿಕೆಗಾಗಿ ಬಾಕಿಯಿರುವ ಷೇರು ಅರ್ಜಿ ಶುಲ್ಕ (ಪುನರ್ ತಿಳಿಸಿರುವುದು)	ಉಳಿಸಿಕೊಳ್ಳಲ್ಪಟ್ಟ ಗಳಿಕೆಗಳು (ಪುನರ್ ತಿಳಿಸಿರುವುದು)	ಒಸಿಐನ ಇತರೆ ಬಾಬ್ತುಗಳು	ಒಟ್ಟಾರೆ ಇತರೆ ಈಕ್ವಿಟಿಗಳೂ
ಎ) ವರದಿಯು ಸಂಬಂಧಿಸಿರುವ ಅವಧಿಯ ಪ್ರಾರಂಭದ ಶಿಲ್ಕು (ಪುನರ್ ತಿಳಿಸಿರುವುದು)	3,69,890.37	62,180.43	(12,234.91)	(0.73)	4,19,835.17
ಬಿ) ಹಣಕಾಸು ಜವಾಬ್ದಾರಿಗಳ ನ್ಯಾಯಸಮ್ಮತ ಮೌಲ್ಯ ನಿರ್ಧಾರಣೆ	–	–	–	–	–
ಸಿ) ವರದಿಯು ಸಂಬಂಧಿಸಿರುವ ಅವಧಿಯ ಪುನರ್– ತಿಳಿಸಲ್ಪಟ್ಟಿರುವ ಪ್ರಾರಂಭದ ಶಿಲ್ಕು	–	–	–	–	–
ಡಿ) ಷೇರುಗಳನ್ನು ಹಂಚಿಕೆ ಮಾಡುವುದು ಬಾಕಿಯಿರುವ ಷೇರು ಅರ್ಜಿ ಶುಲ್ಕ	–	45,214.90	–	–	45,214.90
ಇ) ಪ್ರಸಕ್ತ ಸಾಲಿನ ಲಾಭ/ (ನಷ್ಟ)	–	–	(19,476.95)	–	(19,476.95)
ಎಫ್) ಇತರೆ ಸಮಗ್ರ ವರಮಾನ	–	–	–	(0.60)	(0.60)
31.03.2020ರಲ್ಲಿದ್ದಂತೆ ಶಿಲ್ಕು	**3,69,890.37**	**1,07,395.33**	**(31,711.86)**	**(1.33)**	**4,45,572.52**

ಸಂಯೋಜನಾ ಯೋಜನೆಗೆ ಅನುಮೋದನೆ ನೀಡಿರುವಂತಹ ಭಾರತ ಸರ್ಕಾರದ ಸಾಂಸ್ಥಿಕ (ವ್ಯವಹಾರಗಳ ಮಂತ್ರಾಲಯದ) 08.05.2020 ದಿನಾಂಕದ ಆದೇಶದ ಅನುಸಾರ ಹಾಗೂ ಮೇಲೆ ತಿಳಿಸಲಾದಂತಹ ಆದೇಶವನ್ನು ಕಂಪನಿಗಳ ರಿಜಿಸ್ಟ್ರಾರ್‌ರವರು, ಬೆಂಗಳೂರು, ಇವರಿಗೆ 9 ಜೂನ್ 2020ರಂದು ಸಲ್ಲಿಸಲಾಗಿ, ಷೇರುಗಳ ನೀಡಿಕೆಯೂ ಸೇರಿದಂತೆ ಪ್ರತ್ಯೇಕಗೊಳ್ಳುವಿಕೆಯು 1 ಜನವರಿ 2017ರಿಂದ ಜಾರಿಗೆ ಬಂದಿರುವುದು. ಅದರಂತೆಯೇ, ಮೇಲೆ ತಿಳಿಸಲಾದಂತಹ ವ್ಯವಹಾರಗಳ ವರ್ಗಾವಣೆಯನ್ನು ಹಣಕಾಸು ತ:ಖ್ತೆಗಳಲ್ಲಿ ಅಳವಡಿಸಿಕೊಂಡಿರುವುದು. ಈಕ್ವಿಟಿ ಷೇರುಗಳ ಹಂಚಿಕೆಗೆ ಸಂಬಂಧಿಸಿದಂತೆ ತಾಂತ್ರಿಕ ಪ್ರಕ್ರಿಯೆಯು 31 ಮಾರ್ಚ್ 2020ರಲ್ಲಿದ್ದಂತೆ ಪ್ರಗತಿಯಲ್ಲಿದ್ದಿತಾದ್ದರಿಂದ ಹಾಗೂ 5 ನವಂಬರ್ 2020ರ ವೇಳೆಗೆ ಪೂರ್ಣಗೊಳಿಸಲಾಗಲಿಲ್ಲವಾದ್ದರಿಂದ, ಅದಕ್ಕೆ ಅನುಗುಣವಾದಂತಹ 'ಪ್ರತಿಫಲದ ಮೊತ್ತವನ್ನು ಪ್ರತ್ಯೇಕಗೊಳಿಸುವಿಕೆ ಯೋಜನೆಯ ಅನುಸರಣೆಯಂತೆ ಹಂಚಿಕೆ ಮಾಡಲು ಬಾಕಿ ಇರುವ ಷೇರುಗಳು ಎಂಬುದಾಗಿ ತೋರಿಸಲಾಗಿರುವುದು.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

14. ಸಾಲಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019 ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಚಾಲ್ತಿಯೇತರ:		
ಭದ್ರತೆಯಿಂದ ಕೂಡಿರುವ ಸಾಲಗಳು		
ಈ ಕೆಳಗಿನ ಬ್ಯಾಂಕುಗಳಿಂದ ಅವಧಿ ಸಾಲಗಳು:		
– ಭಾರತೀಯ ಸ್ಟೇಟು ಬ್ಯಾಂಕು	**12,848.51**	17,140.20
–ಆಕ್ಸಿಸ್ ಬ್ಯಾಂಕು ನಿಯಮಿತ	**28,563.73**	35,711.40
–ಐಸಿಐಸಿಐ ಬ್ಯಾಂಕು ನಿಯಮಿತ	**2,914.29**	3,643.15
–ಕರ್ನಾಟಕ ಗ್ರಾಮೀಣ ಬ್ಯಾಂಕು (ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕು ಎಂದು ಹಿಂದೆ ಕರೆಯಲಾಗುತ್ತಿತ್ತು)	**10,296.71**	12,998.23
–ಬ್ಯಾಂಕ್ ಆಫ್ ಇಂಡಿಯಾ	**25,200.07**	27,547.71
–ಇಂಡಿಯನ್ ಬ್ಯಾಂಕು	**26,250.00**	31,500.00
ಭಾರತೀಯ ಸ್ಟೇಟ್ ಬ್ಯಾಂಕ್	**62,999.11**	–
ಒಟ್ಟು	**1,69,072.41**	**1,28,540.68**
ಚಾಲ್ತಿ		
ಭದ್ರತೆಯಿಂದ ಕೂಡಿರುವ ಸಾಲಗಳು		
ಈ ಕೆಳಗಿನ ಬ್ಯಾಂಕುಗಳಿಂದ ಅವಧಿ ಸಾಲಗಳು:		
– ಭಾರತೀಯ ಸ್ಟೇಟು ಬ್ಯಾಂಕು	**4,286.00**	4,286.00
–ಆಕ್ಸಿಸ್ ಬ್ಯಾಂಕು ನಿಯಮಿತ	**7,142.86**	7,142.86
–ಐಸಿಐಸಿಐ ಬ್ಯಾಂಕು ನಿಯಮಿತ	**728.57**	728,28
–ಕರ್ನಾಟಕ ಗ್ರಾಮೀಣ ಬ್ಯಾಂಕು (ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕು ಎಂದು ಹಿಂದೆ ಕರೆಯಲಾಗುತ್ತಿತ್ತು)	**2,700.00**	2,700.00
–ಬ್ಯಾಂಕ್ ಆಫ್ ಇಂಡಿಯಾ	**5,250.00**	5,250.00
–ಇಂಡಿಯನ್ ಬ್ಯಾಂಕು	**5,250.00**	5,250.00
ಭಾರತೀಯ ಸ್ಟೇಟ್ ಬ್ಯಾಂಕ್	**10,500.00**	–
ಒಟ್ಟು	**35,857.43**	**25,357.14**

ಅವಧಿ ಸಾಲಗಳು – ಭಾರತೀಯ ಸ್ಟೇಟು ಬ್ಯಾಂಕು

i) ಭಾರತಿಯ ಸ್ಟೇಟು ಬ್ಯಾಂಕು, ಎಸ್‌ಎಮ್‌ಇ, ಅಶೋಕ ನಗರ, ತುಮಕೂರು 2016–17 ಹಣಕಾಸು ಸಾಲಿನಲ್ಲಿ 300 ಕೋಟಿ ಮೊತ್ತದಷ್ಟು ಸಾಲಗಳನ್ನು ಮಂಜೂರು ಮಾಡಿದ್ದಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2017ರಲ್ಲಿದ್ದಂತೆ ಸಂಪೂರ್ಣ ಮೊತ್ತವನ್ನು ಬಳಸಿಕೊಂಡಿರುವುದು.

ii) ಸಾಲವು 1.00 ರಷ್ಟರ ಮಟ್ಟಿಗೆ ಕಂಪನಿಯ ಆಸ್ತಿಗಳ ಮೇಲೆ ಸಮಾನ ಮೊತ್ತದ (ಪರಿಪಾಸ್ಸು) ವೆಚ್ಚಗಳಿಂದ ಭದ್ರತೆಯನ್ನು ಹೊಂದಿರುತ್ತದೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಪಡೆದಿರುತ್ತದೆ. ಸಾಲದ ದಾಖಲೆಗಳನ್ನು 30.03.2017ರಂದು ಕಾರ್ಯಗತಗೊಳಿಸಲಾಯಿತು. ಅದರಂತೆಯೇ ಹೊಣೆಗಾರಿಕೆಯನ್ನು ಸೃಷ್ಟಿಸಲಾಗಿದೆ, ಅಡಮಾನದ ಪತ್ರವನ್ನು 02.03.2020ರಂದು ಕಾರ್ಯಗತಗೊಳಿಸಲಾಗಿರುವುದು.

iii) ಸಾಲವನ್ನು ಏಳು ವರ್ಷಗಳ ಅವಧಿಗೆ ಮಾರ್ಚ್ 2017ರಲ್ಲಿ ಪಡೆದುಕೊಳ್ಳಲಾಯಿತು, ಅದನ್ನು ಪ್ರತಿಯೊಂದು ರೂ. 4,286 ಲಕ್ಷ ಮೊತ್ತದ 6 ವಾರ್ಷಿಕ ಕಂತುಗಳಲ್ಲಿ ಹಾಗೂ ರೂ. 4,284 ಲಕ್ಷ ಮೊತ್ತದ ಕಡೆಯ 1 ಕಂತಿನಲ್ಲಿ ಮರುಪಾವತಿಸಬೇಕು. ಮಂಜೂರಾತಿ ಪತ್ರದ ಪ್ರಕಾರ ಶೇಕಡಾ 8.20 ದರದಲ್ಲಿ (ವ್ಯತ್ಯಯಗೊಳ್ಳಬಲ್ಲ) ಬಡ್ಡಿಯನ್ನು ಪಾವತಿಸಬೇಕು. ಬಡ್ಡಿಯ ದರವು 31.03.2020ರಲ್ಲಿದ್ದಂತೆ ಶೇಕಡಾ 8.60 ಆಗಿರುವುದು.

iv) ಸಾಲಗಳ ಕಂತುಗಳನ್ನು ಮರುಪಾವತಿಸುವಲ್ಲಿ ಅಥವಾ ಬಡ್ಡಿಯ ಪಾವತಿಯಲ್ಲಾಗಲಿ ಸಂತುಲನ ಪಟ್ಟಿಯ ದಿನಾಂಕದಂದು ತಪ್ಪಿತಸ್ಥಗೊಂಡಿರಲಿಲ್ಲ / ಅವಿರತವಾಗಿ ತಪ್ಪಿತಸ್ಥಗೊಂಡಿರಲಿಲ್ಲ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಅವಧಿ ಸಾಲಗಳು – ಆಕ್ಸಿಸ್ ಬ್ಯಾಂಕು ನಿಯಮಿತ

i) ಆಕ್ಸಿಸ್ ಬ್ಯಾಂಕ್ ಲಿಮಿಟೆಡ್, ಬೇಗಂಪೇಟ್, ಹೈದರಾಬಾದ್ 2017–18 ಹಣಕಾಸು ಸಾಲಿನಲ್ಲಿ ರೂ.50,000 ಲಕ್ಷ ಮೊತ್ತದಷ್ಟು ಸಾಲಗಳನ್ನು ಮಂಜೂರು ಮಾಡಿದ್ದಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2018ರಲ್ಲಿದ್ದಂತೆ ರೂ.12,500ಲಕ್ಷ ಮೊತ್ತದಷ್ಟು ಹಾಗೂ 2018–19 ಹಣಕಾಸು ಸಾಲಿನಲ್ಲಿ ರೂ 37,500 ಲಕ್ಷ ಮೊತ್ತದಷ್ಟು ಸಾಲವನ್ನು ಉಪಯೋಗಿಸಿಕೊಂಡಿರುವುದು.

ii) ಸಾಲವು 1.00 ರಷ್ಟರ ಮಟ್ಟಿಗೆ ಕಂಪನಿಯ ಆಸ್ತಿಗಳ ಮೇಲಿನ ಸಮಾನ ಮೊತ್ತದ (ಪರ್ರಿಪಾಸ್ಸು) ವೆಚ್ಚಗಳಿಂದ ಭದ್ರತೆಯನ್ನು ಹೊಂದಿರುತ್ತದೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಪಡೆದಿರುತ್ತದೆ. ಸಾಲದ ದಾಖಲೆಗಳನ್ನು 30.03.2018 ರಂದು ಕಾರ್ಯಗತಗೊಳಿಸಲಾಯಿತು. ಅಡಮಾನದ ಪತ್ರವನ್ನು 18.08.2020ರಂದು ಕಾರ್ಯಗತಗೊಳಿಸಲಾಯಿತು.

iii) ಅವಧಿ ಸಾಲವನ್ನು ಏಳು ವರ್ಷಗಳ ಅವಧಿಗೆ ಮಾರ್ಚ್ 2018ರಲ್ಲಿ ಪಡೆದುಕೊಳ್ಳಲಾಯಿತು, ಅದನ್ನು 7 ವಾರ್ಷಿಕ ಕಂತುಗಳಲ್ಲಿ ಪ್ರತಿಯೊಂದು ಕಂತು ರೂ.7,142.85 ಲಕ್ಷದಂತೆ ಪಾವತಿಸಬೇಕಿರುತ್ತದೆ. ಮಂಜೂರಾತಿ ಪತ್ರದ ಪ್ರಕಾರ ಶೇಕಡಾ 8.40% ದರದಲ್ಲಿ (ವ್ಯತ್ಯಯಗೊಳ್ಳಬಲ್ಲ) ಒಂದು ವರ್ಷದ ಎಂ.ಸಿ.ಎಲ್.ಆರ್. ದರದಲ್ಲಿ ಬಡ್ಡಿಯನ್ನು ಪಾವತಿಸಬೇಕು. ಬಡ್ಡಿಯ ದರವು 31–03–2020ರಲ್ಲಿದಂತೆ ಶೇಕಡಾ 8.10 ಆಗಿರುವುದು.

iv) ಅವಧಿ ಸಾಲಗಳ ಕಂತುಗಳನ್ನು ಮರುಪಾವತಿಸುವಲ್ಲಿ ಅಥವಾ ಬಡ್ಡಿಯ ಪಾವತಿಯಲ್ಲಾಗಲಿ ಸಂತುಲನ ಪಟ್ಟಿಯ ದಿನಾಂಕದಂದು ತಪ್ಪಿತಸ್ತಗೊಂಡಿರಲಿಲ್ಲ/ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

ಅವಧಿ ಸಾಲಗಳು – ಐಸಿಐಸಿಐ ಬ್ಯಾಂಕು ನಿಯಮಿತ

i) ಐಸಿಐಸಿಐ ಬ್ಯಾಂಕ್ ನಿಯಮಿತ, ಕಮಿಷರೈಟ್ ಶಾಖೆ, ಬೆಂಗಳೂರು, 2017–18 ಹಣಕಾಸು ಸಾಲಿನಲ್ಲಿ ರೂ.5,100 ಲಕ್ಷ ಮೊತ್ತದಷ್ಟು ಸಾಲಗಳನ್ನು ಮಂಜೂರು ಮಾಡಿದ್ದಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2018ರಲ್ಲಿದ್ದಂತೆ ರೂ.2,500 ಲಕ್ಷ ಮೊತ್ತವನ್ನು ಹಾಗೂ 2018–19ರಲ್ಲಿ 2,600 ಲಕ್ಷ ಮೊತ್ತದಷ್ಟು ಸಾಲವನ್ನು ಉಪಯೋಗಿಸಿಕೊಂಡಿರುವುದು.

ii) ಸಾಲವು 1.00 ರಷ್ಟರ ಮಟ್ಟಿಗೆ ಕಂಪನಿಯ ಆಸ್ತಿಗಳ ಮೇಲೆ ಸಮಾನ ಮೊತ್ತದ (ಪರ್ರಿಪಾಸ್ಸು) ವೆಚ್ಚಗಳಿಂದ ಭದ್ರತೆಯನ್ನು ಹೊಂದಿರುತ್ತದೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಪಡೆದಿರುತ್ತದೆ. ಸಾಲದ ದಾಖಲೆಗಳನ್ನು 30.03.2018ರಂದು ಕಾರ್ಯಗತಗೊಳಿಸಲಾಗಿದ್ದಿತು.

iii) ಅವಧಿ ಸಾಲವನ್ನು ಏಳು ವರ್ಷಗಳ ಅವಧಿಗೆ ಮಾರ್ಚ್ 2018ರಲ್ಲಿ ಪಡೆದುಕೊಳ್ಳಲಾಯಿತು, ಅದನ್ನು 6 ವಾರ್ಷಿಕ ಕಂತುಗಳಲ್ಲಿ ಪ್ರತಿಯೊಂದು ಕಂತು ರೂ.728.28 ಲಕ್ಷದಂತೆ ಹಾಗೂ ರೂ.730.32 ಲಕ್ಷ ಮೊತ್ತದಷ್ಟು ಕಡೆಯ ಕಂತನ್ನು ಪಾವತಿಸಬೇಕಿರುತ್ತದೆ. ಸಾಲದ ಮಂಜೂರಾತಿ ಪತ್ರದ ಅನುಸಾರ ಒಂದು ವರ್ಷದ ಎಂಸಿಎಲ್ಆರ್‌ನಂತೆ ಶೇಕಡಾ 8.85ರ (ವ್ಯತ್ಯಯಗೊಳ್ಳಬಹುದಾದ ದರ) ದರದಲ್ಲಿ ಬಡ್ಡಿಯನ್ನು ಪಾವತಿಸಬೇಕಿರುವುದು. ಬಡ್ಡಿಯ ದರವು 31.03.2020ರಲ್ಲಿದ್ದಂತೆ 8.70% ಆಗಿದ್ದಿತು.

iv) ಸಾಲಗಳ ಕಂತುಗಳನ್ನು ಮರುಪಾವತಿಸುವಲ್ಲಿ ಅಥವಾ ಬಡ್ಡಿಯ ಪಾವತಿಯಲ್ಲಾಗಲಿ ಸಂತುಲನ ಪಟ್ಟಿಯ ದಿನಾಂಕದಂದು ತಪ್ಪಿತಸ್ತಗೊಂಡಿರಲಿಲ್ಲ/ ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

ಅವಧಿ ಸಾಲಗಳು – ಕರ್ನಾಟಕ ಗ್ರಾಮೀಣ ಬ್ಯಾಂಕ್ (ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕೆಂದು ಹಿಂದೆ ಕರೆಯಲಾಗುತ್ತಿತು)

i) ಕರ್ನಾಟಕ ಗ್ರಾಮೀಣ ಬ್ಯಾಂಕ್, ಬಳ್ಳಾರಿ ಶಾಖೆಯು 2017–18 ಹಣಕಾಸು ಸಾಲಿನಲ್ಲಿ ರೂ.18,400 ಲಕ್ಷ ಮೊತ್ತದಷ್ಟು ಸಾಲಗಳನ್ನು ಮಂಜೂರು ಮಾಡಿದ್ದಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2018ರಲ್ಲಿದ್ದಂತೆ ರೂ.9,000 ಲಕ್ಷ ಮೊತ್ತದಷ್ಟು ಹಾಗೂ 2018–19 ಸಾಲಿನಲ್ಲಿ ರೂ.9,400 ಲಕ್ಷ ಮೊತ್ತದಷ್ಟು ಸಾಲವನ್ನು ಉಪಯೋಗಿಸಿಕೊಂಡಿರುವುದು.

ii) ಸಾಲವು 1.00 ರಷ್ಟರ ಮಟ್ಟಿಗೆ ಕಂಪನಿಯ ಆಸ್ತಿಗಳ ಮೇಲೆ ಸಮಾನ ಮೊತ್ತದ (ಪರ್ರಿಪಾಸ್ಸು) ವೆಚ್ಚಗಳಿಂದ ಭದ್ರತೆಯನ್ನು ಹೊಂದಿರುತ್ತದೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಪಡೆದಿರುತ್ತದೆ. ಸಾಲದ ದಾಖಲೆಗಳನ್ನು ದಿನಾಂಕ 30.03.2018ರಂದು ಕಾರ್ಯಗತಗೊಳಿಸಲಾಯಿತು. ಅಡಮಾನದ ಪತ್ರವನ್ನು 02.03.2020ರಂದು ಕಾರ್ಯಗತಗೊಳಿಸಲಾಗಿರುವುದು.

iii) ಅವಧಿ ಸಾಲವನ್ನು ಏಳು ವರ್ಷಗಳ ಅವಧಿಗೆ ಮಾರ್ಚ್ 2018ರಲ್ಲಿ ಪಡೆದುಕೊಳ್ಳಲಾಯಿತು, ಅದನ್ನು ಪ್ರತಿಯೊಂದು ರೂ.2,700 ಲಕ್ಷ ಮೊತ್ತದ 6 ವಾರ್ಷಿಕ ಕಂತುಗಳಲ್ಲಿ ಹಾಗೂ ರೂ.2,200 ಲಕ್ಷ ಮೊತ್ತದ ಕಡೆಯ ಕಂತಿನಲ್ಲಿ ಮರುಪಾವತಿಸಬೇಕು. ಮಂಜೂರಾತಿ ಪತ್ರದ ಪ್ರಕಾರ ಬಡ್ಡಿಯ ದರವು ಶೇಕಡಾ 8.09 ಆಗಿರುವುದು. ಬಡ್ಡಿಯ ದರವು 31.03.2020ರಲ್ಲಿದ್ದಂತೆ ಶೇಕಡಾ 8.09 ಆಗಿರುವುದು.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

iv) ಸಾಲಗಳ ಕಂತುಗಳನ್ನು ಮರುಪಾವತಿಸುವಲ್ಲಿ ಅಥವಾ ಬಡ್ಡಿಯ ಪಾವತಿಯಲ್ಲಾಗಲಿ ಸಂತುಲನ ಪಟ್ಟಿಯ ದಿನಾಂಕದಂದು ತಪ್ಪಿತಸ್ತಗೊಂಡಿರಲಿಲ್ಲ/ ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

ಅವಧಿ ಸಾಲಗಳು – ಬ್ಯಾಂಕ್ ಆಫ್ ಇಂಡಿಯಾ

i) ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು 2018–19 ಹಣಕಾಸು ಸಾಲಿನಲ್ಲಿ ರೂ.36,750 ಲಕ್ಷ ಮೊತ್ತದಷ್ಟು ಸಾಲಗಳನ್ನು ಮಂಜೂರು ಮಾಡಿದ್ದಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2019ರಲ್ಲಿದ್ದಂತೆ ರೂ.32,800 ಲಕ್ಷ ಮೊತ್ತದಷ್ಟು ಹಾಗೂ ರೂ.2,900 ಲಕ್ಷ ಮೊತ್ತವನ್ನು 2019–20 ಹಣಕಾಸು ಸಾಲಿನಲ್ಲಿ ಒಟ್ಟಾರೆಯಾಗಿ ರೂ.35,700 ಲಕ್ಷಗಳಷ್ಟು 31.03.2020 ರಲ್ಲಿದಂತೆ ಬಳಸಿಕೊಂಡಿರುವುದು.

ii) ಸಾಲವು 1.00 ರಷ್ಟರ ಮಟ್ಟಿಗೆ ಕಂಪನಿಯ ಆಸ್ತಿಗಳ ಮೇಲಿನ ಸಮಾನ ಮೊತ್ತದ (ಪರ್ರಿಪಾಸ್ಸು) ವೆಚ್ಚಗಳಿಂದ ಭದ್ರತೆಯನ್ನು ಹೊಂದಿರುತ್ತದೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಪಡೆದಿರುತ್ತದೆ. ಸಾಲದ ದಾಖಲೆಗಳನ್ನು 23.01.2019ರಂದು ಕಾರ್ಯಗತಗೊಳಿಸಲಾಯಿತು. ಅಡಮಾನದ ಪತ್ರವನ್ನು 02.03.2020ರಂದು ಕಾರ್ಯಗತಗೊಳಿಸಲಾಗಿರುವುದು.

iii) ಅವಧಿ ಸಾಲವನ್ನು ಏಳು ವರ್ಷಗಳ ಅವಧಿಗೆ ಜನವರಿ 2019ರಲ್ಲಿ ಪಡೆದುಕೊಳ್ಳಲಾಯಿತು, ಅದನ್ನು ಪ್ರತಿಯೊಂದು ರೂ.5,250 ಲಕ್ಷ ಮೊತ್ತದ 7 ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕು. ಮಂಜೂರಾತಿ ಪತ್ರದ ಪ್ರಕಾರ ಒಂದು ವರ್ಷದ ಎಂಸಿಎಲ್‌ಆರ್ ಶೇಕಡಾ 8.70 ದರದಲ್ಲಿ ಬಡ್ಡಿಯನ್ನು ಪಾವತಿಸಬೇಕು. ಬಡ್ಡಿಯ ದರವು 31.03.2020ರಲ್ಲಿದ್ದಂತೆ ಶೇಕಡಾ 8.20 ಆಗಿರುವುದು.

iv) ಸಾಲಗಳ ಕಂತುಗಳನ್ನು ಮರುಪಾವತಿಸುವಲ್ಲಿ ಅಥವಾ ಬಡ್ಡಿಯ ಪಾವತಿಯಲ್ಲಾಗಲಿ ಸಂತುಲನ ಪಟ್ಟಿಯ ದಿನಾಂಕದಂದು ತಪ್ಪಿತಸ್ತಗೊಂಡಿರಲಿಲ್ಲ/ ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

ಅವಧಿ ಸಾಲಗಳು – ಇಂಡಿಯನ್ ಬ್ಯಾಂಕ್

i) ಇಂಡಿಯನ್ ಬ್ಯಾಂಕ್, ಎಂ.ಜಿ. ರಸ್ತೆ ಶಾಖೆ, ಬೆಂಗಳೂರು 2018–19 ಹಣಕಾಸು ಸಾಲಿನಲ್ಲಿ ರೂ.36,750 ಲಕ್ಷ ಮೊತ್ತದಷ್ಟು ಸಾಲಗಳನ್ನು ಮಂಜೂರು ಮಾಡಿದ್ದಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2019ರಲ್ಲಿದ್ದಂತೆ ರೂ.36,750 ಲಕ್ಷ ಮೊತ್ತದಷ್ಟು ಸಾಲವನ್ನು ಉಪಯೋಗಿಸಿಕೊಂಡಿದ್ದಿತು.

ii) ಸಾಲವು 1.00 ರಷ್ಟರ ಮಟ್ಟಿಗೆ ಕಂಪನಿಯ ಆಸ್ತಿಗಳ ಮೇಲಿನ ಸಮಾನ ಮೊತ್ತದ (ಪರ್ರಿಪಾಸ್ಸು) ವೆಚ್ಚಗಳಿಂದ ಭದ್ರತೆಯನ್ನು ಹೊಂದಿರುತ್ತದೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಪಡೆದಿರುತ್ತದೆ. ಸಾಲದ ದಾಖಲೆಗಳನ್ನು 17.12.2018ರಂದು ಕಾರ್ಯಗತಗೊಳಿಸಲಾಯಿತು. ಅಡಮಾನದ ಪತ್ರವನ್ನು 02.03.2020ರಂದು ಕಾರ್ಯಗತಗೊಳಿಸಲಾಗಿರುವುದು.

iii) ಅವಧಿ ಸಾಲವನ್ನು ಏಳು ವರ್ಷಗಳ ಅವಧಿಗೆ ಡಿಸೆಂಬರ್ 2018ರಲ್ಲಿ ಪಡೆದುಕೊಳ್ಳಲಾಯಿತು, ಅದನ್ನು ಪ್ರತಿಯೊಂದು ರೂ.5,250 ಲಕ್ಷ ಮೊತ್ತದ 6 ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕು. ಮಂಜೂರಾತಿ ಪತ್ರದ ಪ್ರಕಾರ ಒಂದು ವರ್ಷದ ಎಂಸಿಎಲ್‌ಆರ್ ಶೇಕಡಾ 8.75 ದರದಲ್ಲಿ (ವ್ಯತ್ಯಯಗೊಳ್ಳಬಲ್ಲ) ಬಡ್ಡಿಯನ್ನು ಪಾವತಿಸಬೇಕು. ಬಡ್ಡಿಯ ದರವು 31.03.2020ರಲ್ಲಿದ್ದಂತೆ ಶೇಕಡಾ 8.35 ಆಗಿರುವುದು.

iv) ಸಾಲಗಳ ಕಂತುಗಳನ್ನು ಮರುಪಾವತಿಸುವಲ್ಲಿ ಅಥವಾ ಬಡ್ಡಿಯ ಪಾವತಿಯಲ್ಲಾಗಲಿ ಸಂತುಲನ ಪಟ್ಟಿಯ ದಿನಾಂಕದಂದು ತಪ್ಪಿತಸ್ತಗೊಂಡಿರಲಿಲ್ಲ/ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

ಅವಧಿ ಸಾಲಗಳು – ಭಾರತೀಯ ಸ್ಟೇಟ್ ಬ್ಯಾಂಕ್

i) ಭಾರತೀಯ ಸ್ಟೇಟ್ ಬ್ಯಾಂಕ್, ವಾಣಿಜ್ಯ ಶಾಖೆ, ಬೆಂಗಳೂರು 2019–20 ಹಣಕಾಸು ಸಾಲಿನಲ್ಲಿ ರೂ.73,500 ಲಕ್ಷ ಮೊತ್ತದಷ್ಟು ಸಾಲಗಳನ್ನು ಮಂಜೂರು ಮಾಡಿದ್ದಿತು, ಅದರ ಪೈಕಿ ಕಂಪನಿಯು 31 ಮಾರ್ಚ್ 2020ರಲ್ಲಿದ್ದಂತೆ ಸಂಪೂರ್ಣ ಮೊತ್ತವನ್ನು ಬಳಸಿಕೊಂಡಿರುವುದು.

ii) ಸಾಲವು 1.00 ರಷ್ಟರ ಮಟ್ಟಿಗೆ ಕಂಪನಿಯ ಆಸ್ತಿಗಳ ಮೇಲಿನ ಸಮಾನ ಮೊತ್ತದ (ಪರ್ರಿಪಸ್ಸು) ವೆಚ್ಚಗಳಿಂದ ಭದ್ರತೆಯನ್ನು ಹೊಂದಿದೆ ಹಾಗೂ ಕರ್ನಾಟಕ ಸರ್ಕಾರದ ಖಾತರಿಯನ್ನು ಪಡೆದಿದೆ. ಸಾಲದ ದಾಖಲೆಗಳನ್ನು 19.09.2019ರಂದು ಕಾರ್ಯಗತಗೊಳಿಸಲಾಯಿತು. ವೆಚ್ಚಗಳನ್ನು ಅದರಂತೆ ಸೃಷ್ಟಿಸಲಾಗಿದೆ ಅಡಮಾನದ ಪತ್ರವನ್ನು 02.03.2020ರಂದು ಕಾರ್ಯಗತಗೊಳಿಸಲಾಗಿರುವುದು.

iii) ಅವಧಿ ಸಾಲವನ್ನು ಏಳು ವರ್ಷಗಳ ಅವಧಿಗೆ ಸೆಪ್ಟಂಬರ್ 2019ರಲ್ಲಿ ಪಡೆದುಕೊಳ್ಳಲಾಯಿತು, ಅದನ್ನು ಪ್ರತಿಯೊಂದು ರೂ. 10,500 ಲಕ್ಷ ಮೊತ್ತದ 7 ವಾರ್ಷಿಕ ಕಂತುಗಳಲ್ಲಿ

ಮರುಪಾವತಿಸಬೇಕು. ಮಂಜೂರಾತಿ ಪತ್ರದ ಪ್ರಕಾರ ಎಂಸಿಎಲ್ಆರ್ ಶೇಕಡಾ 8.25 ದರದಲ್ಲಿ (ವ್ಯತ್ಯಯಗೊಳ್ಳಬಲ್ಲ) ಬಡ್ಡಿಯನ್ನು ಪಾವತಿಸಬೇಕು. ಬಡ್ಡಿಯ ದರವು 31.03.2020ರಲ್ಲಿದ್ದಂತೆ ಶೇಕಡಾ 8.25 ಆಗಿರುವುದು.

iv) ಸಾಲಗಳ ಕಂತುಗಳನ್ನು ಮರುಪಾವತಿಸುವಲ್ಲಿ ಅಥವಾ ಬಡ್ಡಿಯ ಪಾವತಿಯಲ್ಲಾಗಲಿ ಸಂತುಲನ ಪಟ್ಟಿಯ ದಿನಾಂಕದಂದು ತಪ್ಪಿತಸ್ತಗೊಂಡಿರಲಿಲ್ಲ/ ಅವಿರತವಾಗಿ ತಪ್ಪಿತಸ್ತಗೊಂಡಿರಲಿಲ್ಲ.

ಉದ್ದೇಶಪೂರ್ವಕವಾಗಿ ಖಾಲಿ ಬಿಡಲಾಗಿದೆ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

15. ಇತರೆ ಹಣಕಾಸು ಹೊಣೆಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಚಾಲ್ತಿಯೇತರ		
ಗುತ್ತಿಗೆ ಪಾವತಿಗಳಿಗಾಗಿ – ಉಳಿಸಿಕೊಳ್ಳಲಾದ ಹಣಕಾಸು	**45,688.72**	38,596.21
ಒಟ್ಟು	**45,688.72**	**38,596.21**
ಚಾಲ್ತಿ:		
(ಎ) ಭದ್ರತಾ ಠೇವಣಿಗಳು	**33,620.75**	27,899.15
(ಬಿ) ಗುತ್ತಿಗೆದಾರರುಗಳಿಗೆ ಬಾಕಿಗಳು– ಕಾಮಗಾರಿಗಳಿಗಾಗಿ	**1,09,099.23**	1,01,984.51
(ಸಿ) ಅವಧಿ ಸಾಲದ ಮೇಲೆ ಸಂಚಿತಗೊಂಡಿರುವ ಹಾಗೂ ಪಾವತಿಸಲು ಬಾಕಿಯಿರುವ ಬಡ್ಡಿ	**500.22**	8.94
(ಡಿ) ಹೊಂದಾಣಿಕೆಗಳು ಬಾಕಿಯಿದ್ದಂತೆ ಗುತ್ತಿಗೆದಾರರುಗಳಿಂದ ವಸೂಲಾತಿ	–	5,579.24
(ಇ) ಇತರೆ ಪಾವತಿಸಬೇಕಾಗಿರುವವುಗಳು		
i) ಇತರರಿಗೆ ಪಾವತಿಸಬೇಕಾಗಿರುವವುಗಳು	**3.30**	16.94
ii) ಅವಧಿ ಮುಗಿದಿರುವ ಚೆಕ್ಕುಗಳು	**216.24**	8.25
ಎಫ್) ಉದ್ಯೋಗಿಗಳಿಗೆ ಸಂಬಂಧಿತ ಹೊಣೆಗಳು		
(i) ಪಾವತಿಸಬೇಕಿರುವ ವೇತನ ಹೊಣೆಗಳು	**68.01**	73.47
(ii) ಪಾವತಿಸಬೇಕಿರುವ ವೈದ್ಯಕೀಯ ವೆಚ್ಚಗಳ ಮರುಪಾವತಿ	**4.49**	1.63
ಒಟ್ಟು	**1,43,512.24**	**1,35,572.14**

ಎ) ಮುನ್ನೆಚ್ಚರಿಕೆ ಹಣ ಠೇವಣಿ (ಇಎಂಡಿ) ಮತ್ತು ಹೆಚ್ಚುವರಿ ಭದ್ರತಾ ಠೇವಣಿ (ಎಫ್ಎಸ್‌ಡಿ) ಗಳನ್ನು ಒಳಗೊಂಡಿರುವಂತಹ ಭದ್ರತಾ ಠೇವಣಿಗಳನ್ನು ಗುತ್ತಿಗೆ ಷರತ್ತುಗಳ ಆಧಾರದ ಮೇರೆಗೆ ಗುತ್ತಿಗೆದಾರರುಗಳಿಂದ ವಸೂಲಾತಿ ಮಾಡಲ್ಪಟ್ಟವುಗಳು. ಹೆಚ್ಚುವರಿ ಭದ್ರತಾ ಠೇವಣಿಗಳನ್ನು ಗುತ್ತಿಗೆದಾರರುಗಳು ಷರತ್ತುರಹಿತ ಮತ್ತು ಮಾರ್ಪಡಿಸಲಾಗದ ಬ್ಯಾಂಕು ಖಾತರಿಗಳನ್ನು ಒದಗಿಸುವ ಷರತ್ತಿನೊಂದಿಗೆ ಅವರಿಗೆ ಮರುಪಾವತಿಸಬಹುದು. ಗುತ್ತಿಗೆದಾರರುಗಳ ಲಿಖಿತ ಕೋರಿಕೆಯ ಆಧಾರದ ಮೇರೆಗೆ ಮುನ್ನೆಚ್ಚರಿಕೆ ಹಣ ಠೇವಣಿ (ಇಎಂಡಿ) ಮತ್ತು ಹೆಚ್ಚುವರಿ ಭದ್ರತಾ ಠೇವಣಿ (ಎಫ್ಎಸ್‌ಡಿ) ಗಳನ್ನು ಅವುಗಳ ಮೇಲಿನ ಹಕ್ಕನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವು ಹೊಂದಿರುವುದರೊಂದಿಗೆ ಬಡ್ಡಿಯನ್ನು ಹೊಂದಿರುವ ಭದ್ರತೆಗಳನ್ನಾಗಿಯೂ ಪರಿವರ್ತಿಸಬಹುದು. ಆದ್ದರಿಂದ, ಅವುಗಳನ್ನು ಚಾಲ್ತಿ ಹಣಕಾಸು ಜವಾಬ್ದಾರಿಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ.

ಬಿ) ಭದ್ರತಾ ಠೇವಣಿಗಳು 31.03.2020ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಇ–ಸಾರ್ವಜನಿಕ ಸಂಗ್ರಹಣಾ ಇಲಾಖೆಯಲ್ಲಿ ಇರುವಂತಹ ರೂ.1,927.07 ಲಕ್ಷ (ಹಿಂದಿನ ಸಾಲಿನಲ್ಲಿ ರೂ.12,614.36) ಮೊತ್ತದಷ್ಟು ಮುನ್ನೆಚ್ಚರಿಕೆ ಭದ್ರತಾ ಠೇವಣಿ ಮೊತ್ತವನ್ನೂ ಕಂಪನಿಗೆ ವರ್ಗಾವಣೆಗೊಳ್ಳುವುದು ಬಾಕಿ ಇರುತ್ತದೆ

ಸಿ) ಗುತ್ತಿಗೆದಾರರುಗಳು ಕಾರ್ಯಗತಗೊಳಿಸಿರುವಂತಹ ಹೆಚ್ಚುವರಿ ಪರಿಮಾಣಗಳ ಕಡೆಗೆ (ಸಕ್ಷಮ ಅಧಿಕಾರಿಗಳು ಅನುಮೋದಿಸಿದ್ದ ಪರಿಮಾಣಗಳನ್ನು ಮೀರಿದಂತೆ) ದರಗಳು ಹಾಗೂ ಅಲ್ಲದೆಯೇ ಪಾವತಿಗಳನ್ನು ಮಾಡುವ ಅಗತ್ಯತೆಯಿರುವ ಹೆಚ್ಚುವರಿ ಪರಿಮಾಣಗಳಿಗೆ ಸಂಬಂಧಿಸಿದಂತೆ ಸಕ್ಷಮ ಅಧಿಕಾರಿಗಳ ಅನುಮೋದನೆಯ ಅಗತ್ಯತೆಯಿರುವುದರಿಂದ ಯಾವುದೇ ಅನುವನ್ನೂ ಮಾಡಿರುವುದಿಲ್ಲ. ಅವುಗಳನ್ನು ಅಂತಹ ಮೊತ್ತಗಳನ್ನು ವಾಸ್ತವಿಕವಾಗಿ ಪಾವತಿಸಲಾಗುವ ಸಾಲಿನಲ್ಲಿ ಪರಿಗಣಿಸಲಾಗುವುದು. ಆದಾಗ್ಯೂ, ಆಡಳಿತ ಮಂಡಳಿಯ ದೃಷ್ಟಿಯಲ್ಲಿ ಅಂತಹ ಮೊತ್ತಕ್ಕೆ ಅನುವು ಮಾಡದಿರುವುದು ಒಂದು ವಿಷಯಕ ಅಂಶವಾಗಿರುವುದಿಲ್ಲ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

16 ಅನುವುಗಳು:

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಚಾಲ್ತಿಯೇತರ		
ಈ ಕೆಳಗಿನವುಗಳಿಗಾಗಿ ಅನುವು:		
–ರಜೆ ನಗದೀಕರಣ (ವಿಮಾಗಣಿತ ಮೌಲ್ಯಮಾಪನದ ಪ್ರಕಾರ)	**16.35**	2.55
–ಗ್ರಾಚುಯಿಟಿ (ವಿಮಾಗಣಿತ ಮೌಲ್ಯಮಾಪನದ ಪ್ರಕಾರ)	**16.45**	2.49
ಒಟ್ಟು	**32.80**	**5.04**
ಚಾಲ್ತಿ:		
ಈ ಕೆಳಗಿನವುಗಳಿಗಾಗಿ ಅನುವು:		
–ರಜೆ ನಗದೀಕರಣ	**15.14**	150.19
–ರಜೆ ವೇತನ (ವಿಮಾಗಣಿತ ಮೌಲ್ಯಮಾಪನದ ಪ್ರಕಾರ)	**0.49**	0.17
ಗ್ರಾಚುಯಿಟಿ (ವಿಮಾಗಣಿತ ಮೌಲ್ಯಮಾಪನದ ಪ್ರಕಾರ)	**2.26**	0.01
ಒಟ್ಟು	**17.89**	**150.36**

ಎ) ರಜೆ ನಗದೀಕರಣಕ್ಕೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು ಹಾಗೂ ಎಫ್‌ಡಿ 2(ಇ) ಎಸ್‌ಇಎನ್‌ಐಎಸ್‌ಇ 2020, ಬೆಂಗಳೂರು ದಿನಾಂಕ 05.05.2020ರ ಜೊತೆಯಲ್ಲಿ ಓದಲ್ಪಡುವಂತಹ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 4(ಇ) ಎಸ್‌ಇಎನ್‌ಐಎಸ್‌ಇ 2019, ಬೆಂಗಳೂರು ದಿನಾಂಕ 13.12.2019ರ ಅನುಸಾರ ಅನುವನ್ನು ಮಾಡಲಾಗಿದೆ.

ಬಿ) ಕಂಪನಿಯು ಉದ್ಯೋಗಿಗಳಿಂದ ಸಮನಾದ ಕಾಣಿಕೆಯನ್ನು ಪಡೆದುಕೊಳ್ಳುವುದರ ಜೊತೆಗೆ ರಾಷ್ಟ್ರೀಯ ಪಿಂಚಣಿ ಯೋಜನೆಯ ಕಡೆಗೆ ತನ್ನ ಕಾಣಿಕೆಯನ್ನು ನೀಡುವ ಬಾಧ್ಯತೆಯನ್ನು ಹೊಂದಿರುತ್ತದೆ. ನೋಂದಣಿಯ ಪ್ರಕ್ರಿಯೆಯನ್ನು 05.09.2018ರಂದು ಪೂರ್ಣಗೊಳಿಸಲಾಗಿರುವುದು. ವಿಳಂಬವಾಗಿ ಮಾಡಲಾಗುವಂತಹ ಪಾವತಿಗಳ ಮೇಲೆ ಬಡ್ಡಿ ಪಾವತಿಯನ್ನು ಯೋಜನೆಯು ಚಿಂತಿಸಿರುವುದು ಹಾಗೂ ಅಂತಹ ಬಡ್ಡಿಯನ್ನು ಬ್ಯಾಂಕಿನಿಂದ ಹಣಕಾಸನ್ನು ಹೊರಸೆಳೆಯುವ ಹಾಗೂ ಪಾವತಿಗಳನ್ನು ಮಾಡುವ ಕಂಪನಿಯ ಅಧಿಕಾರಿಗಳಿಂದ (ಡ್ರಾಯಿಂಗ್ ಆಫೀಸರ್ಸ್) ವಸೂಲಾತಿ ಮಾಡತಕ್ಕದ್ದು. 01.07.2016ರ ನಂತರದ ಅವಧಿಗೆ ಆಗಿರುವಂತಹ ವಿಳಂಬಗಳಿಗೆ ಬ್ಯಾಂಕಿನಿಂದ ಹಣಕಾಸನ್ನು ಹೊರಸೆಳೆಯುವ ಹಾಗೂ ಪಾವತಿಗಳನ್ನು ಮಾಡುವ ಕಂಪನಿಯ ಅಧಿಕಾರಿಗಳನ್ನು ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡುವುದನ್ನು ಮನ್ನಾ ಮಾಡುವಂತೆ ಕಂಪನಿಯು ಸರ್ಕಾರವನ್ನು ಕೋರಲಾಗುವುದು. ಈ ನಿಟ್ಟಿನಲ್ಲಿ ಅಗತ್ಯ ಅನುಮೋದನೆಯು ಬಾಕಿಯಿದ್ದಂತೆ 31.03.2020ರವರೆಗಿನ ರೂ.83.14 ಲಕ್ಷ ಮೊತ್ತದಷ್ಟು ಬಡ್ಡಿ ಜವಾಬ್ದಾರಿಗಳನ್ನು ಬ್ಯಾಂಕಿನಿಂದ ಹಣಕಾಸನ್ನು ಹೊರಸೆಳೆಯುವ ಹಾಗೂ ಪಾವತಿಗಳನ್ನು ಮಾಡುವ ಕಂಪನಿಯ ಅಧಿಕಾರಿಗಳಿಂದ ವಸೂಲಾತಿ ಮಾಡಬೇಕಾಗಿರುವುದಾಗಿ ತೋರಿಸಲಾಗಿದೆ. (ಟಿಪ್ಪಣಿ ಸಂಖ್ಯೆ: 11 ನ್ನು ಉಲ್ಲೇಖಿಸುವುದು).

17. ಇತರೆ ಚಾಲ್ತಿಯೇತರ ಹೊಣೆಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್ ತಿಳಿಸಿರುವುದು)
ಉಳಿಸಿಕೊಳ್ಳಲ್ಪಟ್ಟಿರುವ ಹಣಕಾಸಿನ ನ್ಯಾಯಸಮ್ಮತ ಮೌಲ್ಯಮಾಪನದ ಮೇಲೆ ಮುಂದೂಡಲ್ಪಟ್ಟಿರುವ ವರಮಾನ	**2,055.83**	4,406.29
ಗುತ್ತಿಗೆ ಮೇಲಿನ ಜವಾಬ್ದಾರಿ	**11.52**	–
ಒಟ್ಟು	**2,067.35**	**4,406.29**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

17ಎ ಇತರೆ ಚಾಲ್ತಿ ಹೊಣೆಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್ ತಿಳಿಸಿರುವುದು)
(i) ಶಾಸನಬದ್ಧ ಹೊಣೆಗಳು	3,668.82	4,594.66
(ii) ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗಿರುವ ಮುಂಗಡ ಅನುದಾನ	8,632.32	2,152.37
ಒಟ್ಟು	**12,301.14**	**6,747.02**

ಗುತ್ತಿಗೆದಾರರುಗಳಿಗೆ ಕಾಮಗಾರಿಗಳ ಗುತ್ತಿಗೆಗಳನ್ನು ನೀಡುವ ವೇಳೆಯಲ್ಲಿ, ಅವರುಗಳು ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮಾ ಕಚೇರಿಗಳಲ್ಲಿ ನೋಂದಣಿ ಮಾಡಿಸಿಕೊಂಡಿರುವರು ಎಂಬುದನ್ನು ಕಂಪನಿಯು ಖಚಿತಪಡಿಸಿಕೊಳ್ಳುತ್ತದೆ. ಭವಿಷ್ಯ ನಿಧಿ/ಉದ್ಯೋಗಿಗಳ ರಾಜ್ಯ ಭವಿಷ್ಯ ನಿಧಿ ಬಾಕಿಗಳನ್ನು ಪಾವತಿಸುವುದು ಗುತ್ತಿಗೆದಾರರುಗಳ ಜವಾಬ್ದಾರಿಯಾಗಿರುತ್ತದೆ ಹಾಗೂ ಗುತ್ತಿಗೆದಾರರುಗಳಿಗೆ ಪಾವತಿಗಳನ್ನು ಮಾಡುವ ವೇಳೆಯಲ್ಲಿ ಇದರ ಬಗ್ಗೆ ಕಂಪನಿಯು ಖಚಿತಪಡಿಸಿಕೊಳ್ಳುತ್ತದೆ.

18. ವ್ಯಾಪಾರ ಸಂದಾಯವಾಗಬೇಕಾಗಿರುವವುಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್ ತಿಳಿಸಿರುವುದು)
ವೆಚ್ಚಗಳಿಗಾಗಿ	**1,444.19**	35.91
ಸರಬರಾಜುಗಳು/ಸೇವೆಗಳಿಗಾಗಿ	**121.37**	167.10
ಒಟ್ಟು	**1,565.55**	**203.01**

ಕಂಪನಿಯಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇರೆಗೆ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರ ಅಡಿಯಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಪಾವತಿಸಲು ಬಾಕಿಯಿರುವ ಮೊತ್ತಗಳ ವಿವರಗಳು ಈ ಕೆಳಗಿನಂತಿರುತ್ತವೆ :

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್ ತಿಳಿಸಿರುವುದು)
1) ಬಾಕಿಯಿರುವ ಹಾಗೂ ಪಾವತಿಸದೇ ಇರುವ ಅಸಲಿನ ಮೊತ್ತ	–	–
2) ಮೇಲಿನ (1) ಮೊತ್ತದ ಮೇಲೆ ಬಾಕಿಯಿರುವ ಹಾಗೂ ಪಾವತಿಸದಿರುವ ಬಡ್ಡಿ	–	–
3) ಎಂಎಸ್ಎಂಎಇಡಿ ಅಧಿನಿಯಮದ ಅಡಿಯಲ್ಲಿ ಎಲ್ಲಾ ವಿಳಂಬಗಳಿಗಾಗಿ ಪಾವತಿಸಲಾಗಿರುವ ಬಡ್ಡಿ	–	–
4) ವರ್ಷದಲ್ಲಿ ನಿಗದಿತ ದಿನವನ್ನು ಮೀರಿ ಮಾಡಿದ ಪಾವತಿಗಳು	–	–
5) ಮೇಲಿನ (3)ನ್ನು ಹೊರತುಪಡಿಸಿ ವಿಳಂಬದ ಅವಧಿಗೆ ಬಾಕಿಯಿರುವ ಹಾಗೂ ಪಾವತಿಸಬೇಕಿರುವ ಬಡ್ಡಿ	–	–
6) ಸಂಚಿತಗೊಂಡಿರುವ ಹಾಗೂ ಪಾವತಿಸದೇ ಉಳಿದಿರುವ ಬಡ್ಡಿ	–	–
7) ಪಾವತಿಸದೇ ಉಳಿದಿರುವ ಹಾಗೂ ತದನಂತರದ ಸಾಲುಗಳಲ್ಲಿಯೂ ಪಾವತಿಸಬೇಕಾಗಿರುವ ಹೆಚ್ಚುವರಿ ಬಡ್ಡಿಯ ಮೊತ್ತ	–	–

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

19. ಕಾರ್ಯಾಚರಣೆಗಳಿಂದ ವರಮಾನ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್ ತಿಳಿಸಿರುವುದು)
ನೀರಿನ ದರಗಳು		
ರೈತರುಗಳು ಮತ್ತು ನೀರು ಬಳಕೆದಾರರ ಸಹಕಾರಿ ಸಂಘಗಳ ಒಕ್ಕೂಟ	**9.01**	0.92
ಒಟ್ಟು	**9.01**	**0.92**

ಪ್ರಸಕ್ತ ಸಾಲಿನಲ್ಲಿ ಕಂಪನಿಯು ವಾಣಿ ವಿಲಾಸ ಸಾಗರದ ಅಡಿಯಲ್ಲಿನ 12,135 ಹೆಕ್ಟೇರುಗಳ ನೀರಾವರಿ ಸಾಮರ್ಥ್ಯದ ಪೈಕಿ 5,557 ಹೆಕ್ಟೇರುಗಳಿಗೆ ತೋಟಗಾರಿಕೆ ಬೆಳೆಗಳಿಗೆ ನೀರನ್ನು ಬಿಟ್ಟಿರುವುದು ಹಾಗೂ ಗಾಯತ್ರಿ ಜಲಾಶಯದ ಅಡಿಯಲ್ಲಿನ 2,305 ಹೆಕ್ಟೇರುಗಳಷ್ಟು ಒಟ್ಟಾರೆ ನೀರಾವರಿ ಸಾಮರ್ಥ್ಯದ ಪೈಕಿ 523 ಹೆಕ್ಟೇರುಗಳಿಗೆ ನೀರನ್ನು ಬಿಟ್ಟಿರುವುದು. ಮೇಲೆ ತಿಳಿಸಲಾಗಿರುವ ಮೊತ್ತವು ಗಾಯತ್ರಿ ಜಲಾಶಯದಿಂದ ಮತ್ತು ವಾಣಿವಿಳಾಸ ಸಾಗರದಿಂದ ರೈತರುಗಳಿಗೆ ತೋಟಗಾರಿಕೆ ಉದ್ದೇಶಗಳಿಗಾಗಿ ಬಿಡಲಾಗಿದ್ದ ನೀರನ್ನು ಪ್ರತಿನಿಧಿಸುತ್ತದೆ.

20 ಇತರೆ ವರಮಾನಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಅವಧಿಗೆ	31 ಮಾರ್ಚ್ 2019ಕ್ಕೆ ಅಂತ್ಯಗೊಂಡ (ಪುನರ್ ತಿಳಿಸಿರುವುದು)
I. ಇತರೆ ವರಮಾನಗಳು		
ಬ್ಯಾಂಕುಗಳಲ್ಲಿರುವ ಠೇವಣಿಗಳ ಮೇಲಿನ ಬಡ್ಡಿ	**2,934.63**	1,230.15
ಉಳಿತಾಯ ಖಾತೆ ಮತ್ತು ಇತರವುಗಳ ಮೇಲಿನ ಬಡ್ಡಿ ವರಮಾನ	**802.71**	1,136.09
ಸ್ವೀಕರಿಸಲಾಗಿರುವ ಬಾಡಿಗೆ	**40.07**	39.17
ರಬ್ಬಲ್‌ಗಳ ಮಾರಾಟ	**0.47**	–
ವಸೂಲಾತಿ ಮಾಡಲಾಗಿರುವ ದಂಡದ ಮೊತ್ತಗಳು	**1.24**	5.17
ಮುಟ್ಟುಗೋಲು ಹಾಕಿಕೊಳ್ಳಲಾದ ಮುನ್ನೆಚ್ಚರಿಕೆ ಭದ್ರತಾ ಠೇವಣಿ/ಹೆಚ್ಚುವರಿ ಭದ್ರತಾ ಠೇವಣಿಗಳು	**1.52**	–
ಇತರೆ ವರಮಾನ	**4.74**	10.64
ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ ಮೇಲೆ ಆಡಳಿತಾತ್ಮಕ ಶುಲ್ಕಗಳ ವಸೂಲಾತಿ	**31.24**	–
II ಕರ್ನಾಟಕ ಸರ್ಕಾರದಿಂದ ವರಮಾನ ಅನುದಾನಗಳು		
ನಿರ್ವಹಣೆಗಳಿಗಾಗಿ	–	832.29
ವಿಶೇಷ ಘಟಕ ಯೋಜನೆ/ಬುಡಕಟ್ಟು ಜನಾಂಗದ ಉಪ–ಯೋಜನೆ ಕಾಮಗಾರಿಗಳಿಗಾಗಿ	**12,782.74**	27,046.50
ಕರ್ನಾಟಕ ಸರ್ಕಾರ –ನಬಾರ್ಡ್‌ಗಾಗಿ	–	3.74
	12,782.74	27,882.53
ಒಟ್ಟು	**16,599.36**	**30,323.00**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

21. ಸಿಬ್ಬಂದಿ ವೇತನ ಮತ್ತು ಇತರೆ ಸೌಲಭ್ಯಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಅವಧಿಗೆ	31 ಮಾರ್ಚ್ 2019ಕ್ಕೆ ಅಂತ್ಯಗೊಂಡ (ಪುನರ್ ತಿಳಿಸಿರುವುದು)
ವೇತನ	**4,203.82**	3,686.69
ರಜೆ ನಗದೀಕರಣ	**1.75**	147.57
ವೈದ್ಯಕೀಯ ವೆಚ್ಚಗಳ ಮರುಪಾವತಿ	**11.71**	9.87
ಹೊಸ ಪಿಂಚಣಿ ಯೋಜನೆಗೆ ಕಂಪನಿಯ ವಂತಿಕೆ	**209.87**	107.73
ಭವಿಷ್ಯ ನಿಧಿಗೆ ಕಂಪನಿಯ ವಂತಿಕೆ	**9.23**	5.31
ಗ್ರಾಚುಯಿಟಿ (ವಿಮಾಗಣಿತ ಮೌಲ್ಯಮಾಪನದ ಪ್ರಕಾರ)	**1.66**	0.91
ಸಿಬ್ಬಂದಿ ಕ್ಷೇಮಾಭಿವೃದ್ಧಿ ವೆಚ್ಚಗಳು	**15.80**	9.88
	4,453.84	3,967.98
ಕಳೆಯುವುದು: ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಗೆ ವರ್ಗಾವಣೆ ಮಾಡಿದ್ದು	**3,333.67**	3,630.22
ಒಟ್ಟು	**1,120.18**	**337.76**

22 ಕರ್ನಾಟಕ ಸರ್ಕಾರದ ಯೋಜನೆಗಳ ಮೇಲಿನ ವೆಚ್ಚಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಅವಧಿಗೆ	31 ಮಾರ್ಚ್ 2019ಕ್ಕೆ ಅಂತ್ಯಗೊಂಡ (ಪುನರ್ ತಿಳಿಸಿರುವುದು)
ಈ ಕೆಳಗಿನ ಯೋಜನೆಗಳಿಗೆ ಸಂಬಂಧಿಸಿದಂತೆ ವೆಚ್ಚಗಳು:		
–ನಬಾರ್ಡ್ ಕಾಮಗಾರಿಗಳು	–	3.74
ವಿಶೇಷ ಘಟಕ ಯೋಜನೆ/ಬುಡಕಟ್ಟು ಜನಾಂಗದ ಉಪ–ಯೋಜನೆ ಕಾಮಗಾರಿಗಳ ಮೇಲಿನ ವೆಚ್ಚಗಳು	**12,782.74**	27,046.50
ಒಟ್ಟು	**12,782.74**	**27,050.25**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

23. ಇತರೆ ವೆಚ್ಚಗಳು:

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಅವಧಿಗೆ	31 ಮಾರ್ಚ್ 2019ಕ್ಕೆ ಅಂತ್ಯಗೊಂಡ (ಪುನರ್ ತಿಳಿಸಿರುವುದು)
ಸಲಹಾ ಶುಲ್ಕಗಳು	**18.78**	13.13
ಬಾಡಿಗೆ	**40.88**	35.53
ಶಾಸನಬದ್ಧ ಬಾಕಿಗಳ ಮೇಲೆ ಬಡ್ಡಿ, ವಿಳಂಬ ಶುಲ್ಕ ಮತ್ತು ದಂಡ	**29.72**	2.93
ದರಗಳು ಮತ್ತು ತೆರಿಗೆಗಳು	**169.80**	112.29
ಅಂಚೆ ಮತ್ತು ದೂರವಾಣಿ ವೆಚ್ಚಗಳು	**17.50**	16.70
ಮುದ್ರಣ ಮತ್ತು ಲೇಖನ ಸಾಮಗ್ರಿಗಳು	**63.79**	57.81
ವಿದ್ಯುಚ್ಛಕ್ತಿ ಶುಲ್ಕಗಳು	**2,421.56**	26.86
ಪ್ರವಾಸ ವೆಚ್ಚಗಳು		
– ವ್ಯವಸ್ಥಾಪಕ ನಿರ್ದೇಶಕರವರು ಮತ್ತು ಇತರ ನಿರ್ದೇಶಕರುಗಳ	0.60	1.42
– ಇತರರುಗಳು	**167.03**	116.18
ಲೆಕ್ಕಪರಿಶೋಧಕರ ಸಂಭಾವನೆ (ಈ ಕೆಳಗಿನ ಟಿಪ್ಪಣಿಯನ್ನು ಉಲ್ಲೇಖಿಸುವುದು)	**19.36**	13.60
ಬ್ಯಾಂಕು ಶುಲ್ಕಗಳು	**1.07**	0.44
ಕಾನೂನು ಮತ್ತು ವೃತ್ತೀಯ ಶುಲ್ಕಗಳು	**80.02**	100.68
ಉಪಸ್ಥಿತಿ ಶುಲ್ಕ	**4.81**	8.35
ಪ್ರಚಾರ/ ಉದ್ಘಾಟನ ವೆಚ್ಚಗಳು	**78.54**	22.75
ಇತರೆ ಆಡಳಿತಾತ್ಮಕ ವೆಚ್ಚಗಳು	**56.73**	54.79
ವಿಶ್ವವಿದ್ಯಾನಿಲಯ ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜಿಗೆ ವಂತಿಕೆ	–	200.00
ಆಸ್ತಿಗಳ ನಿರ್ವಹಣಾ ವೆಚ್ಚಗಳು		
ಎ) ಕಟ್ಟಡಗಳ ನಿರ್ವಹಣೆ	**97.78**	40.83
ಬಿ) ನಾಲೆಗಳ ನಿರ್ವಹಣೆ	**27.75**	333.56
ಸಿ) ಅಣೆಕಟ್ಟೆಗಳ ನಿರ್ವಹಣೆ	229.62	215.83
ಡಿ) ರಸ್ತೆಗಳ ನಿರ್ವಹಣೆ	**232.02**	907.14
ಇ) ವಾಹನಗಳ ನಿರ್ವಹಣೆ	**122.38**	121.41
ಎಫ್) ಇತರವುಗಳ ನಿರ್ವಹಣೆ	**26.99**	19.91
ಜಿ) ರಸ್ತೆಗಳ ನಿರ್ಮಾಣ	**10,407.30**	3,520.88
ಎಚ್) ಅಡ್ಡಗಟ್ಟೆಗಳು/ಬ್ಯಾರೇಜುಗಳ ನಿರ್ಮಾಣ	**4,973.63**	–
ಮುಟ್ಟುಗೋಲು ಹಾಕಿರುವಂತಹ ಇಎಂಡಿ ಮೊತ್ತದ ಮರುಪಾವತಿ	–	**124.67**
	19,287.66	**60,67.71**
ಕಳೆಯುವುದು: ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ವರ್ಗಾವಣೆ ಮಾಡಲಾಗಿರುವ ಮೊತ್ತ	**799.41**	**369.40**
ಒಟ್ಟು	**18,488.25**	**5,698.31**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಟಿಪ್ಪಣಿ :

ಲೆಕ್ಕಪರಿಶೋದಕರ ಸಂಭಾವನೆ:

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಅವಧಿಗೆ	31 ಮಾರ್ಚ್ 2019ಕ್ಕೆ ಅಂತ್ಯಗೊಂಡ (ಪುನರ್ ತಿಳಿಸಿರುವುದು)
ಶಾಸನಬದ್ಧ ಲೆಕ್ಕಪರಿಶೋಧನಾ ಶುಲ್ಕ	**10.50**	9.00
ಹಣಕಾಸು ವರದಿಗಳ ಮೇಲೆ ಅಂತರಿಕ ಹಣಕಾಸು ನಿಯಂತ್ರಣಗಳ (IFCROFR) ಲೆಕ್ಕ ಪರಿಶೋಧನಾ ಶುಲ್ಕ	**0.50**	0.50
ತೆರಿಗೆ ಲೆಕ್ಕಪರಿಶೋಧನಾ ಶುಲ್ಕ	**1.00**	1.00
ಸರಕು ಮತ್ತು ಸೇವಾ ತೆರಿಗೆಯ ಲೆಕ್ಕ ಪರಿಶೋಧನ ಶುಲ್ಕ	**2.50**	2.50
ಲೆಕ್ಕಪರಿಶೋಧಕರುಗಳ ಸಂಭಾವನೆಯ ಮೇಲೆ 2018–19 ಮತ್ತು 2019–20 ಹಣಕಾಸು ಸಾಲುಗಳಿಗೆ ಜಿಎಸ್‌ಟಿ	**4.23**	–
ಪಾಕೇಟಿನಿಂದ ಭರಿಸಿದ್ದ ವೆಚ್ಚಗಳು	**0.63**	0.60
ಒಟ್ಟು	**19.36**	**13.60**

ಎ) ಕಂಪನಿಯು ಸಕಲೇಶಪುರದ ಎತ್ತಿನಹೊಳೆ ಯೋಜನಾ ಪ್ರದೇಶದಲ್ಲಿ ರಸ್ತೆಗಳ ರೂಪದಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಯ ಮೇಲೆ ವೆಚ್ಚವನ್ನು ಭರಿಸಿರುವುದು. ಈ ಕಾಮಗಾರಿಗಳು ಸ್ಥಳೀಯ ಜನತೆಯ ಉಪಯೋಗಕ್ಕಾಗಿ ಒಂದು ಸಾಮಾಜಿಕ–ಆರ್ಥಿಕ ಕ್ರಮವನ್ನಾಗಿ ಕೈಗೆತ್ತಿಕೊಳ್ಳಲಾಯಿತು ಹಾಗೂ ಇದು ಯೋಜನೆಯ ಪೂರ್ಣಗೊಳ್ಳುವಿಕೆಗೆ ಯಾವುದೇ ರೀತಿಯಲ್ಲಿಯೂ ಸಂಬಂಧವಿರುವುದಿಲ್ಲ ಎಂಬುದಾಗಿ ನಿರ್ಣಯಕ್ಕೆ ಬರಲಾಯಿತು. ಆದ್ದರಿಂದ, ಅಂತಹ ವೆಚ್ಚಗಳನ್ನು ಬಂಡವಾಳ ಕಾಮಗಾರಿಗಳಿಗೆ ಹಂಚಿಕೆ ಮಾಡಲು ಪರಿಗಣಿಸಿರುವುದಿಲ್ಲ.

ಬಿ) ಕರ್ನಾಟಕ ಸರ್ಕಾರವು ವಿಶೇಷ ಅಭಿವೃದ್ಧಿ ಯೋಜನೆ (ಎಸ್‌ಡಿಪಿ ಡಾ. ನಂಜುಂಡಪ್ಪ ಪ್ಯಾಕೇಜು) ಅಡಿಯಲ್ಲಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಗಾಗಿ ಆಯವ್ಯಯದಲ್ಲಿ ಹಣಕಾಸನ್ನು ಹಂಚಿಕೆ ಮಾಡುವ ಮೂಲಕ ಬೆಂಬಲವನ್ನು ನೀಡುತ್ತಿರುವುದು ಹಾಗೂ ಈ ಕಾಮಗಾರಿಗಳನ್ನು ನಿರ್ದಿಷ್ಟ ಪ್ರದೇಶಗಳಲ್ಲಿ ಕಾರ್ಯಗತಗೊಳಿಸುವ ಸಲುವಾಗಿ ಅನುದಾನಗಳನ್ನು ಬಿಡುಗಡೆಗೊಳಿಸುವುದು. ಈ ಕಾಮಗಾರಿಗಳ ಅಡಿಯಲ್ಲಿ ನಿರ್ಮಿಸಲಾಗಿರುವಂತಹ ಸೇತುವೆಗಳು ಮತ್ತು ಅಡ್ಡಗಟ್ಟೆ/ಬ್ಯಾರೇಜುಗಳೂ ಸೇರಿದಂತೆ ನಿರ್ಮಾಣಗಳು ಕಂಪನಿಯ ಆಸ್ತಿಗಳ ಒಂದು ಭಾಗವಾಗಿರುವುದಿಲ್ಲ, ಆದ್ದರಿಂದ ಈ ವೆಚ್ಚಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಖರ್ಚಿಗೆ ಹಾಕಲಾಗಿರುವುದು.

24. ಸಾಮಾನ್ಯ

1) ಸರ್ಕಾರಿ ಆದೇಶ ಸಂಖ್ಯೆ ಡಬ್ಲ್ಯೂ ಆರ್‌ಡಿ 130 ವಿಬೆಎ 2016 ಬೆಂಗಳೂರು ದಿನಾಂಕ 18.11.16ರ ಮೂಲಕ ಕರ್ನಾಟಕ ಸರ್ಕಾರವು ಪ್ರತ್ಯೇಕಿಸಲ್ಪಟ್ಟಿರುವ ಉದ್ದಿಮೆಯ ("ಕರ್ನಾಟಕ ನೀರಾವರಿ ನಿಗಮ ನಿಯಮಿತ" ಅಥವಾ ಕೆಎನ್‌ಎನ್‌ಎಲ್) ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಹೊಸದಾಗಿ ಸೃಷ್ಟಿಸಲ್ಪಟ್ಟಿರುವ ಕಂಪನಿಗೆ ("ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಅಥವಾ ವಿಜೆಎನ್‌ಎಲ್) ವರ್ಗಾಯಿಸುವ ಸಲುವಾಗಿ ತನ್ನ ತಾತ್ವಿಕ ಅನುಮೋದನೆಯನ್ನು ನೀಡಿತು. ಕರ್ನಾಟಕ ನೀರಾವರಿ ನಿಗಮ ನಿಯಮಿತದ ನಿರ್ದೇಶಕರುಗಳ ಮಂಡಳಿಯು 16 ಡಿಸೆಂಬರ್ 2016ರಂದು ನಡೆದಂತಹ ತನ್ನ 75ನೇ ಸಭೆಯಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತ (ಕೆಎನ್‌ಎನ್‌ಎಲ್ ಅಥವಾ 'ಪ್ರತ್ಯೇಕಿಸಲ್ಪಟ್ಟಿರುವ ಕಂಪನಿ') ಹಾಗೂ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ('ವಿಜೆಎನ್‌ಎಲ್' ಅಥವಾ 'ಹೊಸದಾಗಿ ಸೃಷ್ಟಿಸಲ್ಪಟ್ಟಿರುವ ಕಂಪನಿ' ಅಥವಾ 'ಕಂಪನಿ'), ಇವುಗಳ ನಡುವೆ ಹಾಗೂ ಅವುಗಳ ಸಂಬಂಧಿತ ಕಚೇರಿಗಳು, ಉದ್ಯೋಗಿಗಳು ಮತ್ತು ಪ್ರತ್ಯೇಕಗೊಳಿಸಲಾಗುವ ಯೋಜನೆಗಳ ಸಾಲಗಾರರು (ಕ್ರೆಡಿಟಾರ್ಸ್) ಸಾಲಗಳನ್ನು ನೀಡುವವರುಗಳನ್ನು (ಕ್ರೆಡಿಟಾರ್ಸ್) ಹೊಸದಾಗಿ ಸೃಷ್ಟಿಸಲ್ಪಟ್ಟಿರುವ ಕಂಪನಿಗೆ ನಿಗದಿತಗೊಂಡಿರುವ ದಿನಾಂಕ 1 ಜನವರಿ 2017ರ

ದಿನಾಂಕದಲ್ಲಿದ್ದಂತೆ ವರ್ಗಾಯಿಸುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 230 – 232ರ ಅಡಿಯಲ್ಲಿನ ವ್ಯವಸ್ಥೆಗಳ ಯೋಜನೆಗೆ ಅನುಮೋದನೆಯನ್ನು ನೀಡಿತು. ಈ ನಿಟ್ಟಿನಲ್ಲಿ ಪ್ರತ್ಯೇಕಿಸಲ್ಪಟ್ಟಿರುವ ಕಂಪನಿ ಮತ್ತು ಹೊಸದಾಗಿ ಸೃಷ್ಟಿಸಲ್ಪಟ್ಟಿರುವ ಕಂಪನಿಯು ಭಾರತ ಸರ್ಕಾರದ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದಲ್ಲಿ ಒಂದು ಜಂಟಿ ಖಚಿತಪಡಿಸುವಿಕೆ ಮನವಿಯನ್ನು 24 ಜುಲೈ 2019ರಂದು ಸಲ್ಲಿಸಿದವು.

ವ್ಯವಸ್ಥೆಯ ಯೋಜನೆಯು ಪ್ರತ್ಯೇಕಿಸಲ್ಪಟ್ಟಿರುವ ಕಂಪನಿಯ "ಪ್ರತ್ಯೇಕಿಸಲ್ಪಟ್ಟಿರುವ ಉದ್ದಿಮೆಯ ಆಸ್ತಿಗಳು ಮತ್ತು ಜವಾಬ್ದಾರಿಗಳ ಒಟ್ಟಾರೆ ಮೌಲ್ಯವನ್ನು ವಹಿಸಿಕೊಡುವುದು ಮತ್ತು ವರ್ಗಾಯಿಸುವುದನ್ನು, ಹೊಸದಾಗಿ ಸೃಷ್ಟಿಸಲ್ಪಟ್ಟಿರುವ ಕಂಪನಿಯ ಪ್ರತಿಯೊಂದು ಷೇರಿಗೂ ರೂ.1,000/–ದ ದರದಲ್ಲಿ 3,69,89,037 ಈಕ್ವಿಟಿ ಷೇರುಗಳನ್ನು ಪ್ರತ್ಯೇಕಿಸಲ್ಪಟ್ಟಿರುವ ಕಂಪನಿಯ ಏಕೈಕ ಷೇರುದಾರ ಸಂಸ್ಥೆಯಾಗಿರುವ ಕರ್ನಾಟಕ ಸರ್ಕಾರಕ್ಕೆ ಸಂಪೂರ್ಣವಾಗಿ ಪಾವತಿಸಲ್ಪಟ್ಟಿರುವ ("ಹೊಸ ಈಕ್ವಿಟಿ ಷೇರುಗಳು") ಷೇರುಗಳನ್ನಾಗಿ ನೀಡುವುದು ಮತ್ತು ಹಂಚಿಕೆ ಮಾಡುವುದು ಹಾಗೂ ಎರಡೂ ಕಂಪನಿಗಳ ಲೆಕ್ಕಪತ್ರ ಪುಸ್ತಕಗಳಲ್ಲಿ ಲೆಕ್ಕವನ್ನಿಡುವಿಕೆಯನ್ನು ಪರಿಗಣಿಸುವುದನ್ನು ಒಳಗೊಂಡಿರುವುದು. ಪ್ರತ್ಯೇಕಗೊಳಿಸಲಾದ ಯೋಜನೆಗಳನ್ನು ಹೊಸದಾಗಿ ಸೃಷ್ಟಿಸಲಾಗಿರುವ ಕಂಪನಿಗೆ ನಿಗದಿತ ದಿನಾಂಕ ಅಂದರೆ 01.01.2017 ರಿಂದ ಜಾರಿಗೊಳಿಸಲು ವರ್ಗಾಯಿಸುವುದಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರದ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯ, ನವದೆಹಲಿ, ಇದು ಕಂಪನಿಗಳ ಅಧಿನಿಯಮ, 2013ರ ಅಧ್ಯಾಯ XV – ಪರಿಚ್ಛೇದ 230–232ರ ಅಡಿಯಲ್ಲಿ 08 ಮೇ 2020ರಂದು ಅನುಮೋದನೆ ನೀಡಿರುವುದು. ಒಂದುಗೂಡಿಸುವಿಕೆಯನ್ನು 'ವ್ಯವಹಾರ ಸಂಯೋಜನೆ'ಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 103ರ ಅನುಬಂಧ ಸಿ ಅನುಸಾರ 'ಹಿತಾಸಕ್ತಿಗಳನ್ನು ಒಂದುಗೂಡಿಸುವಿಕೆ' ಪದ್ಧತಿಯ ಅಡಿಯಲ್ಲಿ ಲೆಕ್ಕವನ್ನಿಡಲಾಗಿರುವುದು ಹಾಗೂ ತುಲನಾತ್ಮಕ ಅಂಶಗಳನ್ನು ಹಿಂದಿನ ಸಾಲು ಅಂದರೆ 1 ಏಪ್ರಿಲ್ 2018ರ ಪ್ರಾರಂಭದಿಂದಲೂ ಒಂದುಗೂಡಿಸುವಿಕೆಗಾಗಿ ಪುನರ್– ತಿಳಿಸಲ್ಪಟ್ಟಿರುವುದು. ಅದರಂತೆಯೇ, 31 ಮಾರ್ಚ್ 2020 ಹಣಕಾಸು ಸಾಲಿಗೆ ಪುನರ್–ತಿಳಿಸಲ್ಪಟ್ಟಿರುವ ಹಣಕಾಸು ತ:ಖ್ತೆಗಳನ್ನು ತುಲನಾತ್ಮಕ ಮಾಹಿತಿಯೊಂದಿಗೆ ತಯಾರಿಸಲಾಗಿರುವುದು.

2) ಕಂಪನಿಯ ಅಭಿಪ್ರಾಯದಲ್ಲಿ 31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಸಾಲಿಗೆ ತೆರಿಗೆಯನ್ನು ವಿಧಿಸಬಹುದಾದ ಆದಾಯವು ಇರುವುದಿಲ್ಲವಾದ್ದರಿಂದ ಆದಾಯ ತೆರಿಗೆ ಪಾವತಿಗಾಗಿ ಯಾವುದೇ ಅನುವನ್ನೂ ಮಾಡಿರುವುದಿಲ್ಲ.

3) ರೂಪಾಯಿಗಳನ್ನು ಅತೀ ಸಮೀಪದ ಲಕ್ಷ ಮೊತ್ತದಲ್ಲಿ ತಿಳಿಸಲಾಗಿರುವುದು ಹಾಗೂ ಪ್ರಸಕ್ತ ಸಾಲಿನ ಅಂಕಿಸಂಖ್ಯೆಗಳೊಂದಿಗೆ ಅನುಗುಣವಾಗಿರುವ ಸಲುವಾಗಿ ಹಿಂದಿನ ಸಾಲಿನ ಅಂಕಿಸಂಖ್ಯೆಗಳನ್ನು ಪುನರ್–ಗುಂಪುಗೊಳಿಸಲಾಗಿದೆ / ಪುನರ್– ವರ್ಗೀಕರಿಸಲಾಗಿರುವುದು / ಪುನರ್ ತಿಳಿಸಿರುವುದು.

4) 'ವ್ಯವಹಾರಗಳ ಸಂಯೋಜನೆ'ಗೆ ಸಂಬಂಧಿತ 'ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 103ರ ಅಡಿಯ ಇದನ್ನು ಹೊರತುಪಡಿಸಿದಂತೆ, ಹಣಕಾಸು ಅಂಕಿಸಂಖ್ಯೆಗಳನ್ನು ವಿಷಯಕ ಪುನರ್ – ವರ್ಗೀಕರಣ/ ಪುನರ್–ಗುಂಪು ಪುನರ್ ತಿಳಿಸಿರುವುದು. ಮಾಡಿರುವಿಕೆಯು ಈ ಕೆಳಗಿನಂತೆ ಆಗಿರುವವು:

ಎ) ಇತರೆ ಚಾಲ್ತಿ ಆಸ್ತಿಗಳು – ಟಿಪ್ಪಣಿ ಸಂಖ್ಯೆ 11 ಮತ್ತು ಸಾಲಗಳು ಮತ್ತು ಮುಂಗಡಗಳು – ಚಾಲ್ತಿ – ಟಿಪ್ಪಣಿ ಸಂಖ್ಯೆ 6

ಉದ್ಯೋಗಿಗಳಿಂದ ರಾಷ್ಟ್ರೀಯ ಪಿಂಚಣಿ ಯೋಜನೆಯ ಕಡೆಗೆ ಬಾಕಿಯಿರುವ ಮೊತ್ತ – ಇದನ್ನು ಈವರೆಗೂ ಪ್ರತ್ಯೇಕವಾಗಿ ಸಾಲಗಳು ಮತ್ತು ಮುಂಗಡಗಳು – ಚಾಲ್ತಿ (ಟಿಪ್ಪಣಿ ಸಂಖ್ಯೆ 6) ಇದರ ಅಡಿಯಲ್ಲಿ ತೋರಿಸಲಾಗುತ್ತಿದ್ದಿತು. ಈ ವರದಿಯು ಸಂಬಂಧಿಸಿರುವ ಅವಧಿಯ ಅಂತ್ಯದಲ್ಲಿ ಇತರೆ ಚಾಲ್ತಿ ಆಸ್ತಿಗಳು (ಟಿಪ್ಪಣಿ ಸಂಖ್ಯೆ 11), ಈ ಗುಂಪಿನಲ್ಲಿ ಸೇರಿಸಲಾಗಿರುವುದು. ಈ ಪುನರ್–ವರ್ಗೀಕರಣವು ಹಣಕಾಸು ತ:ಖ್ತೆಗಳನ್ನು ಮಂಡಿಸುವಿಕೆಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 1ರ ಅನುಸಾರ ಆಗಿರುತ್ತದೆ.

ಬಿ. ಇತರೆ ಚಾಲ್ತಿ ಆಸ್ತಿಗಳು – ಟಿಪ್ಪಣಿ ಸಂಖ್ಯೆ 11 ಮತ್ತು ಇತರೆ ಹಣಕಾಸು ಆಸ್ತಿಗಳು – ಟಿಪ್ಪಣಿ ಸಂಖ್ಯೆ 10

ರಾಷ್ಟ್ರೀಯ ಪಿಂಚಣಿ ಯೋಜನೆಯ ಕಡೆಗೆ ಇತರರುಗಳಿಂದ ಬಾಕಿ (ವಿಳಂಬವಾಗಿ ಪಾವತಿಸಲಾದ ಅವಧಿಗೆ ಬಡ್ಡಿ) , ಇದನ್ನು ಈವರೆಗೂ ಪ್ರತ್ಯೇಕವಾಗಿ ಇತರೆ ಹಣಕಾಸು ಆಸ್ತಿಗಳು

(ಟಿಪ್ಪಣಿ ಸಂಖ್ಯೆ 10) ಇದರ ಅಡಿಯಲ್ಲಿ ತೋರಿಸಲಾಗುತ್ತಿದ್ದಿತು, ಈ ವರದಿಯು ಸಂಬಂಧಿಸಿರುವ ಅವಧಿಯ ಅಂತ್ಯದಲ್ಲಿ ಇತರೆ ಚಾಲ್ತಿ ಆಸ್ತಿಗಳು (ಟಿಪ್ಪಣಿ ಸಂಖ್ಯೆ 11) ಇದರ ಅಡಿಯಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿರುವುದು. ಈ ಪುನರ್–ವರ್ಗೀಕರಣವು ಹಣಕಾಸು ತ:ಖ್ತೆಗಳನ್ನು ಮಂಡಿಸುವಿಕೆಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 1ರ ಅನುಸಾರ ಆಗಿರುತ್ತದೆ.

ಸಿ. ಇತರೆ ಹಣಕಾಸು ಜವಾಬ್ದಾರಿಗಳು – ಟಿಪ್ಪಣಿ ಸಂಖ್ಯೆ 15 ಮತ್ತು ಇತರೆ ಚಾಲ್ತಿ ಜವಾಬ್ದಾರಿಗಳು – ಟಿಪ್ಪಣಿ ಸಂಖ್ಯೆ 17ಎ

(i) ಶಾಸನಬದ್ಧ ಜವಾಬ್ದಾರಿಗಳು

(ii) ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗಿರುವ ಮುಂಗಡ ಅನುದಾನ

(iii) ಪಾವತಿಸಬೇಕಿರುವ ಉದ್ಯೋಗಿಗಳ ಭವಿಷ್ಯ ನಿಧಿ – ಉದ್ಯೋಗದಾತರ ಕಾಣಿಕೆ – ಶಾಸನಬದ್ಧ ಜವಾಬ್ದಾರಿಗಳು – ಈ ಗುಂಪಿನಲ್ಲಿ ಸೇರಿಸಲಾಗಿದ್ದಿತು.

ಮೇಲಿನವುಗಳನ್ನು ಈವರೆಗೂ ಇತರೆ ಹಣಕಾಸು ಜವಾಬ್ದಾರಿಗಳ ಅಡಿಯಲ್ಲಿ (ಟಿಪ್ಪಣಿ ಸಂಖ್ಯೆ 15) ಪ್ರತ್ಯೇಕವಾಗಿ ತೋರಿಸಲಾಗುತ್ತಿದ್ದಿತು. ಈ ವರದಿಯು ಸಂಬಂಧಿಸಿರುವ ಅವಧಿಯ ಅಂತ್ಯದಲ್ಲಿ ಇದನ್ನು ಇತರೆ ಚಾಲ್ತಿ ಜವಾಬ್ದಾರಿಗಳು (ಟಿಪ್ಪಣಿ ಸಂಖ್ಯೆ 17ಎ) ಇದರ ಅಡಿಯಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿರುವುದು. ಈ ಪುನರ್–ವರ್ಗೀಕರಣವು ಹಣಕಾಸು ತ:ಖ್ತೆಗಳನ್ನು ಮಂಡಿಸುವಿಕೆಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 1ರ ಅನುಸಾರ ಆಗಿರುತ್ತದೆ.

ಡಿ) ಅನುವುಗಳು – ಟಿಪ್ಪಣಿ ಸಂಖ್ಯೆ 16 ಮತ್ತು ಇತರೆ ಚಾಲ್ತಿ ಜವಾಬ್ದಾರಿಗಳು – ಟಿಪ್ಪಣಿ ಸಂಖ್ಯೆ 17ಎ

ಉದ್ಯೋಗದಾತರ ಕಾಣಿಕೆ – ರಾಷ್ಟ್ರೀಯ ಪಿಂಚಣಿ ಯೋಜನೆ – ಇದನ್ನು ಈವರೆಗೂ ಪ್ರತ್ಯೇಕವಾಗಿ ಅನುವುಗಳು – ಚಾಲ್ತಿ (ಟಿಪ್ಪಣಿ ಸಂಖ್ಯೆ 16), ಇದರ ಅಡಿಯಲ್ಲಿ ತೋರಿಸಲಾಗುತ್ತಿದ್ದಿತು, ಈ ವರದಿಯು ಸಂಬಂಧಿಸಿರುವ ಅವಧಿಯ ಅಂತ್ಯದಲ್ಲಿ ಇದನ್ನು (ಟಿಪ್ಪಣಿ ಸಂಖ್ಯೆ 17ಎ) – ಶಾಸನಬದ್ಧ ಜವಾಬ್ದಾರಿಗಳು, ಈ ಗುಂಪಿನಲ್ಲಿ ತೋರಿಸಲಾಗಿರುವುದು. ಈ ಪುನರ್–ವರ್ಗೀಕರಣವು ಹಣಕಾಸು ತ:ಖ್ತೆಗಳನ್ನು ಮಂಡಿಸುವಿಕೆಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 1ರ ಅನುಸಾರ ಆಗಿರುತ್ತದೆ.

ಇ) ಇತರೆ ಹಣಕಾಸು ಜವಾಬ್ದಾರಿಗಳು – ಟಿಪ್ಪಣಿ ಸಂಖ್ಯೆ 15 ಮತ್ತು ಇತರೆ ಹಣಕಾಸು ಆಸ್ತಿಗಳು ಸಾಲಗಳು ಮತ್ತು ಮುಂಗಡಗಳು – ಚಾಲ್ತಿ – ಟಿಪ್ಪಣಿ ಸಂಖ್ಯೆ 10

ಕೆ.ಎನ್.ಎನ್.ಎಲ್‌ಗೆ. ಪಾವತಿಸಲು ಬಾಕಿಯಿರುವುದು – ಇದನ್ನು ಈವರೆಗೂ ಇತರೆ ಹಣಕಾಸು ಜವಾಬ್ದಾರಿಗಳು, ಇದರ ಅಡಿಯಲ್ಲಿ ಪ್ರತ್ಯೇಕವಾಗಿ ತೋರಿಸಲಾಗುತ್ತಿದ್ದಿತು – ಇದನ್ನು ಇದೀಗ ಈ ವರದಿಯು ಸಂಬಂಧಿಸಿರುವ ಅವಧಿಯ ಅಂತ್ಯದಲ್ಲಿ ಸರ್ಕಾರದ ಸಂಸ್ಥೆಗಳಿಂದ ಬರಬೇಕಿರುವ ಬಾಕಿಗಳಿಂದ ಹೊಂದಾಣಿಕೆ ಮಾಡಿ ನಿವ್ವಳ ಮೊತ್ತವನ್ನು ಇತರೆ ಹಣಕಾಸು ಆಸ್ತಿಗಳು – ಟಿಪ್ಪಣಿ ಸಂಖ್ಯೆ 10ರಲ್ಲಿ ತೋರಿಸಲಾಗಿರುವುದು. ಈ ಪುನರ್–ವರ್ಗೀಕರಣವು ಹಣಕಾಸು ತ:ಖ್ತೆಗಳನ್ನು ಮಂಡಿಸುವಿಕೆಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 1ರ ಅನುಸಾರ ಆಗಿರುತ್ತದೆ.

ಪುನರ್–ವರ್ಗೀಕರಣವನ್ನು ನಿಯಂತ್ರಕ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಹಾಗೂ ಹೆಚ್ಚಿನ ಸ್ಪಷ್ಟತೆಯನ್ನು ನೀಡುವ ಸಲುವಾಗಿ ಮಾಡಲಾಗಿರುವುದು.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

25. ಹಣಕಾಸು ತ:ಖ್ತೆಗಳಿಗೆ ಹೆಚ್ಚುವರಿ ಮಾಹಿತಿ

ಎ) ಬಂಡವಾಳಕ್ಕೆ ಸಂಬಂಧಿತ ಬದ್ಧತೆಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020 ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
ಬಂಡವಾಳ ಲೆಕ್ಕದಲ್ಲಿ ಕಾರ್ಯಗತಗೊಳಿಸಲು ಬಾಕಿ ಉಳಿದಿರುವ ಗುತ್ತಿಗೆಗಳ ಅಂದಾಜು ಮೊತ್ತವು ಹಾಗೂ ಅನುವು ಮಾಡಿರುವುದಿಲ್ಲ (ಖಚಿತಪಡಿಸಿಕೊಂಡಿರುವಷ್ಟರ ಮಟ್ಟಿಗೆ). ನಿರ್ದಿಷ್ಟಪಡಿಸಲಾಗಿರುವಷ್ಟರ ಮಟ್ಟಿಗೆ ನಗದು ಹರಿವನ್ನು 2019–20 ಮತ್ತು ತದನಂತರದ ಹಣಕಾಸು ಸಾಲುಗಳಲ್ಲಿ ಸಂಭವಿಸುವುದನ್ನು ನಿರೀಕ್ಷಿಸಬಹುದು. ಮೊತ್ತಗಳು ಕಂಪನಿಯು ನೀಡಿರುವ ಪ್ರಮಾಣೀಕರಣದ ಆಧಾರದ ಮೇರೆಗೆ ಆಗಿರುತ್ತದೆ ಹಾಗೂ ಅದನ್ನು ಲೆಕ್ಕಪರಿಶೋಧಕರು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡಿರುವರು.	14,55,264	17,57,700

ಬಿ) ಸಾದಿಲ್ವಾರು ಹೊಣೆಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ರಲ್ಲಿದ್ದಂತೆ	31 ಮಾರ್ಚ್ 2019ರಲ್ಲಿದ್ದಂತೆ (ಪುನರ್‌ತಿಳಿಸಿರುವುದು)
i) ಕಂಪನಿಯ ಪ್ರತಿಯಾಗಿ ಪಾವತಿಗಾಗಿನ ಕೋರಿಕೆಗಳನ್ನು ಸಾಲ/ಋಣ ಎಂಬುದಾಗಿ ಸ್ವೀಕೃತಿಪತ್ರವನ್ನು ನೀಡದಿರುವುದು (ಖಚಿತ ಪಡಿಸಿಕೊಂಡ ಮಟ್ಟಿಗೆ)	137	137
ii) ಕಂಪನಿಯು ಆಕಸ್ಮಿಕವಾಗಿ ಪಾವತಿಸುವ ಬಾಧ್ಯತೆಯನ್ನು ಹೊಂದಿರುವ ಇತರೆ ಹಣಕಾಸುಗಳು – ಭೂಸ್ವಾಧೀನ ಪ್ರಕರಣಗಳು (ಹೆಚ್ಚಿಸಲ್ಪಟ್ಟ ಪರಿಹಾರ/ಬಡ್ಡಿ/ದಂಡ, ಇವುಗಳನ್ನು ಒಳಗೊಂಡಂತೆ – ವಿವಿಧ ವಿವಾದಗಳ ನಡೆವಳಿಗಳು, ಕಾರ್ಮಿಕ ಪ್ರಕರಣಗಳು ಮತ್ತು ನ್ಯಾಯಾಲಯ ಪ್ರಕರಣಗಳು ಕಂಪನಿಯು ಮೇಲೆ ತಿಳಿಸಲಾದ ಸಾದಿಲ್ವಾರು/ಆಕಸ್ಮಿಕ ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ಯಾವುದೇ ಮರುಪಾವತಿಗಳನ್ನೂ ನಿರೀಕ್ಷಿಸುವುದಿಲ್ಲ	ಖಚಿತ ಪಡೆಸಿಕೊಳ್ಳಲು ಸಾಧ್ಯವಿರುವುದಿಲ್ಲ	ಖಚಿತ ಪಡೆಸಿಕೊಳ್ಳಲು ಸಾಧ್ಯವಿರುವುದಿಲ್ಲ
iii) ಖಾತರಿಗಳು	ಇಲ್ಲ	ಇಲ್ಲ
(ವಿವಿಧ ನ್ಯಾಯಾಲಯಗಳ ಪ್ರಕರಣಗಳು, ವಿವಾದಗಳು ಹಾಗೂ ಕಂಪನಿಯು ಪ್ರಶ್ನಿಸಿರುವ ಕೋರಿಕೆಗಳ ಯಥಾರ್ಥತೆಗಳ ಕಾರಣ, ಸಂಪನ್ಮೂಲಗಳನ್ನು ಈ ಹಂತದಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ).		

ಸಿ) ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು 1 ಜುಲೈ 2017ರಿಂದ ಜಾರಿಗೆ ಬಂದಂತೆ ಕಾರ್ಯಗತಗೊಳಿಸುವಿಕೆ

ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) ಜಾರಿಗೆ ತರುವುದಕ್ಕೆ ಮುಂಚಿತವಾಗಿ ಗುತ್ತಿಗೆದಾರರುಗಳಿಗೆ ನೀಡಲಾಗಿದ್ದ ಕಾಮಗಾರಿಗಳು ಪ್ರಸಕ್ತ ಇದ್ದಂತಹ ತೆರಿಗೆಯನ್ನು ಒಳಗೊಂಡಂತೆ ಆಗಿದ್ದವು. ಜಲ ಸಂಪನ್ಮೂಲ ಇಲಾಖೆಯು 2011–12ರಿಂದ 2016–17 ಹಣಕಾಸು ಸಾಲುಗಳಿಗೆ ದರಗಳ ಪಟ್ಟಿಯನ್ನು ಪುನರ್–ರಚಿಸಿರುವುದು. ಇತರೆ ಇಲಾಖೆಗಳು, ಅವೆಂದರೆ ಲೋಕೋಪಯೋಗಿ ಇಲಾಖೆ, ಬೆಂಗಳೂರು ನೀರು

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಸರಬರಾಜು ಮತ್ತು ಒಳಚರಂಡಿ ಮಂಡಳಿ, ಸಣ್ಣ ನೀರಾವರಿ, ಇತ್ಯಾದಿಗಳು ಪುನರ್–ರಚಿಸಿರುವಂತಹ ದರ ಪಟ್ಟಿಗಳನ್ನು ಇನ್ನೂ ನೀಡಬೇಕಾಗಿರುತ್ತದೆ. ಆದಾಗ್ಯೂ, ಯೋಜನಾ ಕಚೇರಿಗಳು ಕರ್ನಾಟಕ ಸರ್ಕಾರದ ಜಲ ಸಂಪನ್ಮೂಲ ಇಲಾಖೆಯು ಪುನರ್–ರಚಿಸಿರುವಂತಹ ದರ ಪಟ್ಟಿಯ ಅನುಸಾರ ಕಾಮಗಾರಿಗಳ ಐಟಂಗಳಿಗೆ ಕಾಮಗಾರಿವಾರು ಜಿಎಸ್‌ಟಿಯ ಪ್ರಭಾವನ್ನು ಲೆಕ್ಕಹಾಕಿರುವವು. ಕಂಪನಿಯು ಈ ಲೆಕ್ಕಹಾಕಿರುವಿಕೆಗಳನ್ನು ಹಾಗೂ ಜಿಎಸ್‌ಟಿಯ ಪ್ರಭಾವವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಒಂದು ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯನ್ನು ನೇಮಕ ಮಾಡಿರುವುದು. ಈ ನಿಟ್ಟಿನಲ್ಲಿ ಪರಿಶೀಲನಾ ಕಾರ್ಯವು ಪ್ರಗತಿಯಲ್ಲಿರುವುದು.

26 ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ) ನಿಯಮಗಳು, 2015ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ಬಹಿರಂಗಪಡಿಸುವಿಕೆಯ ಅಗತ್ಯತೆಗಳು:

ಹೊಸ ಲೆಕ್ಕವನ್ನಿಡುವಿಕೆಗೆ ಸಂಬಂಧಿಸಿದ ನಿರ್ದಿಷ್ಟ ನಿರ್ದೇಶನಗಳು ಅನ್ವಯಗೊಳ್ಳುವಿಕೆ

i) ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 116 – ಗುತ್ತಿಗೆಗಳು

ಕಂಪನಿಯು ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 17ನ್ನು ರದ್ದುಗೊಳಿಸುವ ಗುತ್ತಿಗೆಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 116ನ್ನು 1 ಏಪ್ರಿಲ್ 2019 ರಿಂದ ಅಳವಡಿಸಿಕೊಂಡಿರುವುದು ಹಾಗೂ ಅನ್ವಯಗೊಳಿಸಿರುವಿಕೆ ಮತ್ತು ಬಹಿರಂಗಪಡಿಸಿರುವಿಕೆಗಳನ್ನು ಟಿಪ್ಪಣಿ ಸಂಖ್ಯೆ 26 (iv)ರಲ್ಲಿ ವಿವರಿಸಲಾಗಿರುವುದು.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 12 –ಆದಾಯ ತೆರಿಗೆಗಳು

ಕಂಪನಿಯು ಆದಾಯ ತೆರಿಗೆಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 12ನ್ನು 1 ಏಪ್ರಿಲ್ 2019 ರಿಂದ ಅಳವಡಿಸಿಕೊಂಡಿರುವುದು. ಕಂಪನಿಯು ಮೇಲೆ ತಿಳಿಸಲಾದಂತಹ ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 12ನ್ನು ಅದರ ಪ್ರಾರಂಭಿಕ ಅನ್ವಯಗೊಳಿಸುವಿಕೆಯ ದಿನಾಂಕದಿಂದ ಜಾರಿಗೆ ತಂದಿತು. ಈ ನಿಟ್ಟಿನಲ್ಲಿ ಬಹಿರಂಗಪಡಿಸಿರುವಿಕೆಗಳು ಟಿಪ್ಪಣಿ ಸಂಖ್ಯೆ 26 (xi)ರ ಅನುಸಾರ ಆಗಿರುತ್ತವೆ.

ಸಂಸ್ಥೆಯು ಲಾಭ ಅಥವಾ ನಷ್ಟದ ಆಧಾರದ ಮೇರೆಗೆ ಷೇರು ಲಾಭಾಂಶಗಳು, ಇತರೆ ಸಮಗ್ರ ಆದಾಯ ಅಥವಾ ಈಕ್ವಿಟಿ, ಇವುಗಳಿಗೆ ಸಂಬಂಧಿಸಿದಂತೆ ಸಂಸ್ಥೆಯು ಈ ಹಿಂದಿನ ವ್ಯವಹಾರಗಳು ಅಥವಾ ಘಟನೆಗಳನ್ನು ಯಾವ ರೀತಿ ಪ್ರಾರಂಭಿಕವಾಗಿ ಪರಿಗಣಿಸಿದ್ದವೋ ಅವುಗಳ ಆಧಾರದ ಮೇರೆಗೆಯೇ ಆದಾಯ ತೆರಿಗೆಯ ಪರಿಣಾಮಗಳನ್ನು ಪರಿಗಣಿಸತಕ್ಕದ್ದು ಎಂಬುದರ ಬಗ್ಗೆಯೂ ತಿದ್ದುಪಡಿಯು ಸ್ಪಷ್ಟನೆ ನೀಡುತ್ತದೆ. ಕಂಪನಿಯು ಈ ಹಿಂದೆ ಯಾವುದೇ ಷೇರು ಲಾಭಾಂಶವನ್ನು ಘೋಷಿಸಿರುವುದಿಲ್ಲ ಮತ್ತು ಆದ್ದರಿಂದ ಲಾಭ ಅಥವಾ ನಷ್ಟದ ಮೇಲೆ, ಸಮಗ್ರ ಆದಾಯ ಅಥವಾ ಈಕ್ವಿಟಿಯ ಮೇಲೆ ಅದರ ಪರಿಣಾಮವನ್ನು ಬಹಿರಂಗಪಡಿಸುವುದು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 23 – ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ಸಾಲ ವೆಚ್ಚಗಳು

ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳು ನಿರ್ದಿಷ್ಟ ಸಾಲವನ್ನು ಪಡೆಯುವಿಕೆಯ ಗುರಿಯಾಗಿಸಿಕೊಳ್ಳಲಾಗಿದ್ದ ಬಳಕೆ ಅಥವಾ ಮಾರಾಟ ಪೂರ್ಣಗೊಂಡ ಕೂಡಲೆಯೇ ನಿರ್ಧಿಷ್ಟ ಆಸ್ತಿಯನ್ನು ನಿರ್ಮಿಸುವ/ತಯಾರಿಸುವ ಸಲುವಾಗಿ ಅಗತ್ಯವಿರುವ ಗಮನಾರ್ಹ ಚಟುವಟಿಕೆಗಳನ್ನು ಪಡೆದುಕೊಂಡ ಕೂಡಲೆಯೇ ಸಂಸ್ಥೆಯು ಬಂಡವಾಳೀಕರಿಸುವಿಕೆ ದರವನ್ನು ಲೆಕ್ಕಹಾಕುವ ವೇಳೆಯಲ್ಲಿ ನಿರ್ದಿಷ್ಟ ಸಾಲಗಳನ್ನು ಪಡೆಯುವಿಕೆಯನ್ನು ಸಾಮಾನ್ಯ ಸಾಲಗಳನ್ನು ಪಡೆಯುವಿಕೆ ಎಂಬುದಾಗಿ ಪರಿಗಣಿಸತಕ್ಕದ್ದು ಎಂಬುದಾಗಿ ತಿದ್ದುಪಡಿಯು ಸ್ಪಷ್ಟನೆಯನ್ನು ನೀಡಿರುವುದು. ಕಂಪನಿಯು, ಈ ತಿದ್ದುಪಡಿಯನ್ನು 1 ಏಪ್ರಿಲ್ 2019 ರಂದು ಅನ್ವಯಗೊಳಿಸುವುದು. ಕಂಪನಿಯ ಪ್ರಸಕ್ತ ಪರಿಪಾಠವು ಈ ತಿದ್ದುಪಡಿಗಳ ಅನುಸಾರವೇ ಆಗಿರುವುದರಿಂದ, ಕಂಪನಿಯು ತನ್ನ ಹಣಕಾಸು ತ:ಖ್ತೆಗಳ ಮೇಲೆ ಯಾವುದೇ ಪರಿಣಾಮವನ್ನೂ ನಿರೀಕ್ಷಿಸುವುದಿಲ್ಲ.

ii) 1 ಏಪ್ರಿಲ್ 2020ರಿಂದ ಅನ್ವಯಗೊಳ್ಳುವಂತಹ ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡಕ್ಕೆ ಮಾಡಲಾಗಿರುವಂತಹ ಪ್ರಮುಖ ತಿದ್ದುಪಡಿಗಳು

ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) ತಿದ್ದುಪಡಿ ನಿಯಮಗಳು, 2020, 24 ಜುಲೈ 2020ರಿಂದ ಜಾರಿಗೆ ಬರುವಂತೆ ಅಧಿಸೂಚನೆಯನ್ನು ನೀಡಿರುವುದು. ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ಈ ತಿದ್ದುಪಡಿಗಳ ಪರಿಣಾಮವು ಈ ಕೆಳಗಿನಂತಿರುವುದು :

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ –103 – ವ್ಯಾಪಾರವ್ಯವಹಾರ ಸಂಯೋಜನೆಗಳು

ಆಸ್ತಿಗಳನ್ನು ವರ್ಗಾವಣೆಯ ಮೂಲಕ ಪಡೆದುಕೊಳ್ಳುವ ಅಥವಾ ಜವಾಬ್ದಾರಿಗಳನ್ನು ತನ್ನ ಸಂಸ್ಥೆಗೆ ಸೇರ್ಪಡೆಗೊಳಿಸಿಕೊಳ್ಳುವ ಮೂಲಕ ಒಂದು ವ್ಯವಹಾರವನ್ನು ನಡೆಸುವಂತಹ ಒಂದು ವ್ಯವಹಾರವು ಅಥವಾ ಇತರೆ ಘಟನೆಯು ಈ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡವನ್ನು ಅನ್ವಯಗೊಳಿಸುವ ಮೂಲಕ ಒಂದು ವ್ಯಾಪಾರವ್ಯವಹಾರ ಸಂಯೋಜನೆಯಾಗಿದ್ದಲ್ಲಿ, ವರ್ಗಾವಣೆಯ ಮೂಲಕ ಪಡೆದುಕೊಳ್ಳಲಾದ ಆಸ್ತಿಗಳು ಒಂದು ವ್ಯಾಪಾರವ್ಯವಹಾರ ಆಗಿರದಿದ್ದಲ್ಲಿ, ವರದಿಯನ್ನು ಸಲ್ಲಿಸುವಂತಹ ಸಂಸ್ಥೆಯು ಈ ವ್ಯಾಪಾರವ್ಯವಹಾರವನ್ನು ಅಥವಾ ಇತರೆ ಘಟನೆಯನ್ನು ಒಂದು ಆಸ್ತಿಯನ್ನು ವರ್ಗಾವಣೆಯ ಮೂಲಕ ಪಡೆದುಕೊಂಡಂತೆಯೇ ಲೆಕ್ಕವನ್ನಿಡತಕ್ಕದ್ದು.

ಕಂಪನಿಯು ಭಾರತ ಸರ್ಕಾರದ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದ 8 ಮೇ 2020 ದಿನಾಂಕದ ಆದೇಶದ ಮೂಲಕ ಕರ್ನಾಟಕ ನೀರಾವರಿ ನಿಗಮ ನಿಯಮಿತವು ನಿರ್ವಹಿಸುತ್ತಿದ್ದಂತಹ ಎತ್ತಿನಹೊಳೆ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ, ವಾಣಿ ವಿಲಾಸ ಸಾಗರ ಮತ್ತು ಗಾಯತ್ರಿ ಜಲಾಶಯ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಒಂದು ಪ್ರತ್ಯೇಕಗೊಳಿಸುವಿಕೆ ಯೋಜನೆಯ ಮೂಲಕ ಪಡೆದುಕೊಂಡಿತು ಹಾಗೂ ಜಾರಿಯಾದಂತಹ ಆ ಯೋಜನೆಯು ವಾಸ್ತವಿಕವಾಗಿ ಆಸ್ತಿಗಳು ಮತ್ತು ಜವಾಬ್ದಾರಿಗಳ ವರ್ಗಾವಣೆಯಾಗಿರುವುದು.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 109 – ಹಣಕಾಸು ಸಾಧನಗಳು

ತಿದ್ದುಪಡಿಯು ಸುರಕ್ಷಣಾ (ಹೆಡ್ಜಿಂಗ್) ವ್ಯವಹಾರಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಸಡಿಲಿಕೆಯನ್ನು ಅನುವು ಮಾಡಿರುವುದು. ಕಂಪನಿಯು ಯಾವುದೇ ಸುರಕ್ಷಣಾ (ಹೆಡ್ಜಿಂಗ್) ವ್ಯವಹಾರಗಳನ್ನೂ ಹೊಂದಿರುವುದಿಲ್ಲವಾದ್ದರಿಂದ, ಮೇಲೆ ತಿಳಿಸಲಾದಂತಹ ತಿದ್ದುಪಡಿಯು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 107 – ಹಣಕಾಸು ಸಾಧನಗಳು – ಬಹಿರಂಗಪಡಿಸುವಿಕೆಗಳ ಅಗತ್ಯತೆ

ಈ ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡಕ್ಕೆ ಮಾಡಲಾಗಿರುವ ತಿದ್ದುಪಡಿಯು ಸುರಕ್ಷಣಾ (ಹೆಡ್ಜಿಂಗ್) ಸಾಧನಗಳ ಮೇಲೆ ಬಡ್ಡೀ ದರ ಬೆಂಚುಮಾರ್ಕು ಸುಧಾರಣೆಯಿಂದ ಉದ್ಭವಿಸಬಹುದಾದಂತಹ ಅನಿಶ್ಚಿತತೆಯ ಪರಿಣಾಮವನ್ನು ಬಹಿರಂಗಪಡಿಸುವ ಅಗತ್ಯತೆಯನ್ನು ಹೊಂದಿರುತ್ತದೆ. ಕಂಪನಿಯು ಸುರಕ್ಷಣಾ (ಹೆಡ್ಜಿಂಗ್) ವ್ಯವಹಾರಗಳನ್ನು ಹೊಂದಿರುವುದಿಲ್ಲವಾದ್ದರಿಂದ/ ಮಾಡಿರುವುದಿಲ್ಲವಾದ್ದರಿಂದ, ಮೇಲೆ ತಿಳಿಸಲಾದಂತಹ ತಿದ್ದುಪಡಿಯು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ –116 – ಗುತ್ತಿಗೆಗಳು

ಈ ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡಕ್ಕೆ ಮಾಡಲಾಗಿರುವ ತಿದ್ದುಪಡಿಯು, ಕೋವಿಡ್ – 19 ಪ್ಯಾಂಡೆಮಿಕ್ ಕಾರಣದಿಂದಾಗಿ ಸ್ವೀಕರಿಸಲಾದಂತಹ ಬಾಡಿಗೆ ರಿಯಾಯಿತಿಗಳ ನಿರ್ಧಾರಣೆಗೆ ಸಂಬಂಧಿಸಿದಂತೆ ಈ ತಿದ್ದುಪಡಿಯನ್ನು ಅನ್ವಯಗೊಳಿಸುವ ಕಂಪನಿಗೆ ಒಂದು ಗುತ್ತಿಗೆ ಮಾರ್ಪಾಡು/ ತಿದ್ದುಪಡಿಯಾಗಿ ಸಡಿಲಿಕೆಯನ್ನು ಒದಗಿಸಿರುತ್ತದೆ. ಕಂಪನಿಯು ಗುತ್ತಿಗೆ ಬಾಡಿಗೆ ಪಾವತಿಗಳಲ್ಲಿ ಯಾವುದೇ ರಿಯಾಯಿತಿಗಳನ್ನು ಪಡೆದುಕೊಂಡಿಲ್ಲವಾದ್ದರಿಂದ, ಮೇಲೆ ತಿಳಿಸಲಾದಂತಹ ತಿದ್ದುಪಡಿಯು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 1 ಹಣಕಾಸು ತ:ಖ್ತೆಗಳ ಮಂಡನೆ

ತಿದ್ದುಪಡಿಯು "ವಿಷಯಕ" ಪದದ ವಿವರಣೆಯನ್ನು ಬದಲಾವಣೆಗೊಳಿಸುವ ಉದ್ದೇಶವನ್ನು ಹೊಂದಿರುತ್ತದೆ. ಈ ತಿದ್ದುಪಡಿಯ ಅನುಸಾರ, ತಿಳಿಸುವ ಅಗತ್ಯವಿರುವುದನ್ನು ತಿಳಿಸದಿರುವುದು, ತಪ್ಪಾಗಿ ತಿಳಿಸುವುದು ಅಥವಾ ಸುಸ್ಪಷ್ಟವಾಗಿ ತಿಳಿಸದಿರುವುದು, ಇಂತಹ ಮಾಹಿತಿಯು ಸಹ ವಿಷಯಕ ಅಂಶಗಳಾಗುತ್ತವೆ, ಇಂತಹ ವಿಷಯಕ ಅಂಶಗಳು ಒಂದು ನಿರ್ದಿಷ್ಟ ವರದಿಯನ್ನು ಸಲ್ಲಿಸುವ ಸಂಸ್ಥೆಯ ಹಣಕಾಸು ಮಾಹಿತಿಯನ್ನು ಒದಗಿಸುವಂತಹ ಒಂದು ಸಾಮಾನ್ಯ ಉದ್ದೇಶದ ಹಣಕಾಸು ತ:ಖ್ತೆಗಳ ಬಳಕೆದಾರರು ತೆಗೆದುಕೊಳ್ಳುವ ನಿರ್ಣಯಗಳು ಅಥವಾ ತೀರ್ಮಾನಗಳ ಮೇಲೆ ಪ್ರಭಾವವನ್ನು ಬೀರುತ್ತವೆ.

ಕಂಪನಿಯು ಈ ವಿವರಣೆಯನ್ನು ಎಲ್ಲಾ ದೃಷ್ಟಿಕೋನಗಳಿಂದಲೂ ವಿಶ್ಲೇಷಿಸಿರುವುದು ಹಾಗೂ ಈ ಮೇಲಿನ ತಿದ್ದುಪಡಿಯಿಂದ ಕಂಪನಿಯ ಲೆಕ್ಕಪತ್ರಗಳ ಮೇಲೆ ಯಾವುದೇ ಪ್ರಭಾವವೂ ಇರುವುದಿಲ್ಲ.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 8 ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ, ಅಂದಾಜುಗಳು ಮತ್ತು ತಪ್ಪುಗಳ ಬದಲಾವಣೆಗಳು.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 1–ಹಣಕಾಸು ತಃಖ್ತೆಗಳ ಮಂಡನೆ "ವಿಷಯಕ" ಪದದ ವಿವರಣೆಯನ್ನು ಮಾರ್ಪಾಡುಗೊಳಿಸಿರುವುದು ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 8ರಲ್ಲಿ ತಿದ್ದುಪಡಿ ಮಾಡುವಲ್ಲಿ ಪರಿಣಮಿಸಿರುವುದು. ಕಂಪನಿಯು ಈ ತಿದ್ದುಪಡಿಯ ಪ್ರಭಾವವನ್ನು ನಿರ್ಧಾರಣೆ ಮಾಡಿರುವುದು ಹಾಗೂ ಈ ಮೇಲಿನ ತಿದ್ದುಪಡಿಯಿಂದ ಕಂಪನಿಯ ಲೆಕ್ಕಪತ್ರಗಳ ಮೇಲೆ ಯಾವುದೇ ಪ್ರಭಾವವೂ ಇರುವುದಿಲ್ಲ.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 10 ವರದಿಗೆ ಸಂಬಂಧಿಸಿರುವ ಅವಧಿಯ ನಂತರದ ಘಟನೆಗಳು: ತಿದ್ದುಪಡಿಯು ಈ ಕೆಳಗಿನಂತೆ ಅನುವು ಮಾಡಿರುತ್ತದೆ :

"ವರದಿಯು ಸಂಬಂಧಿಸಿರುವ ಅವಧಿಯ ನಂತರದ ಹೊಂದಾಣಿಕೆ ಮಾಡಲಾಗದ ಘಟನೆಗಳು ವಿಷಯಕ ಅಂಶವಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಬಹಿರಂಗಪಡಿಸದಿರುವಿಕೆಯು ಒಂದು ನಿರ್ದಿಷ್ಟ ವರದಿಯನ್ನು ಸಲ್ಲಿಸುವ ಸಂಸ್ಥೆಯ ಹಣಕಾಸು ಮಾಹಿತಿಯನ್ನು ಒದಗಿಸುವಂತಹ ಒಂದು ಸಾಮಾನ್ಯ ಉದ್ದೇಶದ ಹಣಕಾಸು ತ:ಖ್ತೆಗಳ ಬಳಕೆದಾರರು ತೆಗೆದುಕೊಳ್ಳುವ ನಿರ್ಣಯಗಳು ಅಥವಾ ತೀರ್ಮಾನಗಳ ಮೇಲೆ ಪ್ರಭಾವವನ್ನು ಭೀರುತ್ತವೆ. ಅದರಂತೆಯೇ, ಒಂದು ಸಂಸ್ಥೆಯು ವರದಿಯು ಸಂಬಂಧಿಸಿರುವ ಅವಧಿಯ ನಂತರದ ಹೊಂದಾಣಿಕೆ ಮಾಡಲಾಗದ ಘಟನೆಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಪ್ರತಿಯೊಂದು ವಿಷಯಕ ಅಂಶಗಳ ಪ್ರವರ್ಗಕ್ಕೂ ಬಹಿರಂಗಪಡಿಸತಕ್ಕದ್ದು.

ಎ) ಘಟನೆಯ ಸ್ವರೂಪ; ಮತ್ತು,

ಬಿ) ಅದರ ಹಣಕಾಸು ಪ್ರಭಾವದ ಒಂದು ಅಂದಾಜು ಅಥವಾ "ಅಂತಹ ಅಂದಾಜನ್ನು ಮಾಡಲು ಸಾಧ್ಯವಿರುವುದಿಲ್ಲ ಎಂಬುದಾಗಿ ಒಂದು ಹೇಳಿಕೆ."

ಕಂಪನಿಯು ಕರ್ನಾಟಕ ನೀರಾವರಿ ನಿಗಮ ನಿಯಮಿತದ ಜೊತೆಯಲ್ಲಿ ರಾಷ್ಟ್ರೀಯ ಕಂಪನಿ ನ್ಯಾಯಿಕ ಪ್ರಾಧಿಕಾರದ ಮುಂದೆ ಪ್ರತ್ಯೇಕಗೊಳಿಸುವಿಕೆಗಾಗಿ ಒಂದು ಅರ್ಜಿಯನ್ನು ಸಲ್ಲಿಸಿತು ಹಾಗೂ ಪ್ರತ್ಯೇಕಗೊಳಿಸುವಿಕೆಯು 1 ಜನವರಿ 2017ರಿಂದ ಜಾರಿಗೆ ಬಂದಂತೆ ಆದೇಶವನ್ನು 8 ಮೇ 2020ರಂದು ಸ್ವೀಕರಿಸಿತು. ಕಂಪನಿಯು ಮೇಲೆ ತಿಳಿಸಲಾದಂತಹ ವ್ಯವಹಾರದ ವರ್ಗಾವಣೆಯನ್ನು ತನ್ನ ಲೆಕ್ಕಪತ್ರ ಪುಸ್ತಕಗಳಲ್ಲಿ ಹೊಂದಾಣಿಕೆ ಮಾಡಿರುವುದು ಹಾಗೂ ವರದಿಯು ಸಂಬಂಧಿಸಿರುವ ಅವಧಿಗೆ ಹೊಂದಾಣಿಕೆ ಮಾಡಲಾಗದ ಯಾವುದೇ ಘಟನೆಗಳೂ ನಡೆದಿರುವುದಿಲ್ಲ.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 34 ಮಧ್ಯಂತರ ಹಣಕಾಸು ವರದಿ

ಕಂಪನಿಯು ಮಧ್ಯಂತರ ಹಣಕಾಸು ವರದಿಯನ್ನು ಮಂಡಿಸುವುದಿಲ್ಲ ಮತ್ತು ಆದ್ದರಿಂದ ಮೇಲೆ ತಿಳಿಸಲಾದಂತಹ ತಿದ್ದುಪಡಿಯು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 37 ಅನುವುಗಳು, ಆಕಸ್ಮಿಕ ಜವಾಬ್ದಾರಿಗಳು ಮತ್ತು ಆಕಸ್ಮಿಕ ಆಸ್ತಿಗಳು

ವರದಿಯು ಸಂಬಂಧಿಸಿರುವಂತಹ ಅವಧಿಯ ಅಂತ್ಯದಲ್ಲಿ ಒಂದು ರಚನಾತ್ಮಕ ಬದ್ಧತೆಗೆ ಕಾರಣವಾಗುವಂತಹ ಘಟನೆಗಳನ್ನು ಮೇಲೆ ತಿಳಿಸಲಾದಂತಹ ತಿದ್ದುಪಡಿಯು ನಿರ್ದಿಷ್ಟಪಡಿಸಿರುವುದು. ಕಂಪನಿಯು ಯೋಜನೆಗಳನ್ನು ಪುನರ್–ರಚಿಸುವ ಯೋಜನೆಯನ್ನು ಹೊಂದಿರುವುದಿಲ್ಲವಾದ್ದರಿಂದ, ಮೇಲೆ ತಿಳಿಸಲಾದಂತಹ ತಿದ್ದುಪಡಿಯು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

(iii) ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳು (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 19):

"ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 19 ಅಡಿಯಲ್ಲಿ ಬಹಿರಂಗಪಡಿಸುವಿಕೆ"

ಸಾಮಾನ್ಯ :

ಪ್ರಸಕ್ತ ಸಾಲಿಗೆ ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳಿಗೆ ಅನುವುಗಳನ್ನು 31.03.2020ರಲ್ಲಿದ್ದಂತೆ ವಿಮಾ ಗಣಿತ ಮೌಲ್ಯಮಾಪನವನ್ನು ಉಪಯೋಗಿಸಿಕೊಂಡು ಅನುವು ಮಾಡಲಾಗಿರುವುದು. ಅದರಂತೆಯೇ 31.03.2020ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ "ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳಿಗೆ" ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 19 ಅಡಿಯಲ್ಲಿ ಬಹಿರಂಗಪಡಿಸುವಿಕೆಯನ್ನು ಈ ಕೆಳಗೆ ನೀಡಲಾಗಿರುವುದು :

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಎ. ಗ್ರಾಚುಯಿಟಿ

ಈ ಕೆಳಗಿನ ದಿನಾಂಕಗಳಲ್ಲಿದ್ದಂತೆ ಗ್ರಾಚುಯಿಟಿ ಲೆಕ್ಕಹಾಕುವ ಸಲುವಾಗಿ ವಿಮಾಗಣಿತ ಪದ್ಧತಿಯಲ್ಲಿ ಮೌಲ್ಯಮಾಪನ ಮಾಡುವ ಸಲುವಾಗಿ ಪ್ರಮುಖ ವಿಮಾಗಣಿತ ಊಹೆಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31.03.2020	31.03.2019
ಮರಣ ದರ ಕೋಷ್ಟಕ	ಐಎಎಲ್‌ಎಂ (2012–14)	ಐಎಎಲ್‌ಎಂ (2006–08)
ರಿಯಾಯಿತಿ ದರ	6.75	7.60
ವೇತನ ಹೆಚ್ಚಳ	6.00	6.00
ನಿವೃತ್ತಿ ವಯಸ್ಸು (ವರ್ಷಗಳಲ್ಲಿ)	60	60

ಸಂತುಲನ ಪಟ್ಟಿಯಲ್ಲಿ ಪರಿಗಣಿಸಲಾಗಿರುವ ಮೊತ್ತ :

ಕಂಪನಿಯ ಸಂತುಲನ ಪಟ್ಟಿಯಲ್ಲಿ ನಮೂದಿಸಬೇಕಾದ ನಿವ್ವಳ ಜವಾಬ್ದಾರಿ/ಆಸ್ತಿಯ ಒಟ್ಟು ಮೊತ್ತವನ್ನು ಹಿಂದಿನ ಅವಧಿಯ ತುಲನಾತ್ಮಕ ಅಂಕಿಸಂಖ್ಯೆಗಳೊಂದಿಗೆ ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

(ರೂ. ಲಕ್ಷಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಿಗೆ ಅಂತ್ಯಗೊಂಡ ಅವಧಿಗೆ	
	31 ಮಾರ್ಚ್ 2020	31 ಮಾರ್ಚ್ 2019
ಹಣಕಾಸನ್ನು ಹೂಡಲ್ಪಟ್ಟಿರುವ ವಿವರಿಸಲ್ಪಟ್ಟಿರುವ ಪ್ರಯೋಜನಗಳ ಬದ್ಧತೆಯ ಪ್ರಸಕ್ತ ಮೌಲ್ಯ	–	–
ಯೋಜಿತ ಆಸ್ತಿಗಳ ನ್ಯಾಯಸಮ್ಮತ ಮೌಲ್ಯ	–	–
ನಿವ್ವಳ ಹಣಕಾಸನ್ನು ತೊಡಗಿಸಿರುವ ಬದ್ಧತೆಗಳು	–	–
ಹಣಕಾಸನ್ನು ತೊಡಗಿಸಿರದ ವಿವರಿಸಲ್ಪಟ್ಟಿರುವ ಪ್ರಯೋಜನಗಳ ಬದ್ಧತೆಯ ಪ್ರಸಕ್ತ ಮೌಲ್ಯ	**4.76**	2.50
ಆಸ್ತಿಯ ಇತಿಮಿತಿಯ ಕಾರಣ ಪರಿಗಣಿಸದಿರುವ ಮೊತ್ತ	–	–
ಸಂತುಲನ ಪಟ್ಟಿಯಲ್ಲಿ ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನ ಜವಾಬ್ದಾರಿ/(ಆಸ್ತಿ)	**4.76**	2.50
ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನ ಜವಾಬ್ದಾರಿಯನ್ನು/ (ಆಸ್ತಿಯನ್ನು) ಈ ಕೆಳಗಿನಂತೆ ವಿಭಜಿಸಲಾಗಿರುವುದು:		
ಚಾಲ್ತಿ	**0.02**	**0.01**
ಚಾಲ್ತಿಯೇತರ	**4.74**	**2.49**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಲಾಭ ಮತ್ತು ನಷ್ಟ ತ:ಖ್ತೆಯಲ್ಲಿನ ವೆಚ್ಚಗಳು

ಪ್ರಸಕ್ತ ಅವಧಿಗೆ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ತೋರಿಸಲಾಗಿರುವ ವೆಚ್ಚಗಳನ್ನು ಅವುಗಳಿಗೆ ಅನುರೂಪವಾದಂತಹ ಈ ಹಿಂದಿನ ಅವಧಿಯ ಅಂಕಿಸಂಖ್ಯೆಗಳೊಂದಿಗೆ ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಿಗೆ ಅಂತ್ಯಗೊಂಡ ಅವಧಿಗೆ	
	31 ಮಾರ್ಚ್ 2020	31 ಮಾರ್ಚ್ 2019
ಪ್ರಸಕ್ತ ಸೇವಾ ವೆಚ್ಚಗಳು	**1.47**	0.86
ಹಿಂದಿನ ಸೇವಾ ವೆಚ್ಚಗಳು	–	–
ಆಡಳಿತಾತ್ಮಕ ವೆಚ್ಚಗಳು	–	–
ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನ ಜವಾಬ್ದಾರಿ/(ಆಸ್ತಿಯ) ಮೇಲಿನ ಬಡ್ಡಿ	**0.19**	0.06
ಇತ್ಯರ್ಥಗೊಂಡ ಸಮಯದಲ್ಲಿನ (ಗಳಿಕೆಗಳು)/ನಷ್ಟಗಳು	–	–
ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಖರ್ಚಿಗೆ ಹಾಕಲಾದ ಒಟ್ಟಾರೆ ವೆಚ್ಚಗಳು	**1.66**	**0.92**

ಇತರೆ ಸಮಗ್ರ ವರಮಾನದಲ್ಲಿ ನಮೂದಿಸಲಾಗಿರುವ ಮೊತ್ತ

ಪ್ರಸಕ್ತ ಅವಧಿಯಲ್ಲಿ ಇತರೆ ಸಮಗ್ರ ವರಮಾನದಲ್ಲಿ ತತ್‌ಕ್ಷಣವೇ ನಮೂದಿಸಲಾಗಿರುವಂತಹ ಪುನರ್–ನಿರ್ಧಾರಣೆ ಮಾಡಲಾಗಿರುವಂತಹ ಬಾಬುಗಳೂ ಹಾಗೂ ಒಳಸೇರ್ಪಡೆಗೊಳಿಸಿಕೊಳ್ಳಲ್ಪಟ್ಟಂತಹ ಅಥವಾ ಇತ್ಯರ್ಥಗೊಳಿಸಲ್ಪಟ್ಟಂತಹ ಜವಾಬ್ದಾರಿಗಳ ಪ್ರಭಾವದ ಒಟ್ಟು ಮೊತ್ತವನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

(ರೂ. ಲಕ್ಷಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಿಗೆ ಅಂತ್ಯಗೊಂಡ ಅವಧಿಗೆ	
	31 ಮಾರ್ಚ್ 2020	31 ಮಾರ್ಚ್ 2019
ಲಾಭ ಮತ್ತು ನಷ್ಟ ತ:ಖ್ತೆಯ ಹೊರಗೆ ಇತರೆ ಸಮಗ್ರ ವರಮಾನದಲ್ಲಿ ಪರಿಗಣಿಸಲಾದ ಪ್ರಾರಂಭಿಕ ಮೊತ್ತ	**0.72**	(0.07)
ಹಣಕಾಸಿನ ಊಹೆಗಳಲ್ಲಿ ಬದಲಾವಣೆಗಳ ಕಾರಣ	-	–
ಪ್ರಸಕ್ತ ಅವಧಿಯಲ್ಲಿನ ಪುನರ್–ನಿರ್ಧಾರಣೆಗಳು	**0.46**	0.08
ಜನಸಂಖ್ಯಾಶಾಸ್ತ್ರದ ಊಹೆಗಳಲ್ಲಿ ಬದಲಾವಣೆಗಳು	-	–
ಅನುಭವದ ಹೊಂದಾಣಿಕೆಗಳು	**0.14**	0.72
ಯೋಜಿತ ಆಸ್ತಿಯ ವಾಸ್ತವಿಕ ಪ್ರತಿಫಲ	-	–
ಕಳೆಯುವುದು: ಯೋಜಿತ ಅಸ್ತಿಗಳ ಮೇಲಿನ ಬಡ್ಡಿ	-	–
ಆಸ್ತಿಯ ಮಿತಿಯ ಪ್ರಭಾವವನ್ನು ಪರಿಗಣಿಸುವ ಸಲುವಾಗಿ ಹೊಂದಾಣಿಕೆ	-	–
ಲಾಭ ಮತ್ತು ನಷ್ಟ ತ:ಖ್ತೆಯ ಹೊರಗೆ ಇತರೆ ಸಮಗ್ರ ವರಮಾನದಲ್ಲಿ ಪರಿಗಣಿಸಲಾದ ಅಂತಿಮ ಮೊತ್ತ	**1.32**	**0.72**

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಪ್ರಯೋಜನಗಳ ಬದ್ಧತೆಗಳ ಚಲನೆ

(ರೂ. ಲಕ್ಷಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಿಗೆ ಅಂತ್ಯಗೊಂಡ ಅವಧಿಗೆ	
	31 ಮಾರ್ಚ್ 2020	31 ಮಾರ್ಚ್ 2019
ವಿವರಿಸಲ್ಪಟಿರುವ ಪ್ರಯೋಜನಗಳ ಬದ್ಧತೆಯ ಪ್ರಾರಂಭಿಕ ಮೊತ್ತ	**2.50**	0.79
ಪ್ರಸಕ್ತ ಸೇವಾ ವೆಚ್ಚ	**1.47**	0.86
ಹಿಂದಿನ ಸೇವಾ ವೆಚ್ಚ	–	–
ವಿವರಿಸಲ್ಪಟಿರುವ ಪ್ರಯೋಜನಗಳ ಬದ್ಧತೆಯ ಮೇಲಿನ ಬಡ್ಡಿ	**0.19**	0.06
ಈ ಕೆಳಗಿನ ಕಾರಣಗಳಿಂದಾಗಿ ಪುನರ್–ನಿರ್ಧಾರಣೆ:		
ಹಣಕಾಸಿನ ಊಹೆಗಳಲ್ಲಿನ ಬದಲಾವಣೆಗಳಿಂದ ಉದ್ಭವಿಸುವ ವಿಮಾಗಣಿತ ಪದ್ಧತಿಯಲ್ಲಿ ಲೆಕ್ಕಹಾಕುವಿಕೆಯ ನಷ್ಟ/ (ಗಳಿಕೆ)	**0.46**	0.08
ಜನಸಂಖ್ಯಾಶಾಸ್ತ್ರದ ಪ್ರಕಾರ ಊಹೆಗಳಲ್ಲಿ ಬದಲಾವಣೆಗಳಿಂದ ಉದ್ಭವಿಸುವ ವಿಮಾಗಣಿತ ಪದ್ಧತಿಯಲ್ಲಿ ಲೆಕ್ಕಹಾಕುವಿಕೆಯ ನಷ್ಟ/ (ಗಳಿಕೆ)	–	–
ಅನುಭವದಲ್ಲಿನ ಬದಲಾವಣೆಗಳ ಕಾರಣ ಉದ್ಭವಿಸುವ ವಿಮಾಗಣಿತ ಪದ್ಧತಿಯಲ್ಲಿ ಲೆಕ್ಕಹಾಕುವಿಕೆಯ ನಷ್ಟ/(ಗಳಿಕೆ)	**0.14**	0.72
ಪಾವತಿಸಲಾದ ಪ್ರಯೋಜನಗಳು	–	–
ಊಹಿಸಲಾದ/ (ಇತ್ಯರ್ಥಗೊಳಿಸಲಾದ)* ಜವಾಬ್ದಾರಿಗಳು	–	–
ಇತ್ಯರ್ಥಗೊಳಿಸಲ್ಪಟ್ಟವುಗಳ ಕಾರಣ ಕಾಣೆಯಾದ ಜವಾಬ್ದಾರಿಗಳು	–	–
ವಿವರಿಸಲ್ಪಟ್ಟಿರುವ ಪ್ರಯೋಜನ ಬದ್ಧತೆಯ ಅಂತಿಮ ಮೊತ್ತ	**4.76**	**2.50**

* ವ್ಯವಹಾರ ಸಂಯೋಜನೆ ಅಥವಾ ಅಂತರ ಗುಂಪು ವರ್ಗಾವಣೆಯ ಕಾರಣದಿಂದ.

ನಿವ್ವಳ ಜವಾಬ್ದಾರಿ/ಆಸ್ತಿಯ ಸಮನ್ವಯಗೊಳಿಸುವಿಕೆ

ಕಂಪನಿಯ ಸಂತುಲನ ಪಟ್ಟಿಯಲ್ಲಿ ಪರಿಗಣಿಸಲಾಗಿರುವಂತೆ ಲೆಕ್ಕವನ್ನಿಡುವಿಕೆಯ ಅವಧಿಯ ಪ್ರಾರಂಭದಿಂದ ಅಂತ್ಯದವರೆಗೆ ನಿವ್ವಳ ಜವಾಬ್ದಾರಿ/ ಆಸ್ತಿಯ ಚಲನೆಯನ್ನು ಈ ಕೆಳಗೆ ತೋರಿಸಲಾಗಿದೆ :

(ರೂ. ಲಕ್ಷಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಿಗೆ ಅಂತ್ಯಗೊಂಡ ಅವಧಿಗೆ	
	31 ಮಾರ್ಚ್ 2020	31 ಮಾರ್ಚ್ 2019
ಪ್ರಾರಂಭಿಕ ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನ ಜವಾಬ್ದಾರಿ/ (ಆಸ್ತಿ)–	**2.50**	0.79
ಲಾಭ ಮತ್ತು ನಷ್ಟ ತ:ಖ್ತೆಗೆ ಹಾಕಲಾಗಿರುವ ವೆಚ್ಚಗಳು	**1.66**	0.92
ಲಾಭ ಮತ್ತು ನಷ್ಟ ತ:ಖ್ತೆಯ ಹೊರಗೆ ಪರಿಗಣಿಸಲಾಗಿರುವ ಮೊತ್ತ	**0.60**	0.79
ಉದ್ಯೋಗದಾತರ ಕಾಣಿಕೆ	–	–
ಒಳಸೇರ್ಪಡೆಗೊಳಿಸಿಕೊಳ್ಳಲಾದ ಅಥವಾ (ಇತ್ಯರ್ಥಗೊಳಿಸಲಾದ) ಜವಾಬ್ದಾರಿಯ ಪ್ರಭಾವ*	–	–
ಅಂತಿಮ ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನ ಜವಾಬ್ದಾರಿ/(ಆಸ್ತಿ)	**4.76**	**2.50**

* ವ್ಯವಹಾರ ಸಂಯೋಜನೆ ಅಥವಾ ಅಂತರ ಗುಂಪು ವರ್ಗಾವಣೆಯ ಕಾರಣ.

ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಬಿ. ರಜೆ ಸಂಬಳ

ಈ ಕೆಳಗಿನ ದಿನಾಂಕಗಳಲ್ಲಿದ್ದಂತೆ ರಜೆ ಸಂಬಳ ಲೆಕ್ಕಹಾಕುವ ಸಲುವಾಗಿ ವಿಮಾಗಣಿತ ಪದ್ಧತಿಯಲ್ಲಿ ಮೌಲ್ಯಮಾಪನ ಮಾಡುವ ಸಲುವಾಗಿ ಪ್ರಮುಖ ವಿಮಾಗಣಿತ ಊಹೆಗಳು

ವಿವರಗಳು	31.03.2020	31.03.2019
ಮರಣ ದರ ಕೋಷ್ಟಕ	**ಐಎಎಲ್‌ಎಂ (2012–14)**	ಐಎಎಲ್‌ಎಂ (2006–08)
ರಿಯಾಯಿತಿ ದರ	**6.75**	7.60
ವೇತನ ಹೆಚ್ಚಳ	**6.00**	6.00
ನಿವೃತ್ತಿ ವಯಸ್ಸು (ವರ್ಷಗಳಲ್ಲಿ)	**60**	60

ಮೌಲ್ಯಮಾಪನ ಫಲಿತಾಂಶಗಳು

31 ಮಾರ್ಚ್ 2020ರಲ್ಲಿದ್ದಂತೆ ಕಂಪನಿಯ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಪಾರಿಹಾರ ನೀಡಲ್ಪಟ್ಟ ಗೈರುಹಾಜರಿಯ ವಿವರಿಸಲ್ಪಟ್ಟಿರುವ ಪ್ರಯೋಜನಗಳ ಬದ್ಧತೆಯು ರೂ.3.21 ಲಕ್ಷಗಳು/– ಆಗುತ್ತದೆ.

ಚಾಲ್ತಿ ಹಾಗೂ ಚಾಲ್ತಿಯೇತರವುಗಳ ನಡುವಿನ ವಿವರಿಸಲ್ಪಟ್ಟಿರುವ ಪ್ರಯೋಜನಗಳ ಬದ್ಧತೆಯ ವಿಭಜನೆಯು ಈ ಕೆಳಗಿನಂತಿರುತ್ತದೆ :

(ರೂ. ಲಕ್ಷಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಿಗೆ ಅಂತ್ಯಗೊಂಡ ಅವಧಿಗೆ	
	31 ಮಾರ್ಚ್ 2020	31 ಮಾರ್ಚ್ 2019
ಚಾಲ್ತಿ ಜವಾಬ್ದಾರಿ	**0.18**	0.17
ಚಾಲ್ತಿಯೆತರ ಜವಾಬ್ದಾರಿ	**3.03**	2.55
ನಿವ್ವಳ ಜವಾಬ್ದಾರಿ	**3.21**	**2.72**

(iv) 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಪ್ರಸಕ್ತ ಸಾಲಿಗೆ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 116ರ ಅಡಿಯಲ್ಲಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಬಹಿರಂಗಪಡಿಸುವಿಕೆಗಳ ಮೇಲಿನ ಟಿಪ್ಪಣಿ

ಭಾರತೀಯ ಲೆಕ್ಕವನಿಡುವಿಕೆ ಮಾನದಂಡ 116ರ ಅನುಷ್ಠನ – ಗುತ್ತಿಗೆದಾರನಾಗಿ ಗುತ್ತಿಗೆ

ಗುತ್ತಿಗೆಗಳಿಗೆ ಸಂಬಂಧಿತ ಈ ಹಿಂದಿನ ಮಾನದಂಡ – 17ರ ಅಡಿಯಲ್ಲಿ, ಮಾಲಿಕತ್ವದ ಸಂಭಾವ್ಯ ಅಪಾಯಗಳು ಹಾಗೂ ಪ್ರತಿಫಲಗಳ ಒಂದು ಗಮನಾರ್ಹವಾದಂತಹ ಭಾಗವನ್ನು ಗುತ್ತಿಗೆಗೆ ನೀಡುವವರು ಉಳಿಸಿಕೊಳ್ಳುತ್ತಿದ್ದಂತಹ ಗುತ್ತಿಗೆಗಳನ್ನು ಕಾರ್ಯಾಚರಣೆಗಳ ಗುತ್ತಿಗೆಗಳ ಅಡಿಯಲ್ಲಿ ವರ್ಗೀಕರಿಸಲಾಗುತ್ತಿದ್ದಿತು. ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 116ರ ಅಡಿಯಲ್ಲಿ ಕಂಪನಿಯು ಗುತ್ತಿಗೆಗಳಿಗಾಗಿ ಅಂದರೆ ಸಂತುಲನ ಪಟ್ಟಿಯಲ್ಲಿರುವ ಗುತ್ತಿಗೆಗಳಿಗೆ ಆಸ್ತಿಗಳ ಬಳಸುವಿಕೆಯ ಹಕ್ಕನ್ನು ಹಾಗೂ ಗುತ್ತಿಗೆ ಜವಾಬ್ದಾರಿಗಳನ್ನು ಪರಿಗಣಿಸುವುದು.

1 ಏಪ್ರಿಲ್ 2019ರಿಂದ ಜಾರಿಗೆ ಬಂದಂತೆ, ಕಂಪನಿಯು ಗುತ್ತಿಗೆಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ 116ನ್ನು ಅಳವಡಿಸಿಕೊಂಡಿರುವುದು ಹಾಗೂ ಪರಿಷ್ಕೃತ ಪೂರ್ವಾನ್ವಯ ಪದ್ಧತಿಯನ್ನು ಉಪಯೋಗಿಸಿಕೊಂಡು 1 ಏಪ್ರಿಲ್ 2019ರಂದು ಇದ್ದಂತಹ ಎಲ್ಲಾ ಗುತ್ತಿಗೆ ಬಾಡಿಗೆ ಗುತ್ತಿಗೆಗಳಿಗೆ (ಕಾಂಟ್ರಾಕ್ಟ್) ಅನ್ವಯಿಸಿರುವುದು. ಕಂಪನಿಯು ಎರಡು ಗುತ್ತಿಗೆಗಳನ್ನು ಮಾತ್ರ ಅವೆಂದರೆ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯಿಂದ ಭೂಮಿಯ ಗುತ್ತಿಗೆಗಳನ್ನು ಹೊಂದಿರುವುದು. ಅದರ ಅಧಾರದ ಮೇರೆಗೆ ಹಾಗೂ ಮಾನದಂಡದಲ್ಲಿ ನಿರ್ದಿಷ್ಟ ಮಧ್ಯಂತರ ಅನುವುಗಳ ಅಡಿಯಲ್ಲಿ ಅನುಮತಿ ನೀಡಲಾಗಿರುವಂತೆ, ಕಂಪನಿಯು ಸಮಗ್ರ ಅಂಕಿಸಂಖ್ಯೆಗಳನ್ನು ಪುನರ್–ತಿಳಿಸಿರುವುದಿಲ್ಲ.

1 ಏಪ್ರಿಲ್ 2019ರಲ್ಲಿದ್ದಂತೆ ಗುತ್ತಿಗೆ ಜವಾಬ್ದಾರಿಗಳು ಹಾಗೂ ಅವುಗಳಿಗೆ ಅನುಗುಣವಾಗಿ ಗುತ್ತಿಗೆದಾರರ ಸಾಲಗಳ ಮೇಲಿನ ಹೆಚ್ಚುವರಿ ಬಡ್ಡಿ ದರಗಳನ್ನು ಉಪಯೋಗಿಸಿಕೊಂಡು ರಿಯಾಯಿತಿಗಳನ್ನು ನೀಡಿದ ನಂತರ ಬಾಕಿ ಉಳಿದಿರುವಂತಹ ಗುತ್ತಿಗೆ ಬಾಡಿಗೆಗಳ ಪ್ರಸಕ್ತ ಮೌಲ್ಯದಲ್ಲಿ ಆಸ್ತಿಗಳ ಬಳಸುವಿಕೆ ಹಕ್ಕುಗಳನ್ನು ನಿರ್ಧಾರಣೆ ಮಾಡಲಾಗುವುದು. 1 ಏಪ್ರಿಲ್ 2019ರಲ್ಲಿದಂತೆ ಗುತ್ತಿಗೆ ಜವಾಬ್ದಾರಿಗಳಿಗೆ ಅನ್ವಯಗೊಳಿಸಲಾಗಿರುವ ಗುತ್ತಿಗೆದಾರರ ಸಾಲಗಳನ್ನು ಪಡೆಯುವುದರ ಮೇಲಿನ ಹೆಚ್ಚುವರಿ ಬಡ್ಡಿ ದರಗಳ ತೂಗಲ್ಪಟ್ಟ ಸರಾಸರಿ ವಾರ್ಷಿಕ ದರವು 8.54% ಆಗಿರುವುದು.

ಈ ಬದಲಾವಣೆಯು ಭಾರತೀಯ ಲೆಕ್ಕವನಿಡುವುದಕ್ಕೆ ಮಾನದಂಡ 116ರ ಅನ್ವಯ ಪರಿವರ್ತನೆಯ ನಿಬಂಧನೆಗಳಿಗೆ ಅನುಗುಣವಾಗಿರುತ್ತದೆ ಪರಿವರ್ತನೆಯ ಮೇಲೆ ಹೊಸ ಮಾನದಂಡವನ್ನು ಅಳವಡಿಸಿಕೊಂಡಿದ್ದು ಭಾರತೀಯ ರೂಪಾಯಿಗಳು 11.77 ಲಕ್ಷ ಮೊತ್ತದಷ್ಟು ಆಸ್ತಿಗಳ ಬಳಸುವಿಕೆ ಹಕ್ಕಿನ ಮೌಲ್ಯವನ್ನು ಹಾಗೂ ಭಾರತೀಯ ರೂಪಾಯಿಗಳಷ್ಟು 11.77 ಲಕ್ಷ ಮೊತ್ತದಷ್ಟು ಗುತ್ತಿಗೆ ಜವಾಬ್ದಾರಿಗಳ ಮೌಲ್ಯವನ್ನು ಪರಿಗಣಿಸುವಲ್ಲಿ ಪರಿಣಮಿಸಿತು.

i) **ಅನ್ವಯಗೊಳಿಸಲಾದ ಪ್ರಾಯೋಗಿಕ ಸಮಯೋಚಿತ ಕ್ರಮಗಳು**

ಕಂಪನಿಯು ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 17ನ್ನು ಅನ್ವಯಿಸುವ ಮೂಲಕ ಈ ಹಿಂದೆ ಗುರುತಿಸಲಾಗಿದ್ದ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಪುನರ್–ನಿರ್ಧಾರಣೆ ಮಾಡದಿರುವ ಆಯ್ಕೆಯನ್ನು ಮಾಡಿಕೊಂಡಿತು. ಮುಂದುವರೆದು, ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 116ನ್ನು ಮೊದಲ ಬಾರಿಗೆ ಅನ್ವಯಿಸುವ ಸಂದರ್ಭದಲ್ಲಿಯೂ ಸಹ ಕಂಪನಿಯು ಮಾನದಂಡವು ಅನುಮತಿಸಿರುವಂತಹ ಈ ಕೆಳಗಿನ ಪ್ರಾಯೋಗಿಕ ಸಮಯೋಚಿತ ಕ್ರಮಗಳನ್ನು ಉಪಯೋಗಿಸಿಕೊಂಡಿತು :

ಎ) ನ್ಯಾಯಸಮ್ಮತವಾಗಿ ಒಂದೇ ರೀತಿಯ ಸ್ವರೂಪಗಳೊಂದಿಗಿನ ಗುತ್ತಿಗೆಗಳ ವಿಭಾಗಕ್ಕೆ ಒಂದು ಏಕೈಕ ರಿಯಾಯಿತಿ ದರವನ್ನು ಅನ್ವಯಿಸುವುದು.

ಬಿ) ದುರ್ಬಲಗೊಂಡಿರುವಿಕೆಯ ಒಂದು ಸಮೀಕ್ಷೆಯನ್ನು ನಡೆಸುವುದಕ್ಕೆ ಬದಲಿ ಕ್ರಮವಾಗಿ ಮೂಲ /ಗುತ್ತಿಗೆಗಳು ಅನುವುಗಳು, ಆಕಸ್ಮಿಕ ಜವಾಬ್ದಾರಿಗಳು ಮತ್ತು ಆಕಸ್ಮಿಕ ಆಸ್ತಿಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ – 37ರ ಅಡಿಯಲ್ಲಿ ಬರುತ್ತವೆಯೇ ಎಂಬುದರ ಬಗ್ಗೆ ಅದರ ಈ ಹಿಂದಿನ ನಿರ್ಧಾರಣೆಯನ್ನು ಅವಲಂಭಿಸುವುದು.

ಸಿ) 1 ಏಪ್ರಿಲ್ 2019ರಲ್ಲಿದ್ದಂತೆ ಯಾವುದೇ ಗುರುತರವಾದಂತಹ/ ಹೊಣೆಗಾರಿಕೆಯ ಗುತ್ತಿಗೆಗಳು ಇರಲಿಲ್ಲ.

ಡಿ) ಮೂಲ ಅನ್ವಯದ ದಿನಾಂಕದಂದು ಆಸ್ತಿಗಳ ಬಳಸುವಿಕೆಯ ಹಕ್ಕನ್ನು ನಿರ್ಧಾರಣೆ ಮಾಡುವ ಸಲುವಾಗಿ ಮೂಲ ನೇರ ವೆಚ್ಚಗಳನ್ನು ಹೊರತುಪಡಿಸುವುದು.

ಇ) ಗುತ್ತಿಗೆಯನ್ನು ವಿಸ್ತರಿಸುವ ಅಥವಾ ಮುಕ್ತಾಯಗೊಳಿಸುವ ಆಯ್ಕೆಯನ್ನು ಒಳಗೊಂಡಿರುವ ಗುತ್ತಿಗೆಯ ಅವಧಿಯನ್ನು ನಿರ್ಧಾರಣೆ ಮಾಡುವಲ್ಲಿ ತರುವಾಯದ ಅರಿವನ್ನು ಬಳಸುವುದು.

ii) **ಗುತ್ತಿಗೆ ಜವಾಬ್ದಾರಿಗಳ ನಿರ್ಧಾರಣೆ**

(ರೂ. ಲಕ್ಷಗಳಲ್ಲಿ)

31 ಮಾರ್ಚ್ 2019ರಲ್ಲಿದ್ದಂತೆ ಗುತ್ತಿಗೆ ಬದ್ಧತೆಗಳ ಕಾರ್ಯಾಚರಣೆ	26.23
1 ಏಪ್ರಿಲ್ 2019ರಲ್ಲಿದ್ದಂದತೆ ಸಾಲದ ಮೇಲಿನ ಹೆಚ್ಚುವರಿ ಬಡ್ಡಿ ದರವನ್ನು ಬಳಸಿಕೊಂಡು ರಿಯಾಯಿತಿ	8.54
31 ಮಾರ್ಚ್ 2019ರಲ್ಲಿದ್ದಂತೆ ಗುತ್ತಿಗೆ ಜವಾಬ್ದಾರಿಗಳ ಕಾರ್ಯಾಚರಣೆ	11.77
ಗುತ್ತಿಗೆ ಅವಧಿಯ ಅಂದಾಜಿನಲ್ಲಿ ಬದಲಾವಣೆ	–
1 ಏಪ್ರಿಲ್ 2019ರಲ್ಲಿದ್ದಂತೆ ಗುತ್ತಿಗೆ ಜವಾಬ್ದಾರಿಯ ಪರಿಗಣನೆ	11.77

ಕಂಪನಿಯು ಕಟ್ಟಡಗಳಿಗಾಗಿ ಗುತ್ತಿಗೆ ಒಡಂಬಡಿಕೆ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದು. ಆಸ್ತಿಗಳ ಬಳಸುವಿಕೆ ಹಕ್ಕು – ಈ ಪದಗಳನ್ನು ಸ್ವತ್ತು, ಸ್ಥಾವರ ಮತ್ತು ಯಂತ್ರೋಪಕರಣಗಳು \ಇವುಗಳ ನಂತರ ಸೇರಿಸಲಾಗಿರುವುದು ಹಾಗೂ ಸಂತುಲನ ಪಟ್ಟಿಯಲ್ಲಿ ಗುತ್ತಿಗೆ ಜವಾಬ್ದಾರಿಯನ್ನು 'ಇತರೆ ಜವಾಬ್ದಾರಿಗಳು' ಇದರ ಅಡಿಯಲ್ಲಿ ಸೇರಿಸಲಾಗಿರುವುದು.

i) **ಸಂತುಲನ ಪಟ್ಟಿಯಲ್ಲಿ ಪರಿಗಣಿಸಿರುವ ಮೊತ್ತಗಳು**

(ರೂ. ಲಕ್ಷಗಳಲ್ಲಿ)

ವಿವರಗಳು	31.03.2020
ಎ) ಆಸ್ತಿಗಳ ಬಳಸುವಿಕೆಗಾಗಿನ ಹಕ್ಕು	11.17
ಬಿ) ಗುತ್ತಿಗೆ ಜವಾಬ್ದಾರಿಗಳು :	
ಚಾಲ್ತಿ	0.27
ಚಾಲ್ತಿಯೇತರ	11.25
ಒಟ್ಟಾರೆ ಗುತ್ತಿಗೆ ಜವಾಬ್ದಾರಿಗಳು	11.52
ಸಿ) ಆಸ್ತಿಗಳ ಬಳಸುವಿಕೆಗಾಗಿನ ಹಕ್ಕಿಗೆ ಸೇರ್ಪಡೆಗಳು	–

ii) **ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಹಾಗೂ ಸ್ವತ್ತು , ಸ್ಥಾವರ ಮತ್ತು ಯಂತ್ರೊಪಕರಣಗಳು ಇವುಗಳ ಅಡಿಯಲ್ಲಿ ಪರಿಗಣಿಸಿರುವ ಮೊತ್ತಗಳು**

(ರೂ. ಲಕ್ಷಗಳಲ್ಲಿ)

ವಿವರಗಳು	31.03.2020
ಎ)ಆಸ್ತಿಗಳ ಬಳಸುವಿಕೆಗಾಗಿನ ಹಕ್ಕಿಗಾಗಿ ಸವಕಳಿ ವೆಚ್ಚಗಳು/ಬಂಡವಾಳೀಕರಣ	0.60
ಬಿ) ಬಡ್ಡಿ ವೆಚ್ಚಗಳು	1.01
ಸಿ) ಅಲ್ಪಾವಧಿ ಗುತ್ತಿಗೆಗಳಿಗೆ ಸಂಬಂಧಿತ ವೆಚ್ಚಗಳು	–

iii) **ಹಣಕಾಸಿನ ಹರಿವುಗಳು** (ರೂ. ಲಕ್ಷಗಳಲ್ಲಿ)

ವಿವರಗಳು	31.03.2020
ಗುತ್ತಿಗೆಗಳ ಒಟ್ಟಾರೆ ಹಣಕಾಸಿನ ಹರಿವು	1.26

iv) **ಭವಿಷ್ಯದಲ್ಲಿನ ಬದ್ಧತೆಗಳು** (ರೂ. ಲಕ್ಷಗಳಲ್ಲಿ)

ವಿವರಗಳು	31.03.2020
ಗುತ್ತಿಗೆಗಳು ಇನ್ನೂ ಪ್ರಾರಂಭಗೊಂಡಿರದ ಭವಿಷ್ಯದಲ್ಲಿನ ರಿಯಾಯಿತಿಯನ್ನು ಹೊಂದಿರದ ಗುತ್ತಿಗೆ ಪಾವತಿಗಳು	–

v) ರಿಯಾಯಿತಿಯನ್ನು ಹೊಂದಿರದ ಗುತ್ತಿಗೆ ಜವಾಬ್ದಾರಿಯ ಅವಧಿ ಮುಕ್ತಾಯದ ವಿಶ್ಲೇಷಣೆ (ರೂ. ಲಕ್ಷಗಳಲ್ಲಿ)

ಅವಧಿ	31.03.2020
ಒಂದು ವರ್ಷವನ್ನು ಮೀರದ ಅವಧಿ	1.26
ಒಂದು ವರ್ಷವನ್ನು ಮೀರಿದ ಆದರೆ ಐದು ವರ್ಷಗಳನ್ನು ಮೀರದ ಅವಧಿ	5.02
ಐದು ವರ್ಷಗಳನ್ನು ಮೀರಿದ ಅವಧಿ	18.70
ಒಟ್ಟು	24.98

2. 31 ಮಾರ್ಚ್ 2019ಕ್ಕೆ ಅಂತ್ಯಗೊಂಡ ತುಲನಾತ್ಮಕ ಸಾಲಿಗೆ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 17ರ ಅಡಿಯಲ್ಲಿ ಗುತ್ತಿಗೆಗಳನ್ನು ಬಹಿರಂಗಪಡಿಸುವಿಕೆ

ಕಂಪನಿಯು ಅರಣ್ಯ ಭೂಮಿಯ ಎರಡು ಕಾರ್ಯಾಚರಣೆಯಲ್ಲಿರುವ ಗುತ್ತಿಗೆಗಳನ್ನು ಅನುಕ್ರಮವಾಗಿ 30 ವರ್ಷಗಳು ಮತ್ತು 20 ವರ್ಷಗಳ ಅವಧಿಯಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಹೊಂದಿರುವುದು ಯಾವುದೇ ಉಪ–ಗುತ್ತಿಗೆಗಳು ಇರುವುದಿಲ್ಲ.

ಕಾರ್ಯಚರಣೆಯಲ್ಲಿರುವ ಗುತ್ತಿಗೆ

VI) ಮಾರ್ಚ 31ರಂದು ರದ್ದು ಗೊಳಿಸಲಾಗದ ಕಾರ್ಯಚರಣೆಯಲ್ಲಿರುವ ಗುತ್ತಿಗೆಗಳ ಅಡಿಯಲ್ಲಿ ಮಾಡಬೇಕಾದ ಕನಿಷ್ಠ ಗುತ್ತಿಗೆ ಪಾವತಿಗಳು ಈ ಕೆಳಗಿನಂತಿವೆ

ರಿಯಾಯಿತಿಯನ್ನು ಹೊಂದಿರದ ಗುತ್ತಿಗೆ ಜವಾಬ್ದಾರಿಯ ಅವಧಿ ಮುಕ್ತಾಯದ ವಿಶ್ಲೇಷಣೆ (ರೂ. ಲಕ್ಷಗಳಲ್ಲಿ)

ಅವಧಿ	31.03.2019
ಒಂದು ವರ್ಷದ ಒಳಗೆ ಪಾವತಿಸಬೇಕಿರುವುದು	1.26
ಒಂದರಿಂದ ಐದು ವರ್ಷಗಳ ನಡುವೆ ಪಾವತಿಸಬೇಕಿರುವುದು	5.02
ಐದು ವರ್ಷಗಳನ್ನು ಮೀರಿದ ಅವಧಿಯನಂತರ ಪಾವತಿಸಬೇಕಿರುವುದು	19.96
	26.23

VII) ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ/ ಸ್ವತು, ಸ್ಥಾವರ ಮತ್ತು ಯಂತ್ರೋಪಕರಣಗಳು ಇವುಗಳ ಅಡಿಯಲ್ಲಿ ಪರಿಗಣಿಸಿರುವ ಮೊತ್ತಗಳು (ರೂ. ಲಕ್ಷಗಳಲ್ಲಿ)

ವಿವರಗಳು	ವರ್ಷಾಂತ್ಯದ 31.03.2019
ಗುತ್ತಿಗೆ ವೆಚ್ಚಗಳು	1.26

ಕಚೇರಿಗಳು ಮತ್ತು ಉದ್ಯೋಗಿಗಳ ವಸತಿ ಸೌಲಭ್ಯಗಳಿಗಾಗಿ ಕಟ್ಟಡಗಳ ಗುತ್ತಿಗೆ ಬಾಡಿಗೆಗಳು 31 ಮಾರ್ಚ್ 2019ರಲ್ಲಿದ್ದಂತೆ ರೂ.35.53 ಲಕ್ಷ ಆಗಿದ್ದಿತು (ಹಿಂದಿನ ಸಾಲಿನಲ್ಲಿ – ರೂ.36.35 ಲಕ್ಷ)

v) ಸರ್ಕಾರಿ ಅನುದಾನಗಳು (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 20)

ಹಣಕಾಸು ತ:ಖ್ತೆಗಳಲ್ಲಿ ಪರಿಗಣಿಸಲಾಗಿರುವ ಸರ್ಕಾರಿ ಅನುದಾನಗಳ ಸ್ವರೂಪ ಮತ್ತು ಪರಿಮಾಣಗಳು ಈ ಕೆಳಗೆ ತಿಳಿಸಿರುವಂತಿರುತ್ತವೆ

(ರೂ. ಲಕ್ಷಗಳಲ್ಲಿ)

ವಿವರಗಳು	2019–20	2018–19
ಅವಧಿ ಸಾಲಗಳ ಮೇಲೆ ಬಡ್ಡಿ ಪಾವತಿಗಾಗಿ ಹಾಗೂ ಖಾತರಿ ಕಮಿಷನನ್ನು ನೀಡುವ ಸಲುವಾಗಿ (ಬಡ್ಡಿ ವೆಚ್ಚವನ್ನು ಬಂಡವಾಳೀಕರಿಸಿರುವುದರಿಂದ ಮೊತ್ತವನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಂದ ಕಳೆಯಲಾಗಿರುವುದು)	**1,831.17**	1,051.43
ಕರ್ನಾಟಕ ಸರ್ಕಾರದ ಯೋಜನೆಗಳು (ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ವರಮಾನ ಎಂಬುದಾಗಿ ಪರಿಗಣಿಸಲಾಗಿರುವುದು)	**12,782.74**	27,050.25
ಆಸ್ತಿಗಳ ನಿರ್ವಹಣೆಗಾಗಿ ಅನುದಾನಗಳು (ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಆದಾಯ ಎಂಬುದಾಗಿ ಪರಿಗಣಿಸಲಾಗಿರುವುದು)	–	832.29

ಕಂಪನಿಯು ಇತರೆ ಯಾವುದೇ ರೀತಿಯಲ್ಲಿ ಸರ್ಕಾರಿ ಸಹಾಯಧನ/ಪ್ರಯೋಜನಗಳನ್ನು ಸ್ವೀಕರಿಸಿರುವುದಿಲ್ಲ. ಕಂಪನಿಯು ಪರಿಗಣಿಸಿರುವಂತಹ ಸರ್ಕಾರಿ ಅನುದಾನಗಳಿಗೆ/ ಸಹಾಯಧನಕ್ಕೆ ಹೊಂದಿಕೊಂಡಿರುವಂತಹ ಯಾವುದೇ ಷರತ್ತುಗಳನ್ನು/ ಆಕಸ್ಮಿಕಗಳನ್ನು ಕಂಪನಿಯು ಪೂರೈಸದಿರುವಂತಹ ನಿದರ್ಶನಗಳು ಇರುವುದಿಲ್ಲ.

vi) **ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳು (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 23):** (ರೂ. ಲಕ್ಷಗಳಲ್ಲಿ)

ವಿವರಗಳು	2019–20	2018–19 (ಪುನರ್ ತಿಳಿಸಿರುವುದು)
ಪ್ರಸಕ್ತ ಅವಧಿಯಲ್ಲಿ ಬಂಡವಾಳೀಕರಿಸಲಾಗಿರುವಂತಹ ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳ ಮೊತ್ತ		
ಯೋಜನೆಗಳಿಗಾಗಿ ಪಡೆದುಕೊಳ್ಳಲಾಗಿರುವ ಅವಧಿ ಸಾಲಗಳ ಮೇಲಿನ ಬಡ್ಡಿ	15,671.55	8,237.51
ನ್ಯಾಯಸಮ್ಮತ ಮೌಲ್ಯದಲ್ಲಿ ನಿರ್ಧಾರಣೆ ಮಾಡಲಾಗಿರುವ ಹಣಕಾಸು ಜವಾಬ್ದಾರಿಗಳ ಮೇಲೆ ಬಡ್ಡಿ	3,028.59	2,865.65

ಬಂಡವಾಳೀಕರಿಸಲು ಅರ್ಹತೆಯನ್ನು ಹೊಂದಿರುವಂತಹ ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳ ಮೊತ್ತವನ್ನು ನಿರ್ಧಾರಣೆ ಮಾಡುವ ಸಲುವಾಗಿ ಉಪಯೋಗಿಸಲಾದ ಬಂಡವಾಳೀಕರಣ ದರ.

(ರೂ. ಲಕ್ಷಗಳಲ್ಲಿ)

ವಿವರಗಳು	2019–20	2018–19
ಎ) ಯೋಜನೆಗಳಿಗಾಗಿ ಪಡೆದುಕೊಳ್ಳಲಾಗಿರುವ ಅವಧಿ ಸಾಲಗಳ ಮೇಲಿನ ಬಡ್ಡಿ	8.20% ನಿಂದ 9.20%	8.20% ನಿಂದ 9.20%
ಬಿ) ನ್ಯಾಯಸಮ್ಮತ ಮೌಲ್ಯದಲ್ಲಿ ನಿರ್ಧಾರಣೆ ಮಾಡಲಾದ ಹಣಕಾಸು ಜವಾಬ್ದಾರಿಗಳ ಮೇಲಿನ ಬಡ್ಡಿ	8.55%	8.55%

vii. ಸಂಬಂಧಿತ ತಂಡಗಳೊಂದಿಗಿನ ವ್ಯವಹಾರಗಳು (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು 24)

ಕಂಪನಿಯು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವಂತಹ ಒಂದು ಉದ್ದಿಮೆಯಾಗಿರುತ್ತದೆ (ಮಾನದಂಡದ ಷರತ್ತು 10ರಲ್ಲಿ ವಿವರಿಸಿರುವಂತೆ). ಆ ಮಾನದಂಡವು ಅಗತ್ಯತೆಹೊಂದಿರುವಂತೆ ಬಹಿರಂಗಪಡಿಸುವಿಕೆಗಳು ಈ ಕೆಳಗಿನಂತಿರುತ್ತವೆ :

– ನಿಯಂತ್ರಿಸುವ ಅಸ್ತಿತ್ವ

ಎ. ಕರ್ನಾಟಕ ರಾಜ್ಯ ಸರ್ಕಾರ – ಕಂಪನಿಯ ಮೇಲೆ ಶೇಕಡಾ 100ರಷ್ಟು ನಿಯಂತ್ರಣದ ಹಕ್ಕನ್ನು ಹೊಂದಿರುತ್ತದೆ.

– ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳು*

ಬಿ. ಶ್ರೀ ಕೆ. ಜೈಪ್ರಕಾಶ್, ಕೆಇಎಸ್

ಸಿ. ಶ್ರೀ ಎನ್. ಲಕ್ಷಣ ರಾವ್ ಪೇಶ್ವೆ, ಕೆಇಎಸ್

ಡಿ. ಶ್ರೀ ಅನಿಲ್ ಕುಮಾರ್ ಮರಳಿ, ಕರ್ನಾಟಕ ಸರ್ಕಾರದ ಕಾರ್ಯದರ್ಶಿಯವರು, ಜಲಸಂಪನ್ಮೂಲ ಇಲಾಖೆ, ನಿರ್ದೇಶಕರು ಮತ್ತು ತಾಂತ್ರಿಕ ಉಪ–ಸಮಿತಿಯ ಅಧ್ಯಕ್ಷರು

ಇ. ಶ್ರೀ ಚೆಲುವರಾಜ್, ಶ್ರೀ ಗಂಗಾಧರಯ್ಯ ಮತ್ತು ಮಂಡಳಿಯ ಇತರೆ ನಿರ್ದೇಶಕರುಗಳು.

ಸಂಬಂಧಿತ ತಂಡಗಳೊಂದಿಗೆ ವ್ಯವಹಾರಗಳ ಪಟ್ಟಿ

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಸಾಲಿಗೆ	31 ಮಾರ್ಚ್ 2019ಕ್ಕೆ ಅಂತ್ಯಗೊಂಡ ಸಾಲಿಗೆ
ಪ್ರಮುಖ ವ್ಯವಸ್ಥಾಪಕ ಅಧಿಕಾರಿಗಳು*		
ಸಂಭಾವನೆ (ಇತರೆ ಸೌಲಭ್ಯಗಳು ಸೇರಿದಂತೆ)		
– ಶ್ರೀ ಎನ್. ಲಕ್ಷಣ ರಾವ್ ಪೇಶ್ವೆ	**9.21**	–
ಸಂಭಾವನೆ (ಇತರೆ ಅನುಕೂಲತೆಗಳು ಸೇರಿದಂತೆ)		
– ಶ್ರೀ ಕೆ. ಜೈಪ್ರಕಾಶ್	**7.27**	17.73
ನಿರ್ದೇಶಕರುಗಳ ಮಂಡಳಿಯ ನಿರ್ದೇಶಕರುಗಳಿಗೆ ಸಭೆಗೆ ಹಾಜರಾದುದಕ್ಕಾಗಿ ಶುಲ್ಕ	**1.87**	2.27
ಪ್ರಸಕ್ತ ಸಾಲಿನಲ್ಲಿ ಮರುಪಾವತಿಸಲಾದ ಸಾಲ	–	–
ಹಂಚಿಕೆ ಮಾಡಲಾದ ಈಕ್ವಿಟಿ ಷೇರುಗಳು	**1,66,761.76**	1,11,150.46
ಈಕ್ವಿಟಿಯ ಕಡೆಗೆ ಸ್ವೀಕರಿಸಲಾದ ಮುಂಗಡ (ಷೇರುಗಳ ಹಂಚಿಕೆ ಹಾಗೂ ಎಸ್‌ಸಿಪಿ/ಟಿಎಸ್‌ಪಿ ಅನುದಾನಗಳ ಹೊಂದಾಣಿಕೆಯ ನಂತರ ನಿವ್ವಳ ಮೊತ್ತ)	**1,07,395.33**	62,180.43
ಸ್ವೀಕರಿಸಲಾಗಿರುವ ವರಮಾನ ಅನುದಾನಗಳು	**12,782.74**	27,882.53

ಕಂಪನಿಯ ನಿರ್ದೇಶಕರುಗಳಿಂದ ಅಥವಾ ಅವರುಗಳ ಪೈಕಿ ಯಾರೊಬ್ಬರಿಂದಲೂ ವೈಯಕ್ತಿಕವಾಗಿ ಅಥವಾ ಜಂಟಿಯಾಗಿ ಯಾವುದೇ ವ್ಯಕ್ತಿಗೂ ಅಥವಾ ಕಂಪನಿಯ ಯಾವುದೇ ನಿರ್ದೇಶಕರು ಓರ್ವ ಪಾಲುದಾರರಾಗಿರುವ ಅಥವಾ ಓರ್ವ ಸದಸ್ಯರಾಗಿರುವ ಸಂಸ್ಥೆಯಿಂದ ಅಥವಾ ಖಾಸಗಿ ಕಂಪನಿಗಳಿಂದ ಯಾವುದೇ ಸಾಲಗಳನ್ನು ಅಥವಾ ಮುಂಗಡಗಳನ್ನು ನೀಡಿರುವುದಿಲ್ಲ.

ಸಂಬಂಧಿತ ತಂಡಗಳೊಂದಿಗೆ ಬಾಕಿಯಿರುವ ಶಿಲ್ಕುಗಳು

(ರೂ. ಲಕ್ಷಗಳಲ್ಲಿ)

ವಿವರಗಳು	31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಸಾಲಿಗೆ	31 ಮಾರ್ಚ್ 2019ಕ್ಕೆ ಅಂತ್ಯಗೊಂಡ ಸಾಲಿಗೆ
ಕರ್ನಾಟಕ ಸರ್ಕಾರದಿಂದ ಬರಬೇಕಿರುವ ಬಾಕಿಗಳು ಪಾವತಿಸಬೇಕಾದ ನಿವ್ವಳ ಮೊತ್ತ		
(ಎ) ವ್ಯವಹಾರ ಸ್ವೀಕೃತಿಗಳು – ಕರ್ನಾಟಕ ಸರ್ಕಾರದ ತಹಸೀಲ್ದಾರರುಗಳಿಂದ ಬಾಕಿಗಳು	**13.26**	5.67
(ಬಿ) ಕರ್ನಾಟಕ ಸರ್ಕಾರದಿಂದ ಸ್ವೀಕರಿಸಬೇಕಿರುವ ಅನುದಾನಗಳು	–	–
(ಸಿ) ಇತರೆ ಸಂಸ್ಥೆಗಳಿಂದ ಬರಬೇಕಿರುವವುಗಳು (ಕನೀನಿನಿ, ಕೃಭಾಜನಿನಿ ಮತ್ತು ಡಬ್ಲ್ಯೂಆರ್‌ಡಿಒ)	**2,979.80**	2,372.88
(ಡಿ) ಕರ್ನಾಟಕ ಸರ್ಕಾರದಿಂದ ಬರಬೇಕಿರುವ ಬಾಕಿಗಳು	**424.96**	406.50
ಸ್ವೀಕರಿಸಬೇಕಿರುವ ಒಟ್ಟು ಮೊತ್ತ	**3,418.01**	**2,785.04**
(ಎ) ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಿರುವ ಖಾತರಿ ಕಮಿಷನ್ನು	–	45.00
ಕರ್ನಾಟಕ ಸರ್ಕಾರದಿಂದ ಬರಬೇಕಿರುವ ನಿವ್ವಳ ಬಾಕಿಗಳು	**3,418.01**	**2,740.04**

ಕಂಪನಿಯು ಸಂಬಂಧಿತ ತಂಡಗಳ ಸಂಬಂಧವನ್ನು ಗುರುತಿಸುತ್ತದೆ ಹಾಗೂ ಲೆಕ್ಕಪರಿಶೋಧಕರುಗಳು ಅದನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವರು.

